# ಯೋಜನಾ

ವಿಶೇಷ ಸಂಚಿಕೆ

ಆಗಸ್ಟ್ 2023 ಅಭಿವೃದ್ಧಿ ಮಾಸಪತ್ರಿಕೆ ₹ 30

**ಪರಿಪೂರ್ಣ ಯೋಗಕ್ಷೇಮಕ್ಕಾಗಿ ಸಮಗ್ರ ಉಪಕ್ರಮ**
ಡಾ. ಮನ್‌ಸುಖ್ ಮಾಂಡವೀಯ

**ಆಜಾದಿ ಕಾ ಅಮೃತ್ ಮಹೋತ್ಸವ್**
ಜಿ. ಕಿಶನ್ ರೆಡ್ಡಿ

**ದೇಶವನ್ನು ಒಗ್ಗೂಡಿಸುತ್ತಿರುವ ಕ್ರೀಡೆ**
ಅನುರಾಗ್ ಸಿಂಗ್ ಠಾಕೂರ್




Scanned with ACE Scanner

ಆಗಸ್ಟ್ 2023
ಸಂಚಿಕೆ–1
Issue-1
ಸಂಪುಟ–39
Volume-39

# ಯೋಜನಾ

YOJANA Kannada

ಮುಖ್ಯ ಸಂಪಾದಕರು
**ಮನೋಗ್ಯಾನ್ ರಾಣಿಪಾಲ್**

ಹಿರಿಯ ಸಂಪಾದಕ
**ಯಶವಂತ್ ಶಹನಾಯಿ**

ನಮ್ಮ ಪ್ರತಿನಿಧಿಗಳು
ಅಹಮದಾಬಾದ್ : ಸುಮನ್‌ಬೆನ್ ಎ. ಮಚ್ಚರ್,
ಬೆಂಗಳೂರು : ಯಶವಂತ್ ಶಹನಾಯಿ
ಭುವನೇಶ್ವರ : ಇತಿಶ್ರೀ ಸಿಂಗ್ ರಾಥೂರ್
ಚೆನ್ನೈ : ಸಂಜಯ್ ಘೋಷ್
ಗುವಾಹತಿ : ಮಾರೂಫ್ ಆಲಂ
ಹೈದರಾಬಾದ್ : ಕೃಷ್ಣ ವಂದನಾ ಪಿ
ಜಲಂಧರ್ : ಗಗನ್‌ದೀಪ್ ಕೌರ್ ದೇವಗನ್
ಕೋಲ್ಕತ್ತಾ: ಸುಮಿತಾ ಚಕ್ರವರ್ತಿ
ಮುಂಬಯಿ : ಸಂಗೀತಾ ಗೋಡ್ಬೋಲೆ
ತಿರುವನಂತಪುರಂ : ಸುಧಾ ಎಸ್. ನಂಬೂದ್ರಿ

ಜಂಟಿ ನಿರ್ದೇಶಕರು (ಮುದ್ರಣ)
**ಡಿ.ಕೆ.ಸಿ. ಹೃದಯ್‌ನಾಥ್**

ಮುಖಪುಟ ವಿನ್ಯಾಸ
**ನೀರಜ್ ರಿಡ್ಲಾನ್**

ಯೋಜನೆಯ ಸಂದೇಶವನ್ನು ಎಲ್ಲ ಜನರಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : kannada-yojana@gov.in
www.publicationsdivision.nic.in

## ಈ ಸಂಚಿಕೆಯಲ್ಲಿ..........

ಸಂಪಾದಕೀಯ 2

ಆಜಾದಿ ಕಾ ಅಮೃತ್ ಮಹೋತ್ಸವ್ 3
* ಜಿ. ಕಿಶನ್ ರೆಡ್ಡಿ

ಪರಿಪೂರ್ಣ ಯೋಗಕ್ಷೇಮಕ್ಕಾಗಿ ಸಮಗ್ರ ಉಪಕ್ರಮ 7
* ಡಾ. ಮನ್‌ಸುಖ್ ಮಾಂಡವೀಯ

ದೇಶವನ್ನು ಒಗ್ಗೂಡಿಸುತ್ತಿರುವ ಕ್ರೀಡೆ 13
* ಅನುರಾಗ್ ಸಿಂಗ್ ಠಾಕೂರ್

ಭಾರತದ ಆರ್ಥಿಕತೆ–ಗ್ರಹಿಕೆ ಮತ್ತು ಮುನ್ನೋಟ 19
* ವಿ.ಅನಂತ ನಾಗೇಸ್ವರನ್

ನಮ್ಮ ಪುಸ್ತಕಗಳು 23

ಕೈಗಾರಿಕೆ; ಮನ್ವಂತರದ ದೂರದೃಷ್ಟಿ 24
* ಅಂಶುಮಾನ್ ಖನ್ನಾ

ಚಂದ್ರಯಾನ–3 28
* ಡಾ. ಬಿ. ಆರ್. ಗುರುಪ್ರಸಾದ್

ಚಂದ್ರಯಾನ–3 ನೌಕೆ ಯಶಸ್ವಿ ಉಡಾವಣೆ 35

ಏಶಿಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ 36

ಉಪಗ್ರಹ ಉಡಾವಣೆ 38

ಶಿಕ್ಷಣದಲ್ಲಿ ತಂತ್ರಜ್ಞಾನ ಬಳಕೆ 39
* ಅನಿಲ್ ಸಹಸ್ರಬುಧೆ

ಸಮಗ್ರ ನಾವಿನ್ಯ ಪರಿಸರ ವ್ಯವಸ್ಥೆಯ ನಿರ್ಮಾಣ 45
* ಪ್ರಮೀತ್ ದಾಶ್

ಜಿ 20; ಭಾರತದ ಅಧ್ಯಕ್ಷತೆ 51
* ಪ್ರೊ. ಹರ್ಷ್ ವಿ. ಪಂತ್

ಕೃಷಿ : ಕೊರತೆಯಿಂದ ಮಿಗುತೆವರೆಗಿನ ಯಾನ 55
* ಡಾ. ಜಗದೀಪ್ ಸಕ್ಸೆನಾ

ಜೇನುತುಪ್ಪ ಉತ್ಪಾದನೆಯಲ್ಲಿ ಹೆಚ್ಚಳ 59
* ಡಾ. ಶೈಲೇಶ್ ಕುಮಾರ್ ಮಿಶ್ರಾ ** ಡಾ. ಧೀರಜ್ ಕುಮಾರ್ ತಿವಾರಿ

ಭಾರತೀಯ ಸಿನಿಮಾ ಯಾನ 63
* ಅಮಿತವ ನಾಗ್

ಪರೋಕ್ಷ ತೆರಿಗೆಯ ಅತಿ ದೊಡ್ಡ ಭಾಗ ಜಿಎಸ್‌ಟಿ 67
* ರಾಜಾ ಶೈಲೇಶ್‌ಚಂದ್ರ ಗುಪ್ತ

ಮನದ ಮಾತು 71

**ಯೋಜನಾ ಚಂದಾ ವಿವರ**
ಒಂದು ವರ್ಷಕ್ಕೆ 230.00

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**
*Log on to*
**http://publicationsdivision.nic.in/,**
*In collaboration with* **bharatkosh.gov.in**


ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು **PUBLICATIONS DIVISION, MINISTRY OF I & B, GOVERNMENT OF INDIA** ಹೆಸರಿನಲ್ಲಿ **CHENNAI** ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.

@ DPD_India @publicationsdivision @dpd_india

Scanned with ACE Scanner

ಸಂಪಾದಕೀಯ

## ಜೀವನದ ಸಂಭ್ರಮಾಚರಣೆ




ಭಾರತ, ಹಬ್ಬ-ಉತ್ಸವಗಳ ಭೂಮಿ. ವರ್ಷಾದ್ಯಂತ ಜನರು ನಂಬಿಕೆ, ವಿವಿಧ ಪಂಚಾಂಗ, ಚಂದ್ರದರ್ಶನ, ದೇವಾನು ದೇವತೆಗಳು, ಮಹಾನ್ ಸಂತರು, ದಿನ, ಪ್ರಾದೇಶಿಕ ಸಂಪ್ರದಾಯ, ಹಂಗಾಮು ಒಳಗೊಂಡಂತೆ ಜೀವನದ ಎಲ್ಲ ಹಂತ, ಆಯಾಮಗಳನ್ನು ಆಧರಿಸಿದ, ಒಂದಿಲ್ಲೊಂದು ಪೂಜೆ, ಉತ್ಸವಗಳನ್ನು ಆಚರಿಸುತ್ತಾರೆ. ಈ ಸಂಭ್ರಮಾಚರಣೆಗಳು ವೈವಿಧ್ಯತೆಯನ್ನು ಬಿಂಬಿಸುವ ಜತೆಗೆ ಜನರನ್ನು ಒಂದುಗೂಡಿಸುತ್ತವೆ. ಇನ್ನೂ ವಿಶದವಾಗಿ ಹೇಳಬೇಕೆಂದರೆ, ಭಾರತದಲ್ಲಿ ಮಗು ಹುಟ್ಟುವುದಕ್ಕೆ ಮೊದಲೇ ಸಂಪ್ರದಾಯ ಸಂಭ್ರಮಾಚರಣೆ ಆರಂಭವಾಗುತ್ತದೆ! ಭಾರತದಲ್ಲಿ ಸಂಭ್ರಮಾಚರಣೆ ನಿಜವಾಗಿಯೂ ಜೀವನದ ವಿಧಾನವೇ ಆಗಿದೆ.

ಇಂತಹ ಆಚರಣೆಗಳ ಮಧ್ಯೆ, ದೇಶದ ಜನರೆಲ್ಲರೂ ಸೇರಿ ಸಂಭ್ರಮಿಸುತ್ತಿರುವ ರಾಷ್ಟ್ರೀಯ ಹಬ್ಬವೆಂದರೆ ಸ್ವಾತಂತ್ರ್ಯದ ಅಮೃತ ಮಹೋತ್ಸವವಾಗಿದೆ. 2021ರ ಮಾರ್ಚ್ 12 ರಂದು ಆರಂಭವಾದ ಸ್ವಾತಂತ್ರ್ಯದ 75ನೇ ವರ್ಷಾಚರಣೆ ಕಾರ್ಯಕ್ರಮ ಬೃಹತ್ ಉತ್ಸವವಾಗಿ ಜರುಗಿ, ಆಗಸ್ಟ್ 15 2023ಕ್ಕೆ 75 ವಾರಗಳನ್ನು ಪೂರ್ತಿಗೊಳಿಸುತ್ತಿದೆ. ಜನರ ಪಾಲ್ಗೊಳ್ಳುವಿಕೆ – 'ಜನ ಭಾಗೀದಾರಿ'ಯೇ ಪ್ರಮುಖವಾದ ಈ ಮಹೋತ್ಸವ, ಭಾರತದ ಸ್ವಾತಂತ್ರ್ಯ ಹೋರಾಟ, ವಿಶಿಷ್ಟ ಪರಿಕಲ್ಪನೆ, ಸಾಧನೆ, ಕ್ರಿಯಾ ಕಾರ್ಯಕ್ರಮ, ನವ ಸಂಕಲ್ಪಗಳಂತಹ ಐದು ಪ್ರಮುಖ ಅಂಶಗಳನ್ನು ಆಧರಿಸಿತ್ತು. ಈ ಮಹೋತ್ಸವ ದೇಶ ಕಳೆದ 75 ವರ್ಷಗಳಲ್ಲಿ ಮಾಡಿದ ಸಾಧನೆಗಳನ್ನು ಸಾದರಪಡಿಸಿದ್ದಲ್ಲದೆ, ಮುಂದಿನ 25 ವರ್ಷಗಳಿಗಾಗಿ ಸಂಕಲ್ಪದ ಚೌಕಟ್ಟನ್ನು ನಿರೂಪಿಸಿತು. ಹರ್‌ಘರ್ ತಿರಂಗಾ, ವಂದೇ ಭಾರತಂ ನೃತ್ಯ ಉತ್ಸವ, ಕಲಾಂಜಲಿ, ಬೃಹತ್ ಕಾರ್ಯಕ್ರಮಗಳಲ್ಲದೆ ವಿವಿಧ ಶೀರ್ಷಿಕೆಗಳಡಿ, ಒಂದು ಲಕ್ಷಕ್ಕೂ ಅಧಿಕ ಸಮಾವೇಶಗಳನ್ನು ಆಯೋಜಿಸಲಾಯಿತು. ಭಾರತದಲ್ಲಷ್ಟೇ ಅಲ್ಲ, ಜಗತ್ತಿನಾದ್ಯಂತ ಜನರು ಒಂದುಗೂಡಿ ಜನಾಂದೋಲನ ರೂಪದಲ್ಲಿ ಅಮೃತ ಮಹೋತ್ಸವವನ್ನು ಸಂಭ್ರಮಿಸಿದರು. ಸಂಭ್ರಮಾಚರಣೆ ಮಹಿಳೆ ಮತ್ತು ಮಕ್ಕಳು, ಬುಡಕಟ್ಟು ಜನರ ಸಶಕ್ತೀಕರಣ, ನೀರು, ಸಾಂಸ್ಕೃತಿಕ ಹೆಮ್ಮೆ, ಪರಿಸರಕ್ಕಾಗಿ ಜೀವನ ಶೈಲಿ, ಆರೋಗ್ಯ ಮತ್ತು ಯೋಗಕ್ಷೇಮ ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ, ಆತ್ಮ ನಿರ್ಭರ ಭಾರತ ಮತ್ತು ಏಕತೆ – ಹೀಗೆ ಪಂಚಪ್ರಾಣ ಅಂಶಗಳಿಗೆ ಅನುಗುಣವಾದ, ಒಂಭತ್ತು ವಿಚಾರ ಕುರಿತಾಗಿತ್ತು.

ಈ ಅವಧಿಯಲ್ಲಿ ರಾಷ್ಟ್ರೀಯ ಮಹತ್ವದ ಕಟ್ಟಡ ಮತ್ತು ಸ್ಮಾರಕಗಳನ್ನು ದೇಶಕ್ಕೆ ಸಮರ್ಪಿಸಲಾಯಿತು. ಸ್ವಾತಂತ್ರ್ಯಾ ನಂತರದ ದೇಶದ ಪ್ರಧಾನ ಮಂತ್ರಿಗಳ ಜೀವನ ಹಾಗೂ ಕೊಡುಗೆಗಳನ್ನು ಪ್ರಸ್ತುತ ಪಡಿಸುವ ಪ್ರಧಾನ ಮಂತ್ರಿ ಸಂಗ್ರಹಾಲಯ, ನೇತಾಜಿ ಸುಭಾಸ್‌ಚಂದ್ರ ಬೋಸ್ ಪುತ್ಥಳಿ ಅನಾವರಣ, ಇಂಡಿಯಾ ಗೇಟ್ ಬಳಿ ಕರ್ತವ್ಯ ಪಥ ಹಾಗೂ ಹೊಸದಾಗಿ ನಿರ್ಮಿಸಲಾದ ಸಂಸತ್ ಕಟ್ಟಡದ ಸಮರ್ಪಣೆ ಇವುಗಳಲ್ಲಿ ಸೇರಿವೆ.

ಅಮೃತ ಮಹೋತ್ಸವ, ಪ್ರತಿಯೊಂದು ರಂಗವೂ ಸೇರ್ಪಡೆಗೊಂಡು ನಿಜವಾಗಿ ಆಡಳಿತದಲ್ಲಿ ಜನರ ಪಾಲ್ಗೊಳ್ಳುವಿಕೆಯ ಆಂದೋಲನವಾಗಿ ನಡೆಯಿತು. ಮಹಿಳೆಯರನ್ನು ಆರ್ಥಿಕವಾಗಿ ಸಬಲಗೊಳಿಸುವ ಮಹಿಳಾ ಸಮ್ಮಾನ ಬಚತ್ ಪತ್ರ ಯೋಜನೆ ಆರಂಭ, ಆರೋಗ್ಯಕರ, ಜೀವನ ಶೈಲಿ ಒದಗಿಸುವ ಸಿರಿಧಾನ್ಯಗಳ ಬಳಕೆ, ಯೋಗ, ಮಹಾನ್ ಸ್ವಾತಂತ್ರ್ಯ ಹೋರಾಟಗಾರರ ಕಥೆಗಳ ಅನಾವರಣ, ಪ್ರಾದೇಶಿಕ ಭಾಷೆಗಳಲ್ಲಿ ಜೋಗುಳದ ಹಾಡುಗಳ ಸಂಗ್ರಹ, ಬದಲಾವಣೆಯ ಗಾಥೆಗಳು, ವಿಶಿಷ್ಟ ಕಲೆ, ಪರಂಪರೆಗಳನ್ನು ಜತನಗೊಳಿಸುವ ಜಿಲ್ಲಾ ಡಿಜಿಟಲ್ ಸಂಗ್ರಹಾಲಯಗಳ ಸ್ಥಾಪನೆ ಹೀಗೆ ವ್ಯಾಪಕವಾದ ಉಪಕ್ರಮಗಳು ಜನಭಾಗೀದಾರಿಯಲ್ಲಿ ನಡೆದವು. ಇದು, ಭಾರತದ ವಿಕಸನ ಯಾನಕ್ಕೆ ಕೊಡುಗೆ ನೀಡಿದ ದೇಶದ ಜನತೆಗೆ ಹಾಗೂ ಆತ್ಮ ನಿರ್ಭರ ಭಾರತದ ಸ್ಫೂರ್ತಿ ಪಡೆದ ಕಾರ್ಯಾಚರಣೆಯ ಕರ್ತವ್ಯ ಕಾಲದ ದೂರದೃಷ್ಟಿ ಸಾಕಾರ ಶಕ್ತಿಗಾಗಿ ಸಮರ್ಪಣೆಗೊಂಡಿದೆ.

ನಾವಿಂದು ಸಾಕ್ಷಿಯಾಗಿರುವ ಅಭಿವೃದ್ಧಿಗೆ ಬುನಾದಿ ಹಾಕಿರುವ ಮಹಾನ್ ಕಾರ್ಯಗಳಿಗೆ ಪ್ರಸ್ತುತ ಯೋಜನಾ ಸಂಚಿಕೆ ಗೌರವ ಸಲ್ಲಿಸುತ್ತದೆ. ಭಾರತದ ಯಶಸ್ಸಿನ ಬೆಳವಣಿಗೆಯಲ್ಲಿ ವಿವಿಧ ರಂಗಗಳು ಉಪಕ್ರಮಗಳು ಸ್ಮರಣೀಯ ಕೊಡುಗೆ ನೀಡಿವೆ. ಇದು ಕರ್ತವ್ಯ, ದೃಢ ನಿಶ್ಚಯ ಮತ್ತು ಅಚಲ ಸಂಕಲ್ಪಗಳ ಅವಧಿಯಾದ ಕರ್ತವ್ಯ ಕಾಲದ ಪಥವನ್ನು ಕೂಡಾ ಅನ್ವೇಷಿಸಿದೆ.

ಕರ್ತವ್ಯ ಕಾಲದ ಸಾಧನೆಗೆ ನಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡಲು ಒಲವು, ಸಮರ್ಪಣಾ ಭಾವದಿಂದ ನಾವೆಲ್ಲಾ ಶ್ರಮಿಸೋಣ. ಈ ಸಂಭ್ರಮ, ನಮ್ಮ ಜೀವನದ ಭಾಗವಾಗಿರಲಿ. ನಮ್ಮ ಮುಂದಿನ ಪೀಳಿಗೆಗೆ ಅತ್ಯುತ್ತಮ ಸ್ಥಿತಿಯ ಭಾರತವನ್ನು ವರ್ಗಾಯಿಸುವ ಸಂಕಲ್ಪ ಮಾಡೋಣ.

# ಆಜಾದಿ ಕಾ ಅಮೃತ್ ಮಹೋತ್ಸವ್

* ಜಿ. ಕಿಶನ್ ರೆಡ್ಡಿ



‘ಆಜಾದಿ ಕಾ ಅಮೃತ್ ಮಹೋತ್ಸವ್ (AKAM-ಅಕಾಮ್)’ ಭಾರತ ಸರ್ಕಾರದ ಮುಂಚೂಣಿ ಉಪಕ್ರಮವಾಗಿದೆ. ಭಾರತ ದೇಶವು ಸ್ವಾತಂತ್ರ್ಯ ಗಳಿಸಿದ 75 ವರ್ಷಗಳ ಸ್ಮರಣಾರ್ಥವಾಗಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ವಿಶ್ವದ ಯಾವುದೇ ಭಾಗದಲ್ಲಿ ವಿವಿಧ ಕಾರಣಗಳಿಗಾಗಿ ಆಚರಿಸಲಾಗುತ್ತಿರುವ ಅತಿ ದೊಡ್ಡ ಸಂಭ್ರಮಾಚರಣೆಗಳ ಪೈಕಿ ‘ಆಜಾದಿ ಕಾ ಅಮೃತ್ ಮಹೋತ್ಸವ್’ ಸಹ ಒಂದಾಗಿದೆ. ಈ ಕಾರ್ಯಕ್ರಮವು ಅತ್ಯುತ್ಸಾಹದ ಮತ್ತು ಜನರ ವ್ಯಾಪಕ ಶ್ರೇಣಿಯ ಭಾಗವಹಿಸುವಿಕೆಗೆ ಸಾಕ್ಷಿಯಾಗಿದೆ. ಅದು ‘ಇಡೀ ಭಾರತೀಯ ಸಮಾಜದ, ಭಾರತೀಯರ ಉಪಕ್ರಮವಾಗಿ, ಏಕೀಕೃತ ಶಕ್ತಿಯಾಗಿ ಕಾರ್ಯ ನಿರ್ವಹಿಸಿದೆ.’

‘ಆಜಾದಿ ಕಾ ಅಮೃತ್ ಮಹೋತ್ಸವ್ (AKAM – ಅಕಾಮ್)’ 2021 ಮಾರ್ಚ್‌ನಲ್ಲಿ ಪ್ರಾರಂಭ ಆದಾಗಿನಿಂದ, ಕೇಂದ್ರ ಸರ್ಕಾರ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿವಿಧ ಇಲಾಖೆಗಳು ಮತ್ತು ಖಾಸಗಿ ಸಂಸ್ಥೆಗಳು ಒಟ್ಟು 1.7 ಲಕ್ಷಕ್ಕಿಂತ ಹೆಚ್ಚಿನ ಕಾರ್ಯಕ್ರಮಗಳನ್ನು ಜಂಟಿಯಾಗಿ ನಡೆಸಿವೆ. ಈ ಎಲ್ಲಾ ಕಾರ್ಯಕ್ರಮಗಳನ್ನು ನಗರ ಮತ್ತು ಗ್ರಾಮೀಣ ವೇದಿಕೆಗಳಲ್ಲಿ ಮತ್ತು ದೇಶದ ದೂರದ ಗ್ರಾಮಗಳಲ್ಲೂ ನಡೆಸಲಾಗಿದೆ. ಅಕಾಮ್ ಸಂಭ್ರಮಾಚರಣೆಯು ಜನಾಂದೋಲನವಾಗಿ ಮಾರ್ಪಟ್ಟಿದೆ, ಇದರಲ್ಲಿ ಭಾರತವೆಂಬ ಅದ್ಭುತ ಆಚರಿಸಲು ಇಡೀ ರಾಷ್ಟ್ರವೇ ಒಂದುಗೂಡಿದೆ.

* ಕೇಂದ್ರ ಸಚಿವರು, ಸಂಸ್ಕೃತಿ, ಪ್ರವಾಸೋದ್ದಿಮೆ ಮತ್ತು ಈಶಾನ್ಯ ಪ್ರದೇಶಾಭಿವೃದ್ಧಿ ಖಾತೆ, ಭಾರತ ಸರ್ಕಾರ. ಇಮೇಲ್: hcm@gov.in



Scanned with ACE Scanner



### ಅಕಾಮ್ ನ 5 ಆಧಾರಸ್ತಂಭಗಳು

ಅಕಾಮ್ ಸಂಭ್ರಮಾಚರಣೆಯ ಪಯಣವು 5 ಆಧಾರಸ್ತಂಭಗಳೊಂದಿಗೆ ಆರಂಭವಾಯಿತು – ಸ್ವಾತಂತ್ರ್ಯ ಹೋರಾಟ, ಪರಿಕಲ್ಪನೆಗಳು @ 75,



ಕ್ರಿಯಾ ಯೋಜನೆಗಳು @ 75, ಸಂಕಲ್ಪಗಳು @ 75, ಮತ್ತು ಸಾಧನೆಗಳು @ 75 ಇವುಗಳ ಅಡಿ, ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸಲಾಯಿತು. ಪ್ರತಿಯೊಂದು ಆಧಾರಸ್ತಂಭವೂ ಭಾರತದ ಯಶೋಗಾಥೆಯನ್ನು ಒಳಗೊಂಡಿದೆ, ಇವು ರಾಷ್ಟ್ರದ ವಿಕಾಸವನ್ನು ನಿರೂಪಿಸುತ್ತವೆ, ಸ್ವಾತಂತ್ರ್ಯ ಹೋರಾಟವನ್ನು ನಮ್ಮ ಇತಿಹಾಸದ ಮೈಲಿಗಲ್ಲುಗಳು ನೆನಪಿಸುತ್ತವೆ, ನಮ್ಮ ಅಸಾಧಾರಣ ವೀರರನ್ನು ಸ್ಮರಿಸುತ್ತವೆ, ಐಡಿಯಾಸ್ @ 75 ನಮ್ಮ ರಾಷ್ಟ್ರವನ್ನು ರೂಪಿಸಿದ ಪರಿಕಲ್ಪನೆಗಳು ಮತ್ತು ಆದರ್ಶಗಳನ್ನು ಆಚರಿಸುತ್ತದೆ, ಕ್ರಿಯಾಯೋಜನೆ / ಆಕ್ಷನ್ @ 75 ನವ ಭಾರತಕ್ಕಾಗಿ ಬದ್ಧತೆಗಳನ್ನು ವಾಸ್ತವೀಕರಿಸುವ ಕಡೆಗೆ ಹಾಕಿದ ದಾಪುಗಾಲುಗಳನ್ನು ಎತ್ತಿ ತೋರಿಸುತ್ತದೆ, ಸಂಕಲ್ಪಗಳು @75 ಭಾರತಕ್ಕೆ ನಿರ್ದಿಷ್ಟ ಉದ್ದೇಶ, ಗುರಿ, ಸಾಕಾರದತ್ತ ಇರುವ ಬದ್ಧತೆಗಳನ್ನು ಬಲಪಡಿಸುತ್ತದೆ ಮತ್ತು ಸಾಧನೆಗಳು @75 ವಿವಿಧ ವಲಯಗಳ ಪ್ರಗತಿ ಮತ್ತು ವಿಕಾಸದ ಗುರಿ ಸಾಧಿಸುವುದನ್ನು ಎತ್ತಿ ತೋರಿಸುತ್ತದೆ.


### ಉಪಕ್ರಮಗಳು ಮತ್ತು ಅಭಿಯಾನಗಳು

ಅಕಾಮ್ ಅಡಿ ತೆಗೆದುಕೊಳ್ಳಲಾದ ವಿಶೇಷ ಉಪಕ್ರಮವೆಂದರೆ – ಮೇರಾ ಗಾಂವ್ ಮೇರಿ ಧರೋಹರ್. ಇದು ಪ್ರತಿ ಹಳ್ಳಿಯ ಭೌಗೋಳಿಕ, ಜನಸಂಖ್ಯಾ ಮತ್ತು ಸೃಜನಶೀಲ ಗುಣಲಕ್ಷಣಗಳನ್ನು ಒಳಗೊಂಡಂತೆ ಭಾರತದ 6.5 ಲಕ್ಷ ಹಳ್ಳಿಗಳ ಸಾಂಸ್ಕೃತಿಕ ನಕ್ಷೆಯನ್ನು ಒಳಗೊಳ್ಳುತ್ತದೆ. 'ಬೆಳಕಿಗೆ ಬಾರದ ಸ್ವಾತಂತ್ರ್ಯ ಹೋರಾಟಗಾರರು (ಅನ್ಸಂಗ್ ಹೀರೋಸ್)' ಉಪಕ್ರಮವು ನಮ್ಮ ಸ್ವಾತಂತ್ರ್ಯ ಹೋರಾಟ ಸಮಯದಲ್ಲಿ ಕಡಿಮೆ-ಪರಿಚಿತ, ಅಪರಿಚಿತ ಮತ್ತು ತೆರೆಯ ಮರೆಯ ಮತ್ತು ಮರೆತುಹೋದ ವೀರರನ್ನು ನೆನಪಿಸಿಕೊಂಡಿದೆ. ಇದರ ಪರಿಣಾಮವಾಗಿ ಅಕಾಮ್ ವೆಬ್‌ಸೈಟ್‌ನಲ್ಲಿ 8,858 ಕಥೆಗಳು ಪ್ರಕಟವಾಗಿವೆ. 'ಡಿಜಿಟಲ್ ಡಿಸ್ಟ್ರಿಕ್ಟ್ ರೆಪೊಸಿಟರಿ (ಡಿಡಿಆರ್)' ಮೂಲಕ ಜಿಲ್ಲೆಯ ಸೂಕ್ಷ್ಮ ಮಟ್ಟದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಜನರು, ಘಟನೆಗಳು ಮತ್ತು ಸ್ಥಳಗಳ ಕಥೆಗಳನ್ನು ಪತ್ತೆ ಹಚ್ಚಲು ಮತ್ತು ದಾಖಲಿಸಲು ಪ್ರಯತ್ನಿಸಲಾಗಿದೆ, 11,935 ಕಥೆಗಳನ್ನು ಅಕಾಮ್





Scanned with ACE Scanner



ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಇವೆಲ್ಲವೂ ಹರ್ ಘರ್ ತಿರಂಗಾ ಉಪಕ್ರಮದಲ್ಲಿ ಸಮಾಪನಗೊಂಡಿತು, ಇದು ಬಹುಶಃ ಅಕಾಮ್ ನ ಬಹುದೊಡ್ಡ ಅಭಿಯಾನವಾಗಿದೆ. ಇದು ರಾಷ್ಟ್ರಧ್ವಜ(ತಿರಂಗಾ)ವನ್ನು ಮನೆಗೆ ತರಲು ಮತ್ತು ಭಾರತದ ಸ್ವಾತಂತ್ರ್ಯದ 75ನೇ ವರ್ಷದ ಸಂಭ್ರಮಾಚಣೆ ಅಂಗವಾಗಿ, ಅದನ್ನು ಹಾರಿಸಲು ದೇಶದ ಜನತೆಯನ್ನು ಪ್ರೋತ್ಸಾಹಿಸಿತು. ಈ ಅಭಿಯಾನವು 23 ಕೋಟಿ ಮನೆಗಳನ್ನು ತಲುಪಿತು, ಜನರು ತಮ್ಮ ಮನೆಗಳಲ್ಲಿ ಭೌತಿಕವಾಗಿ ರಾಷ್ಟ್ರಧ್ವಜ ಹಾರಿಸಿದರು. 6 ಕೋಟಿಗೂ ಹೆಚ್ಚು ಜನರು ಆನ್‌ಲೈನ್‌ನಲ್ಲಿ ಧ್ವಜಾರೋಹಣ ಮಾಡಿದ್ದಾರೆ.

### ಅಕಾಮ್ ಸಂಭ್ರಮಾಚರಣೆಯಲ್ಲಿ ಆಯೋಜಿಸಲಾದ ಕಾರ್ಯಕ್ರಮಗಳ ಅವಲೋಕನ


ಅಕಾಮ್ ಅಡಿ ಆಯೋಜಿಸಲಾದ ಕಾರ್ಯಕ್ರಮಗಳಲ್ಲಿ ಅಭೂತಪೂರ್ವ ಮಟ್ಟದಲ್ಲಿ ಅಪಾರ ಸಂಖ್ಯೆಯ ಜನರು ಭಾಗಿಯಾದರು ಮತ್ತು ಸಾಕ್ಷಿಯಾದರು. ಜನರ ಭಾಗವಹಿಸುವಿಕೆಯನ್ನು ಜಾಗತಿಕ ವೇದಿಕೆಯಲ್ಲಿ ಭಾರತದ ವಿಶಿಷ್ಟ ಪ್ರತಿಭೆ ಪ್ರದರ್ಶಿಸಲು 'ಸೃಜನಶೀಲತೆಯಲ್ಲಿ ಏಕತೆ' ಉಪಕ್ರಮ ಪ್ರಾರಂಭಿಸಲಾಯಿತು, ಇದರ ಅಡಿ, ಸಂಸ್ಕೃತಿ ಸಚಿವಾಲಯವು ಒಟ್ಟು 5,16,885 ಪ್ರವೇಶ (ಎಂಟ್ರಿ) ಗಳನ್ನು ಸ್ವೀಕರಿಸಿದೆ. ಅಂತಿಮ (ಗ್ರ್ಯಾಂಡ್ ಫಿನಾಲೆ) ಕಾರ್ಯಕ್ರಮದ ಸ್ಪರ್ಧೆಗಳಲ್ಲಿ ವಿಜೇತರಾದವರನ್ನು ಸನ್ಮಾನಿಸಲಾಯಿತು.

ಕರ್ತವ್ಯ ಪಥದಲ್ಲಿ ಪ್ರತಿ ವಾರಾಂತ್ಯದಲ್ಲಿ ಆಯೋಜಿಸಲಾದ ಕಲಾಂಜಲಿ ಕಾರ್ಯಕ್ರಮಗಳನ್ನು ಹಾಗೂ ಇಂಡಿಯಾ ಗೇಟ್‌ನ ಆಂಫಿಥಿಯೇಟರ್‌ಗಳಲ್ಲಿ ವ್ಯವಸ್ಥೆ ಮಾಡಲಾಗಿದ್ದ ಸಾಪ್ತಾಹಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಾವಿರಾರು ಜನರು ಆನಂದಿಸಿದರು. ಈ ಕಾರ್ಯಕ್ರಮಗಳು ಭಾರತೀಯ ಪರಂಪರೆಯ ಸಾಮಾಜಿಕ–ಸಾಂಸ್ಕೃತಿಕ ಸೂಕ್ಷ್ಮಗಳನ್ನು ನವಿರಾಗಿ ಎತ್ತಿ ತೋರಿಸಿವೆ.

**ವಿತಾಸ್ತಾ,** ರಾಷ್ಟ್ರದ ಮೇಲಿನ ಕಾಶ್ಮೀರಿ ಸಂಸ್ಕೃತಿಯ ಪ್ರಭಾವವನ್ನು ಎತ್ತಿ ತೋರಿಸುವ ಕಾರ್ಯಕ್ರಮವಾಗಿದೆ. ವಿತಾಸ್ತಾದ 3 ಆವೃತ್ತಿಗಳನ್ನು ತಮಿಳುನಾಡು, ಮಹಾರಾಷ್ಟ್ರ ಮತ್ತು ಜಮ್ಮು–ಕಾಶ್ಮೀರದಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ. ಅಕಾಮ್ ಅಡಿಯ ಮತ್ತೊಂದು ಕಾರ್ಯಕ್ರಮ – ಧಾರಾ, ಭಾರತೀಯ ಜ್ಞಾನ ವ್ಯವಸ್ಥೆಯ ಉಪಕ್ರಮ– ವೈದ್ಯಕೀಯ, ಗಣಿತ, ಖಗೋಳಶಾಸ್ತ್ರ, ರಸಾಯನಶಾಸ್ತ್ರ ಇತ್ಯಾದಿ ಕ್ಷೇತ್ರಗಳಲ್ಲಿ ಭಾರತದ ಪ್ರಾಚೀನ ವೈಜ್ಞಾನಿಕ ಜ್ಞಾನವನ್ನು ಸಾರಿತು.

ಅಕಾಮ್ ಅಡಿ ಆಯೋಜಿಸಲಾದ ಇತರ ಪ್ರಮುಖ ಕಾರ್ಯಕ್ರಮಗಳಲ್ಲಿ ಜನ್‌ಜಾತಿಯ ಖೇಲ್ ಮಹೋತ್ಸವ, ಮಾಧವಪುರ್ ಘೆಡ್ ಉತ್ಸವ, ಸ್ವದೇಶಿ ವಿಜ್ಞಾನಿಗಳ ಸರಣಿ, ಫ್ರಾಂಟಿಯರ್ಸ್ ಆಫ್ ಇಂಡಿಯಾ, ಅಮೃತ್ ಸಮಾಗಮ್, ಆಧ್ಯಾತ್ಮಿಕ ನಾಯಕರ ಸಮ್ಮೇಳನ, ರಾಷ್ಟ್ರೀಯ ಸಂಸ್ಕೃತಿ ಮಹೋತ್ಸವ, ಕಳಿಂಗ ಉತ್ಸವ, ಕಾಶಿ ತಮಿಳು ಸಂಗಮಮ್ ಹೀಗೆ ಇನ್ನೂ ಹಲವು ಕಾರ್ಯಕ್ರಮಗಳು ಜರುಗಿವೆ. ಈ ಕಾರ್ಯಕ್ರಮಗಳ ಮೂಲಕ ಜನರ ಹೃದಯದಲ್ಲಿ ಏಕ್ ಭಾರತ್ ಶ್ರೇಷ್ಠ ಭಾರತ್' ಭಾವನೆ ಮೂಡಿಸಲಾಯಿತು. ಅಪಾರ ಸಂಖ್ಯೆಯ ಜನರು ಒಗ್ಗೂಡಿ ಈ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು.

ನಮ್ಮ ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ವಿವಿಧ ಸ್ಮರಣಾರ್ಥಗಳು ಈ ಮಹಾನ್ ರಾಷ್ಟ್ರಕ್ಕೆ ಭದ್ರ ಬುನಾದಿ ಹಾಕಿದ ಮಹಾನ್ ನಾಯಕರನ್ನು ಗೌರವಿಸುವ ನಮ್ಮ ಬದ್ಧತೆಯನ್ನು ಬಲಪಡಿಸುತ್ತದೆ. ಹುತಾತ್ಮರಾದ ಬಾಬಾ ಫತೇಹ್,





Scanned with ACE Scanner






ಜೋರವಾರ್ ಸಿಂಗ್, ಸಾಹಿಬ್ ಜಾದೆ ಗುರುಗೋವಿಂದ್ ಸಿಂಗ್ ಜಿ, ಗೌರವಾರ್ಥ ವೀರ್ ಬಾಲ್ ದಿವಸ್ ಆಚರಿಸಲಾಯಿತು.

**ನೇತಾಜಿ ಸುಭಾಸ್ ಚಂದ್ರ ಬೋಸ್ ಅವರ 125ನೇ ಜನ್ಮದಿನವನ್ನು** ಭಾರತದಾದ್ಯಂತ ಆಯೋಜಿಸಲಾದ ಕಾರ್ಯಕ್ರಮಗಳ ಸರಣಿಯ ಮೂಲಕ ಆಚರಿಸಲಾಯಿತು. ಕರ್ತವ್ಯ ಪಥದಲ್ಲಿ ನೇತಾಜಿಯವರ ಕಂಚಿನ ಪ್ರತಿಮೆ ಸ್ಥಾಪಿಸುವುದರೊಂದಿಗೆ ಆ ಕಾರ್ಯಕ್ರಮ ಮುಕ್ತಾಯವಾಯಿತು. ಅದೇ ರೀತಿ, ಶ್ರೀ **ಅರಬಿಂದೋ ಘೋಷ್ ಅವರ 150ನೇ ಜಯಂತಿ, ಅಲ್ಲೂರಿ ಸೀತಾರಾಮ ರಾಜು ಅವರ 125ನೇ ಜಯಂತಿ, ರಾಜಾರಾಮ್ ಮೋಹನ್ ರಾಯ್ ಅವರ 350ನೇ ಜನ್ಮ ದಿನಾಚರಣೆ ಹಾಗೂ ಮಹರ್ಷಿ ದಯಾನಂದ ಸರಸ್ವತಿ ಅವರ 200ನೇ ಜನ್ಮದಿನಗಳನ್ನು** ದೇಶಾದ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಈ ಕಾರ್ಯಕ್ರಮಗಳಲ್ಲಿ ಗೌರವಾನ್ವಿತ ಪ್ರಧಾನ ಮಂತ್ರಿಗಳು ಗಣ್ಯರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

### ಪ್ರಚಾರಾಂದೋಲನ 2.0

2ನೇ ಹಂತದ ಅಕಾಮ್ ಸಂಭ್ರಮಾಚರಣೆಯಲ್ಲಿ, 9 ಹೊಸ ವಿಷಯಗಳನ್ನು ಗುರುತಿಸಲಾಗಿದೆ, ಇವು 75ನೇ ಸ್ವಾತಂತ್ರ್ಯ ದಿನ ಸಂದರ್ಭದಲ್ಲಿ ಗೌರವಾನ್ವಿತ ಪ್ರಧಾನ ಮಂತ್ರಿ ಅವರು ಮಾಡಿದ ಭಾಷಣದಲ್ಲಿ ವ್ಯಕ್ತಪಡಿಸಿದ ಪಂಚ ಪ್ರಾಣ (5 ಸಂಕಲ್ಪಗಳಿಂದ)ದಿಂದ ಪ್ರೇರಿತವಾಗಿದೆ. ಈ ವಿಷಯಗಳೆಂದರೆ, ಮಹಿಳೆಯರು ಮತ್ತು ಮಕ್ಕಳು, ಬುಡಕಟ್ಟು ಸಮುದಾಯದ ಸಬಲೀಕರಣ, ನೀರು, ಪರಿಸರಕ್ಕಾಗಿ ಜೀವನಶೈಲಿ (ಲೈಫ್), ಆರೋಗ್ಯ ಮತ್ತು ಸ್ವಾಸ್ಥ್ಯ, ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ, ಆತ್ಮನಿರ್ಭರ್ ಭಾರತ್, ಸಾಂಸ್ಕೃತಿಕ ಹೆಮ್ಮೆ ಮತ್ತು ಏಕತೆ. ಸಚಿವಾಲಯಗಳು, ಇಲಾಖೆಗಳು, ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, ಎನ್‌ಜಿಓಗಳು ಮತ್ತು ಖಾಸಗಿ ಸಂಸ್ಥೆಗಳಂತಹ ಎಲ್ಲಾ ಪಾಲುದಾರರ ಬೆಂಬಲ ಮತ್ತು ಒಳಗೊಳ್ಳುವಿಕೆಯೊಂದಿಗೆ ಈ ಅಭಿಯಾನಗಳನ್ನು ಆಯೋಜಿಸಲಾಗಿದೆ. ಇವು ಭವಿಷ್ಯದ ಅಭಿಯಾನಗಳ ತಳಹದಿಯನ್ನು ರೂಪಿಸುತ್ತದೆ, ಅಮೃತ ಕಾಲದ ಭಾರತದ ಅದ್ಭುತ, ವೈಭವೋಪೇತ ಪಯಣವನ್ನು ಪಟ್ಟಿ ಮಾಡುತ್ತದೆ.



Scanned with ACE Scanner

# ಪರಿಪೂರ್ಣ ಯೋಗಕ್ಷೇಮಕ್ಕಾಗಿ ಸಮಗ್ರ ಉಪಕ್ರಮ

* ಡಾ. ಮನ್‌ಸುಖ್ ಮಾಂಡವೀಯ

ದೇಶದ ಆರೋಗ್ಯ ಸೇವೆ ಚಿತ್ರಣ 2014ರ ನಂತರ ಗಮನೀಯವಾಗಿ ರೂಪಾಂತರಗೊಂಡಿದೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು ಐಶಾರಾಮಿ ಎನಿಸಿದ್ದ ಆರೋಗ್ಯ ರಕ್ಷಣೆಯನ್ನು ಸಾರ್ವತ್ರಿಕಗೊಳಿಸಿ, ಎಲ್ಲರಿಗೂ ಆರೋಗ್ಯ ಸೇವೆಗಳನ್ನು ಖಾತ್ರಿಗೊಳಿಸಿದ ಬಳಿಕ ಭಾರತದ ಆರೋಗ್ಯ ರಕ್ಷಣೆ ಕ್ಷೇತ್ರವು ಗಮನಾರ್ಹ ಸ್ಥಿತ್ಯಂತರಕ್ಕೆ ಸಾಕ್ಷಿಯಾಗಿದೆ. ಸರ್ಕಾರ ವ್ಯವಸ್ಥಿತ ಸುಧಾರಣೆಗಳ ಮೂಲಕ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಉತ್ತಮಗೊಳಿಸಲು ಒತ್ತು ನೀಡುತ್ತಿದೆ ಮತ್ತು ಜನರ ಮನೆ ಬಾಗಿಲಿನಲ್ಲಿ ಗುಣಮಟ್ಟದ ಸೇವೆಯನ್ನು ಉಚಿತವಾಗಿ ಒದಗಿಸಲು ಪ್ರಯತ್ನಿಸುತ್ತಿದೆ. ಅಂತ್ಯೋದಯ ಸಿದ್ಧಾಂತವನ್ನು ಅನುಸರಿಸಿ, ಯಾರನ್ನೂ ಬಿಡದೆ ಮತ್ತು ಸರತಿ ಸಾಲಿನಲ್ಲಿರುವ ಕೊನೆಯ ವ್ಯಕ್ತಿಗೂ ಸೇವೆಯನ್ನು ಒದಗಿಸಲು ಶ್ರಮಿಸುತ್ತಿದೆ.

ಆರೋಗ್ಯ ಕ್ಷೇತ್ರವನ್ನು 'ಟೋಕನ್‌ನಿಂದ ಟೋಟಲ್' ಪರಿಕಲ್ಪನೆಯ ಮಾರ್ಗವನ್ನು ಅನುಸರಿಸಿ, ಸಮಗ್ರವಾಗಿ ಬಲಗೊಳಿಸುವ ಗುರಿಯನ್ನು ಕಳೆದ ಸುಮಾರು ಒಂದು ದಶಕದಿಂದ ಹಾಕಿಕೊಳ್ಳಲಾಗಿತ್ತು. ಇದಕ್ಕೆ ಅನುಗುಣವಾಗಿ ಪ್ರಧಾನ ಮಂತ್ರಿ ಅವರು ಆರೋಗ್ಯ ರಕ್ಷಣೆ ವ್ಯವಸ್ಥೆಯಲ್ಲಿ ಸಮಗ್ರತೆಯ ಮಾರ್ಗವನ್ನು ಅಳವಡಿಸಿಕೊಳ್ಳಲು ಹಾಗೂ ಆರೋಗ್ಯ ಮತ್ತು ಯೋಗಕ್ಷೇಮ ಎರಡರ ಕಡೆಗೂ ಲಕ್ಷ್ಯ ವಹಿಸಬೇಕೆಂದು ಕರೆಕೊಟ್ಟರು. ಅವರದೇ ಪದಗಳನ್ನು ಬಳಸಬಹುದಾದರೆ, "ಯೋಗಕ್ಷೇಮ ಕುರಿತ ನಮ್ಮ ಮುನ್ನೋಟ" ಜಾಗತಿಕ ಹಾಗೂ ಸ್ವದೇಶಿ. ಜಗತ್ತು ಕೊವಿಡ್–19 ರ ಬಳಿಕ



**ಭಾರತದಲ್ಲಿ ಸಾಂಪ್ರದಾಯಿಕ ವೈದ್ಯ ಪದ್ಧತಿ ಹಾಗೂ ಅಲೋಪಥಿಯನ್ನು ಏಕತ್ರಗೊಳಸುವುದು ಸಂಪೂರ್ಣ ಯೋಗಕ್ಷೇಮದೆಡೆಗೆ ಇರಿಸುವ ಸ್ಥಿತ್ಯಂತರದ ಹೆಜ್ಜೆಯಾಗಲಿದೆ. ಈ ಸಂಕರ್ಮ ಮಾರ್ಗವು ಎರಡೂ ವ್ಯವಸ್ಥೆಗಳ ಬಲವನ್ನು ಒಳಗೊಂಡಿರಲಿದ್ದು, ರೋಗಿಗಳ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಅಗತ್ಯಗಳನ್ನು ಪೂರೈಸುವ ಮೂಲಕ ಸಮಗ್ರ ಸುರಕ್ಷೆಯನ್ನು ಒದಗಿಸಲಿದೆ. ದೇಶದ ಆರೋಗ್ಯ ರಕ್ಷಣೆ ವ್ಯವಸ್ಥೆಯನ್ನು ಪ್ರಾಥಮಿಕ, ಮಾಧ್ಯಮಿಕ ಹಾಗೂ ತೃತೀಯ ಹಂತದ ರಕ್ಷಣೆಯ ಮೂಲಕ ನಿರಂತರತೆಯನ್ನು ಕಾಯ್ದುಕೊಂಡಿರುವಂತೆ ವಿನ್ಯಾಸಗೊಳಸಲಾಗಿದೆ. ಈ ಮೂರು ಹಂತಗಳ ಸುರಕ್ಷತೆಯಲ್ಲಿ ಗಮನಾರ್ಹವಾದ ಸ್ವಾಭಾವಿಕ ಸಂಬಂಧವಿದೆ ಮತ್ತು ಎಲ್ಲರಿಗೂ ಆರೋಗ್ಯ ರಕ್ಷಣೆಯನ್ನು ಖಾತ್ರಿಗೊಳಸಲು ಅವುಗಳ ನಡುವೆ ಪರಸ್ಪರಾವಲಂಬನೆ ಅನಿವಾರ್ಯ ಆಗಿರಲಿದೆ.**

ಆರೋಗ್ಯ ಮತ್ತು ಯೋಗಕ್ಷೇಮವನ್ನು ಗಂಭೀರವಾಗಿ ಪರಿಗಣಿಸಿದೆ. ದೇಶ ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಕೊಡುಗೆ ನೀಡಬಹುದಾಗಿದೆ. ನಮ್ಮ ಯೋಗ ಹಾಗೂ ಆಯುರ್ವೇದ, ಆರೋಗ್ಯವಂತ ಭೂಗ್ರಹಕ್ಕೇ ಕೊಡುಗೆ ನೀಡಬಲ್ಲವು'. ದೇಶವೊಂದರ ಆರೋಗ್ಯ ಎಲ್ಲ ವಯೋಮಾನದವರ ಆರೋಗ್ಯವನ್ನು ಆಧರಿಸಿದೆ. ದೇಶದ

* ಕೇಂದ್ರ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ, ಭಾರತ ಸರ್ಕಾರ. ಇಮೇಲ್: india-hfm@gov.in



Scanned with ACE Scanner

G20

Ministry of Health and Family Welfare
Government of India

PMNCH for Women's, Children's and Adolescents' Health




## ಋತುಚಕ್ರ ನೈರ್ಮಲ್ಯ ಯೋಜನೆ (ಎಂಎಚ್‌ಎಸ್):

**2022–2023ರಲ್ಲಿ ಪ್ರತಿ ತಿಂಗಳು**

**4.5** ದಶಲಕ್ಷ ಬಾಲಕಿ / ತರುಣಿಯರಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಒದಗಿಸಲಾಗಿದೆ.

(ಮೂಲ: ಆರೋಗ್ಯ ನಿರ್ವಹಣೆ ಮಾಹಿತಿ ವ್ಯವಸ್ಥೆ, ಭಾರತ)




## ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ(ಪಿಎಂಬಿಜೆಪಿ)

ಪಿಎಂಬಿಜೆಪಿ ಕೇಂದ್ರಗಳಲ್ಲಿ

**363.7** ದಶಲಕ್ಷ ಜನೌಷಧಿ ಸುವಿಧಾ ಸ್ಯಾನಿಟರಿ ಪ್ಯಾಡ್‌ಗಳನ್ನು ಮಾರಾಟ ಮಾಡಲಾಗಿದೆ * 31.03.2023ರವರೆಗೆ

ಜನರು ಆರೋಗ್ಯವಂತರಾಗಿದ್ದರೆ, ರಾಷ್ಟ್ರ ನಿರ್ಮಾಣದ ಯಾವುದೇ ಪ್ರಯತ್ನಗಳು ಯಶಸ್ವಿಯಾಗುತ್ತವೆ. ಅದು ಪ್ರತಿಯಾಗಿ, ಆರೋಗ್ಯವಂತ ಸಮಾಜ ಹಾಗೂ ರಾಷ್ಟ್ರೀಯ ಉತ್ಪಾದಕತೆಗೆ ಕಾರಣವಾಗುತ್ತದೆ. ಆದರೆ, ಜನತೆಯ ಆರೋಗ್ಯದ ಮೇಲೆ ರಾಜಕೀಯ, ಆರ್ಥಿಕ, ಜನಸಂಖ್ಯಾ ಹಾಗೂ ಸಾಂಕ್ರಾಮಿಕ ರೋಗಗಳ ಸ್ಥಿತ್ಯಂತರಗಳು ದೂರಗಾಮಿ ಪರಿಣಾಮ ಬೀರುತ್ತವೆ. ಬದಲಾವಣೆಗಳೊಡನೆ ನಿರಂತರವಾಗಿ ಹೆಜ್ಜೆ ಹಾಕಬೇಕೆಂದರೆ ಕ್ಷಮತೆ, ಸಮಾನತೆಯ, ಎಲ್ಲರಿಗೂ ಪ್ರವೇಶಾವಕಾಶವಿರುವ ಮತ್ತು ಗುಣಮಟ್ಟದ ಆರೋಗ್ಯರಕ್ಷಣೆಯನ್ನು ಖಾತ್ರಿಪಡಿಸಲು ಸಾಕ್ಷ್ಯವನ್ನು ಆಧರಿಸಿದ ಆರೋಗ್ಯ ಕಾರ್ಯನೀತಿಗಳು ಹಾಗೂ ಪ್ರಬಲ ಆರೋಗ್ಯ ವ್ಯವಸ್ಥೆಗಳು ಮುಖ್ಯವಾಗುತ್ತವೆ. ಇದಕ್ಕೆ ಸಂಬಂಧಿಸಿದಂತೆ, ರಾಷ್ಟ್ರ ತನ್ನ ನಾಗರಿಕರು ಉತ್ಪಾದಕ ಜೀವನವನ್ನು ಸಾಗಿಸಲು ಹಾಗೂ ಆರೋಗ್ಯವಂತ ಸಮಾಜವನ್ನು ನಿರ್ಮಿಸಲು ಪ್ರತಿಕ್ರಿಯಾತ್ಮಕ ಆರೋಗ್ಯ ವ್ಯವಸ್ಥೆಗಳನ್ನು ಸೃಷ್ಟಿಸಲು ಬದ್ಧವಾಗಿದೆ.

ದೇಶದ ಆರೋಗ್ಯ ರಕ್ಷಣೆ ವ್ಯವಸ್ಥೆಯನ್ನು ಪ್ರಾಥಮಿಕ, ಮಾಧ್ಯಮಿಕ ಹಾಗೂ ತೃತೀಯ ಹಂತದ ರಕ್ಷಣೆ ಮೂಲಕ ನಿರಂತರತೆಯನ್ನು ಕಾಯ್ದುಕೊಂಡಿರುವಂತೆ ವಿನ್ಯಾಸಗೊಳಿಸಲಾಗಿದೆ. ಈ ಮೂರು ಹಂತಗಳ ಸುರಕ್ಷತೆ ನಡುವೆ ಗಮನಾರ್ಹವಾದ ಸ್ವಾಭಾವಿಕ ಸಂಬಂಧವಿದೆ ಮತ್ತು ಎಲ್ಲರಿಗೂ ಆರೋಗ್ಯ ರಕ್ಷಣೆಯನ್ನು ಖಾತ್ರಿಗೊಳಿಸಲು ಅವುಗಳ ನಡುವೆ ಪರಸ್ಪರಾವಲಂಬನೆ ಅನಿವಾರ್ಯ ಆಗಿರಲಿದೆ. ಉದಾಹರಣೆಗೆ, ಈಗ ರಾಷ್ಟ್ರೀಯ ಆರೋಗ್ಯ ಮಿಷನ್ ಆಗಿ ಬದಲಾಗಿರುವ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (ಎನ್‌ಆರ್‌ಎಚ್‌ಎಂ)ಅನ್ನು ಈ ಮೊದಲು ದುರ್ಬಲ ಸಮುದಾಯಗಳಲ್ಲಿ ಪ್ರಜನನ / ಪುನರುತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಹಾಗೂ ಸಾಂಕ್ರಾಮಿಕ ರೋಗಗಳಿಗೆ ಪ್ರಾಥಮಿಕ ಆರೋಗ್ಯ ರಕ್ಷಣೆ ನೀಡಲು ಆರಂಭಗೊಳಿಸಲಾಗಿತ್ತು. ಮಿಷನ್ ಮಹತ್ವದ ಸಾಧನೆ ಮಾಡಿದರೂ, ಆಯ್ಕೆ ಮಾಡಿಕೊಂಡ ಸೇವೆಗಳು ಬದಲಾಗುತ್ತಿರುವ ಜನಸಂಖ್ಯಾ ಅಗತ್ಯಗಳನ್ನು ಹಾಗೂ ಸಾಂಕ್ರಾಮಿಕವಲ್ಲದ ರೋಗಗಳಿಂದ ಉಂಟಾದ ಅನಾರೋಗ್ಯ ಮತ್ತು ಸಾವು ತಡೆಯುವಲ್ಲಿ ವಿಫಲವಾಯಿತು.

### ಆಯುಷ್ಮಾನ್ ಭಾರತ್


2018ರಲ್ಲಿ ಆರಂಭಿಸಿದ ಆಯುಷ್ಮಾನ್ ಭಾರತ್ ಉಪಕ್ರಮಗಳಾದ ಆರೋಗ್ಯ ಮತ್ತು ಯೋಗಕ್ಷೇಮ ಕೇಂದ್ರ (ಎಬಿ-ಎಚ್‌ಡಬ್ಲ್ಯುಸಿ) ಮತ್ತು ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ (ಎಬಿ-ಪಿಎಂಜೆಎವೈ)ಗಳು ಆರೋಗ್ಯ ರಕ್ಷಣೆಯ ಸವಾಲುಗಳನ್ನು ಎದುರಿಸುವಲ್ಲಿ ಹಾಗೂ ಆರೋಗ್ಯ ರಕ್ಷಣೆಯ ವೆಚ್ಚವನ್ನು ಕಡಿಮೆ ಮಾಡುವಲ್ಲಿ ಗಣನೀಯ ಪಾತ್ರವಹಿಸಿವೆ. ಎಬಿ-ಎಚ್‌ಡಬ್ಲ್ಯುಸಿ ಸಮುದಾಯಕ್ಕೆ ಸಮಗ್ರ ಪ್ರಾಥಮಿಕ ಆರೋಗ್ಯ ರಕ್ಷಣೆ ಸೇವೆಗಳು ಹಾಗೂ ಯೋಗಕ್ಷೇಮ ಚಟುವಟಿಕೆಗಳನ್ನು ಹಾಗೂ ಎಬಿ-ಪಿಎಂಜೆಎವೈ ಬಡವರು

G20

Ministry of Health and Family Welfare
Government of India

PMNCH for Women's, Children's and Adolescents' Health

## ತರುಣಾವಸ್ಥೆ-ಸ್ನೇಹಿ ಆರೋಗ್ಯ ಕ್ಲಿನಿಕ್‌ಗಳು



**2022–23ರಲ್ಲಿ ಅಂದಾಜು**

**11.9** ದಶಲಕ್ಷ ತರುಣಿಯರು **ತರುಣಾವಸ್ಥೆಸ್ನೇಹಿ ಆರೋಗ್ಯ ಕ್ಲಿನಿಕ್(ಎಎಫ್‌ಎಚ್‌ಸಿ)**ಗಳ ಸೇವೆಯ ಪ್ರಯೋಜನ ಪಡೆದುಕೊಂಡಿದ್ದಾರೆ

(ಮೂಲ: ಆರೋಗ್ಯ ನಿರ್ವಹಣೆ ಮಾಹಿತಿ ವ್ಯವಸ್ಥೆ, ಭಾರತ)



Scanned with ACE Scanner




ಮತ್ತು ದುರ್ಬಲರನ್ನು ಉಚಿತವಾಗಿ ಆಸ್ಪತ್ರೆಗೆ ದಾಖಲಿಸುವ ಹಾಗೂ ಒಳರೋಗಿ ಸೇವೆಗಳನ್ನು ಒದಗಿಸುತ್ತದೆ. ಈ ಉಪಕ್ರಮಗಳು ಮಹಿಳೆಯರು, ಮಕ್ಕಳು ಹಾಗೂ ಹಿರಿಯರತ್ತ ಗಮನ ಕೇಂದ್ರೀಕರಿಸುವ ಮೂಲಕ ಜನರ ಬಳಿಗೆ ಯಶಸ್ವಿಯಾಗಿ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒಯ್ದಿವೆ.

ಎಬಿ–ಎಚ್‌ಡಬ್ಲ್ಯುಸಿಗಳನ್ನು ಸಮಗ್ರ ಪ್ರಾಥಮಿಕ ಆರೋಗ್ಯ ರಕ್ಷಣೆ (ಸಿಪಿಎಚ್‌ಸಿ) ನೀಡಲು ಮತ್ತು ಯೋಗಕ್ಷೇಮ ಚಟುವಟಿಕೆಗಳನ್ನು ಉತ್ತೇಜಿಸಲು ಕಾರ್ಯಾ-ಚರಣೆಗೊಳಿಸಲಾಯಿತು. ಡಿಸೆಂಬರ್ 2022ರೊಳಗೆ 1.5 ಲಕ್ಷ ಎಬಿ–ಎಚ್‌ಡಬ್ಲ್ಯುಸಿಗಳನ್ನು ಕಾರ್ಯಾಚರಣೆಗೊಳಿಸಲು ಯೋಜಿಸಲಾಗಿತ್ತು. ವಚನ ಬದ್ಧವಾಗಿ 1,59,859 ಎಬಿ–ಎಚ್‌ಡಬ್ಲ್ಯುಸಿಗಳನ್ನು ಸಮುದಾಯದ ಬಳಿ ಯಶಸ್ವಿಯಾಗಿ ಸ್ಥಾಪಿಸಲಾಗಿದೆ ಮತ್ತು ಮಹಿಳೆಯರು, ಮಕ್ಕಳು ಹಾಗೂ ಹಿರಿಯ ನಾಗರಿಕರಿಗೆ ಉಚಿತ ಆರೋಗ್ಯರಕ್ಷಣೆ ಸೇವೆಗಳನ್ನು ನೀಡಲಾಗುತ್ತಿದೆ. ಎಬಿ–ಎಚ್‌ಡಬ್ಲ್ಯುಸಿಗಳಿಗೆ ಒಟ್ಟು 172.13 ಕೋಟಿ ಮಂದಿ ಭೇಟಿ ನೀಡಿದ್ದು, 35.66 ಕೋಟಿ ಮಧುಮೇಹ, 41.26 ಕೋಟಿ ಅಧಿಕ ರಕ್ತದೊತ್ತಡ, 24.46 ಕೋಟಿ ಬಾಯಿ ಕ್ಯಾನ್ಸರ್, 11.32 ಕೋಟಿ ಸ್ತನ ಕ್ಯಾನ್ಸರ್, 7.74 ಕೋಟಿ ಮಂದಿಗೆ ಗರ್ಭ ಕೊರಳು ಕ್ಯಾನ್ಸರ್ ತಪಾಸಣೆ ಮಾಡಲಾಗಿದೆ ಹಾಗೂ ಸಮುದಾಯದಲ್ಲಿ 2.08 ಕೋಟಿ ಯೋಗ ಅಥವಾ ಯೋಗಕ್ಷೇಮ ಚಟುವಟಿಕೆಗಳನ್ನು ನಡೆಸಲಾಗಿದೆ.

ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ (ಪಿಎಂಜೆಎವೈ)ಯಡಿ 33 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಶೇ.40ರಷ್ಟು ಅರ್ಹ ಫಲಾನುಭವಿಗಳಿಗೆ ಆರ್ಥಿಕ ರಕ್ಷಣೆ ನೀಡಲಾಗಿದೆ. 23 ಕೋಟಿ ಆಯುಷ್ಮಾನ್ ಕಾರ್ಡ್‌ಗಳನ್ನು ವಿತರಿಸಲಾಗಿದೆ ಮತ್ತು ಹೆಚ್ಚಿನ ಚಿಕಿತ್ಸೆ ನೀಡಲು 28,368 ಆಸ್ಪತ್ರೆಗಳನ್ನು ಪಟ್ಟಿಯಲ್ಲಿ ಸೇರ್ಪಡೆಗೊಳಿಸಿಕೊಳ್ಳಲಾಗಿದೆ. ಈಗ ಈ ಯೋಜನೆ ವಿಕಾಸಗೊಂಡಿದ್ದು, ರೋಗಪತ್ತೆ, ಅಂಗ ಹಾಗೂ ಅಂಗಾಂಶ ಕಸಿ ಮತ್ತು ಉಪ ಶಾಮಕ ಪಾಲನೆ ಸೇರಿದಂತೆ 1,949 ರೋಗಗಳಿಗೆ ಚಿಕಿತ್ಸೆಯನ್ನು ಒಳಗೊಂಡಿದೆ. ಪಿಎಂಜೆಎವೈ ಆರಂಭಗೊಂಡ ಬಳಿಕ 5 ಕೋಟಿ ಮಂದಿಗೆ 61,807 ಕೋಟಿ ರೂ. ಮೌಲ್ಯದ ಆರೋಗ್ಯ ಸೇವೆ ಒದಗಿಸಲಾಗಿದೆ. ಈ ಮೂಲಕ ಬಡಜನರ ಜೀವ ಉಳಿಸಲಾಗಿದೆ ಮತ್ತು ಆರ್ಥಿಕ ಹೊರೆಯನ್ನು ನಿವಾರಿಸಲಾಗಿದೆ.

### ಡಿಜಿಟಲ್ ಸ್ಥಿತ್ಯಂತರ

ದೇಶದಲ್ಲಿ ಸಮಗ್ರ ಡಿಜಿಟಲ್ ಆರೋಗ್ಯ ಮೂಲಸೌಲಭ್ಯವನ್ನು ಅಭಿವೃದ್ಧಿಪಡಿಸಲು ಹಾಗೂ ಬೆಂಬಲಿಸಲು ಆಯುಷ್ಮಾನ್ ಭಾರತ ಡಿಜಿಟಲ್ ಮಿಷನ್(ಎಬಿಡಿಎಂ)ನ್ನು ಆರಂಭಿಸಲಾಯಿತು. ಎಬಿಡಿಎಂ ಅಡಿ ಆರೋಗ್ಯ ಮೂಲ ಸೌಲಭ್ಯವನ್ನು ವಿಸ್ತರಿಸಲು 200 ಕೋಟಿ ರೂ.ಗೂ ಅಧಿಕ ಹೂಡಿಕೆ ಮಾಡಲಾಗಿದೆ. ಆಯುಷ್ಮಾನ್ ಭಾರತ ಆರೋಗ್ಯ ಖಾತೆ(ಎಬಿಎಚ್‌ಎ)ಗಳನ್ನು ಸೃಷ್ಟಿಸುವ ಮೂಲಕ ಡಿಜಿಟಲ್ ಆರೋಗ್ಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಲು ನೆರವು ನೀಡಲಾಗುತ್ತದೆ. ಎಬಿಎಚ್‌ಎ–ಐಡಿ ವಿವಿಧ ಆರೋಗ್ಯ ಸೇವೆಗಳ ಪೂರೈಕೆದಾರರನ್ನು ಗುರುತಿಸುವುದು, ಸಾರ್ವಜನಿಕ ಆರೋಗ್ಯ ಕಾರ್ಯಕ್ರಮದಿಂದ ಆರಂಭಿಸಿ ವಿಮಾ ಸೌಲಭ್ಯಗಳನ್ನು ಐಡಿಗೆ ಜೋಡಿಸುವುದು, ದೇಶದೆಲ್ಲೆಡೆಯ ಆರೋಗ್ಯ ಸೌಲಭ್ಯಗಳಲ್ಲಿ ನೊಂದಣಿಯನ್ನು ಸುಲಭಗೊಳಿಸುವುದು ಮತ್ತು ಆರೋಗ್ಯ ಮಾಹಿತಿಯನ್ನು ಹಂಚಿಕೊಳ್ಳಲು ಸಮತಲ ಆರೋಗ್ಯ ದಾಖಲೆಗಳನ್ನು ಸೃಷ್ಟಿಸುವ ಉದ್ದೇಶ ಹೊಂದಿದೆ. 40.22 ಕೋಟಿ ಎಬಿಎಚ್‌ಎ ಐಡಿಗಳನ್ನು ಸೃಷ್ಟಿಸಲಾಗಿದೆ ಮತ್ತು ಜೂನ್ 2023ರಲ್ಲಿರುವಂತೆ 27.48 ಕೋಟಿ ಆರೋಗ್ಯ ದಾಖಲೆಗಳನ್ನು ಜೋಡಣೆ ಮಾಡಲಾಗಿದೆ. ಈಮೊದಲು ರೋಗಿಗಳು ತಜ್ಞರ ಭೇಟಿಗೆ ಬಹಳ ದೂರ ಹೋಗಬೇಕಿತ್ತು ಇಲ್ಲವೇ ಖಾಸಗಿ ವೈದ್ಯರನ್ನು ಸಂಪರ್ಕಿಸಬೇಕಿತ್ತು. ಈಗ ಇ–ಆರೋಗ್ಯ ಪೂರೈಕೆ ಉಪಕ್ರಮಗಳಾದ ಇ–ಸಂಜೀವಿನಿ ಸೇವೆಗಳು 1.11 ಲಕ್ಷಕ್ಕೂ ಅಧಿಕ ಎಬಿ–ಎಚ್‌ಡಬ್ಲ್ಯುಸಿಗಳಲ್ಲಿ ಲಭ್ಯವಿದ್ದು, ಆರೋಗ್ಯ ಸೇವೆ ಲಭ್ಯತೆಯ ಕಂದರವನ್ನು ಕಡಿಮೆ ಮಾಡಿವೆ ಮತ್ತು ತಜ್ಞ ವೈದ್ಯರನ್ನು ಸನಿಹಕ್ಕೆ ತಂದಿವೆ. ಇ–ಸಂಜೀವಿನಿ 9 ಕೋಟಿ ದೂರವಾಣಿ ಸಮಾಲೋಚನೆಗಳನ್ನು ಒದಗಿಸಿದ್ದು, ಫಲಾನುಭವಿಗಳಲ್ಲಿ ಶೇ.57ಕ್ಕೂ ಹೆಚ್ಚು ಮಹಿಳೆಯರು ಹಾಗೂ ಶೇ.12ರಷ್ಟು ಹಿರಿಯ ನಾಗರಿಕರಿದ್ದಾರೆ.

### ಸಾಂಕ್ರಾಮಿಕ ರೋಗಗಳಿಗೆ ಪ್ರತಿಕ್ರಿಯೆ ಮತ್ತು ಸನ್ನದ್ಧತೆ

ಕೊವಿಡ್–19ಕ್ಕೆ ಭಾರತದ ಪ್ರತಿಕ್ರಿಯೆಯು ಅದರ ಜಾಗತಿಕ ಮುಂದಾಳತ್ವ ಹಾಗೂ ಪುನರುಜ್ಜೀವನ ಸಾಮರ್ಥ್ಯವನ್ನು ತೋರಿಸಿಕೊಟ್ಟಿತು. ದೇಶ 2022ರೊಳಗೆ 3,388 ಪ್ರಯೋಗಾಲಯಗಳು, 821 ಸರ್ಕಾರಿ ಹಾಗೂ 1,487 ಖಾಸಗಿ ಆರ್‌ಟಿ–ಪಿಸಿಆರ್ ಪ್ರಯೋಗಾಲಯಗಳು, 1,115 ಕೋಶ ಪ್ರಯೋಗಶಾಲೆಗಳು ಮತ್ತು 53 ವಂಶವಾಹಿ ಶ್ರೇಣಿ ಪ್ರಯೋಗಾಲಯಗಳನ್ನು ಆರಂಭಿಸಿ, ಪರೀಕ್ಷಾ ಸಾಮರ್ಥ್ಯವನ್ನು ವಿಸ್ತರಿಸಿತು. ಆತ್ಮನಿರ್ಭರ ಭಾರತ್ ಉಪ ಕ್ರಮವು ರೋಗಪತ್ತೆ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆಗೆ ಅನುವು ಮಾಡಿಕೊಟ್ಟಿತು ಮತ್ತು ಇದರಿಂದ 2020ರಲ್ಲಿ 1,727 ರೂ. ಇದ್ದ ರೋಗಪತ್ತೆ ಉತ್ಪನ್ನಗಳ ವೆಚ್ಚ ಬೆಲೆ 2021ರಲ್ಲಿ 72 ರೂ.ಗೆ ಇಳಿಯಿತು. ಆರೋಗ್ಯ ಮೂಲ



Scanned with ACE Scanner

G20


Ministry of Health and Family Welfare
Government of India

PMNCH for Women's, Children's and Adolescents' Health

**34 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ**

**328 ಜಿಲ್ಲೆಗಳು**

ಶಾಲಾ ಆರೋಗ್ಯ ಮತ್ತು ಯೋಗಕ್ಷೇಮ ಕಾರ್ಯಕ್ರಮ(ಎಸ್‌ಎಚ್‌ಡಬ್ಲ್ಯುಪಿ) ಯೋಜನೆಯಡಿ ಇವೆ.




**3,23,000 ಕ್ಕೂ**

ಅಧಿಕ ಆರೋಗ್ಯ ಮತ್ತು ಯೋಗಕ್ಷೇಮ ರಾಯಭಾರಿ(ಎಚ್‌ಡಬ್ಲ್ಯುಎ)ಗಳಿಗೆ ತರಬೇತಿ ನೀಡಲಾಗಿದೆ.

ಮೂಲ: ಮಾರ್ಚ್ 2023ರವರೆಗಿನ ರಾಜ್ಯಗಳ ವರದಿಗಳು

ಸೌಲಭ್ಯಗಳಾದ ಕೊವಿಡ್ ಕೇಂದ್ರಗಳು, ಐಸಿಯು ಹಾಸಿಗೆಗಳು, ವೆಂಟಿಲೇಟರ್‌ಗಳು, ಆಮ್ಲಜನಕ ಕಾನ್ಸನ್ಟ್ರೇಟರ್‌ಗಳು ಮತ್ತು ಆಮ್ಲಜನಕ ಉತ್ಪಾದನೆಗೆ ಬಳಸುವ ಪಿಎಸ್‌ಎ ಘಟಕಗಳು ಶೀಘ್ರವಾಗಿ ಲಭ್ಯವಾಗುವಂತೆ ಮಾಡಲಾಯಿತು.

ಕೊವಿಡ್ ಸೋಂಕು ರೋಗ ನಿರ್ವಹಣೆಯಿಂದ ಗಳಿಸಿದ ಅನುಭವವನ್ನು ಆಧರಿಸಿ 'ಸಮಾಜದ ಎಲ್ಲರಿಗೂ' ಮಾರ್ಗದ ಮೂಲಕ ಸಂಪೂರ್ಣ ಆರೋಗ್ಯ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ನಡೆದ ಅತಿ ದೊಡ್ಡ ಮೂಲಸೌಕರ್ಯ ಯೋಜನೆಯೇ ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ್ ಆರೋಗ್ಯ ಮೂಲಸೌಕರ್ಯ ಮಿಷನ್ (ಪಿಎಂ ಎಬಿಎಚ್‌ಐಎಂ). ಮೂಲಸೌಲಭ್ಯಗಳ ಬಲವರ್ಧನೆ, ಸರ್ವೇಕ್ಷಣೆ, ರೋಗಪತ್ತೆ ಮತ್ತು ನಿರ್ವಹಣೆ ಹಾಗೂ ಸಂಶೋಧನೆ ಸೇರಿದಂತೆ ಎಲ್ಲ ಹಂತದ ಆರೋಗ್ಯ ವ್ಯವಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವ ಗುರಿಯನ್ನು ಪಿಎಂಎಬಿಎಚ್‌ಐಎಂ ಇಟ್ಟುಕೊಂಡಿದೆ. ಈವರೆಗೆ, ಪಿಎಂಎಬಿಎಚ್‌ಐಎಂ 7,808 ಕಟ್ಟಡರಹಿತ ಉಪ ಆರೋಗ್ಯ ಕೇಂದ್ರಗಳಿಗೆ ಬೆಂಬಲ, 264 ನಗರ ಆರೋಗ್ಯ ಮತ್ತು ಯೋಗಕ್ಷೇಮ ಕೇಂದ್ರಗಳು (ಯುಎಚ್‌ಡಬ್ಲ್ಯುಸಿ), 485 ವಿಭಾಗ ಸಾರ್ವಜನಿಕ ಆರೋಗ್ಯ ಘಟಕಗಳು (ಬಿಪಿಎಚ್‌ಯು), 216 ಸಮಗ್ರ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳು (ಐಪಿಎಚ್‌ಎಲ್) ಮತ್ತು 166 ವಿಷಮಾವಸ್ಥೆ ಪಾಲನೆ ವಿಭಾಗ ಆಸ್ಪತ್ರೆ (ಸಿಸಿಬಿ) ಗಳನ್ನು ಸ್ಥಾಪಿಸಿದೆ. ವಿಕೇಂದ್ರೀಕರಣಕ್ಕೆ ಒತ್ತು ನೀಡಲಾಗಿದ್ದು, 15ನೇ ಹಣಕಾಸು ಆಯೋಗದಿಂದ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆರೋಗ್ಯ ಕ್ಷೇತ್ರಕ್ಕೆ 70,051 ಕೋಟಿ ರೂ. ಹೆಚ್ಚುವರಿ ಅನುದಾನ ಗೊತ್ತುಮಾಡಲಾಗಿದೆ.

ಪುನರುಜ್ಜೀವಗೊಂಡ ಮತ್ತು ಸ್ವಾವಲಂಬಿ ಭಾರತವನ್ನು ಸೃಷ್ಟಿಸಲು ಗಳಿಸಿದ್ದನ್ನು ಬಳಸಿಕೊಂಡು, ಕೊರತೆಗಳನ್ನು ತುಂಬಿಕೊಂಡು ಮತ್ತು ಅನ್ವೇಷಣೆ ಪ್ರವೃತ್ತಿ ಹಾಗೂ ಉತ್ತಮ ಆಚರಣೆಗಳ ಮೂಲಕ ನಡೆಸುವ ಸನ್ನದ್ಧಗೊಳ್ಳುವಿಕೆಯು ನೆರವಾಗಲಿದೆ. ಆಯುಷ್ಮಾನ್ ಭಾರತ್ ಒಂದು ದೆಸೆ ಬದಲಿಸಬಲ್ಲ ಕಾರ್ಯಕ್ರಮವಾಗಿ ಸಾರ್ವಜನಿಕ ಆರೋಗ್ಯ ಕ್ಷೇತ್ರದ ಕಾರ್ಯನಿರ್ವಹಣೆಯನ್ನು ಬಲಪಡಿಸುವ ಉತ್ತೇಜಕವಾಗಿ, ಎಲ್ಲ ಹಂತದಲ್ಲಿ ದೈನಂದಿನ ಮತ್ತು ಅಗತ್ಯ ಸೇವೆಗಳನ್ನು ಪೂರೈಸುತ್ತಲೇ ವಿಷಮಾವಸ್ಥೆ ನಿರ್ವಹಣೆ ವ್ಯವಸ್ಥೆಯನ್ನು ಬಲಪಡಿಸುತ್ತದೆ; ಆಮೂಲಕ ನಮ್ಮ ಜಿಲ್ಲೆಗಳು–ರಾಜ್ಯಗಳನ್ನು ಮತ್ತು ದೇಶವನ್ನು ಸಂಪೂರ್ಣ ಸ್ವಾವಲಂಬಿಯಾಗಿಸುತ್ತದೆ.

### ಆರೋಗ್ಯಕ್ಕಾಗಿ ಮಾನವ ಸಂಪನ್ಮೂಲ (ಎಚ್‌ಆರ್‌ಎಚ್)

ಆರೋಗ್ಯ ಕ್ಷೇತ್ರದಲ್ಲಿ ಕುಶಲ ವೃತ್ತಿಪರರ ಅಗತ್ಯವನ್ನು ಗುರುತಿಸಿರುವ ಸರ್ಕಾರ, ವೈದ್ಯಕೀಯ ಹಾಗೂ ಶುಶ್ರೂಷೆ ಶಿಕ್ಷಣದ ಸಾಮರ್ಥ್ಯವನ್ನು ಹೆಚ್ಚಿಸಲು ಗಮನಾರ್ಹ ಹೆಜ್ಜೆಗಳನ್ನು ಇರಿಸಿದೆ. ವೈದ್ಯಕೀಯ ಪದವಿ ಹಾಗೂ ಸ್ನಾತಕೋತ್ತರ ಪದವಿ ಸೀಟು/ಸ್ಥಾನಗಳ ಸಂಖ್ಯೆ ಹೆಚ್ಚಿಸಲಾಗಿದೆ. ಭಾರತ ಸರ್ಕಾರದ ಪ್ರಮುಖ ಕಾರ್ಯತಂತ್ರಗಳಿಂದಾಗಿ 2014ರ ಬಳಿಕ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಕುಶಲ ಎಚ್‌ಆರ್‌ಎಚ್‌ಗಳ ಲಭ್ಯತೆ ಹೆಚ್ಚಿದೆ. ದೇಶದಲ್ಲಿ ಪ್ರಸ್ತುತ 1.07 ಲಕ್ಷಕ್ಕೂ ಅಧಿಕ ವೈದ್ಯಕೀಯ ಸೀಟು/ಸ್ಥಾನಗಳಿವೆ. ವೈದ್ಯಕೀಯ ಕಾಲೇಜುಗಳ ಸಂಖ್ಯೆ ಶೇ.67ರಷ್ಟು ಹೆಚ್ಚಿದ್ದು, ವೈದ್ಯ ಪದವಿ ಸೀಟು/ಸ್ಥಾನಗಳ ಸಂಖ್ಯೆ ಶೇ.63 ಹಾಗೂ ಸ್ನಾತಕೋತ್ತರ ಪದವಿ ಸೀಟು/ಸ್ಥಾನಗಳ ಸಂಖ್ಯೆ ಶೇ.115ರಷ್ಟು ಹೆಚ್ಚಿದೆ. ದೇಶದೆಲ್ಲೆಡೆ ಎಚ್‌ಆರ್‌ಎಚ್‌ಗಳು ವಿಶೇಷವಾಗಿ, ವೈದ್ಯರ ಹಂಚಿಕೆ, ಲಭ್ಯತೆ ಮತ್ತು ಪ್ರವೇಶಾವಕಾಶದಲ್ಲಿ ವ್ಯತ್ಯಾಸವಿದ್ದರೂ, ಎಚ್‌ಆರ್‌ಎಚ್‌ಗಳ ಒಟ್ಟಾರೆ ಲಭ್ಯತೆ ಅಧಿಕಗೊಂಡಿದೆ. ಸರ್ಕಾರವು ಶುಶ್ರೂಷೆಗೆ ಸಂಬಂಧಿಸಿದ ನಾನಾ ಕೋರ್ಸ್‌ಗಳಿಗೆ ತರಬೇತಿ ನೀಡುವ ಸಂಸ್ಥೆಗಳಿಗೆ ಮಾನ್ಯತೆ ನೀಡಿದೆ ಮತ್ತು ಇದರಿಂದ, ಪ್ರತಿ ವರ್ಷ 1.25 ಲಕ್ಷ ನರ್ಸಿಂಗ್ ಪದವೀಧರರು ಆರೋಗ್ಯರಕ್ಷಣೆ ಕ್ಷೇತ್ರಕ್ಕೆ ಕಾಲಿಡುತ್ತಿದ್ದಾರೆ. ದೇಶದಲ್ಲಿ ಶುಶ್ರೂಷಾ ಕ್ಷೇತ್ರವನ್ನು ಬಲಪಡಿಸುವ ಗಮನಾರ್ಹ ನಡೆಯೊಂದರಲ್ಲಿ ಪ್ರಧಾನ ಮಂತ್ರಿಗಳ ನೇತೃತ್ವದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು 2014ರಿಂದ ಸ್ಥಾಪಿತವಾಗಿರುವ ವೈದ್ಯಕೀಯ ಕಾಲೇಜುಗಳು ಇರುವಲ್ಲಿ 157 ಹೊಸ ನರ್ಸಿಂಗ್ ಕಾಲೇಜು ಸ್ಥಾಪನೆಗೆ ಅಂಗೀಕಾರ ನೀಡಿದೆ. ಇದರಿಂದ ಪ್ರತಿವರ್ಷ ಅಂದಾಜು 15,700 ನರ್ಸಿಂಗ್ ಪದವೀಧರರು ಹೆಚ್ಚುವರಿಯಾಗಿ ಲಭ್ಯವಾಗಲಿದ್ದಾರೆ.

### ಲಸಿಕೀಕರಣ ಮತ್ತು ರೋಗ ನಿಯಂತ್ರಣ:

ಸರ್ಕಾರ, ಸೇವೆಗಳ ವಿತರಣೆಯನ್ನು ಸುಧಾರಿಸಲು ತೀವ್ರ ಆಸಕ್ತಿ ಹೊಂದಿದೆ. ಉದಾಹರಣೆಗೆ, ಸಾರ್ವತ್ರಿಕ ಲಸಿಕೀಕರಣ ಕಾರ್ಯಕ್ರಮವು ಲಸಿಕೀಕರಣವನ್ನು ಜನರ ಸಾಮಾಜಿಕ ಆಂದೋಲನವಾಗಿ ಪರಿವರ್ತಿಸಿದೆ. ಮಿಷನ್ ಇಂದ್ರಧನುಷ್



Scanned with ACE Scanner

ಮೂಲಕ ಮಾಮೂಲಿನ ಲಸಿಕೆಗಳೊಟ್ಟಿಗೆ ಹಲವು ಹೆಚ್ಚುವರಿ ಲಸಿಕೆಗಳನ್ನು ನೀಡಲಾಗುತ್ತಿದ್ದು, ಲಸಿಕೀಕರಣದ ವ್ಯಾಪ್ತಿ ಶೇ.62(2015-16)ರಿಂದ ಶೇ.76.4(2019-21)ಕ್ಕೆ ಹೆಚ್ಚಿದೆ. ಜೊತೆಗೆ, ನಿರಂತರ ಪ್ರಯತ್ನದಿಂದ ಸಾಂಕ್ರಾಮಿಕ ರೋಗಗಳ ಹೊರೆ ಕಡಿಮೆಯಾಗಿದ್ದು, 2014-2021ರ ಅವಧಿಯಲ್ಲಿ ಮಲೇರಿಯಾ ಪ್ರಕರಣಗಳು ಶೇ.85.3 ರಷ್ಟು ಕಡಿಮೆಯಾಗಿವೆ ಹಾಗೂ ಜಪಾನೀಸ್ ಎನ್‌ಸೆಫಾಲೈಟಿಸ್ ಪ್ರಕರಣಗಳು 1661ರಿಂದ 787ಕ್ಕೆ ಕುಸಿದಿದೆ.

ಸಾಮಾನ್ಯ ಲಸಿಕೀಕರಣಕ್ಕೆ ವ್ಯಾಪಕ ಸಂಪನ್ಮೂಲ ಹಾಗೂ ಮೂಲಸೌಲಭ್ಯ ಕಲ್ಪಿಸಿದ್ದರಿಂದ, ಕೊವಿಡ್-19 ಲಸಿಕೀಕರಣ ಅತ್ಯಂತ ಯಶಸ್ವಿ ಆಯಿತು. 9 ತಿಂಗಳಲ್ಲಿ 100 ಕೋಟಿ ಡೋಸ್‌ಗಳನ್ನು ಮತ್ತು ನಂತರದ 9 ತಿಂಗಳಲ್ಲಿ 200 ಕೋಟಿ ಡೋಸ್ ಲಸಿಕೆ ನೀಡಲಾಯಿತು. ಅಷ್ಟಲ್ಲದೆ, 291.5 ದಶಲಕ್ಷ ಡೋಸ್‌ಗಳನ್ನು 10ಕ್ಕೂ ಅಧಿಕ ದೇಶಗಳು ಹಾಗೂ ಲಸಿಕೆ ಮೈತ್ರಿ ಉಪಕ್ರಮದಡಿ ವಿಶ್ವಸಂಸ್ಥೆಯ 2 ಘಟಕಗಳಿಗೆ ಪೂರೈಸಲಾಯಿತು. ಇದು ದೇಶವನ್ನು ಜಾಗತಿಕ ವೇದಿಕೆಯಲ್ಲಿ ಹೊಮ್ಮುತ್ತಿರುವ ನಾಯಕ ಎಂದು ಪ್ರಕಾಶಿಸುವಂತೆ ಮಾಡಿತು.

**ಪ್ರಧಾನಮಂತ್ರಿ ಟಿಬಿ ಮುಕ್ತ್ ಭಾರತ್ ಅಭಿಯಾನವು** ಪ್ರಧಾನಮಂತ್ರಿಯವರ ಜನಕೇಂದ್ರಿತ ಕಾರ್ಯನೀತಿಗಳನ್ನು ಪ್ರತಿಫಲಿಸುತ್ತಿದ್ದು, ಸರ್ಕಾರದ ಆರೋಗ್ಯ ಸೌಲಭ್ಯಗಳಲ್ಲಿ ಉಚಿತ ಟಿಬಿ ಚಿಕಿತ್ಸೆ ಲಭ್ಯವಿರುವಿಕೆ ಬಗ್ಗೆ ಜಾಗೃತಿ ಮೂಡಿಸುತ್ತದೆ. ಕೊವಿಡ್-19 ಒಡ್ಡಿದ ಸವಾಲುಗಳ ನಡುವೆಯೂ, 2025ರೊಳಗೆ ದೇಶವನ್ನು ಟಿಬಿ ಮುಕ್ತವನ್ನಾಗಿಸುವುದಕ್ಕೆ ಸರ್ಕಾರ ಬದ್ಧವಾಗಿದೆ. ಟಿಬಿ ಪ್ರಕರಣಗಳು ಕೊವಿಡ್-19ರ ಮೊದಲಿನ ಸ್ಥಿತಿಗೆ ಬಂದಿದ್ದು, ಆ ಮೂಲಕ ದೇಶದ ಪುನರುಜ್ಜೀವನ ಸಾಮರ್ಥ್ಯವನ್ನು ತೋರಿಸುತ್ತಿವೆ. ಜನ್ ಭಾಗಿದಾರಿ(ಜನರ ಸಹಭಾಗಿತ್ವ)ಯ ತತ್ವಕ್ಕೆ ಅನುಗುಣವಾಗಿ ರೋಗಿಗಳಿಗೆ ಬೆಂಬಲ ಹಾಗೂ ಸಮುದಾಯದ ತೊಡಗಿಸಿಕೊಳ್ಳುವಿಕೆಗೆ ನೆರವಾಗುವ ವಿಶಿಷ್ಟ ವೇದಿಕೆಯಾದ ನಿಕ್ಷಯ್ 2.0ನ್ನು ಸರ್ಕಾರ ಪರಿಚಯಿಸಿತು. ಈ ಸುಧಾರಣೆಗಳು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ(ಸಿಎಸ್‌ಆರ್) ಅವಕಾಶಗಳನ್ನು ಹಾಗೂ ಜಾಗತಿಕ ಕ್ಲೌಡ್ ಫಂಡಿಂಗ್




ಮಾದರಿಯನ್ನು ಬಳಸಿಕೊಳ್ಳುತ್ತವೆ. ಪ್ರಧಾನಿಯವರ ಮುನ್ನೋಟವುಳ್ಳ ನಾಯಕತ್ವದಲ್ಲಿ ನಾವು ಟಿಬಿ ಮುಕ್ತ ಭಾರತಕ್ಕಾಗಿ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ.

**ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮ:**

ರಾಷ್ಟ್ರೀಯ ಮಾನಸಿಕ ಆರೋಗ್ಯ ಸಮೀಕ್ಷೆ ಪ್ರಕಾರ, ವಿವಿಧ ಮಾನಸಿಕ ಸಮಸ್ಯೆ-ಚಿಕಿತ್ಸೆ ನೀಡುವಿಕೆಯಲ್ಲಿ ಶೇ.70-92ರಷ್ಟು ಕಂದರವಿದೆ. ಕೊವಿಡ್-19 ಸಾಂಕ್ರಾಮಿಕವು ಡಿಜಿಟಲ್ ಮಾನಸಿಕ ಆರೋಗ್ಯ ಕಾರ್ಯಜಾಲದ ಅಗತ್ಯಕ್ಕೆ ದಾರಿ ಮಾಡಿತು. ಸರ್ಕಾರ ಇದಕ್ಕೆ ಪ್ರತಿಕ್ರಿಯೆಯಾಗಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಡಿಜಿಟಲ್ ರೂಪವಾದ ಟೆಲಿ-ಮಾನಸ್‌ನ್ನು ಪರಿಚಯಿಸಿತು. 42 ಟೆಲಿ-ಮಾನಸ್ ಕೋಶಗಳನ್ನು ಆರಂಭಿಸಲಾಗಿದ್ದು, ಈ ಉಪಕ್ರಮವು ಈಗಾಗಲೇ 1.5 ಲಕ್ಷ ಕರೆಗಳನ್ನು ಸ್ವೀಕರಿಸಿದೆ. ವ್ಯಕ್ತಿಯ ಗುರುತು ಕೇಳದೆ ಸಲಹೆ ನೀಡುವುದರಿಂದ, ಜನ ಮಾನಸಿಕ ಸಮಸ್ಯೆಗಳನ್ನು ಯಾವುದೇ ಹಿಂಜರಿಕೆಯಿಲ್ಲದೆ ಹೇಳಿಕೊಳ್ಳಲು ನೆರವಾಗುತ್ತದೆ ಮತ್ತು ಕಳಂಕ ಅಂಟಿಕೊಳ್ಳಬಹುದೆಂಬ ಭೀತಿ ಕಡಿಮೆಯಾಗುತ್ತದೆ. ಈ ಮೂಲಕ ಕಂದರವನ್ನು ಮುಚ್ಚಲಾಗುತ್ತಿದೆ ಮತ್ತು ಆರೋಗ್ಯವಂತ ಸಮಾಜವನ್ನು ಪೋಷಿಸಲಾಗುತ್ತಿದೆ.


ದಿನನಿತ್ಯದ ಸೇವೆಗಳು ಹಾಗೂ ತುರ್ತುಪರಿಸ್ಥಿತಿಯ ಸೇವೆಗಳು ಈ ಎರಡರಲ್ಲೂ ಆರೋಗ್ಯ ವ್ಯವಸ್ಥೆಯ ಸಾಮರ್ಥ್ಯ ಹೆಚ್ಚಳವು ಆರೋಗ್ಯ ರಕ್ಷಣೆ ಕ್ಷೇತ್ರಕ್ಕೆ ನೀಡಿದ ಆದ್ಯತೆಯ ಫಲಶ್ರುತಿಗಳಾಗಿವೆ. ಕಳೆದ ದಶಕದಲ್ಲಿ ಸರ್ಕಾರದ ತಲಾ ಆರೋಗ್ಯ ವೆಚ್ಚ ಗಮನಾರ್ಹವಾಗಿ ಹೆಚ್ಚಿದ್ದು, ಶೇ.74ರಷ್ಟು ಬೆಳವಣಿಗೆ ಕಂಡಿದೆ. ಹೆಚ್ಚುವರಿಯಾಗಿ, ಸರ್ಕಾರ ಆರ್ಥಿಕ ನೆರವು ನೀಡುವ ಆರೋಗ್ಯ ವಿಮೆ ಶೇ.167ರಷ್ಟು ಹೆಚ್ಚಿದೆ. 2013-14ರ ಆರ್ಥಿಕ ವರ್ಷದಿಂದ ಜನ ತಮ್ಮ ಕಿಸೆಯಿಂದ ಮಾಡುವ ಆರೋಗ್ಯ ವೆಚ್ಚ ಗಮನಾರ್ಹವಾಗಿ ಕುಸಿದಿದೆ. ಈ ಅಂಕಿಅಂಶಗಳು ಆರೋಗ್ಯ ಸೇವೆ ವ್ಯವಸ್ಥೆಯ ಬಲವರ್ಧನೆ ಪ್ರಯತ್ನಗಳನ್ನು ಸಾಬೀತುಪಡಿಸುತ್ತದೆ ಮತ್ತು ವೈದ್ಯಕೀಯ ಸೇವೆಗಳನ್ನು ಪಡೆಯುವವರ ಮೇಲಿನ ಆರ್ಥಿಕ ಹೊರೆ ಕಡಿಮೆಯಾಗಿರುವುದನ್ನು ತೋರಿಸುತ್ತದೆ.

**ಸಾಂಪ್ರದಾಯಿಕ ಔಷಧಗಳ ಪ್ರಯೋಜನ**

ಸಾಂಪ್ರದಾಯಿಕ ಔಷಧ ವ್ಯವಸ್ಥೆಗಳು ಆರೋಗ್ಯ ರಕ್ಷಣೆಗೆ ರೋಗ ತಡೆಗೆ ಸ್ವಾಭಾವಿಕ ಔಷಧಗಳು ಮತ್ತು ಮನಸ್ಸು-ದೇಹ-ಚೇತನದ ಸಮತೋಲದಂತಹ ವಿಶಿಷ್ಟ ಮಾರ್ಗವನ್ನು ಬಳಸುತ್ತವೆ. ವಿಷಮ ಸ್ಥಿತಿಯನ್ನು ನಿರ್ವಹಿಸಬಲ್ಲ ಮತ್ತು ಯೋಗಕ್ಷೇಮವನ್ನು ಉತ್ತೇಜಿಸುವಲ್ಲಿನ ಪರಿಣಾಮಕಾರತ್ವವನ್ನು ಗುರುತಿಸಿ ಸರ್ಕಾರವು ಈ ಪದ್ಧತಿಗಳನ್ನು ಮುಖ್ಯವಾಹಿನಿ ಆರೋಗ್ಯರಕ್ಷಣೆ ವ್ಯವಸ್ಥೆಯಲ್ಲಿ ಒಟ್ಟುಗೂಡಿಸಲು ಹೆಜ್ಜೆಗಳನ್ನು ಇರಿಸಿದೆ. ಜ್ಞಾನ ಮತ್ತು ಪರಿಣತಿಯ ಈ ಏಕೀಕರಣವು ಮಾದರಿ ಪ್ರೋಟೋಕಾಲ್‌ಗಳು, ಅನುಭವಗಳನ್ನು ಆಧರಿಸಿದ ಮಾರ್ಗದರ್ಶಿ ಸೂತ್ರಗಳು ಮತ್ತು ಸುರಕ್ಷಿತ ಹಾಗೂ ಪರಿಣಾಮಕಾರಿ ಸಾಂಪ್ರದಾಯಿಕ ಔಷಧ ಸೂತ್ರಗಳಿಗೆ




Scanned with ACE Scanner




## ಮಿಷನ್ ಇಂದ್ರಧನುಷ್

### ಸಂಪೂರ್ಣ ಲಸಿಕೀಕರಣದೆಡೆಗೆ



- **700 ಜಿಲ್ಲೆಗಳಲ್ಲಿ** 10 ಹಂತಗಳು ಪೂರ್ಣಗೊಂಡಿವೆ.
- **3.86 ಕೋಟಿ** ಮಕ್ಕಳು (2 ವರ್ಷಕ್ಕಿಂತ ಕಡಿಮೆ ವಯಸ್ಸಿನವರು) ಮತ್ತು 96.8 ಲಕ್ಷ ಗರ್ಭಿಣಿಯರಿಗೆ ಲಸಿಕೆ ಹಾಕಲಾಗಿದೆ
- ಸಂಪೂರ್ಣ ಲಸಿಕೀಕರಣದ ವ್ಯಾಪ್ತಿ ಶೇ.62 (ಎನ್‌ಎಫ್‌ಎಚ್‌ಎಸ್–4) ರಿಂದ **ಶೇ.76.4 (ಎನ್‌ಎಫ್‌ಎಚ್‌ಎಸ್–5)**ಕ್ಕೆ ಹೆಚ್ಚಳ

* ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ.

ಮೂಲ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಕಾರಣವಾಗಿದೆ. ದೇಶದಲ್ಲಿ ಸಾಂಪ್ರದಾಯಿಕ ಔಷಧಗಳನ್ನು ಉತ್ತೇಜಿಸುವಲ್ಲಿ ಆಯುಷ್ ಮಂತ್ರಾಲಯ(ಆಯುರ್ವೇದ, ಯೋಗ ಮತ್ತು ನ್ಯಾಚುರೋಪಥಿ, ಯುನಾನಿ, ಸಿದ್ಧ ಮತ್ತು ಹೋಮಿಯೋಪಥಿ) ಪ್ರಮುಖ ಪಾತ್ರ ವಹಿಸಿದೆ. ಅದು ಅಲೋಪಥಿ ವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ವೈದ್ಯಕೀಯ ಕ್ಷೇತ್ರದ ವೃತ್ತಿಪರರೊಡನೆ ಕೈಜೋಡಿಸಿ, ಆರೋಗ್ಯಸೇವೆಗಳ ವಿತರಣೆಯ ಸಮಗ್ರ ಮಾರ್ಗಕ್ಕೆ ಅನುವು ಮಾಡಿಕೊಡುತ್ತದೆ. ದೇಶದೆಲ್ಲೆಡೆ ಆಯುಷ್ ಯೋಗಕ್ಷೇಮ ಕೇಂದ್ರಗಳನ್ನು ತೆರೆದಿರುವುದರಿಂದ, ಸಾಂಪ್ರದಾಯಿಕ ಔಷಧಗಳು ಹೆಚ್ಚು ಜನರಿಗೆ ಸಿಗುವಂತಾಗಿದೆ; ಅಲೋಪಥಿ ಆರೋಗ್ಯಸೇವೆಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ದೇಶದಲ್ಲಿ ಸಾಂಪ್ರದಾಯಿಕ ಔಷಧ ಹಾಗೂ ಅಲೋಪಥಿಯನ್ನು ಸಮಗ್ರಗೊಳಿಸಿರುವುದು ಒಟ್ಟಾರೆ ಆರೋಗ್ಯ ಸುರಕ್ಷೆಯಡೆಗಿನ ಸ್ಥಿತ್ಯಂತರ ಹೆಜ್ಜೆಯಾಗಿದೆ. ಈ ಸಮ್ಮಿಳಿತ ಮಾರ್ಗವು ಎರಡೂ ಪದ್ಧತಿಗಳ ಬಲವನ್ನು ಒಟ್ಟುಗೂಡಿಸಿ, ರೋಗಿಗಳ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅಗತ್ಯಗಳನ್ನು ಒಳಗೊಂಡ ಸಮಗ್ರ ಸುರಕ್ಷೆಯನ್ನು ಒದಗಿಸುತ್ತದೆ. ಭಾರತದ ಜಿ–20 ಅಧ್ಯಕ್ಷತೆಯು ಜನರತ್ತ ಆಳವಾದ ಬದ್ಧತೆಯನ್ನು ಕೇಂದ್ರವಾಗಿರಿಸಿಕೊಂಡಿದೆ. ಜನರ ಪಾಲ್ಗೊಳ್ಳುವಿಕೆಯನ್ನು ಮಾರ್ಗದರ್ಶಕ ತತ್ವವಾಗಿರಿಸಿಕೊಂಡಿರುವ ಸಹಭಾಗಿತ್ವಕ್ಕೆ ದೇಶದೆಲ್ಲೆಡೆ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಗಿದೆ. ಜಿ–20ಕ್ಕೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳಾದ ಚರ್ಚಾಕೂಟ, ಸಮಾವೇಶಗಳು ಮತ್ತು ಮೇಳಗಳನ್ನು ಜನರು ಭಾಗಿದಾರರಾಗಿರುವಂತೆ ವಿನ್ಯಾಸಗೊಳಿಸಲಾಗಿದೆ.

ದೇಶದ ಜಿ–20 ಅಧ್ಯಕ್ಷತೆಯ 'ಒಂದೇ ಭೂಮಿ, ಒಂದೇ ಕುಟುಂಬ, ಒಂದೇ ಭವಿಷ್ಯ' ಎಂಬ ಪರಿಕಲ್ಪನೆಯು ಸಂಸ್ಕೃತದ 'ವಸುಧೈವ ಕುಟುಂಬಕಂ' ಸೂಕ್ತಿಯಲ್ಲಿ ಪ್ರತಿಬಿಂಬಿತವಾಗಿದೆ. ಇದಕ್ಕೆ ಅನುಗುಣವಾಗಿ ಪ್ರಗತಿ ಹಾಗೂ ಸಮೃದ್ಧಿಯ ಪಯಣದಲ್ಲಿ ಎಲ್ಲರನ್ನೂ ಒಳಗೊಳ್ಳುವ ಮತ್ತು ಪಾಲ್ಗೊಳ್ಳುವಿಕೆಯನ್ನು ಖಾತ್ರಿಗೊಳಿಸುವ ಅಗತ್ಯವಿದೆ. ಎಲ್ಲ ನಾಗರಿಕರಿಗೂ ಕೈಗೆಟಕುವ, ಸಮಾನವಾದ ಮತ್ತು ಉತ್ತಮ ಗುಣಮಟ್ಟದ ಆರೋಗ್ಯರಕ್ಷಣೆಯನ್ನು ನೀಡುವ ನಮ್ಮ ಬದ್ಧತೆಗೆ 'ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಃ' ಎಂಬುದು ಮಾರ್ಗದರ್ಶಕ ಸೂತ್ರವಾಗಿರಲಿದೆ.

## ಯೋಜನಾ

## ಸೆಪ್ಟೆಂಬರ್ 2023 ಸಂಚಿಕೆಯ ವಿಷಯ

# ಸಂವಿಧಾನ, ಆಡಳಿತ ಮತ್ತು ಸುಧಾರಣೆ



Scanned with ACE Scanner

# ದೇಶವನ್ನು ಒಗ್ಗೂಡಿಸುತ್ತಿರುವ ಕ್ರೀಡೆ

* ಅನುರಾಗ್ ಸಿಂಗ್ ಠಾಕೂರ್

**'ನವ ಭಾರತ' ನಿರ್ಮಾಣದಲ್ಲಿ ಕ್ರೀಡೆಗಳು ವಹಿಸುತ್ತಿರುವ ಪಾತ್ರವು ಎಷ್ಟು ಅನನ್ಯವೋ ಅಷ್ಟೇ ವೈವಿಧ್ಯಮಯವೂ ಆಗಿದೆ. ಕಳೆದ ಕೆಲವು ವರ್ಷಗಳಲ್ಲಿ ಭಾರತದಲ್ಲಿ ಕ್ರೀಡೆಯ ಪ್ರಾಮುಖ್ಯತೆ ಹೆಚ್ಚುತ್ತಿರುವುದಕ್ಕೆ ಪ್ರಧಾನಿಯವರ ಅಸಾಧಾರಣ ದೂರದೃಷ್ಟಿಯೇ ಕಾರಣ. ಅವರು 'ಖೇಲೊ ಇಂಡಿಯಾ ಯೋಜನೆ', 'ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆ', 'ಫಿಟ್ ಇಂಡಿಯಾ ಅಭಿಯಾನ' ಸೇರಿದಂತೆ ಅನೇಕ ನವೀನ ಯೋಜನೆಗಳಿಗೆ ರೂಪ ನೀಡಿದ್ದಾರೆ. ಇದು ಭಾರತದಲ್ಲಿ ಕ್ರೀಡೆಯ ಪಾತ್ರವನ್ನು ಪರಿವರ್ತಿಸಿದೆ. ಇದು ರಾಷ್ಟ್ರೀಯ ಏಕೀಕರಣದ ವೇಗವನ್ನು ಹೆಚ್ಚಿಸಿದೆ. ಮಹಿಳಾ ಸಬಲೀಕರಣಕ್ಕೆ ಕಾರಣವಾಗಿದೆ. ನಾಗರಿಕರಲ್ಲಿ ಆರೋಗ್ಯ ಮತ್ತು ಫಿಟ್ನೆಸ್ ಬಗ್ಗೆ ಅರಿವು ಮೂಡಿಸಿದೆ. ಯುವಕರಲ್ಲಿ ಜೀವನ ಕೌಶಲ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಆಳವಾದ ರಾಷ್ಟ್ರೀಯ ಹೆಮ್ಮೆಯ ಪ್ರಜ್ಞೆಯನ್ನು ಅವರಲ್ಲಿ ಜಾಗೃತಗೊಳಿಸಲು ದಾರಿ ಮಾಡಿದೆ.**

ಕಳೆದ ಕೆಲವು ವರ್ಷಗಳಲ್ಲಿ ಭಾರತದ ಕ್ರೀಡಾ ಕ್ಷೇತ್ರದ ಸಾಧನೆ, ಹಿರಿಮೆ ಹಿಂದೆಂದೂ ಕಾಣದಷ್ಟು ಗಮನಾರ್ಹ ಮಟ್ಟದಲ್ಲಿ ಉತ್ತುಂಗಕ್ಕೇರಿದೆ. 2020ರ 'ಟೋಕಿಯೊ ಒಲಿಂಪಿಕ್ಸ್'ನಲ್ಲಿ ಭಾರತವು ಅಥ್ಲೆಟಿಕ್ಸ್‌ನಲ್ಲಿ ಚಿನ್ನ ಸೇರಿದಂತೆ 7 ಪದಕಗಳೊಂದಿಗೆ ತನ್ನ ಅತ್ಯುತ್ತಮ ಸಾಧನೆ ಮೆರೆಯಿತು. ಭಾರತವು ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದು ದೇಶದ ಇತಿಹಾಸದಲ್ಲೇ ಮೊದಲು. ಪ್ಯಾರಾಲಿಂಪಿಕ್ಸ್ ಮತ್ತು 'ಡೆಫಿಲಿಂಪಿಕ್ಸ್'ನಲ್ಲೂ ನಾವು ಕ್ರಮವಾಗಿ 19 ಮತ್ತು 17 ಪದಕಗಳನ್ನು ಗೆದ್ದಿದ್ದೇವೆ. ಇದರ ನಂತರ 72 ವರ್ಷಗಳಲ್ಲಿ ಮೊದಲ ಬಾರಿಗೆ ಭಾರತ 'ಥಾಮಸ್ ಕಪ್' ಗೆದ್ದಿದೆ. ಪ್ರಸ್ತುತ ವಿಶ್ವ ಬಾಕ್ಸಿಂಗ್ ಚಾಂಪಿಯನ್ ಎನಿಸಿರುವ ನಿಖಾತ್ ಝರೀನ್ ಸಹ ಭಾರತದ ಕ್ರೀಡಾ ಕೀರ್ತಿಯನ್ನು ಮತ್ತಷ್ಟು ಬೆಳಗಿದ್ದಾರೆ.




ತೀರಾ ಇತ್ತೀಚೆಗೆ, ಯುವ ಶಟ್ಲರ್ ಜೋಡಿ ಸಾತ್ವಿಕ್ ಮತ್ತು ಚಿರಾಗ್ '1000 ಇಂಡೋನೇಶಿಯಾ ಸೂಪರ್ ಸೀರೀಸ್'ನಲ್ಲಿ ಮೊದಲ ಭಾರತೀಯ ಪುರುಷರ ಡಬಲ್ಸ್ ತಂಡವಾಗಿ ಗೆಲುವು ಸಾಧಿಸಿದರು. ಇದಕ್ಕೆ ಎರಡೇ ದಿನದ ಅಂತರದಲ್ಲಿ ಫೆನ್ಸರ್ ಭವಾನಿ ದೇವಿ ಏಶಿಯನ್ ಚಾಂಪಿಯನಶಿಪ್‌ನಲ್ಲಿ ಮೊದಲ ಭಾರತೀಯರಾಗಿ ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಅದಕ್ಕೂ ಒಂದು ವಾರದ ಮೊದಲು 'ಏಶಿಯನ್ ಕಪ್ ಕಿರಿಯರ ಹಾಕಿ-2023' ಪಂದ್ಯದಲ್ಲಿ ಭಾರತದ ಬಾಲಕರು ಮತ್ತು ಬಾಲಕಿಯರ ಎರಡೂ ತಂಡಗಳು ಜಯಭೇರಿ ಮೊಳಗಿಸುವ ಮೂಲಕ ಇತಿಹಾಸ ಸೃಷ್ಟಿಸಿದವು. ಈ ಸಾಧನೆಗಳು ಕ್ರೀಡಾ ಜಗತ್ತಿನಲ್ಲಿ ಹೆಚ್ಚುತ್ತಿರುವ ಭಾರತದ ಶಕ್ತಿಗೆ ಒಂದು ಸ್ಯಾಂಪಲ್ ಮಾತ್ರ. ಪ್ರತಿ ಬಾರಿ ಒಬ್ಬ ಭಾರತೀಯ ಅಥ್ಲೀಟ್ ಪದಕ ಗೆದ್ದಾಗ, ಜಗತ್ತಿನ ಯಾವುದೇ ಮೂಲೆಯಲ್ಲಿರುವ ಭಾರತೀಯನಲ್ಲಿ ಮೂಡುವ ಹೆಮ್ಮೆಯ ಭಾವಕ್ಕೆ ಸಾಟಿ ಇಲ್ಲ. ಭಾರತದ ಸಾಧಕರು ಪಡೆಯುವ ಒಂದೊಂದು ಪದಕ ಹಾಗೂ ಪೋಡಿಯಂ ಮೇಲೆ ಮೊಳಗುವ ರಾಷ್ಟ್ರಗೀತೆ ಇಡೀ ದೇಶವನ್ನು ಇನ್ನಿಲ್ಲದಂತೆ ಒಟ್ಟುಗೂಡಿಸುತ್ತದೆ. ಈ ಏಕತೆಯ ಭಾವ ಮೂಡಿಸಲು ಬೇರಾವ ಶಕ್ತಿಗಳಿಂದಲೂ ಸಾಧ್ಯವಿಲ್ಲ.

ಕ್ರೀಡೆಯ ಸೌಂದರ್ಯವು ತಕ್ಷಣದ ಫಲಿತಾಂಶಗಳಿಗೆ ಮಾತ್ರ ಸೀಮಿತವಾಗಿಲ್ಲ.

* ಕೇಂದ್ರ ಸಚಿವರು, ವಾರ್ತಾ ಮತ್ತು ಪ್ರಸಾರ, ಯುವಜನ ವ್ಯವಹಾರಗಳು ಹಾಗೂ ಕ್ರೀಡಾ ಖಾತೆ, ಭಾರತ ಸರ್ಕಾರ. ಇಮೇಲ್ : minister.inb@gov.in



Scanned with ACE Scanner




ಅದು ಇಡೀ ಪೀಳಿಗೆಯ ಮನಸ್ಥಿತಿಯನ್ನು ರೂಪಿಸುವ ಸಾಮರ್ಥ್ಯವನ್ನು ಹೊಂದಿದೆ. ಯುವಕರು ತಮ್ಮ ಅತ್ಯುತ್ತಮ ಪ್ರಯತ್ನವನ್ನು ಮಾಡುವ ಮತ್ತು ದೇಶಕ್ಕಾಗಿ ಗೆಲ್ಲುವ ಗುರಿಯೊಂದಿಗೆ ಮುನ್ನುಗ್ಗುವ ಭಾವವನ್ನು ಅದು ಸೃಷ್ಟಿಸುತ್ತದೆ. ಇದು ಕ್ರೀಡೆಯ ನಿಜವಾದ ಶಕ್ತಿ! ನಮ್ಮ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಹೇಳುವಂತೆ, 'ಖೇಲೋಗೆ, ತೋ ಖಿಲೋಗೆ'. ವಾಸ್ತವವಾಗಿ, ಸೋಲು ಅಥವಾ ಗೆಲುವು ಮುಖ್ಯವಲ್ಲ, ಯುವಕರು ಆಡುವುದು ಮುಖ್ಯ. ಏಕೆಂದರೆ ಕ್ರೀಡೆಯಲ್ಲಿ ಜೀವನದ ಪಾಠಗಳು ಅಂತರ್ಗತವಾಗಿ ಅಡಗಿವೆ. ಗಮನ ಕೇಂದ್ರೀಕರಿಸುವುದು, ಸಮರ್ಪಣೆ ಮತ್ತು ಎಂದಿಗೂ ಛಲಬಿಡದ ಮನೋಭಾವವನ್ನು ಕ್ರೀಡೆಗಳು ನಮಗೆ ಕಲಿಸುತ್ತವೆ. ಯುವಕರಲ್ಲಿ ಇಂತಹ ಗುಣಗಳು ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಬಲ್ಲ ಭವಿಷ್ಯದ ಪೀಳಿಗೆಯನ್ನು ಸೃಷ್ಟಿಸಲು ಸಹಾಯಕವಾಗುತ್ತವೆ.




'ನವ ಭಾರತ'ವನ್ನು ನಿರ್ಮಿಸುವಲ್ಲಿ ಕ್ರೀಡೆಯ ಪಾತ್ರವು ಎಷ್ಟು ಅನನ್ಯವಾದುದೋ ಅಷ್ಟೇ ವೈವಿಧ್ಯಮಯವೂ ಹೌದು. ಕಳೆದ ಕೆಲವು ವರ್ಷಗಳಲ್ಲಿ ಭಾರತದಲ್ಲಿ ಕ್ರೀಡೆಯ ಪ್ರಾಮುಖ್ಯತೆ ಹೆಚ್ಚುತ್ತಿರುವುದಕ್ಕೆ ಪ್ರಧಾನಿಯವರ ಅಸಾಧಾರಣ ದೂರದೃಷ್ಟಿಯೇ ಕಾರಣ. ಅವರು 'ಖೇಲೊ ಇಂಡಿಯಾ ಯೋಜನೆ', 'ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆ', 'ಫಿಟ್ ಇಂಡಿಯಾ ಮೂವ್‌ಮೆಂಟ್' ಸೇರಿದಂತೆ ಅನೇಕ ಯೋಜನೆಗಳಿಗೆ ರೂಪ ನೀಡಿದ್ದಾರೆ. ಇದು ಭಾರತದಲ್ಲಿ ಕ್ರೀಡೆಯ ಪಾತ್ರವನ್ನು ಪರಿವರ್ತಿಸಿದೆ. ಇದು ರಾಷ್ಟ್ರೀಯ ಏಕೀಕರಣದ ವೇಗವನ್ನು ಹೆಚ್ಚಿಸಿದೆ. ಮಹಿಳಾ ಸಬಲೀಕರಣಕ್ಕೆ ಕಾರಣವಾಗಿದೆ. ನಾಗರಿಕರಲ್ಲಿ ಆರೋಗ್ಯ ಮತ್ತು ಫಿಟ್ನೆಸ್ ಬಗ್ಗೆ ಅರಿವು ಮೂಡಿಸಿದೆ. ಯುವಕರಲ್ಲಿ ಜೀವನ ಕೌಶಲ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಆಳವಾದ ರಾಷ್ಟ್ರೀಯ ಹೆಮ್ಮೆಯ ಪ್ರಜ್ಞೆಯನ್ನು ಅವರಲ್ಲಿ ಜಾಗೃತಗೊಳಿಸಲು ದಾರಿ ಮಾಡಿದೆ.


### ಪ್ರಾದೇಶಿಕ ವೈವಿಧ್ಯತೆಗೆ 'ಕ್ರೀಡಾ ಬೆಸುಗೆ'

ದೇಶಾದ್ಯಂತ ತಳಮಟ್ಟದ ಕ್ರೀಡಾ ಪ್ರತಿಭೆಗಳನ್ನು ಗುರುತಿಸಲು ಮತ್ತು ಪೋಷಿಸಲು 2016ರಲ್ಲಿ 'ಖೇಲೊ ಇಂಡಿಯಾ' ಯೋಜನೆಯನ್ನು ಪ್ರಧಾನ ಮಂತ್ರಿಗಳು ರೂಪಿಸಿದರು ಮತ್ತು ನಂತರ 2017ರಲ್ಲಿ ಇದನ್ನು ಪರಿಷ್ಕೃತಗೊಳಿಸಲಾಯಿತು. ಈ ಯೋಜನೆಯು ದೇಶಾದ್ಯಂತದ ಕ್ರೀಡಾಪಟುಗಳಿಗೆ ರಾಷ್ಟ್ರೀಯ ವೇದಿಕೆಯಲ್ಲಿ



Scanned with ACE Scanner

ತಮ್ಮ ಕ್ರೀಡಾ ಕೌಶಲ್ಯಗಳನ್ನು ಪ್ರದರ್ಶಿಸಲು ಮಾತ್ರವಲ್ಲದೆ, ಹೆಚ್ಚಿನ ತರಬೇತಿಗಾಗಿ ಅಂತಹ ಪ್ರತಿಭೆಗಳನ್ನು ಗುರುತಿಸಲು ಅವಕಾಶ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಯೋಜನೆಯಡಿ 2500ಕ್ಕೂ ಹೆಚ್ಚು ಕ್ರೀಡಾಪಟುಗಳಿಗೆ ವಾರ್ಷಿಕವಾಗಿ ತಲಾ 6.28 ಲಕ್ಷ ರೂ.ಗಳ ವಿದ್ಯಾರ್ಥಿವೇತನವನ್ನು ನೀಡಲಾಗುತ್ತದೆ. ಸುಸಜ್ಜಿತ ಅತ್ಯಾಧುನಿಕ ಕೇಂದ್ರಗಳಲ್ಲಿ ನೀಡುವ ಜೊತೆಗೆ ಕ್ರೀಡಾಪಟುಗಳಿಗೆ ತರಬೇತಿ, ಊಟ, ವಸತಿ, ಉಪಕರಣಗಳು ಮತ್ತು ಶಿಕ್ಷಣದ ಅಗತ್ಯ ಪೂರೈಸಲಾಗುತ್ತದೆ. ಜೊತೆಗೆ, ಮಾಸಿಕ 10,000 ರೂ.ಗಳ ನಗದು ಭತ್ಯೆಯನ್ನು ಸಹ ನೀಡಲಾಗುತ್ತದೆ. ಈ ಕ್ರೀಡಾಪಟುಗಳ ನಡುವೆ ಇರುವ ಒಂದು ಸಾಮ್ಯತೆಯೆಂದರೆ, – ಅವರು ತಳಮಟ್ಟದಲ್ಲಿ ಲಭ್ಯವಿರುವ ಅತ್ಯುತ್ತಮ ಕ್ರೀಡಾ ಪ್ರತಿಭೆಗಳು. ಆದರೆ, ಇದೇ ವೇಳೆ, ಇವರ ನಡುವೆ ವೈವಿಧ್ಯತೆಯೂ ಇದೆ. ಏಕೆಂದರೆ, 'ಖೇಲೊ ಇಂಡಿಯಾ' ಕ್ರೀಡಾಪಟುಗಳು ವೈವಿಧ್ಯಮಯ ಭೌಗೋಳಿಕ ಸ್ಥಳಗಳು ಮತ್ತು ವಿಭಿನ್ನ ಸಾಮಾಜಿಕ–ಆರ್ಥಿಕ ಹಿನ್ನೆಲೆಯಿಂದ ಬರುತ್ತಾರೆ. ದೇಶದ ವಿವಿಧ ಭಾಗಗಳಲ್ಲಿರುವ 'ಖೇಲೊ ಇಂಡಿಯಾ' ಅಕಾಡೆಮಿಗಳಲ್ಲಿ ತರಬೇತಿ ಪಡೆಯುತ್ತಾರೆ. ಅವರು ಕ್ರೀಡೆಗಳಲ್ಲಿ ತರಬೇತಿ ಪಡೆಯುವುದು ಮಾತ್ರವಲ್ಲದೆ, ಅವರು ಪರಸ್ಪರ ಅನೇಕ ಸಂಸ್ಕೃತಿಗಳನ್ನು ಅಳವಡಿಸಿಕೊಳ್ಳುತ್ತಾರೆ, ಭಾರತದ ವೈವಿಧ್ಯತೆಯ ಬಗ್ಗೆ ಆಳವಾದ ಗೌರವ ಮತ್ತು ಪ್ರೀತಿಯನ್ನು ಬೆಳೆಸಿಕೊಳ್ಳುತ್ತಾರೆ. 'ಖೇಲೊ ಇಂಡಿಯಾ' ಕ್ರೀಡಾಕೂಟಕ್ಕೂ ಇದು ಅನ್ವಯಿಸುತ್ತದೆ, ಅಲ್ಲಿ ಕ್ರೀಡಾಪಟುಗಳು, ತರಬೇತುದಾರರು ಮತ್ತು ಅಧಿಕಾರಿಗಳು ಭಾರತದ ಪ್ರತಿಯೊಂದು ರಾಜ್ಯದಿಂದ



ಬಂದು 10 ದಿನಗಳಿಗಿಂತ ಹೆಚ್ಚು ಕಾಲ ಉಳಿಯುತ್ತಾರೆ, ತರಬೇತಿ ನೀಡುತ್ತಾರೆ ಮತ್ತು ಒಟ್ಟಿಗೆ ಸ್ಪರ್ಧಿಸುತ್ತಾರೆ. 'ಏಕ್ ಭಾರತ್, ಶ್ರೇಷ್ಠ ಭಾರತ್' ಪರಿಕಲ್ಪನೆಯನ್ನು ಈ ಆಟಗಳ ಮೂಲಕ ನಿರೂಪಿಸಲಾಗಿದೆ. 2018ರಿಂದ ಪ್ರಾರಂಭವಾಗಿ, 'ಖೇಲೊ ಇಂಡಿಯಾ ಯೂನಿವರ್ಸಿಟಿ ಗೇಮ್ಸ್' ಮತ್ತು 'ಖೇಲೊ ಇಂಡಿಯಾ ಯೂತ್ ಗೇಮ್ಸ್'ನ ಒಟ್ಟು 8 ಆವೃತ್ತಿಗಳು ನಡೆದಿವೆ. ಇದರಲ್ಲಿ 59,833 ಸ್ಪರ್ಧಿಗಳು ಕ್ರೀಡೆಗಳ ಮೂಲಕ ಈ ಸಾಂಸ್ಕೃತಿಕ ವಿನಿಮಯಕ್ಕೆ ಸಾಕ್ಷಿಯಾಗಿದ್ದಾರೆ.

### ರಾಷ್ಟ್ರ ನಿರ್ಮಾಣದತ್ತ ಕ್ರೀಡಾ ಮೂಲಸೌಕರ್ಯ

'ಖೇಲೊ ಇಂಡಿಯಾ' ಯೋಜನೆಯ ಮೂಲಕ ದೇಶಾದ್ಯಂತ ಕ್ರೀಡಾ ಮೂಲಸೌಕರ್ಯಗಳನ್ನು ಹೆಚ್ಚಿಸಲು 2014ರಿಂದ ನಿರಂತರ ಪ್ರಯತ್ನ ನಡೆಯುತ್ತಿದೆ. ಸ್ಥಳೀಯ ತರಬೇತುದಾರರಿಗೆ ಉದ್ಯೋಗ ಸೃಷ್ಟಿಯೊಂದಿಗೆ ದೇಶದ ಪ್ರತಿ ಜಿಲ್ಲೆಯಲ್ಲಿ 1000 'ಖೇಲೊ ಇಂಡಿಯಾ ಕೇಂದ್ರ'ಗಳನ್ನು(ಕೆಐಸಿ) ಪ್ರಾರಂಭಿಸಿರುವುದು ಭಾರತದ ಕ್ರೀಡಾ ಪರಿಸರ ವ್ಯವಸ್ಥೆಯಲ್ಲಿ ಮಹತ್ವದ ಹೆಗ್ಗುರುತಾಗಿದೆ. ವಿವಿಧ ರಾಜ್ಯಗಳ ಜತೆ ಕೇಂದ್ರ ಸರ್ಕಾರದ ಸಹಭಾಗಿತ್ವದ ಪರಿಣಾಮವಾಗಿ 31 'ಖೇಲೊ ಇಂಡಿಯಾ ಉತ್ಕೃಷ್ಟತಾ ಕೇಂದ್ರ'ಗಳನ್ನು ಸ್ಥಾಪಿಸಲಾಗಿದೆ. ನಿರ್ದಿಷ್ಟ ಕ್ರೀಡಾ ವಿಭಾಗಗಳನ್ನು ಕೇಂದ್ರೀಕರಿಸಿ ಇವುಗಳನ್ನು ತೆರೆಯಲಾಗಿದ್ದು, ಇವು ಹಿರಿಯ ಮತ್ತು ಗಣ್ಯ ಕ್ರೀಡಾಪಟುಗಳಿಗೆ ಅತ್ಯಾಧುನಿಕ ತರಬೇತಿ ಕೇಂದ್ರಗಳಾಗಿವೆ. ಇದಲ್ಲದೆ, 266 ಖೇಲೊ ಇಂಡಿಯಾ ಮಾನ್ಯತೆ ಪಡೆದ ಅಕಾಡೆಮಿಗಳು, 500 ಖಾಸಗಿ ಅಕಾಡೆಮಿಗಳು ಹಾಗೂ ಖುದ್ದು ಖೇಲೊ ಇಂಡಿಯಾ ಕ್ರೀಡಾಪಟುಗಳೇ ತರಬೇತಿ ನೀಡುವಂತಹ 27 ದತ್ತು ಶಾಲೆಗಳು ದೇಶದ ಕ್ರೀಡಾ ಮೂಲಸೌಕರ್ಯದ ಬಲವನ್ನು ಹೆಚ್ಚಿಸಿವೆ. ಕ್ರೀಡೆಯನ್ನು ವೃತ್ತಿಯಾಗಿ ತೆಗೆದುಕೊಂಡ ಕ್ರೀಡಾಪಟುಗಳಿಗೆ ದೇಶದಲ್ಲಿ ಕ್ರೀಡಾ ಸಂಸ್ಕೃತಿಯ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಸಾಕಷ್ಟು ಸೌಲಭ್ಯಗಳನ್ನು ನೀಡಲಾಗುತ್ತಿದೆ. ಸುಮಾರು 17,500 ಆಟದ ಮೈದಾನಗಳನ್ನು ಜಿಯೋ–ಟ್ಯಾಗ್ ಮಾಡಲಾಗಿದೆ, ಇದರಿಂದಾಗಿ ಪೋಷಕರು ತಮ್ಮ ಮಕ್ಕಳು ತಮ್ಮ ವಸತಿ ಪ್ರದೇಶದ ಬಳಿ ಆಟವಾಡಲು ಸ್ಥಳವನ್ನು ಸುಲಭವಾಗಿ ಕಂಡುಕೊಳ್ಳಬಹುದು.




ಕ್ರೀಡಾ ಮೂಲಸೌಕರ್ಯ ನಿರ್ಮಾಣವು ರಾಷ್ಟ್ರ ನಿರ್ಮಾಣಕ್ಕೆ ಹೇಗೆ ದಾರಿ ಮಾಡುತ್ತಿದೆ ಎಂಬುದನ್ನು ಈ ಒಂದು ಅಂಕಿ–ಅಂಶವು ದೊಡ್ಡ ಚಿತ್ರಣದ ಮೂಲಕ ಸ್ಪಷ್ಟಪಡಿಸುತ್ತದೆ. 2010 ಮತ್ತು 2014ರ ನಡುವೆ, ಕೇವಲ 38 ಕ್ರೀಡಾ ಮೂಲಸೌಕರ್ಯ ಯೋಜನೆಗಳು ಪೂರ್ಣಗೊಂಡಿದ್ದವು. ಆದರೆ 2014 ಮತ್ತು 2023ರ ನಡುವೆ, 'ಖೇಲೊ ಇಂಡಿಯಾ' ಯೋಜನೆಯಡಿ ಒಟ್ಟು 293 ಯೋಜನೆಗಳನ್ನು ಮಂಜೂರು



Scanned with ACE Scanner



ಮಾಡಲಾಗಿದೆ. ಅದರಲ್ಲಿ 146 ಈಗಾಗಲೇ ಪೂರ್ಣಗೊಂಡಿವೆ. ಈ ಮೂಲಸೌಕರ್ಯದ ನಿರ್ಮಾಣವು ಕ್ರೀಡಾಪಟುಗಳು ಮತ್ತು ಕ್ರೀಡಾ ಉತ್ಸಾಹಿಗಳಿಗೆ ತಮ್ಮ ಕನಸುಗಳನ್ನು ಮುಂದುವರಿಸಲು ಸಹಾಯ ಮಾಡಿದೆ. ಜೊತೆಗೆ, ಇದು ದೇಶದ ಜಿಡಿಪಿ ಹೆಚ್ಚಳಕ್ಕೂ ಗಮನಾರ್ಹ ಕೊಡುಗೆ ನೀಡಿದೆ. ಹಲವಾರು ಜನರಿಗೆ ಉದ್ಯೋಗವನ್ನು ಸೃಷ್ಟಿಸಿದೆ. 'ಆತ್ಮನಿರ್ಭರ ಭಾರತ'ದಲ್ಲಿ ಕ್ರೀಡೆಯ ಪಾತ್ರ ನಿಜಕ್ಕೂ ಅತ್ಯಂತ ಮಹತ್ವದ್ದಾಗಿದೆ.


### ಕ್ರೀಡಾಪ್ರೇರಿತ ಒಳಗೊಳ್ಳುವಿಕೆ

ವಿವಿಧ ಪ್ರದೇಶಗಳ ಕ್ರೀಡಾಪಟುಗಳನ್ನು ಒಟ್ಟುಗೂಡಿಸಿದಂತೆಯೇ, ಕ್ರೀಡೆಗಳು ಆರ್ಥಿಕವಾಗಿ ಮತ್ತು ಭೌಗೋಳಿಕವಾಗಿ ಅಂಚಿನಲ್ಲಿರುವ ಪ್ರದೇಶಗಳ ಮಹಿಳೆಯರು ಮತ್ತು ಯುವಕರನ್ನು ಸಬಲಗೊಳಿಸಲು ಸಹಾಯ ಮಾಡಿವೆ. ಕ್ರೀಡೆಗಳಲ್ಲಿ ಮಹಿಳಾ ಕ್ರೀಡಾಪಟುಗಳ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಅವರಿಗಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸಲಾಗಿದೆ. 'ಖೇಲೊ ಇಂಡಿಯಾ ಮಹಿಳಾ ಲೀಗ್'ಗಳ ಆಯೋಜನೆ ಮುಂತಾದವು ಇದರಲ್ಲಿ ಸೇರಿವೆ. 'ಖೇಲೊ ಇಂಡಿಯಾ ಮಹಿಳಾ ಲೀಗ್' ಪ್ರಾರಂಭವಾದಾಗಿನಿಂದ ಕಳೆದ ಹಲವು ವರ್ಷದಲ್ಲಿ 50 ನಗರಗಳಲ್ಲಿ 1.25 ಲಕ್ಷಕ್ಕೂ ಹೆಚ್ಚು ಮಹಿಳೆಯರು 27ಕ್ಕೂ ಹೆಚ್ಚು ಕ್ರೀಡಾ ವಿಭಾಗಗಳಲ್ಲಿ ಭಾಗವಹಿಸಿದ್ದಾರೆ. ವಾಸ್ತವವಾಗಿ, ಕ್ರೀಡಾ ಕ್ಷೇತ್ರದಲ್ಲಿ ತಮ್ಮ ಛಾಪು ಮೂಡಿಸಲು ಆರ್ಥಿಕ ಮತ್ತು ಸಾಮಾಜಿಕ ಅಡೆತಡೆಗಳನ್ನು ಮೆಟ್ಟಿ ಹೋರಾಡಿದ ಮಹಿಳಾ ಕ್ರೀಡಾಪಟುಗಳ ಯಶೋಗಾಥೆಗಳು ಕ್ರೀಡಾ ಪರಿಸರ ವ್ಯವಸ್ಥೆಯಲ್ಲಿ ಹೇರಳವಾಗಿವೆ. ಕ್ರೀಡೆಗಳು ತಮ್ಮ ಜೀವನವನ್ನು ಬದಲಾಯಿಸಿವೆ ಎಂದು ಅವರೆಲ್ಲಾ ಒಪ್ಪುತ್ತಾರೆ. ಬಾಕ್ಸಿಂಗ್ ವಿಶ್ವ ಚಾಂಪಿಯನ್ ನಿಖಾತ್ ಝರೀನ್ ಅವರ ಕಥೆ ನಿಜಕ್ಕೂ ಕುತೂಹಲಕಾರಿ ಹಾಗೂ ಅಷ್ಟೇ ಸ್ಫೂರ್ತಿದಾಯಕವೂ ಹೌದು. ಬಾಕ್ಸಿಂಗ್ ಚಾಂಪಿಯನ್ ನಿಖಾತ್ ಝರೀನ್ ಅವರ ತಂದೆ ತಮ್ಮ ಮಗಳು ಕ್ರೀಡಾ ಕ್ಷೇತ್ರದಲ್ಲಿ ವೃತ್ತಿಜೀವನವನ್ನು ಬೆಂಬಲಿಸಿದರೂ, ಮಗಳಿಗೆ ಬಾಕ್ಸಿಂಗ್ ಕ್ಷೇತ್ರದ ಆಯ್ಕೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರು ಇಡೀ ಸಮುದಾಯದ ಪ್ರತಿರೋಧವನ್ನು ಎದುರಿಸಬೇಕಾಯಿತು. ಈ ವಿಷಯವನ್ನು ಝರೀನ್ ಅವರೇ ಹಲವಾರು ಸಂದರ್ಭಗಳಲ್ಲಿ ಹೇಳಿದ್ದಾರೆ. ಆದರೆ ಝರೀನ್ ಪಟ್ಟು ಬಿಡಲಿಲ್ಲ. ಇಂದು, ತಮ್ಮ ಯಶಸ್ಸಿನ ಫಲವಾಗಿ, ತಮ್ಮ ಸಮುದಾಯದ ಹಲವಾರು ಯುವತಿಯರು ಕ್ರೀಡಾ ಕ್ಷೇತ್ರದಲ್ಲಿ ವೃತ್ತಿ ಜೀವನಕ್ಕೆ ಪ್ರೇರಣೆ ಪಡೆದಿರುವುದಾಗಿ ಝರೀನ್ ಹೇಳಿದ್ದಾರೆ. ಇವು ಭಾರತದ ಹೃದಯಭಾಗದಿಂದ ಬಂದ ನೈಜ ಕಥೆಗಳು. ಆತ್ಮವಿಶ್ವಾಸಯುಕ್ತ ಮತ್ತು ತಕ್ಷಣದ ಅಡೆತಡೆಗಳಿಂದ ಎದೆಗುಂದದ 'ನವ ಭಾರತ'ವನ್ನು ನಿರ್ಮಿಸುವಲ್ಲಿ ಕ್ರೀಡೆಗಳು ವಹಿಸಿದ ಪಾತ್ರದ ಬಗ್ಗೆ ಇವು ಮಾತನಾಡುತ್ತವೆ. 'ಟೋಕಿಯೊ ಒಲಿಂಪಿಕ್ಸ್'ನಲ್ಲಿ ಸುಮಾರು 50% ಕ್ರೀಡಾಪಟುಗಳು ಮಹಿಳೆಯರಾಗಿದ್ದರು, ಸುಮಾರು 50% ಪದಕಗಳನ್ನು ಅವರೇ ಗೆದ್ದಿದ್ದಾರೆ – ಮೀರಾಬಾಯಿ ಚಾನು, ಲವ್ಲಿನಾ ಬೊರ್ಗೊಹೈನ್ ಮತ್ತು ಪಿವಿ ಸಿಂಧು ಈ ಪಟ್ಟಿಗೆ ಸೇರುತ್ತಾರೆ.

ಕ್ರೀಡೆಯಲ್ಲಿ ಮಹಿಳೆಯರ ಸಮುದಾಯ ಬೆಳೆಯುತ್ತಿದೆ. ಹೀಗಾಗಿ, ಇದು ಸಮಾಜದ ವಿವಿಧ ವರ್ಗಗಳು ಮಹಿಳೆಯರನ್ನು ನೋಡುವ ವಿಧಾನವನ್ನು ಮತ್ತಷ್ಟು ಬದಲಾಯಿಸುತ್ತದೆ. ಮಹಿಳೆಯರಿಗೆ ಉತ್ತೇಜನ ನೀಡುವುದರ ಜೊತೆಗೆ, ದೇಶದ ಎಲ್ಲಾ ಭಾಗಗಳ ಯುವಕರನ್ನು ಬೆಸೆಯಲು ಕ್ರೀಡೆಗಳನ್ನು ವೇಗವರ್ಧಕವಾಗಿ ಬಳಸಿಕೊಳ್ಳಲು ನಿರಂತರ ಪ್ರಯತ್ನಗಳು ನಡೆಯುತ್ತಿವೆ. ಜಮ್ಮು ಮತ್ತು ಕಾಶ್ಮೀರ ಹಾಗೂ ತೀವ್ರಗಾಮಿ ಪೀಡಿತ ಪ್ರದೇಶಗಳಿಗೆ ಈ ನಿಟ್ಟಿನಲ್ಲಿ ವಿಶೇಷ ಒತ್ತು ನೀಡಲಾಗುತ್ತಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು 50 ಕೋಟಿ ರೂ.ಗಳನ್ನು ಮಂಜೂರು ಮಾಡಲಾಗಿದೆ. ತೀವ್ರಗಾಮಿ ಪೀಡಿತ ಪ್ರದೇಶಗಳಲ್ಲಿ ಮಕ್ಕಳಿಗಾಗಿ ಕ್ರೀಡಾ ಕಾರ್ಯಕ್ರಮಗಳು ಮತ್ತು ಸ್ಪರ್ಧೆಗಳನ್ನು ಆಯೋಜಿಸಲು ಪ್ರತಿ ಜಿಲ್ಲೆಗೆ 10 ಲಕ್ಷ ರೂ. ಒದಗಿಸಲಾಗಿದೆ. ಈ ಉಪಕ್ರಮಗಳು ಈ ಪ್ರದೇಶಗಳ ಪಾಲಿಗೆ ಕ್ರಾಂತಿಕಾರಿ ಎಂದು ಸಾಬೀತಾಗಿದೆ. ಉದಾಹರಣೆಗೆ, ಜಮ್ಮು ಮತ್ತು ಕಾಶ್ಮೀರದಲ್ಲಿ, ಒಂದು ಕಾಲದಲ್ಲಿ ದಾರಿ ತಪ್ಪಿದ ಕಲ್ಲು ತೂರಾಟದಲ್ಲಿ ತೊಡಗಿದ್ದ ಮಕ್ಕಳು ಇಂದು ತಮ್ಮ ಪ್ರದೇಶಗಳ ಶ್ರೇಷ್ಠ ಫುಟ್ಬಾಲ್ ಆಟಗಾರರಾಗಿದ್ದಾರೆ. ತೀವ್ರಗಾಮಿ ಚಟುವಟಿಕೆಗಳಿಂದಾಗಿ ಜನರು ರಾತ್ರಿಯಲ್ಲಿ ಹೊರಗೆ ಹೋಗುವ ಬಗ್ಗೆ ಯೋಚಿಸಲು ಸಾಧ್ಯವಾಗದ ಪ್ರದೇಶಗಳು ಈಗ ರಾತ್ರಿ ಫುಟ್ಬಾಲ್ ಕೇಂದ್ರಗಳಾಗಿ ಮಾರ್ಪಟ್ಟಿವೆ. ಕ್ರೀಡೆಗಳು ಸೃಷ್ಟಿಸಬಲ್ಲ ಮತ್ತು ಸೃಷ್ಟಿಸುತ್ತಿರುವ ಮಾಂತ್ರಿಕತೆ ಇದೇ. ದಿವ್ಯಾಂಗ ಕ್ರೀಡಾಪಟುಗಳನ್ನು ಈ ಸಾಧನೆಯ ಪಥಕ್ಕೆ ಸೇರ್ಪಡೆಗೊಳಿಸುವ ಸಂಬಂಧವೂ ಪ್ರಯತ್ನಗಳು ನಡೆಯುತ್ತಿವೆ. ಜೂನ್ 2023ರಲ್ಲಿ, ಬರ್ಲಿನ್‌ನಲ್ಲಿ ನಡೆದ 'ವಿಶೇಷ ಒಲಿಂಪಿಕ್ಸ್ ಬೇಸಿಗೆ ಕ್ರೀಡಾಕೂಟ–2023'ರಲ್ಲಿ 198 ದಿವ್ಯಾಂಗ ಭಾರತೀಯ ಕ್ರೀಡಾಪಟುಗಳ ತಂಡ ಭಾಗವಹಿಸಿತು. ಭಾರತೀಯ ತಂಡದ ಭಾಗವಹಿಸುವಿಕೆಗೆ ಸರ್ಕಾರವು 7.7 ಕೋಟಿ ರೂ.ಗಳ ಆರ್ಥಿಕ ಬೆಂಬಲವನ್ನು ನೀಡಿತು, ಜೊತೆಗೆ ವಿಶ್ವ ಕ್ರೀಡಾಕೂಟಕ್ಕೆ ತಯಾರಿ ನಡೆಸಲು 'ಭಾರತೀಯ ಕ್ರೀಡಾ ಪ್ರಾಧಿಕಾರ'ದ 'ಜೆಎಲ್‌ಎನ್ ಕ್ರೀಡಾಂಗಣ'ದಲ್ಲಿ ಪೂರ್ವಸಿದ್ಧತಾ ತರಬೇತಿ ಶಿಬಿರವನ್ನೂ ಏರ್ಪಡಿಸಿತ್ತು. ಸರ್ಕಾರದಿಂದ ಆರ್ಥಿಕ ನೆರವು ಈ ಕ್ರೀಡಾಕೂಟಕ್ಕೆ ಇದುವರೆಗೆ ಮಂಜೂರಾದ ಅತ್ಯಧಿಕ ಮೊತ್ತವಾಗಿದೆ. ನಮ್ಮ ವಿಶೇಷ ಕ್ರೀಡಾಪಟುಗಳು ಯಾವಾಗಲೂ



Scanned with ACE Scanner




ದಾಖಲೆ ಸಂಖ್ಯೆಯ ಪದಕಗಳನ್ನು ದೇಶಕ್ಕೆ ಹೊತ್ತು ತರುತ್ತಾರೆ ಎಂಬ ವಿಶ್ವಾಸ ನನಗಿದೆ.

**ಕ್ರೀಡಾ ಪ್ರೇರಿತ 'ಫಿಟ್ ಇಂಡಿಯಾ'**

ಕ್ರೀಡೆಯು ಕ್ರೀಡಾಪಟುಗಳಿಗೆ ವೃತ್ತಿಜೀವನವಾದರೆ, ಮತ್ತು ಕ್ರೀಡಾ ಪ್ರೇಮಿಗಳಿಗೆ ಅದೊಂದು ಭಾವಾವೇಶ. ಆದರೆ ಕ್ರೀಡೆ ಮತ್ತು ಫಿಟ್‌ನೆಸ್ ಪ್ರತಿಯೊಬ್ಬ ನಾಗರಿಕನ ಜೀವನ ವಿಧಾನವಾಗಿರಬೇಕು. ಏಕೆಂದರೆ 'ಫಿಟ್' ಆಗಿರುವ ನಾಗರಿಕರು ಮಾತ್ರ ರಾಷ್ಟ್ರದ ಒಟ್ಟಾರೆ ಬೆಳವಣಿಗೆಗೆ ಕೊಡುಗೆ ನೀಡಬಲ್ಲರು. ಈ ಆಲೋಚನೆಯೊಂದಿಗೆ ಪ್ರಧಾನಿಯವರು 2019ರಲ್ಲಿ 'ಫಿಟ್ ಇಂಡಿಯಾ ಅಭಿಯಾನ'ವನ್ನು ರೂಪಿಸಿದರು. 'ಫಿಟ್‌ನೆಸ್' ಅನ್ನು ಕ್ರೀಡಾಪಟುಗಳು ಅಥವಾ ಫಿಟ್‌ನೆಸ್ ತಜ್ಞರಿಗೆ ಮಾತ್ರವಲ್ಲ, ಪ್ರತಿಯೊಬ್ಬ ನಾಗರಿಕರಿಗೂ ಜೀವನ ವಿಧಾನವನ್ನಾಗಿ ಮಾಡುವುದು ಇದರ ಉದ್ದೇಶ. ಏಫಿಟ್‌ನೆಸ್ ಕಿ ಡೋಸ್, ಆಧಾ ಘಂಟಾ ರೋಜ್ಏ ಎಂಬ ಪ್ರಧಾನಿ ಅವರ ಕರೆ ದೇಶಾದ್ಯಂತ ಪ್ರತಿಧ್ವನಿಸಿತು, ನಾಗರಿಕರು ವರ್ಷವಿಡೀ ಮ್ಯಾರಥಾನ್‌ಗಳು, ಸೈಕ್ಲೋಥಾನ್‌ಗಳು, ಓಟದ ಸ್ಪರ್ಧೆಗಳು ಮುಂತಾದ ವಿವಿಧ ಫಿಟ್‌ನೆಸ್ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಇದೊಂದು ಜನಾಂದೋಲನವಾಗಿ ಮಾರ್ಪಟ್ಟಿದೆ. ಅದು ದೇಶಾದ್ಯಂತ ಎರಡು ಆವೃತ್ತಿಗಳಲ್ಲಿ 7.08 ಕೋಟಿ ನಾಗರಿಕರು ಭಾಗವಹಿಸಿರುವ 'ಫಿಟ್ ಇಂಡಿಯಾ ಫ್ರೀಡಂ ರನ್' ಇರಬಹುದು ಅಥವಾ ಶಾಲಾ ಮಕ್ಕಳಿಗಾಗಿ ಫಿಟ್‌ನೆಸ್ ಮತ್ತು ಕ್ರೀಡೆಗಳ ಕುರಿತು ಏಕೈಕ ರಸಪ್ರಶ್ನೆ ಎನಿಸಿರುವ 'ಫಿಟ್ ಇಂಡಿಯಾ ಕ್ವಿಜ್' ಆಗಿರಬಹುದು, (ರಸಪ್ರಶ್ನೆಯಲ್ಲಿ ಭಾಗವಹಿಸಲು 1.74 ಲಕ್ಷ ವಿದ್ಯಾರ್ಥಿಗಳಿಂದ ನೊಂದಣಿ) – ಎಲ್ಲಾ ವಯೋಮಾನದವರಲ್ಲೂ ಫಿಟ್‌ನೆಸ್ ಬಗ್ಗೆ ಆಸಕ್ತಿ ಹೆಚ್ಚಾಗಿದೆ. 'ಫಿಟ್ ಇಂಡಿಯಾ ರಸಪ್ರಶ್ನೆ' ವಿಶಿಷ್ಟವಾದುದು, ಏಕೆಂದರೆ ಇದು ವಿದ್ಯಾರ್ಥಿಗಳಿಗೆ ಅವರ ಜೀವನದಲ್ಲಿ ಫಿಟ್‌ನೆಸ್ ಮತ್ತು ಕ್ರೀಡೆಗಳ ಪ್ರಾಮುಖ್ಯತೆಯ ಬಗ್ಗೆ ಜಾಗೃತಿ ಮೂಡಿಸುತ್ತದೆ. ಜೊತೆಗೆ, ಅವರ ಗೆಳೆಯರು, ಶಿಕ್ಷಕರು ಮತ್ತು ಪೋಷಕರಲ್ಲಿ ಈ ಸಂದೇಶವನ್ನು ಹರಡಲು ಅವರನ್ನು ಪ್ರೇರೇಪಿಸುತ್ತದೆ. ವಿದ್ಯಾರ್ಥಿಗಳನ್ನು ಮತ್ತಷ್ಟು ಪ್ರೇರೇಪಿಸಲು, 'ಫಿಟ್ ಇಂಡಿಯಾ ಶಾಲಾ ಸಪ್ತಾಹ'ವನ್ನು ಪ್ರತಿವರ್ಷ ನಡೆಸಲಾಗುತ್ತದೆ. ಇದರಲ್ಲಿ 2.5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿಯವರೆಗೆ ವಿವಿಧ ಫಿಟ್‌ನೆಸ್ ಸಂಬಂಧಿತ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರೆ. ಶಾಲಾ ವಿದ್ಯಾರ್ಥಿಗಳಿಂದ ಹಿಡಿದು, ಯುವಕರು ಮತ್ತು ಹಿರಿಯ ನಾಗರಿಕರವರೆಗೆ, ಫಿಟ್ ಇಂಡಿಯಾ ಚಳವಳಿಯಲ್ಲಿ ಎಲ್ಲಾ ವಯಸ್ಸಿನ ಭಾರತೀಯರು ಭಾಗವಹಿಸಿದ್ದಾರೆ. ಇದು ಖಂಡಿತವಾಗಿಯೂ ನವ ಭಾರತದ ನಾಗರಿಕರು ಭಾರತವನ್ನು ನೈಜ 'ಫಿಟ್ ಇಂಡಿಯಾ' ಆಗಿ ಮಾಡಲು ಬದ್ಧರಾಗಿದ್ದಾರೆ ಎಂದು ಸೂಚಿಸುತ್ತದೆ.

**ಕ್ರೀಡಾ ಬೆಂಬಲಿತ ಆರ್ಥಿಕ ಬೆಳವಣಿಗೆ**

ಭಾರತವು ಇಂದು ವಿಶ್ವದ 5ನೇ ಅತಿದೊಡ್ಡ ಆರ್ಥಿಕತೆಯಾಗಿರುವುದಲ್ಲದೆ



Scanned with ACE Scanner

## ಕ್ರೀಡೆಯಿಂದ ಉತ್ತೇಜಿತವಾದ ಆರ್ಥಿಕ ಪ್ರಗತಿಯ ನೋಟ

**2ನೇ**

2022ನೇ ಆರ್ಥಿಕ ವರ್ಷದಲ್ಲಿ ವಿಶ್ವದಲ್ಲೇ 2ನೇ ಅತಿದೊಡ್ಡ ಬೈಸಿಕಲ್ ತಯಾರಿಕಾ ದೇಶ ಭಾರತ. ಒಟ್ಟು 461 ದಶಲಕ್ಷ ಡಾಲರ್‌ಗೂ ಅಧಿಕ ಮೌಲ್ಯದ ಸೈಕಲ್‌ಗಳ ರಫ್ತು

**60%**

ಭಾರತದ ಕಂಪನಿಗಳು ತಯಾರಿಸುವ ಕ್ರೀಡಾ ಉಪಕರಣಗಳಲ್ಲಿ 60% ರಷ್ಟು ರಫ್ತಾಗುತ್ತವೆ ಮತ್ತು ಈ ಉದ್ಯಮ 5 ಲಕ್ಷ ಜನರಿಗೆ ಉದ್ಯೋಗ ಸೃಷ್ಟಿಸಿದೆ.

**3ನೇ**

ಭಾರಿ ಸ್ಪರ್ಧಾತ್ಮಕ ಜಾಗತಿಕ ಮಾರುಕಟ್ಟೆಯಲ್ಲಿ, ಭಾರತವು 3ನೇ ಅತಿದೊಡ್ಡ ಕ್ರೀಡಾ ಉಪಕರಣಗಳ ಉತ್ಪಾದಕ.

**6.6 ಶ. ಕೋ. ಡಾಲರ್**

ಭಾರತೀಯ ಕ್ರೀಡಾ – ಉತ್ಪನ್ನಗಳ ಮಾರುಕಟ್ಟೆಯು 2020–21ರ 3.9 ಶತಕೋಟಿ ಡಾಲರ್‌ನಿಂದ 2027ರ ವೇಳೆಗೆ 6.6 ಶತಕೋಟಿ ಡಾಲರ್‌ಗೆ ಬೆಳೆಯುವ ನಿರೀಕ್ಷೆಯಿದೆ

ಅಭೂತಪೂರ್ವ ಬೆಳವಣಿಗೆಯ ಹಾದಿಯಲ್ಲಿದೆ. ಈ ಆರ್ಥಿಕ ಬೆಳವಣಿಗೆಯ ಕಥಾನಕದಲ್ಲಿ, ಕ್ರೀಡಾ ಸರಕುಗಳ ಉದ್ಯಮವೂ ಮಹತ್ವದ ಪಾತ್ರ ವಹಿಸಿದೆ.

ಫೆಬ್ರವರಿ 2023ರಲ್ಲಿ ಪ್ರಕಟವಾದ 'ಇನ್‌ವೆಸ್ಟ್ ಇಂಡಿಯಾ' ವರದಿಯ ಪ್ರಕಾರ, ಭಾರತವು ಇಂದು ಸ್ಪರ್ಧಾತ್ಮಕ ಜಾಗತಿಕ ಮಾರುಕಟ್ಟೆಯಲ್ಲಿ ಏಶಿಯಾ ಮೂರನೇ ಅತಿದೊಡ್ಡ ಕ್ರೀಡಾ ಸರಕುಗಳ ತಯಾರಕ ರಾಷ್ಟ್ರವಾಗಿದೆ. ಇದಲ್ಲದೆ, ಭಾರತೀಯ ಕಂಪನಿಗಳು ತಯಾರಿಸಿದ ಎಲ್ಲಾ ಕ್ರೀಡಾ ಸರಕುಗಳಲ್ಲಿ 60% ರಫ್ತು ಮಾಡಲಾಗುತ್ತದೆ, ಮತ್ತು ಉದ್ಯಮವು 5 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗವನ್ನು ಸೃಷ್ಟಿಸುತ್ತದೆ. ವ್ಯಾಯಾಮ ಉಪಕರಣಗಳು, ಇನ್‌ಫ್ಲಾಟಬಲ್ ಚೆಂಡುಗಳು, ಬೈಸಿಕಲ್‌ಗಳು, ಕ್ರಿಕೆಟ್ ಪರಿಕರಗಳು, ಕ್ರೀಡಾ ಉಡುಪುಗಳು ಇತ್ಯಾದಿಗಳನ್ನು ಒಳಗೊಂಡಿರುವ ಭಾರತದ ರಫ್ತುಗಳು ಭಾರತವನ್ನು ಪ್ರಬಲ ಕ್ರೀಡಾ ಸರಕುಗಳ ರಫ್ತುದಾರನನ್ನಾಗಿ ಮಾಡಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಚೀನಾ, ಅಮೆರಿಕ, ಬ್ರಿಟನ್ ಮತ್ತು ಆಸ್ಟ್ರೇಲಿಯಾ ಸೇರಿದಂತೆ 200 ದೇಶಗಳಿಗೆ ಬೈಸಿಕಲ್ ರಫ್ತು ಮಾಡುವ ಭಾರತವು, 2022ರ ಆರ್ಥಿಕ ವರ್ಷದಲ್ಲಿ ಜಾಗತಿಕವಾಗಿ 461 ಮಿ.ಡಾ. ವಹಿವಾಟು ನಡೆಸಿ ಎರಡನೇ ಅತಿದೊಡ್ಡ ಬೈಸಿಕಲ್ ಉತ್ಪಾದಕ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. 'ಕ್ರೀಡಾ ಉತ್ಪನ್ನ ರಫ್ತು ಉತ್ತೇಜನ ಮಂಡಳಿ' ಸ್ಥಾಪನೆಯಂತಹ ಕ್ರಮಗಳಿಂದಾಗಿ, ಭಾರತೀಯ ಕ್ರೀಡಾ ಉತ್ಪಾದನಾ ಉದ್ಯಮದ ಮೌಲ್ಯವು ಸುಧಾರಿಸಲಿದೆ. 2020–21ರಲ್ಲಿ 3.9 ಶತಕೋಟಿ ಡಾಲರ್‌ನಷ್ಟಿದ್ದ ಭಾರತೀಯ ಕ್ರೀಡಾ–ಸರಕುಗಳ ಮಾರುಕಟ್ಟೆಯು 2027ರ ವೇಳೆಗೆ 6.6 ಶತಕೋಟಿ ಡಾಲರ್‌ಗೆ ಬೆಳೆಯುವ ನಿರೀಕ್ಷೆಯಿದೆ. ಇದು ರಾಷ್ಟ್ರ ನಿರ್ಮಾಣದಲ್ಲಿ ಕ್ರೀಡೆಯ ಶಕ್ತಿಗೆ ನಿದರ್ಶನ.

ವಾಸ್ತವವಾಗಿ, ಕಳೆದ 9 ವರ್ಷಗಳಲ್ಲಿ, ಭಾರತದಲ್ಲಿ ಕ್ರೀಡಾಕ್ಷೇತ್ರ ಸಾಕಷ್ಟು ಸಾಧನೆಗೆ ಸಾಕ್ಷಿಯಾಗಿದೆ. ಭಾರತೀಯ ಕ್ರೀಡಾಪಟುಗಳು ವಿಶ್ವದಾದ್ಯಂತದ ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ವಿವಿಧ ಕ್ರೀಡಾ ವಿಭಾಗಗಳಲ್ಲಿ ಪ್ರಾಬಲ್ಯ ಸಾಧಿಸುತ್ತಿದ್ದಾರೆ. ಜೊತೆಗೆ, ಭಾರತವನ್ನು ಕ್ರೀಡಾ ಜಗತ್ತಿನಲ್ಲಿ 'ಪರಿಗಣನಾರ್ಹ' ಶಕ್ತಿಯಾಗಿ ನೋಡಲಾಗುತ್ತಿದೆ. ಆದ್ದರಿಂದ ಇತ್ತೀಚಿನ ವರ್ಷಗಳಲ್ಲಿ ಹಲವಾರು ಗಣ್ಯ ಅಂತಾರಾಷ್ಟ್ರೀಯ ಕ್ರೀಡಾ ಸಂಸ್ಥೆಗಳು ಭಾರತವನ್ನು ಆತಿಥೇಯ ದೇಶವಾಗಿ ಆಯ್ಕೆ ಮಾಡಿವೆ.


44ನೇ 'ಫಿಡೆ ಚೆಸ್ ಒಲಿಂಪಿಯಾಡ್', 2022ರಲ್ಲಿ ನಡೆದ 'ಅಂಡರ್–17 ಫಿಫಾ ಮಹಿಳಾ ವಿಶ್ವಕಪ್', 'ಎಐಬಿಎ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್' ಮತ್ತು 2023ರಲ್ಲಿ ಭಾರತದ ವಿವಿಧ ನಗರಗಳಲ್ಲಿ ನಡೆದ 'ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್'ನಂತಹ ಪಂದ್ಯಗಳು ಭಾರತವು ಇಂದು ಉದಯೋನ್ಮುಖ 'ಕ್ರೀಡಾ ಸೂಪರ್ ಪವರ್' ಆಗಿ ಗಳಿಸಿರುವ ಸ್ಥಾನಮಾನಕ್ಕೆ ಪುರಾವೆಗಳಾಗಿವೆ.



Scanned with ACE Scanner

# ಭಾರತದ ಆರ್ಥಿಕತೆ-ಗ್ರಹಿಕೆ ಮತ್ತು ಮುನ್ನೋಟ

* ವಿ.ಅನಂತ ನಾಗೇಸ್ವರನ್




**ದೇಶ ಪ್ರಗತಿ ಹೊಂದುತ್ತಾ ವಿಕಸನಗೊಳ್ಳುತ್ತಿದ್ದಂತೆಯೇ, ಅದರ ಆರ್ಥಿಕತೆಗಳು ಭವಿಷ್ಯಪಥಕ್ಕೆ ರೂಪು ನೀಡುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. 75 ವರ್ಷಗಳ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಹೊಸ್ತಿಲಲ್ಲಿ, ಭಾರತದ ಆರ್ಥಿಕತೆಯ ಪಯಣ ದೇಶದ ತಾರುಣ್ಯಶಕ್ತಿ, ಕ್ರಿಯಾತ್ಮಕ ಮತ್ತು ಪ್ರಗತಿಶೀಲ ಸ್ವಭಾವವನ್ನು ವರ್ಣಿಸುವ ಸ್ಥಿತಿಸ್ಥಾಪಕತೆ, ಸವಾಲುಗಳು ಮತ್ತು ಅವಕಾಶಗಳ ಪ್ರತಿಫಲನವಾಗಿದೆ. ಕಾಲಕ್ರಮೇಣ, ಭಾರತದ ಆರ್ಥಿಕತೆ ಹಲವು ಏರಿಳಿತಗಳಿಗೆ ಸಾಕ್ಷಿಯಾಗಿದೆ. ಅನೇಕ ಅಡೆತಡೆಗಳನ್ನು ದಾಟಿ, ಅವಕಾಶಗಳನ್ನು ಬಂಡವಾಳವಾಗಿಸಿಕೊಳ್ಳುತ್ತಾ ಭಾರತ, ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ.**

ಸ್ವಾತಂತ್ರ್ಯ ನಂತರದ ವರ್ಷ-ಗಳಲ್ಲಿ ಮಾರುಕಟ್ಟೆ ಆರ್ಥಿ-ಕತೆಯ ಅಂಶಗಳೊಂದಿಗೆ ಸಾಮಾಜಿಕ ನೀತಿಗಳ ಸೇರ್ಪಡೆ ಸಹಿತವಾಗಿ ಮಿಶ್ರ ಆರ್ಥಿಕ ಮಾದರಿ ಅಳವಡಿಸಿಕೊಂಡ ಕಾಲಘಟ್ಟದಿಂದ ಭಾರತದ ಆರ್ಥಿಕತೆಯ ಪಯಣ ಆರಂಭವಾಗಿದೆ. ಸಾರ್ವಜನಿಕ ವಲಯ ಉದ್ಯಮಗಳ ಸ್ಥಾಪನೆಯೊಂದಿಗೆ ಆಮದಿಗೆ ಪರ್ಯಾಯಗಳನ್ನು

* ಮುಖ್ಯ ಆರ್ಥಿಕ ಸಲಹೆಗಾರರು, ಭಾರತ ಸರ್ಕಾರ. ಇಮೇಲ್: cea@nic.in



Scanned with ACE Scanner




ಕಂಡುಕೊಳ್ಳುತ್ತಾ ರಾಷ್ಟ್ರ ನಿರ್ಮಾಣ, ಕೈಗಾರಿಕೀಕರಣ ಮತ್ತು ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಗಮನಹರಿಸಲಾಗಿತ್ತು. ಈ ನೀತಿ ನಿರೂಪಣೆಗಳು ಕೈಗಾರಿಕಾ ಪ್ರಗತಿಗೆ ಬುನಾದಿ ಹಾಕಿಕೊಟ್ಟಿತು. ಆದರೆ ಅಧಿಕಾರಿ ವರ್ಗದ ಅಸಮರ್ಥತೆ, ಮಿತ ಸ್ಪರ್ಧಾತ್ಮಕತೆ ಮತ್ತು ಹೊಸ ಆಲೋಚನೆಗಳಿಗೆ ಅವಕಾಶ ನಿರಾಕರಣೆಯಂತಹ ಅನಪೇಕ್ಷಿತ ಪರಿಣಾಮಗಳಿಗೂ ದಾರಿ ಮಾಡಿಕೊಟ್ಟಿತು.

ಭಾರತದ ಆರ್ಥಿಕತೆಗೆ 1990ರ ದಶಕ (ಕೆಲವರು 80ರ ದಶಕದ ಆರಂಭ ಎಂದೂ ಹೇಳುವರು) ಮಹತ್ವದ ತಿರುವಿನ ಕಾಲಘಟ್ಟವಾಗಿತ್ತು. 1980ರ ದಶಕದ ಅಂತ್ಯದಲ್ಲಿ ಮತ್ತು 1990ರ ದಶಕದ ಆರಂಭದಲ್ಲಿ ದೇಶದಲ್ಲಿ ಬೃಹತ್ ಪ್ರಮಾಣದ ಆರ್ಥಿಕತೆಗಳಲ್ಲಿ (ಮ್ಯಾಕ್ರೊಎಕನಾಮಿಕ್) ಅಸಮತೋಲನಗಳು ಕಂಡುಬಂದವು. ಇದರಿಂದಾಗಿ 1991ರಲ್ಲಿ ಸರ್ಕಾರ ರಚನಾತ್ಮಕ ಸುಧಾರಣೆಗಳನ್ನು ಜಾರಿಗೆ ತಂದಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಯೋಜಿತ ವಿತ್ತೀಯ ಕೊರತೆಗಳಿಂದಾಗಿ ಹಣದುಬ್ಬರ ಹೆಚ್ಚಾಯಿತು ಮತ್ತು ಸುಸ್ಥಿರವಲ್ಲದ ಚಾಲ್ತಿ ಖಾತೆ ಕೊರತೆಯು (ಪಾವತಿ ಬಾಕಿ) ಬ್ಯಾಲೆನ್ಸ್ ಆಫ್ ಪೇಮೆಂಟ್ ಬಿಕ್ಕಟ್ಟನ್ನು ಉಂಟು ಮಾಡಿತು. ಇದಕ್ಕೆ ಪ್ರತಿಯಾಗಿ, ಆರ್ಥಿಕ ಉದಾರೀಕರಣ ಮತ್ತು ಸುಧಾರಣೆಯ ಮಾರ್ಗದಲ್ಲಿ ಭಾರತ ಸಾಗಿತು.

ಲೈಸೆನ್ಸ್ ರಾಜ್ ತೆಗೆದುಹಾಕಲು ಹಾಗೂ ವಿದೇಶಿ ನೇರ ಬಂಡವಾಳ ಹೂಡಿಕೆ ಮತ್ತು ಖಾಸಗೀಕರಣ ಉತ್ತೇಜನಕ್ಕೆ ಸರ್ಕಾರ ನೀತಿಗಳನ್ನು ಅನುಷ್ಠಾನಕ್ಕೆ ತಂದಿತು. ಸ್ಪರ್ಧಾತ್ಮಕತೆ ಕಾಪಾಡಲು ಸವಕಳಿಗೆ ಅವಕಾಶ ನೀಡಿ ವಿನಿಮಯ ದರ ಹೊಂದಿಕೊಳ್ಳುವಂತೆ ಮಾಡಲಾಯಿತು. ಚಾಲ್ತಿ ಖಾತೆಯ ಮೇಲೆ ರೂಪಾಯಿಯನ್ನು ಸಂಪೂರ್ಣವಾಗಿ ಪರಿವರ್ತಿಸಬಹುದಾಯಿತು ಮತ್ತು ಬಂಡವಾಳ ಖಾತೆಯ ಮೇಲೆ ಭಾಗಶಃ ಪರಿವರ್ತಿಸಬಹುದಾಯಿತು. ಈ ಬದಲಾವಣೆಯು ಮಾರುಕಟ್ಟೆ ಆಧರಿತ ಆರ್ಥಿಕತೆಯೆಡೆಗೆ ಹೊರಳುವಂತೆ ಮಾಡಿತು, ಪ್ರಗತಿಗೆ ಹೊಸ ಅವಕಾಶಗಳ ಬಾಗಿಲನ್ನು ತೆರೆಯಿತು, ಉದ್ಯಮಶೀಲತೆಗೆ ಪ್ರೋತ್ಸಾಹ ನೀಡಿತು ಮತ್ತು ಜಾಗತಿಕ ಹೂಡಿಕೆಗಳನ್ನು ಆಕರ್ಷಿಸಿತು. ಇದು 1980ರ ದಶಕದಲ್ಲಿ ಸರಾಸರಿ ಶೇಕಡ 5.5ರಷ್ಟಿದ್ದ ನೈಜ ಪ್ರಗತಿ ದರ ಹಣಕಾಸು ವರ್ಷ 1993 ರಿಂದ 2000ರವೇಳೆಗೆ ಶೇಕಡ 6.3 ಕ್ಕೆ ಹೆಚ್ಚಳವಾಗುವಂತೆ ಮಾಡಿತು. ಬಾಹ್ಯ ವಹಿವಾಟುಗಳೂ ಚೇತರಿಕೆ ಕಂಡವು. ಸರಕು ಮತ್ತು ಸೇವೆಗಳ ವಹಿವಾಟು ಮತ್ತು ಜಿಡಿಪಿ ಅನುಪಾತ 1990 ರಲ್ಲಿ ಶೇಕಡ 17.2 ರಷ್ಟಿದ್ದು, 2000ನೇ ಇಸವಿಯಲ್ಲಿ ಶೇಕಡ 30.6 ಕ್ಕೆ ಹೆಚ್ಚಳ ಕಂಡಿತು.

ಹೊಸ ಸಹಸ್ರಮಾನದಲ್ಲೂ ಈ ಸುಧಾರಣಾ ಉಪಕ್ರಮಗಳು ಮುಂದುವರಿದು, ಮಧ್ಯಂತರ ಪ್ರಗತಿ ನಿಧಾನವಾಗಿ ಸಾಗಿತು. ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು 2000 ದಶಕದ ಆರಂಭದಲ್ಲೇ ಇನ್ನಷ್ಟು ಉದಾರೀಕರಿಸಲಾಯಿತು. 1999ರ ಹೊಸ ಟೆಲಿಕಾಂ ನೀತಿ ಭಾರತದಲ್ಲಿ ಐಟಿ ವಲಯ ಚಿಗುರೊಡೆಯಲು ಪೂರಕವಾಯಿತು. ಇದು ಇತರ ವಲಯಗಳಿಗೂ ಪ್ರಯೋಜನಕಾರಿಯಾಯಿತು. ಬಂಡವಾಳ ಹಿಂತೆಗೆತ ಮತ್ತು ಖಾಸಗೀಕರಣ ನೀತಿಗಳ ಉಪಕ್ರಮಗಳಿಗೆ ಇಂಬುಕೊಡಲು ಪ್ರತ್ಯೇಕ ಸಚಿವಾಲಯ ಸ್ಥಾಪನೆಯಿಂದಾಗಿ ಈ ಅವಧಿಯಲ್ಲಿ ಈ ಪ್ರಕ್ರಿಯೆಗಳು ಚುರುಕುಗೊಂಡವು. ಬೃಹತ್ ಆರ್ಥಿಕತೆಯ ಅಸಮತೋಲನಗಳ ನಿವಾರಣೆಗೆ ರಚನಾತ್ಮಕ ನೀತಿಗಳನ್ನು ರೂಪಿಸಲಾಯಿತು. ಸರ್ಕಾರದ ಐತಿಹಾಸಿಕ ಅತಿ ಹೆಚ್ಚಿನ ಸಂಯೋಜಿತ ಒಟ್ಟು ವಿತ್ತೀಯ ಕೊರತೆ ನಿವಾರಣೆಗೆ ಹಣಕಾಸು ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆ (ಎಫ್‌ಆರ್‌ಬಿಎಂ) ಕಾಯ್ದೆಯನ್ನು ಜಾರಿ ಮಾಡಲಾಯಿತು. 1991ರ ಸುಧಾರಣಾ ಕ್ರಮಗಳ ನಂತರದ ಆರ್ಥಿಕ ಪುನರುತ್ಥಾನದಿಂದಾಗಿ ಕೆಟ್ಟ ಸಾಲಗಳ ಹೊರೆ ಹೊತ್ತಿದ್ದ ಬ್ಯಾಂಕಿಂಗ್ ವ್ಯವಸ್ಥೆಗೆ ಸರ್ಫಾಸಿ ಕಾಯ್ದೆ, 2002 ಮತ್ತು ಬಡ್ಡಿದರಗಳ ಮೇಲಿನ ನಿಯಂತ್ರಣ ತೆಗೆದು ಹಾಕುವ ಮೂಲಕ ಬೆಂಬಲ ನೀಡಲಾಯಿತು. ಇಷ್ಟು ವರ್ಷಗಳ ರಚನಾತ್ಮಕ ಸುಧಾರಣೆಗಳು ಭಾರತದ ಮ್ಯಾಕ್ರೊ-ಎಕನಾಮಿ ಬುನಾದಿ ಬಲಪಡಿಸಿ, ಮುಂಬರುವ ವರ್ಷಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಅನುವು ಮಾಡಿಕೊಟ್ಟಿತು. 2003-2008ರಲ್ಲಿ ಜಾಗತಿಕ ಪ್ರಗತಿ ಸರಾಸರಿ ಶೇಕಡ 4.8 ರಷ್ಟಿದ್ದರೆ, ಭಾರತದ ಆರ್ಥಿಕತೆಯ ಸರಾಸರಿ ಪ್ರಗತಿ ದರ ಶೇಕಡ 8 ಕ್ಕಿಂತ ಹೆಚ್ಚಿತ್ತು. ಸ್ಥಳೀಯ ಆರ್ಥಿಕ ಚಟುವಟಿಕೆಗಳು ಗರಿಗೆದರಿದ್ದು, ಕಾರ್ಪೊರೇಟ್ ವಲಯ ಸುಧಾರಿಸಿ, ಆರೋಗ್ಯಕರ ಹೂಡಿಕೆ ವಾತಾವರಣ ನಿರ್ಮಾಣವಾಯಿತು. ಬಳಕೆಗೆ ಸುಲಭವಾಗಿ ಲಭ್ಯವಾಗುವ ನಗದು (ಲಿಕ್ವಿಡಿಟಿ) ಪ್ರಮಾಣ ಮತ್ತು ಬಡ್ಡಿದರಗಳು ಜಾಗತಿಕವಾಗಿ ಆಶಾದಾಯಕವಾಗಿತ್ತು. ಇದರಿಂದಾಗಿ 2004 ರಿಂದ 2008 ರ ಅವಧಿಯಲ್ಲಿ ಗಣನೀಯವಾಗಿ ಬಂಡವಾಳ ಹರಿದುಬಂದಿತು. ದೇಶೀಯ ಋಣ ಪ್ರಗತಿ, ಅದರಲ್ಲೂ ಬ್ಯಾಂಕ್ ಸಾಲ ಜಿಡಿಪಿಯ ಭಾಗವಾಗಿ ದ್ವಿಗುಣಗೊಂಡಿತು 2022-23ರ ಸರ್ಕಾರದ ಆರ್ಥಿಕ ಸಮೀಕ್ಷೆಯ ಎರಡನೇ ಅಧ್ಯಾಯದಲ್ಲಿ ಈ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಿವೆ.

ಸಹಸ್ರಮಾನದ ಮೊದಲ ದಶಕದಲ್ಲಿನ ಈ ಸುಸ್ಥಿರವಲ್ಲದ ಸಾಲದ ಹೆಚ್ಚಳದಿಂದಾಗಿ ಬ್ಯಾಂಕುಗಳಲ್ಲಿನ ಅನುಪಯುಕ್ತ ಆಸ್ತಿ (ಮರುಪಾವತಿಯಾಗದ ಸಾಲ) ಪ್ರಮಾಣ



Scanned with ACE Scanner

ಹೆಚ್ಚಾಯಿತು. ಕಂಪೆನಿಗಳ ಹೂಡಿಕೆಗಳಿಗೆ ಉತ್ತಮ ಗಳಿಕೆ ಸಿಗದೇ, ಅವುಗಳ ಸಾಲ ಮರುಪಾವತಿಯ ಸಾಮರ್ಥ್ಯ ಕುಗ್ಗಿತು. ಇದು ಹಣಕಾಸು ಮತ್ತು ಹಣಕಾಸೇತರ ವಲಯಗಳ ಲೆಕ್ಕಪತ್ರಗಳು ತಪಬದಿಗೆ ಬರಲು ಹೆಚ್ಚು ಕಾಲ ಹಿಡಿಯುವಂತೆ ಮಾಡಿತು. ಇದನ್ನು ಸರಿಪಡಿಸಿ, ಹಣಕಾಸು ವಲಯ ಒತ್ತಡದಿಂದ ಚೇತರಿಸಿಕೊಳ್ಳಲು ಸಹಕಾರ ನೀಡಲು ಸರ್ಕಾರ ಮತ್ತು ಆರ್ ಬಿ ಐ ಹಲವಾರು ಉಪಕ್ರಮಗಳನ್ನು ಜಾರಿಗೆ ತಂದಿತು. ಸರ್ಫಾಸಿ ಕಾಯ್ದೆ, 2002 ಕ್ಕೆ ತಿದ್ದುಪಡಿ, ಋಣಬಾಧ್ಯತೆ ಮತ್ತು ದಿವಾಳಿತನ ಸಂಹಿತೆ (ಇನ್ಸಾಲ್ವೆನ್ಸಿ ಅಂಡ್ ಬ್ಯಾಂಕ್‌ರಪ್ಸಿ ಕೋಡ್) ಅನುಷ್ಠಾನ, 'ಆಸ್ತಿಗಳ ಗುಣಮಟ್ಟ ಪರಾಮರ್ಶೆ (ಅಸೆಟ್ ಕ್ವಾಲಿಟಿ ರಿವ್ಯೂ) ಪರಿಚಯ, ವಿಳಂಬವಿಲ್ಲದೇ ಸರಿಪಡಿಸುವ ಕ್ರಿಯಾ ಚೌಕಟ್ಟು ಅಳವಡಿಕೆ, ಸಾರ್ವಜನಿಕ ವಲಯ ಬ್ಯಾಂಕ್ (ಪಿಎಸ್‌ಬಿ) ಗಳ ಮರುಬಂಡವಾಳೀಕರಣ, ಪಿಎಸ್‌ಬಿಗಳ ವಿಲೀನ ಮೊದಲಾದ ಉಪಕ್ರಮಗಳು ಬ್ಯಾಂಕ್‌ಗಳು ಮತ್ತು ನಿಗಮಗಳ ಲೆಕ್ಕಪತ್ರಗಳನ್ನು ಸುಧಾರಿಸುವಲ್ಲಿ ಪೂರಕವಾಗಿತ್ತು.

### ನವಯುಗದ ಸುಧಾರಣೆ

ಸಹಸ್ರಮಾನದ ಎರಡನೇ ದಶಕದಲ್ಲಿ ನಡೆದ ಲೆಕ್ಕಪತ್ರಗಳ ಸರಿಪಡಿಸುವಿಕೆಯಿಂದಾಗಿ ಭಾರತದ ಸಂಭಾವ್ಯ ಪ್ರಗತಿ ಮತ್ತು ಕ್ರಿಯಾಶೀಲತೆ ಕುಗ್ಗಿತು. ಪರಿಣಾಮವಾಗಿ, 2014ರ ನಂತರದ ಸರ್ಕಾರದ ಆರ್ಥಿಕ ನೀತಿಗಳು ಭಾರತದ ಪ್ರಗತಿಯನ್ನು ಪುನರ್‌ಸ್ಥಾಪಿಸಲು ಗಮನಹರಿಸಿವೆ. ಈ ನಿಟ್ಟಿನಲ್ಲಿ ಸುಲಲಿತ ವ್ಯಾಪಾರಕ್ಕೆ ಅನುಕೂಲಕರ ವಾತಾವರಣ ಕಲ್ಪಿಸಲಾಗುತ್ತಿದೆ ಹಾಗೂ ಭೌತಿಕ ಮತ್ತು ಡಿಜಿಟಲ್ ಮೂಲಸೌಕರ್ಯ ಗಣನೀಯವಾಗಿ ಹೆಚ್ಚಿಸಲಾಗುತ್ತಿದೆ. ಈ ಪ್ರಯತ್ನಗಳು ಒಟ್ಟಾರೆ ವ್ಯಾಪಾರ ಪರಿಸರ ಸುಧಾರಿಸಿ, ಭಾರತದ ಉತ್ಪಾದನಾ ವಲಯದಲ್ಲಿ ಸ್ಪರ್ಧಾತ್ಮಕತೆ ಬಲಗೊಳಿಸುವ ಗುರಿ ಹೊಂದಿವೆ. ಸುಲಲಿತ ವ್ಯಾಪಾರಕ್ಕಾಗಿ ಮತ್ತು ಜೀವನಮಟ್ಟ ಸುಧಾರಣೆಗಾಗಿ ಆಡಳಿತ ವ್ಯವಸ್ಥೆ ಮತ್ತು ಪ್ರಕ್ರಿಯೆ ಉತ್ತಮಗೊಳಿಸುವ ಜೊತೆಗೆ ವೈವಿಧ್ಯಮಯ ಆರ್ಥಿಕ ಸುಧಾರಣಾ ಕ್ರಮಗಳನ್ನು ಜಾರಿಗೆ ತರಲಾಗಿದೆ.

ಋಣಬಾಧ್ಯತೆ ಮತ್ತು ದಿವಾಳಿತನ ಸಂಹಿತೆ (ಐಬಿಸಿ) ಮತ್ತು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ (ರೇರಾ) ಮೊದಲಾದ ಸುಧಾರಣಾ ಕ್ರಮಗಳ ಮೂಲಕ ನಿಯಂತ್ರಕ ಚೌಕಟ್ಟುಗಳ ಸರಳೀಕರಣವು ಸುಲಭ/ಸುಲಲಿತ ವ್ಯಾಪಾರ ಹೆಚ್ಚಿಸಿದ್ದು, ಈ ಮೂಲಕ ಹೂಡಿಕೆದಾರರ ಒಲವನ್ನು ಸೆಳೆದಿದೆ. ಕಂಪೆನಿಗಳ ಹಣಕಾಸು ಸುಧಾರಣೆಗೆ ಐಬಿಸಿ ನೆರವಾಗಿದೆ. ಐಬಿಸಿ ಪ್ರಕ್ರಿಯೆಗಳಿಗೆ ಒಳಪಡಲು ಬಯಸದೇ ಸಾಲ ಮರುಪಾವತಿ ಸಾಧ್ಯವಾಗದ ಪ್ರಕರಣಗಳಲ್ಲಿ ನ್ಯಾಯಾಲಯದ ಹೊರಗೇ ಒಪ್ಪಂದ ಮಾಡಿಕೊಳ್ಳುವುದು ಹೆಚ್ಚಾಗಿದೆ. ಇನ್ನು ರೇರಾ ಕೂಡ ರಿಯಲ್ ಎಸ್ಟೇಟ್ ವಲಯ ಇನ್ನಷ್ಟು ವ್ಯವಸ್ಥಿತವಾಗುವಂತೆ ಮಾಡಿದೆ, ಇದರಿಂದಾಗಿ ಹೊಸ ಪ್ರಾಜೆಕ್ಟ್ ಗಳ ಅನಾವರಣ ಮತ್ತು ಮನೆಗಳ ಮಾರಾಟ ಹೆಚ್ಚುತ್ತಿದೆ.

ಇದರ ಜೊತೆಗೆ, 2014 ರಿಂದೀಚೆಗೆ ಭಾರತದ ತೆರಿಗೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಲಾಗಿದೆ. ಏಕೀಕೃತ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನುಷ್ಠಾನ, ಕಾರ್ಪೊರೇಟ್ ಮತ್ತು ಆದಾಯ ತೆರಿಗೆ ದರಗಳ ಇಳಿಕೆ, ಸಾರ್ವಜನಿಕ ಸಂಪತ್ತು ನಿಧಿಗಳಿಗೆ ಮತ್ತು ಪಿಂಚಣಿ ನಿಧಿಗಳಿಗೆ ತೆರಿಗೆ ವಿನಾಯಿತಿ, ಡಿವಿಡೆಂಡ್ ಹಂಚಿಕೆ ತೆರಿಗೆ ತೆಗೆದುಹಾಕುವಿಕೆ, ಪೂರ್ವಾನ್ವಯ ತೆರಿಗೆ ಪದ್ಧತಿ ನಿರ್ಮೂಲನೆ ಮೊದಲಾದ ತೆರಿಗೆ ಸುಧಾರಣಾ ಕ್ರಮಗಳಿಂದಾಗಿ ವ್ಯಕ್ತಿಗಳು ಮತ್ತು ಉದ್ದಿಮೆಗಳ ಮೇಲಿನ ತೆರಿಗೆ ಹೊರೆ ತಗ್ಗಿದೆ. ಜಿಎಸ್‌ಟಿ ಅನುಷ್ಠಾನದಿಂದಾಗಿ ತೆರಿಗೆ ವ್ಯಾಪ್ತಿ ಹೆಚ್ಚಾಗಿದೆ, ಅನುಸರಣೆ ಅಗತ್ಯಗಳು ಕಡಿಮೆಯಾಗಿವೆ. ರಾಜ್ಯಗಳ ಗಡಿಗಳಾಚೆಗೂ ಸರಕುಗಳ ಸಾಗಾಟಕ್ಕೆ ಅನುವು ಮಾಡಿಕೊಟ್ಟಿದೆ ಮತ್ತು ಎಲ್ಲಾ ಕಂಪೆನಿಗಳು ಸರ್ಕಾರದ ನಿಯಂತ್ರಕ ಪರ್ವದಡಿಗೆ ಒಳಪಡಲು ಪ್ರಮುಖ ಕೊಡುಗೆ ನೀಡಿದೆ. ಜಿಎಸ್‌ಟಿ ಪೂರ್ವ ಪರ್ವಕ್ಕೆ ಹೋಲಿಕೆ ಮಾಡಿದರೆ, ತೆರಿಗೆ ಹರಿವನ್ನು ಜಿಎಸ್‌ಟಿ ವ್ಯವಸ್ಥೆ ಸುಧಾರಿಸಿದೆ. ಹಣಕಾಸು ವರ್ಷ 2018 ರಲ್ಲಿ ಜಿಎಸ್‌ಟಿ ಮಾಸಿಕ ಐಎನ್‌ಆರ್ ಒಟ್ಟು ಸರಾಸರಿ ಸಂಗ್ರಹ 0.9 ಲಕ್ಷ ಕೋಟಿಯಷ್ಟಿದ್ದು, ಹಣಕಾಸು ವರ್ಷ 2023ರ ವೇಳೆಗೆ 1.5 ಲಕ್ಷ ಕೋಟಿ ರೂಪಾಯಿಗೇರಿತು. ಹಣಕಾಸು ವರ್ಷ 2024ರ ಮೊದಲ ತ್ರೈಮಾಸಿಕದಲ್ಲಿ 1.7 ಲಕ್ಷ ಕೋಟಿ ರೂಪಾಯಿಯಷ್ಟಿದೆ. ಜಿಎಸ್‌ಟಿಯಡಿ ನೊಂದಣಿಯಾಗುತ್ತಿರುವ ಕಿರು ಉದ್ಯಮಗಳ ಸಂಖ್ಯೆ ಹೆಚ್ಚಾದಂತೆ ಜಿಎಸ್‌ಟಿ ತೆರಿಗೆ ಪಾವತಿದಾರರ ಪ್ರಮಾಣದಲ್ಲಿ ಕೂಡ ಗಣನೀಯವಾಗಿ ಹೆಚ್ಚಳವಾಗಿದೆ.

2014 ರಿಂದೀಚೆಗೆ ದೀರ್ಘಾವಧಿ ಮೂಲಸೌಕರ್ಯ ಅಂತರಗಳ ಸಮಸ್ಯೆ ಮತ್ತು ಸಾರಿಗೆ ಅಡೆತಡೆಗಳ ನಿವಾರಣೆಗೆ ಬೃಹತ್ ಪ್ರಮಾಣದ ಸಾರ್ವಜನಿಕ ವೆಚ್ಚಗಳನ್ನೂ ಮಾಡಲಾಗಿದೆ. ಕೇಂದ್ರ ಸರ್ಕಾರದ ಪರಿಣಾಮಕಾರಿ ಬಂಡವಾಳ ವೆಚ್ಚ ಪ್ರಮಾಣ 2013–14 ರಲ್ಲಿ ಜಿಡಿಪಿಯ ಶೇಕಡ 2.8 ರಷ್ಟಿದ್ದು 2022–23 ರಲ್ಲಿ ಶೇಕಡ 3.8 ಕ್ಕೆ ಹೆಚ್ಚಳವಾಗಿದೆ. ಈ ಹೂಡಿಕೆಯು ರಸ್ತೆ ಸಂಪರ್ಕ (ಭಾರತ್‌ಮಾಲಾ), ಬಂದರು ಮೂಲಸೌಕರ್ಯ (ಸಾಗರಮಾಲಾ), ವಿದ್ಯುದೀಕರಣ, ರೈಲ್ವೆ ಮತ್ತು ವಿಮಾನ ನಿಲ್ದಾಣ/ ವಾಯು ಮಾರ್ಗ (ಉಡಾನ್) ಮೊದಲಾದ ವಲಯಗಳಲ್ಲಿ ಸಂಪರ್ಕ ಸುಧಾರಿಸುವ ಮತ್ತು ಆಧುನೀಕರಣದ ಗುರಿ ಹೊಂದಿದೆ. ವ್ಯಾಪಕ / ಸಾಗಾಟ / ಲಾಜಿಸ್ಟಿಕ್ಸ್ ವ್ಯವಸ್ಥೆ ಸೃಷ್ಟಿಸುವ ಮೂಲಕ ಈ ಉಪಕ್ರಮಗಳಿಗೆ ರಾಷ್ಟ್ರೀಯ ಲಾಜಿಸ್ಟಿಕ್ಸ್ ನೀತಿ 2022 ಪೂರಕವಾಗಿದೆ.

ಭಾರತದಂತಹ ವಿಶಾಲ ವಿಸ್ತೀರ್ಣದ ದೇಶದಲ್ಲಿ ಮೂಲಸೌಕರ್ಯ ಸುಧಾರಣೆಗಾಗಿ ಸ್ಥಿರ ಮತ್ತು ದೀರ್ಘಾವಧಿ ಪ್ರಯತ್ನಗಳ ಅಗತ್ಯ ಮನಗಂಡು, ಸರ್ಕಾರ ರಾಷ್ಟ್ರೀಯ ಮೂಲಸೌಕರ್ಯ ಕೊಳವೆಮಾರ್ಗ (ಎನ್‌ಐಪಿ) ಅನುಷ್ಠಾನ ಮಾಡಿದೆ. ಈ ಮುಂದಾಲೋಚನೆಯ ಮೂಲಸೌಕರ್ಯ ಹೂಡಿಕೆ ಯೋಜನೆಗೆ 2024–25ರವರೆಗೆ ಐದು ವರ್ಷಗಳಿಗೆ 111 ಲಕ್ಷ ಕೋಟಿ ರೂಪಾಯಿ ಹೂಡಿಕೆ ಅಂದಾಜಿಸಲಾಗಿದೆ. ಪ್ರಸ್ತುತ, 108 ಲಕ್ಷ ಕೋಟಿ ರೂಪಾಯಿಗೂ ಹೆಚ್ಚಿನ ಹೂಡಿಕೆ ಮೊತ್ತದ 9,000 ಕ್ಕೂ ಹೆಚ್ಚು ಎನ್ ಐ ಪಿ ಪ್ರಾಜೆಕ್ಟ್ ಗಳು, ವಿವಿಧ ವಲಯಗಳಲ್ಲಿ ಅನುಷ್ಠಾನದ ಬೇರೆ ಬೇರೆ ಹಂತಗಳಲ್ಲಿವೆ.

ಇದರ ಜೊತೆಗೆ, ಕಳೆದ 9 ವರ್ಷಗಳಲ್ಲಿ ಹೂಡಿಕೆಗೆ ಆಕರ್ಷಕ ವಾತಾವರಣ ರೂಪಿಸಲು ಅನೇಕ ಸುಧಾರಣೆಗಳನ್ನು ಮತ್ತು ಉಪಕ್ರಮಗಳನ್ನು ಸರ್ಕಾರ ಕೈಗೊಂಡಿದೆ. 'ಆತ್ಮನಿರ್ಭರ ಭಾರತ' ಮತ್ತು 'ಮೇಕ್ ಇನ್ ಇಂಡಿಯಾ' ದಂತಹ ಉಪಕ್ರಮಗಳು ವಿವಿಧ ವಲಯಗಳಲ್ಲಿ ಭಾರತದ ತಯಾರಿಕಾ ಸಾಮರ್ಥ್ಯ ಹೆಚ್ಚಿಸುವ ಮತ್ತು ರಫ್ತು ಉತ್ತೇಜಿಸುವ ಗುರಿ ಹೊಂದಿದೆ. ದೇಶೀಯ ಮತ್ತು ವಿದೇಶಿ ಹೂಡಿಕೆ ಆಕರ್ಷಿಸಲು, ತಯಾರಿಕಾ ವಲಯದಲ್ಲಿ ಜಾಗತಿಕ ಅಭಿವೃದ್ಧಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಲು ಉತ್ಪಾದನೆ ಆಧರಿತ ಪ್ರೋತ್ಸಾಹಕ (ಪಿಎಲ್‌ಐ)ಗಳನ್ನು



Scanned with ACE Scanner

ಸುಧಾರಣೆಗಳಾದ ವ್ಯಾಪಾರಾವಕಾಶ ಸೃಷ್ಟಿ, ರಕ್ಷಣೆ, ಗಣಿ, ಬಾಹ್ಯಾಕಾಶ ಮುಂತಾದ ಕಾರ್ಯತಂತ್ರ ವಲಯಗಳಲ್ಲೂ ಖಾಸಗಿ ವಲಯಕ್ಕೆ ಅವಕಾಶ ನೀಡಲಾಗಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಅನ್ನು ಸರ್ಕಾರ ಇನ್ನಷ್ಟು ಉದಾರೀಕರಿಸಿದ ಪರಿಣಾಮ, ಬಹುತೇಕ ಎಲ್ಲಾ ವಲಯಗಳಲ್ಲೂ ಆಟೋಮ್ಯಾಟಿಕ್ ಮಾರ್ಗ ಅಡಿಯಲ್ಲಿ ಶೇಕಡ 100 ರಷ್ಟು ಅವಕಾಶ ದೊರೆತಿದೆ. ಅದಕ್ಕೂ ಮಿಗಿಲಾಗಿ, ಸಾರ್ವಜನಿಕ ಉದ್ದಿಮೆ ವಲಯದಲ್ಲಿ ಸರ್ಕಾರದ ಉಪಸ್ಥಿತಿ ಮಿತಗೊಳಿಸಲು ಕೆಲವು ಕಾರ್ಯತಂತ್ರ ವಲಯಗಳಲ್ಲಿ ಹೊಸ ಸಾರ್ವಜನಿಕ ವಲಯ ಉದ್ಯಮ ನೀತಿಯನ್ನು ಅನುಷ್ಠಾನಕ್ಕೆ ತರಲಾಗಿದೆ.

ನೀತಿ ನಿರೂಪಣೆಗಳ ಅನಿಶ್ಚಿತತೆ ಕಡಿಮೆ ಮಾಡಲು ಮಹತ್ವದ ಸುಧಾರಣೆಗಳನ್ನು ಮಾಡಲಾಗಿದೆ. ಕಂಪನಿ ಕಾಯ್ದೆ, 2013ರ ಅಡಿ ಸಣ್ಣಪುಟ್ಟ ಆರ್ಥಿಕ ಅಪರಾಧಗಳಿಗೆ ಕ್ರಿಮಿನಲ್ ಪ್ರಕರಣ ದಾಖಲಿಸುತ್ತಿದ್ದುದನ್ನು ತೆಗೆದು ಹಾಕಿರುವ ಪರಿಣಾಮ, ಸುಲಭ ವ್ಯಾಪಾರ ಗಣನೀಯವಾಗಿ ಸುಧಾರಿಸಿದೆ. ಇದರ ಪರಿಣಾಮವಾಗಿ, 1,400 ಸುಸ್ತಿದಾರ ಪ್ರಕರಣಗಳು ನ್ಯಾಯಾಲಯದ ಮಧ್ಯಸ್ಥಿಕೆ ಇಲ್ಲದೇ ಪರಿಹಾರವಾಗಿದೆ. ಸುಮಾರು 4 ಲಕ್ಷಕ್ಕೂ ಹೆಚ್ಚು ಕಂಪನಿಗಳು ದಂಡ ತೆರುವುದರಿಂದ ಪಾರಾಗಲು ಸ್ವಯಂ ಪ್ರೇರಿತವಾಗಿ ಹಿಂದಿನ ಡೀಫಾಲ್ಟ್ (ಸುಸ್ತಿ) ಗಳನ್ನು ಸರಿಪಡಿಸಿಕೊಂಡಿವೆ. ಇದಲ್ಲದೇ, ಕಳೆದ 9 ವರ್ಷಗಳಲ್ಲಿ ಸುಮಾರು 25 ಸಾವಿರ ಅನಗತ್ಯ ಅನುಪಾಲನೆಗಳನ್ನು ತೆಗೆದು ಹಾಕಲಾಗಿದೆ ಮತ್ತು ಪುರಾತನ ಕಾನೂನುಗಳನ್ನು ರದ್ದುಪಡಿಸಲಾಗಿದೆ. ಕೇವಲ ಬೃಹತ್ ಉದ್ಯಮಗಳು ಮಾತ್ರವಲ್ಲದೇ ಖಾಸಗಿ ವಲಯದ ಸುಧಾರಣೆಗೆ ಒತ್ತು ನೀಡಲಾಗಿದೆ. ಕಿರು ಉದ್ಯಮಗಳು ಸಾಂಕ್ರಾಮಿಕದ ದುಷ್ಪರಿಣಾಮಗಳಿಂದ ಚೇತರಿಸಿಕೊಂಡು ಪ್ರಗತಿಯೆಡೆಗೆ ಹೆಜ್ಜೆಯಿಡಲು ಸುಸ್ಥಿರ ಸುಧಾರಣೆಗಳು ಪೂರಕವಾಗಿವೆ. ತುರ್ತು ಸಾಲ ಖಾತರಿ ಯೋಜನೆ (ಇಸಿಎಲ್‌ಜಿಎಸ್), ಆತ್ಮನಿರ್ಭರ ಭಾರತದ ಪರಿಕಲ್ಪನೆಯಡಿ ಎಂಎಸ್‌ಎಂಇಗಳ ವ್ಯಾಖ್ಯಾನ ಪರಿಷ್ಕರಣೆ, ವಿಳಂಬ ಪಾವತಿ ಸಮಸ್ಯೆ ಪರಿಹಾರಕ್ಕೆ ಎಂಎಸ್‌ಎಂಇಗಳಿಗೆ ಟಿಆರ್‌ಇಡಿಎಸ್ (ಟ್ರೇಡ್ ರಿಸೀವೆಬಲ್ಸ್ ಡಿಸ್ಕೌಂಟಿಂಗ್ ಸಿಸ್ಟಮ್) ಜಾರಿ, ಎಂಎಸ್‌ಎಂಇ ಅಡಿ ಚಿಲ್ಲರೆ ಮತ್ತು ಸಗಟು ವ್ಯಾಪಾರಗಳ ಸೇರ್ಪಡೆ, ಎಂಎಸ್‌ಎಂಇ ದರ್ಜೆಯಲ್ಲಿ ಉನ್ನತೀಕರಣ ಬದಲಾವಣೆ ಕಂಡುಬಂದಲ್ಲಿ ಮೂರು ವರ್ಷಗಳವರೆಗೆ ತೆರಿಗೆ ರಹಿತ ಸೌಲಭ್ಯ ವಿಸ್ತರಣೆ ಮೊದಲಾದ ಉಪಕ್ರಮಗಳು ಎಲ್ಲಾ ವಲಯಗಳು ಸಂಕಷ್ಟಗಳಿಂದ ಕ್ಷಿಪ್ರವಾಗಿ ಹೊರಬರಲು ಪೂರಕವಾಗಿವೆ.

ತಂತ್ರಜ್ಞಾನ ಮತ್ತು ಡಿಜಿಟಲ್ ವೇದಿಕೆಗಳ ಸಂಯೋಜನೆ ಈ ಎಲ್ಲಾ ಸುಧಾರಣೆಗಳ ಸಾಮಾನ್ಯ ಅಂಶವಾಗಿದೆ. 2014 ರಿಂದ 2019ರ ಅವಧಿಯಲ್ಲಿ ಭಾರತದ ಮೂಲ ಡಿಜಿಟಲ್ ಆರ್ಥಿಕತೆಯು ಒಟ್ಟಾರೆ ಆರ್ಥಿಕ ಪ್ರಗತಿಗಿಂತ 2.4 ಪಟ್ಟು ಹೆಚ್ಚು ಪ್ರಗತಿ ಸಾಧಿಸಿದೆ ಎಂದು ಅಧ್ಯಯನಗಳು ತಿಳಿಸಿವೆ. ಹಣಕಾಸು ಒಳಗೊಳ್ಳುವಿಕೆ ಹೆಚ್ಚಳ, ನಿಯಮಗಳ ವ್ಯಾಪ್ತಿಗೊಳಪಡುವಿಕೆ ಹೆಚ್ಚಳ ಮತ್ತು ಸಾಮರ್ಥ್ಯ ಹೆಚ್ಚಳದಿಂದಾಗಿ ವಿವಿಧ ಮಾಧ್ಯಮಗಳ ಮೂಲಕ ಡಿಜಿಟಲೀಕರಣ ಬಲಪಡಿಸಲಾಗಿದ್ದು, ಇದು ಆರ್ಥಿಕತೆಯ ಮೇಲೆ ಮಹತ್ವದ ಸಕಾರಾತ್ಮಕ ಪರಿಣಾಮ ಬೀರಿದೆ.

ಡಿಜಿಟಲ್ ಗುರುತುಗಳ ಸೃಷ್ಟಿಗೆ, ಹಣಕಾಸು ಮತ್ತು ಮಾರುಕಟ್ಟೆ ಪ್ರವೇಶ ಸುಧಾರಣೆಗೆ, ವಹಿವಾಟು ವೆಚ್ಚ ತಗ್ಗಿಸಲು ಮತ್ತು ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಡಿಜಿಟಲ್ ಮೂಲಸೌಕರ್ಯ ಅನುವು ಮಾಡಿಕೊಟ್ಟಿದೆ. ಇತ್ತೀಚಿನ ಡಿಜಿಟಲ್ ಉಪಕ್ರಮಗಳಾದ ಡಿಜಿಟಲ್ ವಾಣಿಜ್ಯಕ್ಕಾಗಿನ ಮುಕ್ತ ಜಾಲ (ಒಎನ್‌ಡಿಸಿ) ಮತ್ತು ಅಕೌಂಟ್ ಅಗ್ರಿಗೇಟರ್ (ಹಣಕಾಸು ಸಂಸ್ಥೆಗಳ ನಡುವಿನ ಮಾಹಿತಿ ಹಂಚಿಕೆಗೆ ಆರ್‌ಬಿಐ ನಿಯಂತ್ರಿಕ ಸಂಸ್ಥೆ) ಚೌಕಟ್ಟುಗಳು ಇನ್ನಷ್ಟು ಆರ್ಥಿಕ ಪ್ರಗತಿ ಸಾಧಿಸುವ ಸಾಮರ್ಥ್ಯ ಹೊಂದಿವೆ. ಇ-ಕಾಮರ್ಸ್ ವ್ಯಾಪಾರಗಳಿಗೆ ಪ್ರಗತಿ ಮತ್ತು ವಿಸ್ತರಣೆಗೆ ಹೊಸ ಅವಕಾಶಗಳನ್ನು ತೆರೆಯುತ್ತಾ ಒಎನ್‌ಡಿಸಿ ಹೆಚ್ಚಿನ ಮಾರುಕಟ್ಟೆ ಪ್ರವೇಶ ಒದಗಿಸಲಿದೆ. ಅಕೌಂಟ್ ಅಗ್ರಿಗೇಟರ್ ಚೌಕಟ್ಟು, ಕಿರು ಉದ್ಯಮಗಳು ಸಾಲ ಪಡೆಯಲು ಹೆಚ್ಚಿನ ಅವಕಾಶ ತೆರೆದಿದ್ದು, ಅಭಿವೃದ್ಧಿ ಮತ್ತು ಒಟ್ಟಾರೆ ಆರ್ಥಿಕ ಪ್ರಗತಿಗೆ ಉತ್ತೇಜನ ನೀಡಿದೆ.

**ಮುಂದಿನ ನಡೆ**

ಕರ್ತವ್ಯಕಾಲದಲ್ಲಿ ಭಾರತದ ಆರ್ಥಿಕತೆ ತನ್ನ ಸಂಕಷ್ಟಗಳಿಂದ ಶೀಘ್ರವಾಗಿ ಹೊರಬಂದು ಪ್ರಗತಿ ಸಾಧಿಸಲು ಹೊಸ ಯುಗದ ಸುಧಾರಣೆಗಳು ಬುನಾದಿ ಹಾಕಿಕೊಟ್ಟಿವೆ. ಕೆಲವು ವರ್ಷಗಳಿಂದ ಅಭಿವೃದ್ಧಿಯಾದ ಆರೋಗ್ಯಕರ ಹಣಕಾಸು ವಲಯವು, ಸಾಕಷ್ಟು ಸಾಲ ನೀಡುವಿಕೆ ಖಾತರಿಪಡಿಸುತ್ತಾ, ಹೆಚ್ಚಿನ ಹೂಡಿಕೆ ಮತ್ತು ಬಳಕೆ ಮೂಲಕ ಮುಂಬರುವ ವರ್ಷಗಳಲ್ಲಿ ಸದೃಢ ಆರ್ಥಿಕ ಪ್ರಗತಿಗೆ ಕೊಡುಗೆ ನೀಡಬಲ್ಲದಾಗಿದೆ. ಪುನರಾರಂಭಗೊಂಡ ಸಾಲ ಚಕ್ರ ಮತ್ತು ವಿಸ್ತೃತ ಸಾರ್ವಜನಿಕ ವಲಯದ ಕ್ಯಾಪೆಕ್ಸ್(ಬಂಡವಾಳ - ವೆಚ್ಚ) ಗಳು ಭಾರತದ ಖಾಸಗಿ ವಲಯದ ಕ್ಯಾಪೆಕ್ಸ್ ಆವರ್ತವನ್ನು ಪುನಶ್ಚೇತನಗೊಳಿಸಲಿವೆ. ಡಿಜಿಟಲೀಕರಣ ಸುಧಾರಣೆಗಳು ಮತ್ತು ಕಾನೂನು ಒಳಪಡುವಿಕೆ ಹೆಚ್ಚಳ, ಹಣಕಾಸು ಒಳಗೊಳ್ಳುವಿಕೆ ವ್ಯಾಪ್ತಿ ವಿಸ್ತರಣೆ, ಹೆಚ್ಚಿನ ಆರ್ಥಿಕ ಅವಕಾಶಗಳು ಮೊದಲಾದವುಗಳ ಸಾಮರ್ಥ್ಯ ಹೆಚ್ಚಳದ ಫಲಿತಾಂಶಗಳು ಮಧ್ಯಮಾವಧಿಯಲ್ಲಿ ಭಾರತದ ಆರ್ಥಿಕ ಪ್ರಗತಿಯ ಅಗತ್ಯ ವಾಹಕಗಳಾಗಿವೆ. ಮಧ್ಯಮಾವಧಿಯಲ್ಲಿ ಹೈ-ಎಂಡ್ (ದುಬಾರಿ) ತಯಾರಿಕೆ ಮತ್ತು ಹೆಚ್ಚಿನ ಮೌಲ್ಯ ವರ್ಧಿತ ಸೇವೆಗಳ ಕ್ಷಿಪ್ರ ಪ್ರಗತಿಗಾಗಿ ಸೂಕ್ತ ಪರಿಸರ ವ್ಯವಸ್ಥೆ ಖಾತರಿಪಡಿಸಲು ಡಿಜಿಟಲ್ ಮೂಲಸೌಕರ್ಯ ವಿಸ್ತರಣೆಯಲ್ಲಿ ಸ್ಥಿರ ವೇಗ, ಸಾರ್ವಜನಿಕ ಮತ್ತು ಖಾಸಗಿ ವಲಯಗಳೆರಡರಲ್ಲೂ ಸಂಶೋಧನೆ ಮತ್ತು ಅಭಿವೃದ್ಧಿ (ಆರ್ & ಡಿ)ಯ ಮಹತ್ವದ ಉನ್ನತೀಕರಣ, ಹೆಚ್ಚಿನ ಕೌಶಲ್ಯಯುತ ಕಾರ್ಯಪಡೆ ಲಭ್ಯವಾಗಿಸುವುದು ಅಗತ್ಯ.

ಭಾರತದ ಭೌಗೋಳಿಕ ಪರಿಸರಕ್ಕೆ ಹೊಂದುವ ಮತ್ತು ರಾಜಕೀಯ, ಆರ್ಥಿಕ ವಲಯಗಳ ತಾಂತ್ರಿಕ ಸವಾಲುಗಳನ್ನು ಅರ್ಥೈಸಿಕೊಂಡ, ಸಂದರ್ಭಕ್ಕೆ ತಕ್ಕ ಮತ್ತು ಸೂಕ್ತ ಆರ್ಥಿಕ ಸುಧಾರಣೆಗಳು ಅಗತ್ಯ. ಅಂದರೆ ಪ್ರಸ್ತುತ ಬೆದರಿಕೆಯೊಡ್ಡಿರುವ ಹವಾಮಾನ ಬದಲಾವಣೆ ಸವಾಲುಗಳ ನಿಗ್ರಹಕ್ಕೆ ಕೃತಕ ಬುದ್ಧಿಮತ್ತೆ ಮತ್ತು ಇಂಧನ ಪರಿವರ್ತನೆ ವಲಯದಲ್ಲಿನ ಸೂಕ್ತ ತಾಂತ್ರಿಕ ಬೆಳವಣಿಗೆಗಳು 2047ರ ವೇಳೆಗೆ ದೇಶ ಉಜ್ವಲ ಭವಿಷ್ಯ ಹೊಂದುವಂತಾಗಲು ಮತ್ತು ಸ್ಥಿರ ಪ್ರಗತಿಗೆ ದಾರಿ ಮಾಡಿಕೊಡಬಲ್ಲದಾಗಿದೆ. ಈ ವಿಧಾನಗಳ ಮೂಲಕ, ಸುಸ್ಥಿರ ಭವಿಷ್ಯ ಮತ್ತು ಎಲ್ಲರನ್ನೊಳಗೊಂಡ ಆರ್ಥಿಕ ಬೆಳವಣಿಗೆಯ ಪಥವನ್ನು ಭಾರತ ಹಾಕಿಕೊಳ್ಳಬಹುದಾಗಿದೆ.




Scanned with ACE Scanner

# 75 YEARS 75 FILMS

## INDIA'S CINEMATIC JOURNEY

ಲೇಖಕರು : ಅಮಿತವ ನಾಗ್
ಬೆಲೆ : ರೂ. 820/-
ಭಾಷೆ : ಇಂಗ್ಲಿಷ್




ಈ ಪುಸ್ತಕ, ಭಾರತೀಯ ಚಿತ್ರರಂಗದ 75 ವರ್ಷದ ಯಾನವನ್ನು ಸಾದರ ಪಡಿಸುತ್ತದೆ. ಕಳೆದ 75 ವರ್ಷಗಳಲ್ಲಿ ನಿರ್ಮಿಸಲಾದ ಚಲನಚಿತ್ರಗಳಲ್ಲಿ ಪ್ರತಿಬಿಂಬಿತವಾದ ಸಾಮಾಜಿಕ – ರಾಜಕೀಯ ಪರಿಸ್ಥಿತಿಗಳ ಸ್ಥಿತ್ಯಂತರಗಳ ವಿಶ್ಲೇಷಣೆಯನ್ನು ಪುಸ್ತಕ ಪ್ರತಿಧ್ವನಿಸುತ್ತದೆ.

ಪ್ರಕಾಶನ ವಿಭಾಗ ಹೊರತಂದಿರುವ ರಾಷ್ಟ್ರೀಯ ಮಹತ್ವ ಪುಸ್ತಕಗಳು, ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳ ಭಾಷಣಗಳ ಸರಣಿ, ದೇಶದ ನೆಲ – ಜಲ, ಕಲೆ ಸಂಸ್ಕೃತಿ, ಜನರ ಸಂಪ್ರದಾಯ – ಪ್ರಾಕೃತಿಕ ಸಂಪತ್ತು, ಗಾಂಧೀ ಸಾಹಿತ್ಯ, ಜೀವನ ಚರಿತ್ರೆಗಳು, ವಿಜ್ಞಾನ, ಮಕ್ಕಳ ಸಾಹಿತ್ಯ ಹೀಗೆ ವ್ಯಾಪಕ ವಿಚಾರಗಳಿಗೆ ಸಂಬಂಧಿಸಿದ ಪುಸ್ತಕಗಳ ಖರೀದಿಗಾಗಿ ಭೇಟಿ ನೀಡಿ.

**www.publicationsdivision.nic.in**



Scanned with ACE Scanner

# ಕೈಗಾರಿಕೆ: ಮನ್ವಂತರದ ದೂರದೃಷ್ಟಿ

* ಅಂಶುಮಾನ್ ಖನ್ನಾ

ಕಳೆದ ಸುಮಾರು ಒಂದು ದಶಕದಿಂದೀಚೆಗೆ ಭಾರತ ತನ್ನ ಆಂತರಿಕ ಉತ್ಪಾದನೆಯಲ್ಲಿ ಸ್ಪರ್ಧಾತ್ಮಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವಲ್ಲಿ ಅದರಲ್ಲಿಯೂ ವಿಶೇಷವಾಗಿ ಆತ್ಮನಿರ್ಭರ್ ಭಾರತ ಮತ್ತು ಮೇಕ್ ಇನ್ ಇಂಡಿಯಾ ಉಪಕ್ರಮಗಳಡಿ ಗಣನೀಯ ಸಾಧನೆ ಮಾಡಿದೆ. ಇತರೆ ಎಲ್ಲಾ ಕ್ಷೇತ್ರಗಳಿಗಿಂತ ಉತ್ಪಾದನಾ ಕ್ಷೇತ್ರ 2030 ರ ವೇಳೆಗೆ 60 ರಿಂದ 70 ದಶಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದೆ. ಕೈಗಾರಿಕೆಯ ಭವಿಷ್ಯ ಉತ್ಪಾದನೆಯನ್ನು ಮುಂದುವರೆಸಿಕೊಂಡು ಹೋಗುವ ಸುಸ್ಥಿರತೆಯಲ್ಲಿ ಅಡಗಿದೆ. ಉತ್ಪಾದನೆಯು ಮುಂದುವರೆದುಕೊಂಡು ಹೋಗಲು ಭಾರತ ಸರ್ಕಾರ 'ಝೀರೊ ಡಿಫೆಕ್ಟ್–ಝೀರೊ ಎಫೆಕ್ಟ್', 'ಶೂನ್ಯ ನ್ಯೂನತೆ–ಶೂನ್ಯ ಪರಿಣಾಮ' 'ಡಿಜಿಟಲ್ ಇಂಡಿಯಾ' ಮತ್ತಿತರ ಕ್ರಮಗಳನ್ನು ಅನುಸರಿಸುವುದರ ಮುಖಾಂತರ ಉದ್ಯಮಗಳಿಗೆ ಸಹಾಯಮಾಡಿದೆ. ಉದ್ಯಮಗಳು ಸ್ಥಾಪನೆಯಾಗಿ ಅಭಿವೃದ್ಧಿ ಹೊಂದಲು ಸುಗಮವಾಗುವಂತೆ ಕಳೆದ ಏಳು ವರ್ಷಗಳಲ್ಲಿ ಭಾರತ ಸರ್ಕಾರ ತನ್ನ ನೀತಿ ನಿಯಮಗಳು ಮತ್ತು ನಿಯಂತ್ರಣ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ಮಾಡಿದೆ.




ಕಳೆದ 75 ವರ್ಷಗಳ ಹಾದಿ ಅಷ್ಟೇನೂ ಸುಗಮವಾಗಿರಲಿಲ್ಲ, ಭಾರತವನ್ನು ಆಳಿದ ವಿದೇಶೀಯರು ದೇಶದ ಸಂಪತ್ತನ್ನು ಖಾಲಿ ಮಾಡಿದ್ದರು. ಪರಿಶ್ರಮದ ಸುದೀರ್ಘ ದಾರಿ ತುಳಿದ ಭಾರತ ಇಂದು ವಿಶ್ವದ ಪ್ರಮುಖವಾದ ಆರ್ಥಿಕ ಶಕ್ತಿಯಾಗಿ ಬೆಳೆದಿದೆ. ಅಮೃತ್ ಕಾಲಕ್ಕೆ ಅಡಿ ಇಡುತ್ತಿರುವ ಭಾರತ ಕೊವಿಡ್ ಸಾಂಕ್ರಾಮಿಕದ ನಂತರದ ವಿಶ್ವದ ಈಗಿನ ಸಂದರ್ಭದಲ್ಲಿ ತನ್ನ ಸಾಮರ್ಥ್ಯವನ್ನು ಗುರುತಿಸಿಕೊಂಡು ವಿಶ್ವದ ನಾಯಕನಾಗಿ ಬೆಳೆಯುತ್ತಿದೆ. ಬಹಳ ಮುಖ್ಯವಾಗಿ ಜನರನ್ನು ಮತ್ತು ಭೂಮಿಯನ್ನು ರಕ್ಷಿಸುವಂತಹ, ವೇಗವಾಗಿ ಬೆಳೆಯುವಂತಹ ಸುಸ್ಥಿರವಾದ ಹಾಗೂ ಎಲ್ಲರನ್ನು ಒಳಗೊಂಡ ಆರ್ಥಿಕ ಬೆಳವಣಿಗೆ ಆಗಬೇಕಾಗಿದೆ. ಫಿಕ್ಕಿ ಮೆಕಿನ್ಸೆ–ವರದಿಯ ಪ್ರಕಾರ 2047ರ ವೇಳೆಗೆ ಭಾರತ ತನ್ನ ಈಗಿನ ತಲಾ ಆದಾಯಕ್ಕಿಂತ ಆರು ಪಟ್ಟು

* ಸಹಾಯಕ ಮಹಾ ಪ್ರಧಾನ ಕಾರ್ಯದರ್ಶಿ, ಎಫ್‌ಐಸಿಸಿಐ. ಇಮೇಲ್: anshuman.khanna@ficci.com

ಹೆಚ್ಚಿನ ಆದಾಯ ಹೊಂದಿದ ರಾಷ್ಟ್ರವಾಗಿ ಬೆಳೆದು 60 ಕೋಟಿ ಉದ್ಯೋಗವನ್ನು ಸೃಷ್ಟಿಸುತ್ತದೆ. ಈ ಸಾಧನೆಯಿಂದ ಭಾರತ 2047 ರ ವೇಳೆಗೆ 500 ಲಕ್ಷ ಕೋಟಿ (19 ಟ್ರಿಲಿಯನ್ ಡಾಲರ್) ಆರ್ಥಿಕ ಶಕ್ತಿಯಾಗಿ ಬೆಳೆದು ವಾರ್ಷಿಕ ಶೇಕಡಾ 7.7 ನೈಜ ಜಿಡಿಪಿ ಬೆಳವಣಿಗೆಯನ್ನು ಸಾಧಿಸುತ್ತದೆ.

ಈ ಮೇಲಿನ ಆರ್ಥಿಕ ಬೆಳವಣಿಗೆಯ ಸಾಧನೆಗೆ ಕೈಗಾರಿಕೆ ಬೆಳವಣಿಗೆ ಚಾಲನಾ ಶಕ್ತಿಯಾಗಿದ್ದು, ಇದನ್ನು ಸಾಧಿಸಲು ಪೂರಕವಾಗಿ ನೀತಿ ನಿಯಮಗಳು ಮತ್ತು ಪರಿಸರವನ್ನು ರೂಪಿಸಲಾಗಿದೆ. ಸರಕು ಮತ್ತು ಸೇವೆಗಳ ತೆರಿಗೆ ಪದ್ಧತಿ ಜಾರಿಗೊಳಿಸಿರುವುದು, ರಾಷ್ಟ್ರೀಯ ಏಕ ಗವಾಕ್ಷಿ ವ್ಯವಸ್ಥೆ, ಉತ್ಪಾದನೆಗೆ ಸಂಬಂಧಿಸಿದ ಪ್ರೋತ್ಸಾಹ ಯೋಜನೆಗಳು ಎಲೆಕ್ಟ್ರಾನಿಕ್ಸ್, ಕೆಮಿಕಲ್ಸ್, ಜವಳಿ, ಆಟೊ (ವಿದ್ಯುತ್ ಚಾಲಿತ), ಸೌರಮಾದರಿ, ಬ್ಯಾಟರಿ, ಔಷಧಿ ಮತ್ತು ವೈದ್ಯಕೀಯ ಉಪಕರಣಗಳಂತಹ ಪ್ರಮುಖವಾದ ಆಯಕಟ್ಟಿನ ಕ್ಷೇತ್ರಗಳಲ್ಲಿ ಬೆಳವಣಿಗೆಗೆ ಇಂಬುಗೊಡುವ ನಿರೀಕ್ಷೆ ಇದೆ. ಕೇಂದ್ರ ಸರ್ಕಾರದ ಪಿಎಂ-ಗತಿಶಕ್ತಿ ಮತ್ತು ರಾಷ್ಟ್ರೀಯ ಸಾಗಾಣಿಕೆ ನೀತಿಗಳು ಭಾರತದ ತಯಾರಿಕಾ ಪರಿಸರವನ್ನು ಉತ್ತೇಜಿಸಿವೆ.

ಒಟ್ಟಾರೆ ತಯಾರಿಕಾ ವಲಯ ಉದ್ಯೋಗ ಸೃಷ್ಟಿಗೆ ಹೆಚ್ಚು ವೇಗ ಕೊಡುವ ಸಾಮರ್ಥ್ಯವನ್ನು ಹೊಂದಿದ್ದು, 2030ರ ವೇಳೆಗೆ 60 ರಿಂದ 70 ದಶ ಲಕ್ಷ ಉದ್ಯೋಗ ಸೃಷ್ಟಿಸುವ ಸಾಧ್ಯತೆಗಳಿವೆ. ಉತ್ಪಾದನಾ ವಲಯ ದೇಶದ ಜಿಡಿಪಿ ಬೆಳವಣಿಗೆಗೆ 2022 ರಲ್ಲಿ ಶೇಕಡಾ 7-8 ರಷ್ಟು ಕೊಡುಗೆ ನೀಡಿದ್ದು, ಈ ಕೊಡುಗೆ ಶೇಕಡಾ 9-10 ರಷ್ಟು ತಲುಪುವ ಆಶಯವನ್ನು ದೇಶ ಹೊಂದಿದೆ. ಇದರ ಜೊತೆಗೆ, ಕಾರ್ಮಿಕರ ಉತ್ಪಾದಕತೆಯನ್ನು ಮೂರು ಪಟ್ಟು ಮತ್ತು ಬಂಡವಾಳದ ಉತ್ಪಾದಕತೆಯನ್ನು ದ್ವಿಗುಣಗೊಳಿಸಿಕೊಂಡರೆ ಭಾರತ ಉತ್ಪಾದಕತೆಯನ್ನು 2030 ರ ವೇಳೆಗೆ ಐದು ಪಟ್ಟು ಹೆಚ್ಚಿಸುವ ಗುರಿ ಹೊಂದಬಹುದಾಗಿದೆ. ಉತ್ಪಾದಕತೆ ಹೆಚ್ಚಿಸಲು ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಲ್ಲಿ ಶೇಕಡಾ 70 ರಿಂದ 80 ರಷ್ಟು ಡಿಜಟಲೀಕರಣ, ವಿಶ್ವ ಆರ್ಥಿಕ ವೇದಿಕೆಯ ಲೈಟ್‌ಹೌಸ್‌ಗಳನ್ನು ಹತ್ತು ಪಟ್ಟು ಹೆಚ್ಚಿಸಿಕೊಳ್ಳಲು ಐಟಿ ಮತ್ತು ಆಟೊಮೇಷನ್ ನೇತೃತ್ವದತ್ತ ಗಮನ ಹರಿಸಬೇಕಿದೆ. ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳು ಉತ್ಪಾದನೆಯ ಒಟ್ಟಾರೆ ವ್ಯವಸ್ಥೆಯಲ್ಲಿ ಸರಿಯಾದ ರೀತಿಯಲ್ಲಿ ತೊಡಗಿಸಿಕೊಳ್ಳದೆ ಹೋದರೆ ಈ ಗುರಿ ಸಾಧಿಸಲು ಸಾಧ್ಯವಾಗುವುದಿಲ್ಲ.




ತಯಾರಿಕಾ ಕ್ಷೇತ್ರದ ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕಾದರೆ ಈ ಮುಂದಿನ ಐದು ಕ್ಷೇತ್ರಗಳ ಬಗ್ಗೆ ಹೆಚ್ಚು ಗಮನಕೊಡಬೇಕು.

**ವಿಶ್ವದ ಹೊಸ ತಲೆಮಾರಿನ ಕೈಗಾರಿಕೆ**


ಕೊವಿಡ್-19 ಸಾಂಕ್ರಾಮಿಕದ ಅವಧಿಯಲ್ಲಿ ಕೇಂದ್ರೀಕರಣಗೊಂಡ ಪೂರೈಕೆಯ ಸರಣಿಗೆ ಎದುರಾದ ಸವಾಲುಗಳು ಮುನ್ನೆಲೆಗೆ ಬಂದಿದ್ದು ಜಗತ್ತಿನಾದ್ಯಂತ ಕಂಪನಿಗಳು ಪರ್ಯಾಯವಾದ ಪೂರೈಕೆಯ ವ್ಯವಸ್ಥೆಯನ್ನು ಎದುರು ನೋಡುತ್ತಿವೆ. ಎದುರಾಗಿರುವ ಈ ಸವಾಲುಗಳು ಭಾರತ ತನಗೆ ದೊರೆತಿರುವ ಸುವರ್ಣಾವಕಾಶವೆಂದು ಬಳಸಿಕೊಂಡರೆ ಈಗಿನ 800 ಬಿಲಿಯನ್ ಡಾಲರ್ ಪೂರೈಕೆಯನ್ನು 2030 ರ ವೇಳೆಗೆ 1.2 ಟ್ರಿಲಿಯನ್‌ಗಳಿಗೆ ಹೆಚ್ಚಿಸಿಕೊಳ್ಳಬಹುದಾಗಿದೆ.

ಹೆಚ್ಚಿನ ಆರ್ಥಿಕಾಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಸಲು ಭಾರತ ಜಾಗತಿಕ ಮೌಲ್ಯಯುತ ಪೂರೈಕೆ ಸರಣಿಯನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳಬಹುದಾಗಿದೆ. ಕಾರ್ಮಿಕ ಆಧರಿತ ಜವಳಿ ಮತ್ತು ಸಿದ್ಧ ಉಡುಪು ಕ್ಷೇತ್ರಗಳನ್ನು ಜಾಗತಿಕ ಪೂರೈಕೆ ಸರಣಿಯೊಂದಿಗೆ ಸಮೀಕರಣಗೊಳಿಸಿಕೊಂಡರೆ ಆ ಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳಬಹುದಾಗಿದೆ. ಹೆಚ್ಚು ಬಂಡವಾಳ ಆಧರಿತ ಎಲೆಕ್ಟ್ರಾನಿಕ್ಸ್ ಕ್ಷೇತ್ರ ಈಗಾಗಲೇ ಜಾಗತಿಕ ಪೂರೈಕೆ ಸರಣಿ(ಸರಪಳಿಗೆ) ಹೊಂದಾಣಿಕೆ ಆಗಿದೆ.

ಸರ್ಕಾರ ಪಿಎಲ್‌ಐ ಉತ್ತೇಜನಕ್ಕೆ ಬೇರೆ ಬೇರೆ ವಿಭಿನ್ನ ಕ್ಷೇತ್ರಗಳನ್ನು ಆಯ್ಕೆ ಮಾಡಿದೆ. ಹೊಸ ತಲೆಮಾರಿನ ಮೊಬೈಲ್ ಫೋನ್‌ಗಳು, ಆಧುನಿಕ ರಾಸಾಯನಿಕ ಸೆಲ್ ಬ್ಯಾಟರಿಗಳು, ಹೆಚ್ಚು ದಕ್ಷತೆಯ ಸೋಲಾರ್ ಪಿವಿ ಮಾಡ್ಯುಲ್‌ಗಳು, ಡ್ರೋನ್‌ಗಳು, ವೇರಬಲ್‌ಗಳು, ಸೆಮಿಕಂಡಕ್ಟರ್‌ಗಳು ಮತ್ತು ವಿಶೇಷ ಸ್ಟೀಲ್ ಕ್ಷೇತ್ರಗಳನ್ನು ಪಿಎಲ್‌ಐಗೆ ಆಯ್ಕೆ ಮಾಡಲಾಗಿದೆ. ಸರ್ಕಾರದ ಉತ್ತೇಜನ ಹೊಸ ತಲೆ ಮಾರಿನ ಈ ಕ್ಷೇತ್ರಗಳಿಗೆ ಸಾಕಷ್ಟು ಪ್ರಮಾಣದಲ್ಲಿ ತಲುಪುವಂತೆ ನಿಗಾ ವಹಿಸಿದೆ. ಹೊಸ ತಲೆ ಮಾರಿನ ಈ ಕ್ಷೇತ್ರಗಳು ಭಾರತ ಪ್ರಮುಖವಾದ ಉತ್ಪಾದನಾ ತಾಣವಾಗಿ ರೂಪುಗೊಳ್ಳಲು ಸಹಾಯವಾಗುತ್ತವೆ. ಈ ನಿಟ್ಟಿನಲ್ಲಿ ಈಗಾಗಲೇ ಯಶಸ್ಸು ದೊರೆಯುತ್ತಿದೆ. ದೇಶದಲ್ಲಿ 2014 ರಲ್ಲಿ ಕೇವಲ ಎರಡು ಮೊಬೈಲ್ ಫೋನ್ ತಯಾರಿಕಾ ಘಟಕಗಳಿದ್ದವು, ಈ ಕ್ಷೇತ್ರಕ್ಕೆ ಸರ್ಕಾರ ಪ್ರೋತಾಹದ ನೀತಿಯನ್ನು ಅನ್ವಯಿಸಿದ ನಂತರ ಈಗ ಭಾರತ ಮೊಬೈಲ್ ಫೋನ್‌ಗಳ ಉತ್ಪಾದನೆಯಲ್ಲಿ ವಿಶ್ವದಲ್ಲೇ ಎರಡನೇ ಸ್ಥಾನದಲ್ಲಿದೆ. ವಾಸ್ತವವಾಗಿ ಇಂದು ಸ್ಮಾರ್ಟ್ ಫೋನ್‌ಗಳ ರಫ್ತು 11 ಬಿಲಿಯನ್ ಅಮೆರಿಕನ್ ಡಾಲರ್ ತಲುಪಿದೆ ಮತ್ತು ಮೊಬೈಲ್ ಉಪಕರಣಗಳ ರಫ್ತಿನಲ್ಲಿ ದೇಶ ಪ್ರಮುಖವಾದ ದೇಶವಾಗಿ ಹೊರಹೊಮ್ಮಿದೆ. ಜೊತೆಗೆ ಸ್ಮಾರ್ಟ್ ಫೋನ್‌ಗಳು ದೇಶದ



Scanned with ACE Scanner



ರಫ್ತು ಮಾರುಕಟ್ಟೆಯಲ್ಲಿ ಐದನೇ ಸ್ಥಾನವನ್ನು ಪಡೆದುಕೊಂಡಿವೆ.

ಜಾಗತಿಕ ಮೌಲ್ಯ ಸರಣಿಯಲ್ಲಿ ಪ್ರಮುಖವಾಗಿ ಐದರಿಂದ ಆರು ಕ್ಷೇತ್ರಗಳಲ್ಲಿ ಉದಾಹರಣೆಗೆ ಎಲೆಕ್ಟ್ರಾನಿಕ್ಸ್, ರಾಸಾಯನಿಕಗಳು, ವೈದ್ಯಕೀಯ ಉಪಕರಣಗಳ ಕ್ಷೇತ್ರಗಳಲ್ಲಿ ರಫ್ತಿನ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಬೇಕೆಂಬ ಗುರಿ ಹಾಕಿಕೊಳ್ಳಲಾಗಿದೆ. ಇದಕ್ಕಾಗಿ ಬಂದರುಗಳಿಗೆ ಹತ್ತಿರವಿರುವ ಮುಂಬೈ–ಥಾಣೆ–ರಾಯಗಢ ವಲಯದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ರಾಸಾಯನಿಕ ಉತ್ಪನ್ನಗಳ ತಯಾರಿಕೆಗೆ ಉತ್ತೇಜನ ನೀಡಲಾಗುತ್ತದೆ. ರಾಜ್ಯ ಸರ್ಕಾರಗಳು ಈ ರೀತಿಯ ತಮ್ಮ ಉತ್ಪಾದನಾ ಸಾಮರ್ಥ್ಯಗಳಿಗೆ ಅನುಸಾರವಾಗಿ ಈ ರೀತಿಯ ಉತ್ಪಾದನಾ ವಲಯಗಳ ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ. ಉದಾಹರಣೆಗೆ ಸರ್ಕಾರದ ರಸ್ತೆ ಅಭಿವೃದ್ಧಿ ಕಾರ್ಯಕ್ರಮ 'ಭಾರತ್‌ಮಾಲಾ' ಅಡಿಯಲ್ಲಿ ಹಲವು ಮಾದರಿಯ ಸಾಗಾಣಿಕೆಯ ಪಾರ್ಕಗಳನ್ನು ಹಲವು ನಗರಗಳಲ್ಲಿ ಸ್ಥಾಪಿಸಲಾಗುತ್ತಿದ್ದು ಅವು ಉತ್ಪಾದನೆಯ (ಉದಾಹರಣೆಗೆ ನಾಗಪುರದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಏರೋನಾಟಿಕ್ಸ್)ಗೆ ವಿಶ್ವದರ್ಜೆಯ ದಕ್ಷತೆಯ ಲಾಜಿಸ್ಟಿಕ್ ವಲಯಗಳಾಗಬಹುದಾಗಿದೆ. ಇದೇ ರೀತಿ ಸೋಲಾಪುರ ಜವಳಿ ಮತ್ತು ಸಿದ್ಧ ಉಡುಪುಗಳ ಉತ್ಪಾನಾ ಕೇಂದ್ರವಾಗಬಹುದು. ಇದರ ಜೊತೆಗೆ ಗುತ್ತಿಗೆ ಉತ್ಪಾದನಾ ಕ್ರಮವನ್ನು ಅಳವಡಿಸಿಕೊಂಡು, ಉತ್ಪಾದನಾ ಸಾಮರ್ಥ್ಯದ ಶೇಕಡಾ 80 ರಷ್ಟನ್ನು ಬಳಸಿಕೊಳ್ಳಲು, ಸರಬರಾಜುದಾರರ ಅಭಿವೃದ್ಧಿ ಯೋಜನೆ (ಉದಾಹರಣೆಗೆ ಹೊಸದಾಗಿ ರೂಪಿಸುವ ಅನುದಾನ) ಮತ್ತು ಏಕ ಗವಾಕ್ಷಿ ಮಂಜೂರಾತಿ ಅನುಸರಿಸುವುದರಿಂದ ನಿರ್ದಿಷ್ಟವಾದ ಜಾಗತಿಕ ಮೌಲ್ಯಯುತ ಸರಣಿಯಲ್ಲಿ ಭಾರತ ಜಾಗ ಪಡೆಯಬಹುದಾಗಿದೆ.

### ಉತ್ಪಾದನೆಯಲ್ಲಿ ಡಿಜಿಟಲ್ ಕ್ರಾಂತಿಯನ್ನು ಅಪ್ಪಿಕೊಳ್ಳುವುದು


ನಾಸ್‌ಕಾಮ್ ವರದಿಯ ಪ್ರಕಾರ ಭಾರತದ ತಯಾರಿಕಾ ಕ್ಷೇತ್ರ 2021 ರಲ್ಲಿ 4.0 ಸಲೂಷನ್‌ಗಳ ಮೇಲೆ 5.5–6.5 ಬಿಲಿಯನ್ ಅಮೆರಿಕನ್ ಡಾಲರ್‌ಗಳನ್ನು ಖರ್ಚು ಮಾಡಿದೆ. ಸರ್ಕಾರದ ನಿಯಮಗಳು ಮತ್ತು ಖಾಸಗಿ ಕ್ಷೇತ್ರದ ಬಂಡವಾಳವು ದೇಶದ ತಯಾರಿಕಾ ಕ್ಷೇತ್ರದಲ್ಲಿ ಡಿಜಿಟಲ್ ತಾಂತ್ರಿಕತೆಯನ್ನು ಬಳಸಿಕೊಳ್ಳಲು ಪ್ರಚೋದಿಸುತ್ತಿವೆ. ದೊಡ್ಡ, ಸಣ್ಣ ಮತ್ತು ಮಧ್ಯಮ ಗಾತ್ರದ ತಯಾರಿಕಾ ಸಂಸ್ಥೆಗಳು 4.0 ತಾಂತ್ರಿಕತೆಗಳನ್ನು (ಐಓಟಿ, ಎಐ, ಬಿಗ್ ಡಾಟಾ ಅನಾಲಿಟಿಕ್ಸ್ ಮತ್ತು ರೊಬಾಟಿಕ್ಸ್) ವ್ಯವಹಾರದ ಎಲ್ಲ ಅಥವಾ ಕೆಲವು ಹಂತಗಳಲ್ಲಿ ಡಿಜಲೀಕರಣ ಮಾಡಿದರೆ ತಯಾರಿಕಾ ಕ್ಷೇತ್ರದಲ್ಲಿ ಹೊಸ ಮನ್ವಂತರವನ್ನು ಸೃಷ್ಟಿಸಬಹುದು ಮತ್ತು ಈಗಿನ ಹೊಸ ಕೈಗಾರಿಕಾ ಕ್ರಾಂತಿಯಲ್ಲಿ ಮುಂಚೂಣಿಗೆ ಬರಬಹುದು.

ಮತ್ತು ಮೌಲ್ಯ ಸರಣಿಯ ಹೊಂದಾಣಿಕೆಯನ್ನು ಸುಧಾರಿಸಿಕೊಳ್ಳಬಹುದು. ಉದಾಹರಣೆಗೆ ಟೆಲಿಮಿಟ್ರಿಯಂತಹ ಮುಂದುವರೆದ ವಿಶ್ಲೇಷಣೆಯ ಹೊಂದಾಣಿಕೆಯಿಂದ ಉತ್ಪಾದಕರು ಸರಬರಾಜು ವ್ಯವಸ್ಥೆಯು ಗರಿಷ್ಠ ಮಟ್ಟದಲ್ಲಿರುವಂತಾದರೆ ವಿತರಕರು ಮಟ್ಟದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸರಕು ಸಂಗ್ರಹಿಸಿರುವಂತೆ ನೋಡಿಕೊಳ್ಳಬಹುದು. ತಾಂತ್ರಿಕತೆಯ ಅನುದಾನ ಮತ್ತು ಅಂತಾರಾಷ್ಟ್ರೀಯ ಜಂಟಿ ವ್ಯವಹಾರದಿಂದ ತಾಂತ್ರಿಕತೆಯ ನೈಪುಣ್ಯತೆ ದೊರೆತು ಉತ್ಪಾದನೆಯು ಚುರುಕುಗೊಳ್ಳಲು ಸಹಾಯಕವಾಗುತ್ತದೆ. 5ಜಿ ಬಂದ ಮೇಲೆ ಉತ್ಪಾದನೆಯಲ್ಲಿ ತೀವ್ರ ಸುಧಾರಣೆಯಾಗುವ ಸಾಧ್ಯತೆ ಹೆಚ್ಚಿದೆ. ಪ್ರಮುಖವಾಗಿ ಕೈಗಾರಿಕೆ 4.0ರಲ್ಲಿ 5ಜಿ ಬಳಸಿ ಆಸ್ತಿ ನಿಗಾ, ಉಗ್ರಾಣಗಳಿಗೆ ಸಂಪರ್ಕ, ನಿರ್ವಹಣೆಯ ಬಗ್ಗೆ ಮುಂದಾಲೋಚನೆ ಮಾಡುವುದು, ಸರಕು ಸಾಗಣೆಯ ವಾಹನಗಳ ನಿರ್ವಹಣೆ ಮತ್ತು ಗುಣಮಟ್ಟ ನಿರ್ವಹಣೆಯನ್ನು ಬಹಳ ದಕ್ಷತೆಯಿಂದ ಮಾಡಬಹುದಾಗಿದೆ.

ಉತ್ಪಾದನಾ ಕೈಗಾರಿಕೆಗಳಲ್ಲಿ ತಾಂತ್ರಿಕತೆ ಅಭಿವೃದ್ಧಿಪಡಿಸಿ ಸದೃಢಗೊಳಿಸುವುದರ ಕಡೆ ಹೆಚ್ಚಿನ ಗಮನ ಹರಿಸಲಾಗುತ್ತಿದೆ. ಉತ್ಪಾದನಾ ಕ್ಷೇತ್ರದಲ್ಲಿ ತಾಂತ್ರಿಕತೆಯನ್ನು ಉನ್ನತೀಕರಿಸಬೇಕಾದರೆ ದುಡಿಯುವ ವರ್ಗಕ್ಕೆ ಸರಿಯಾದ ಕುಶಲತೆಗಳನ್ನು ಒದಗಿಸುವುದು ಬಹಳ ಮುಖ್ಯವಾಗುತ್ತದೆ. ಭವಿಷ್ಯದಲ್ಲಿ ಸಣ್ಣ, ಮಧ್ಯಮ ಮತ್ತು ಅತಿ ಚಿಕ್ಕ ಉತ್ಪಾದನಾ ಘಟಕಗಳಲ್ಲಿ ಕೆಲಸಗಾರರ ಕುಶಲತೆ ಹೆಚ್ಚಿಸುವುದು ಮತ್ತು ಕುಶಲತೆಯನ್ನು ಉನ್ನತೀಕರಿಸಬೇಕಾಗುತ್ತದೆ. ಕುಶಲತೆಯ ಕೊರತೆಯನ್ನು ನೀಗಿಸಲು ಸರಿಯಾದ ಕುಶಲತೆ ಯೋಜನೆಗಳಿಗೆ ಹಣ ತೊಡಗಿಸುವುದು ಅಗತ್ಯವಾಗಿದ್ದು, ಅದಕ್ಕಾಗಿ ಶಿಕ್ಷಣ ಸಂಸ್ಥೆಗಳು ಮತ್ತು ಕೈಗಾರಿಕಾ ಸಂಸ್ಥೆಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡಬೇಕಾದರೆ ಶಿಕ್ಷಣ ಸಂಸ್ಥೆಗಳು ಮತ್ತು ಡಿಜಿಟಲ್ ತರಬೇತಿ ವೇದಿಕೆಗಳ ಜೊತೆ ಸಹಯೋಗ ಮಾಡಿಕೊಂಡು ಇತ್ತೀಚಿನ ಉತ್ಪಾದನಾ ತಂತ್ರಗಾರಿಕೆಯ ಕುಶಲತೆಯನ್ನು ಕಲಿಸುವುದು, ಉನ್ನತೀಕರಿಸುವುದು ಮತ್ತು ಪುನಃ ಕುಶಲತೆಯನ್ನು ಕಲಿಸುವ



Scanned with ACE Scanner



ಕೆಲಸ ಆಗಬೇಕಾಗುತ್ತದೆ. ಇದರ ಜೊತೆಗೆ ಸರ್ಕಾರ ತಾಂತ್ರಿಕತೆ ಮೇಲೆ ಬಂಡವಾಳ ಹೂಡುವುದು, ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಪ್ರೋತ್ಸಾಹ ನೀಡಬೇಕು. ಈ ಎಲ್ಲ ಅಂಶಗಳನ್ನು ಯಶಸ್ವಿಯಾಗಿ ಜಾರಿಗೆ ತಂದರೆ ದೇಶದ ಕೈಗಾರಿಕೀಕರಣದ ವೇಗವನ್ನು ಹೆಚ್ಚಿಸಬಹುದಾಗಿದೆ.

### ಸುಸ್ಥಿರ ತಯಾರಿಕಾ ಭವಿಷ್ಯದತ್ತ

ತಯಾರಿಕೆ, ಪರಿಸರದ ಮೇಲೆ ಬಹಳ ಗುರುತರವಾದ ಪರಿಣಾಮ ಬೀರುತ್ತದೆ. ಇದು ಜಿಎಚ್‌ಜಿ ಮತ್ತು ಇತರೆ ಮಾಲಿನ್ಯಗಳಿಗೆ ಪ್ರಮುಖವಾದ ಮೂಲವಾಗುತ್ತದೆ. ಭವಿಷ್ಯದಲ್ಲಿ ಸುಸ್ಥಿರವಾದ ಉತ್ಪಾದನೆಯಾಗಬೇಕಾಗಿದೆ. ಪರಿಸರ ಸ್ನೇಹಿ ಪದ್ಧತಿಗಳು, ಹಸಿರು ನೀತಿ ಅನುಸರಿಸುವುದು ಮತ್ತು ಸುಸ್ಥಿರತೆಗೆ ಬದ್ಧವಾಗಿ ಉತ್ಪಾದನೆ ಮಾಡಿದ ವಸ್ತುಗಳನ್ನು ಬಳಕೆದಾರರು ಇಷ್ಟಪಡುತ್ತಿದ್ದಾರೆ. ಜಾಗತಿಕ ಮಟ್ಟದ ಸ್ಪರ್ಧಾತ್ಮಕತೆಯ ಆರ್ಥಿಕ ಲಾಭ ಪಡೆದುಕೊಳ್ಳಲು ಸುಸ್ಥಿರತೆ ಆಧಾರದ ತಯಾರಿಕೆಗೆ ಆಸಕ್ತಿ ವಹಿಸಬೇಕು ಮತ್ತು ಕೈಗಾರಿಕಾ ಉತ್ಪಾದನೆ ಪ್ರಕ್ರಿಯೆ ಪರಿಸರದ ಮೇಲೆ ಹಾನಿ ಮಾಡದಂತೆ ಎಚ್ಚರ ವಹಿಸಬೇಕು. ಉತ್ಪಾದನೆ ಸುಸ್ಥಿರವಾಗಿರುವಂತೆ ನೋಡಿಕೊಳ್ಳಲು ಉತ್ಪಾದನಾ ಶೈಲಿಯಲ್ಲಿ ಅಗತ್ಯವಾದ ಬದಲಾವಣೆಗಳನ್ನು ಮಾಡಕೊಳ್ಳಬೇಕು. ಉದ್ಯಮಗಳು ಸುಸ್ಥಿರವಾದ ಉತ್ಪಾದನೆಯನ್ನು ಅನುಸರಿಸಲು ಭಾರತ ಸರ್ಕಾರ 'ಶೂನ್ಯ ನ್ಯೂನತೆ–ಶೂನ್ಯ ಪರಿಣಾಮ', 'ಡಿಜಿಟಲ್ ಭಾರತ' ಮತ್ತಿತರ ಕ್ರಮಗಳನ್ನು ಪ್ರಾರಂಭಿಸಿದೆ. ಈ ಪ್ರಾರಂಭಿಕ ಕ್ರಮಗಳು ಪೂರ್ಣಗೊಳ್ಳಬೇಕಾದರೆ, ಮೌಲ್ಯ ಸರಣಿಯಲ್ಲಿ ಉತ್ಪಾದನೆ ಮಾಡುವವರು ಕೆಲವು ಬದಲಿ ಹಸಿರು ಕ್ರಮಗಳಾದ ಜೈವಿಕ ಆಧರಿತ ಕಚ್ಚಾ ಸಾಮಗ್ರಿ, ಸುಸ್ಥಿರವಾದ ಪ್ಯಾಕೇಜ್ ಸಾಮಗ್ರಿಗಳು, ಕಟ್ಟಡ ನಿರ್ಮಾಣದ ಹಸಿರು ಸಾಮಗ್ರಿಗಳು, ಕೈಗಾರಿಕೆಗಳಿಗೆ ಸರಿ ಹೊಂದುವಂತಹ ಹಸಿರು ಲೇಬಲ್‌ಗಳನ್ನು ಸೃಷ್ಟಿಸಬೇಕು ಮತ್ತು ಪುನರ್ ಬಳಕೆಯ ತಾಣಗಳನ್ನು ನಿರ್ಮಿಸಬೇಕು. ಹಸಿರು ಸಾಮಗ್ರಿಗಳ ಗುಣಮಟ್ಟವನ್ನು ಖಾತರಿ ಪಡಿಸಿಕೊಳ್ಳಲು ತಪಾಸಣಾ ಕ್ರಮಗಳನ್ನು ತಯಾರಕರು ತೆಗೆದುಕೊಳ್ಳಬೇಕು. ಡಿಜಿಟಲ್ ತಾಂತ್ರಿಕತೆಯ ಜೊತೆಗೆ ವಸ್ತುಗಳ ಅಭಿವೃದ್ಧಿ ಮಿಳಿತಗೊಂಡರೆ ಸುಸ್ಥಿರವಾದ ಉತ್ಪಾದನಾ ಸಾಮರ್ಥ್ಯದ ಲಾಭವನ್ನು ಪಡೆದುಕೊಂಡು ಪರಿಸರ ಸಂರಕ್ಷಣೆಯ ಗುರಿಯನ್ನು ತಲುಪಬಹುದು. ಅತ್ಯಂತ ಕ್ಲಿಷ್ಟಕರವಾದ ಮತ್ತು ಸೂಕ್ಷ್ಮವಾದ ತಾಂತ್ರಿಕತೆಗಳು ಮತ್ತು ಡಿಜಟಲೀಕರಣಗಳನ್ನು ಒಂದುಗೂಡಿಸುವುದರ ಮೂಲಕ ಕೈಗಾರಿಕಾ 4.0, ಕೈಗಾರಿಕೆ ನಿಯಮಗಳು ಮತ್ತು ಸುಸ್ಥಿರತೆಯ ಗುರಿಗಳಿಗೆ ವಿಶೇಷ ಅವಕಾಶವನ್ನು ಒದಗಿಸುತ್ತದೆ. ಪ್ರಮುಖವಾಗಿ ದೀರ್ಘಾವಧಿಯ ಆರ್ಥಿಕ ಲಾಭಗಳನ್ನು ಸೃಷ್ಟಿಸಲು ಮತ್ತು ಉದ್ಯಮಗಳು ಸುಸ್ಥಿರವಾಗಿರಬೇಕಾದರೆ ಹಸಿರು ಉತ್ಪಾದನಾ ವ್ಯವಸ್ಥೆಯಲ್ಲಿ ನಾವಿನ್ಯತೆ ಮತ್ತು ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಬೇಕು.

### ಮೂಲಸೌಲಭ್ಯಗಳನ್ನು ಬಲಪಡಿಸುವುದು

ಕೈಗಾರಿಕಾ ಮೌಲ್ಯ ಸರಣಿಯಲ್ಲಿ ದೊಡ್ಡ ಪ್ರಮಾಣದ ಸರಕುಗಳ ಸಾಗಾಣಿಕೆಯಲ್ಲಿ ಭಾರತದಲ್ಲಿರುವ ಅದಕ್ಷತೆಯಿಂದ ಸಾಗಾಣಿಕೆಯ ವೆಚ್ಚ ದುಬಾರಿಯಾಗಿದೆ ಮತ್ತು ಸಾಗಾಣಿಕೆಗೆ ಹೆಚ್ಚು ಸಮಯ ಒಡಿಯುತ್ತಿದೆ.

ಭಾರತ ಈ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದು, ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಯೋಜನೆ, ಪ್ರಧಾನ ಮಂತ್ರಿಗಳ ಗತಿ ಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್ ಮತ್ತು ರಾಷ್ಟ್ರೀಯ ಲಾಜಿಸ್ಟಿಕ್ಸ್ ನೀತಿಗಳು ಸೇರಿವೆ. ಇದರ ಜೊತೆಗೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪ್ರಮುಖವಾದ ಉತ್ಪಾದನಾ ಪ್ರದೇಶಗಳಲ್ಲಿ ಸರ್ಕಾರ ಮತ್ತು ಖಾಸಗಿ ಸಹಯೋಗದಲ್ಲಿ ಮೂಲಸೌಲಭ್ಯಗಳನ್ನು ಬಲಪಡಿಸುವುದರ ಜೊತೆಗೆ ಈ ಸೌಲಭ್ಯಗಳನ್ನು ಸ್ಮಾರ್ಟ್ ಸಿಟಿಗೂ ವಿಸ್ತರಿಸಬೇಕು. ಅಗತ್ಯ ಸೇವೆಗಳಲ್ಲಿ ಒಂದಾದ ವಿದ್ಯುತ್‌ನ್ನು ಗ್ರಾಮೀಣ ಮಾರುಕಟ್ಟೆಗಳಿಗೆ ಸೋಲಾರ್ ವಿದ್ಯುತ್ ಜಾಲದಿಂದ ಪೂರೈಸಬಹುದು. ಎಲೆಕ್ಟ್ರಾನಿಕ್ಸ್ ಉಪಕರಣಗಳು ಸೇರಿದಂತೆ ಆಮದು ಮಾಡಿಕೊಳ್ಳುವ ಸರಕುಗಳನ್ನು ಸ್ಥಳೀಯವಾಗಿ ಉತ್ಪಾದಿಸಲು ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಅವುಗಳು, ಅಸ್ತಿತ್ವದಲ್ಲಿರುವ ಮೂಲಸೌಲಭ್ಯಗಳನ್ನು ಬಳಸಿಕೊಳ್ಳಲು ಅವಕಾಶ ಕಲ್ಪಿಸಬಹುದು. ಈಗಿರುವ ಮೂಲಸೌಲಭ್ಯಗಳ ಜೊತೆಗೆ ಭಾರತೀಯ ಕೈಗಾರಿಕೆಗಳು ಚೀನಾ ಮತ್ತು ಪಶ್ಚಿಮದ ದೇಶಗಳ ನಡುವಿನ ವಿಮುಖತೆಯ ಲಾಭ ಪಡೆಯಲು ಸರ್ಕಾರಿ ಪ್ರಾಯೋಜಿತ ನಗರ ಮೂಲಸೌಲಭ್ಯಗಳ ಅಗತ್ಯವಿದೆ.

### ಮುಂದಿನ ದಾರಿ

ಕಳೆದ ಏಳು ವರ್ಷಗಳಿಂದ ಭಾರತ ತನ್ನ ನೀತಿ ಮತ್ತು ನಿಯಂತ್ರಣ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದಿದ್ದು ಇದರಿಂದ ಉದ್ಯಮಿಗಳಿಗೆ ತಮ್ಮ ಉದ್ಯಮಗಳನ್ನು ಸ್ಥಾಪಿಸಿ ಅಭಿವೃದ್ಧಿ ಹೊಂದುವ ವಾತಾವರಣ ನಿರ್ಮಾಣವಾಗಿದೆ. ಭಾರತ ಸ್ವಾತಂತ್ರ್ಯ ಗಳಿಸಿದ 100 ವರ್ಷಗಳನ್ನು ತಲುಪುವ ಹಾದಿಯಲ್ಲಿ ಸುಧಾರಣೆಯ ಪ್ರಕ್ರಿಯೆ ವೇಗವನ್ನು ಪಡೆದುಕೊಂಡು ಅದು ಜಾಗತಿಕ ಮಟ್ಟದಲ್ಲಿ ದಕ್ಷತೆ, ಉತ್ಪಾದಕತೆ ಮತ್ತು ಸುಸ್ಥಿರತೆಯಿಂದ ಕೂಡಿ ಭಾರತ ಪ್ರಮುಖವಾದ ರಫ್ತು ದೇಶವಾಗಿ ಬೆಳೆಯಬಹುದಾಗಿದೆ ಎಂಬ ವಿಶ್ವಾಸವನ್ನು ಎಫ್‌ಐಸಿಸಿಐ ಹೊಂದಿದೆ.




Scanned with ACE Scanner

# ಚಂದ್ರಯಾನ-3

* ಡಾ. ಬಿ.ಆರ್. ಗುರುಪ್ರಸಾದ್

**ಅಮೇರಿಕಾ ತನ್ನ ಕೆಲವು ಮಿತ್ರರಾಷ್ಟ್ರಗಳ ಹಾಗೂ ಖಾಸಗಿ ಕಂಪನಿಗಳ ಭಾಗವಹಿಸುವಿಕೆಯೊಂದಿಗೆ ಆರ್ಟೆಮಿಸ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಚಂದ್ರನನ್ನು ಒಂದು ಬಗೆಯ 'ಜಿಗಿಯುವ ಹಲಗೆ'ಯಂತೆ ಬಳಸಿಕೊಂಡು ದೂರದ ಲೋಕಗಳತ್ತ ಮಾನವರು ತೆರಳುವುದಕ್ಕೆ ಎಡೆಮಾಡಿಕೊಡುವುದು ಆರ್ಟೆಮಿಸ್ ಕಾರ್ಯಕ್ರಮದ ಉದ್ದೇಶವಾಗಿದೆ. ಈ ವರ್ಷದ ಜೂನ್ 24 ರಂದು ಭಾರತವೂ ಆರ್ಟೆಮಿಸ್ ಒಪ್ಪಂದಕ್ಕೆ ಸಹಿಹಾಕಿ ಆ ಮಹತ್ತರವಾದ ಉದ್ದೇಶ ಸಾಧನೆಯಲ್ಲಿ ತಾನೂ ಭಾಗಿಯಾಗುವುದಕ್ಕೆ ಸಿದ್ಧವಾಗಿದ್ದೇನೆಂಬುದನ್ನು ಸೂಚಿಸಿದೆ.**

ಚಂದ್ರಯಾನ-3; ಇದು ಚಂದ್ರನತ್ತ ಭಾರತ ಉಡಾಯಿಸಿರುವ ರೋಬಾಟ್ ಮೂರನೇ ನೌಕೆ. ಚಂದ್ರನತ್ತ ರೋಬಾಟ್ ನೌಕೆಯೊಂದನ್ನು ಕಳುಹಿಸಿ, ಅದು ಚಂದ್ರನನ್ನು ಸುತ್ತುವಂತೆ ಮಾಡಿ ಅದರ ಒಂದು ಕೋಶವನ್ನು ಚಂದ್ರನ ಮೇಲೆ ನಿಧಾನವಾಗಿ ಇಳಿಸುವುದು, ನಂತರ ಆ ಕೋಶದಿಂದ ಹೊರಬಂದ ಚಕ್ರಗಳುಳ್ಳ ಒಂದು ಪುಟ್ಟ ವಾಹನ ತಾನಿಳಿದ ಚಂದ್ರನ ಮೇಲಿನ ಪ್ರದೇಶದ ಮೇಲೆ ಚಲಿಸುತ್ತಾ ಅದನ್ನು ಅಭ್ಯಸಿಸುವಂತೆ ಮಾಡುವುದು ಚಂದ್ರಯಾನ-3 ಕಾರ್ಯಕ್ರಮದ ಉದ್ದೇಶವಾಗಿದೆ. ಚಂದ್ರಯಾನ-3 ನೌಕೆಯು ಅದಕ್ಕೆ ಮೊದಲು ಚಂದ್ರನತ್ತ ತೆರಳಿದ್ದ ಚಂದ್ರಯಾನ-1 ಮತ್ತು 2 ನೌಕೆಗಳ ಕಾರ್ಯಕ್ರಮದ ನಡುವೆ ದೊರೆತ ಉತ್ಕೃಷ್ಟ ಅನುಭವ, ಕಲಿತ ಪಾಠ ಹಾಗೂ ಚಂದ್ರನ ಅನ್ವೇಷಣೆಯ ಸಂಬಂಧದಲ್ಲಿ ಭಾರತದ ದೃಢ ಹಾಗೂ ಅವಿರತ ಯತ್ನ, ಇವುಗಳ ಪ್ರತೀಕವಾಗಿದೆ.




ಚಂದ್ರಯಾನ 3ರನ್ನು ಹೊತ್ತು ಆಗಸಕ್ಕೇರುತ್ತಿರುವ ಎಲ್‌ವಿಎಂ 3 ರಾಕೆಟ್ ನ ಅದ್ಭುತವಾದ ದೃಶ್ಯ

### ಯಾನದ ಶುಭಾರಂಭ

ಸುಮಾರು 3900 ಕಿಲೋಗ್ರಾಂ ತೂಕದ ಚಂದ್ರಯಾನ-3 ನೌಕೆಯನ್ನು ಈ ಜುಲೈ 14 ರಂದು ಮಧ್ಯಾನ್ಹ 2:35 ಕ್ಕೆ ಭಾರತದ ಏಕೈಕ ಉಡಾವಣಾ ಕೇಂದ್ರವಾದ ಸತೀಶ್ ಧವನ್ ಅಂತರಿಕ್ಷ ಕೇಂದ್ರದಿಂದ ಉಡಾಯಿಸಲಾಯಿತು. ಶ್ರೀಹರಿಕೋಟಾ ದ್ವೀಪದಲ್ಲಿರುವ ಆ ಕೇಂದ್ರದಲ್ಲಿನ ಎರಡನೇ ಉಡಾವಣಾ ವೇದಿಕೆಯಿಂದ ಚಂದ್ರಯಾನ-3 ರನ್ನು ಹೊತ್ತ ದೈತ್ಯ ಎಲ್ ವಿ ಎಂ-3' ರಾಕೆಟ್ ವಾಹನ ಗುಡುಗುತ್ತಾ ಮೇಲೇರಿತು. ಆ ವಾಹನದ ಶಿರದ ಮೇಲೆ ಕುಳಿತ ಚಂದ್ರಯಾನ-3 ಉಡಾವಣೆಯಾದ ಸುಮಾರು ಹದಿನೇಳು ನಿಮಿಷಗಳಲ್ಲಿ ಭೂಮಿಯ ಸುತ್ತಲಿನ ಒಂದು ಕೋಳಿಮೊಟ್ಟೆಯಾಕಾರದ ಕಕ್ಷೆಯನ್ನು ನಿರಾತಂಕವಾಗಿ ಸೇರಿತು. ಆ ಕಕ್ಷೆ ಒಂದೆಡೆ ಭೂಮಿಯಿಂದ ಸುಮಾರು ನೂರ ಎಪ್ಪತ್ತು ಕಿಲೋಮೀಟರ್ ಎತ್ತರದಲ್ಲಿದ್ದರೆ ಮತ್ತೊಂದೆಡೆ ಮೂವತ್ತಾರು ಸಾವಿರ ಕಿಲೋಮೀಟರ್ ಎತ್ತರದಲ್ಲಿತ್ತು. ಎಲ್‌ವಿಎಂ 3 ರ ಈ ಯಶಸ್ವಿ ಉಡಾವಣೆ ಹಾಗೂ ಅದರ ಹಿಂದಿನ ಆರೂ ಉಡಾವಣೆಗಳ ಯಶಸ್ಸು, ಆ ವಾಹನವು ಭಾರತದ ಮತ್ತೊಂದು

* ವಿಜ್ಞಾನ ಲೇಖಕರು, ನಿವೃತ್ತ ಇಸ್ರೋ ವಿಜ್ಞಾನಿ. ಇಮೇಲ್: gurutitan@gmail.com



Scanned with ACE Scanner


ನಂಬಿಕಾರ್ಹ 'ಕಾರ್ಯಾಶ್ವ'ವಾಗಿ ಹೊರಹೊಮ್ಮುತ್ತಿರುವುದನ್ನು ಸೂಚಿಸುತ್ತದೆ.

ಹೀಗೆ ಚಂದ್ರಯಾನ 3 ತನ್ನ ಪ್ರಾಥಮಿಕ ಕಕ್ಷೆಯಲ್ಲಿ ಕೆಲಕಾಲ ಸುತ್ತಿದ ನಂತರ ಆ ನೌಕೆಯ ಹಿಂದಿರುವ ರಾಕೆಟ್ ಯಂತ್ರದ ನೆರವಿನೊಡನೆ ಅದರ ಕಕ್ಷೆಯ ಎತ್ತರವನ್ನು ಹಂತಹಂತವಾಗಿ ಮೇಲೇರಿಸುವ ಕಾರ್ಯ ಆರಂಭವಾಯಿತು. ಪರಿಣಾಮವಾಗಿ ಜುಲೈ 25 ರಂದು ಚಂದ್ರಯಾನ 3 ರ ಕಕ್ಷೆಯ ಅತಿದೂರದ ಬಿಂದು ಭೂಮಿಯಿಂದ ಸುಮಾರು ಒಂದು ಲಕ್ಷ ಇಪ್ಪತ್ತೆಂಟು ಸಾವಿರ ಕಿಲೋಮೀಟರ್ ಎತ್ತರವನ್ನು ತಲುಪಿತು. ಆ ಬಳಿಕ ಆಗಸ್ಟ್ 1 ಉದಯಿಸಿದಂತೆ ಚಂದ್ರಯಾನ 3 ರ ರಾಕೆಟ್ ಯಂತ್ರವನ್ನು ಮತ್ತೆ ಉರಿಸಲಾಗಿ 'ಚಂದ್ರ ವರ್ಗಾವಣಾ ಕಕ್ಷೆ'ಯನ್ನು ಸೇರಿದ ಚಂದ್ರಯಾನ 3 ನೌಕೆ ಕೆಲದಿನಗಳ ನಂತರ ಚಂದ್ರನನ್ನು ಸಂಧಿಸುವ ಸಲುವಾಗಿ ಶರವೇಗದಲ್ಲಿ ಮುಂದೆ ಸಾಗಲಾರಂಭಿಸಿತು. ಇದು ಈ ಲೇಖನವನ್ನು ಬರೆಯುವ ವೇಳೆಯಲ್ಲಿ ಚಂದ್ರಯಾನ 3 ನೌಕೆ ಕೈಗೊಂಡಿರುವ ಸಾಹಸಮಯವಾದ ಯಾತ್ರೆಯ ಇತ್ತೀಚಿನ ಪರಿಸ್ಥಿತಿಯಾಗಿದೆ.

### ನೌಕೆಯ ಸ್ವರೂಪ

ಚಂದ್ರಯಾನ–3 ನೌಕೆಯಲ್ಲಿ ನೋದನ ಕೋಶ (ಪ್ರೊಪಲ್ಷನ್ ಮಾಡ್ಯೂಲ್), ಇಳಿಯುವ ಕೋಶ (ಲ್ಯಾಂಡರ್) ಹಾಗೂ ಚಕ್ರಗಳುಳ್ಳ ಒಂದು ಪುಟ್ಟ ರೋಬಾಟ್ ವಾಹನ (ರೋವರ್)– ಈ ಮೂರು ಭಾಗಗಳಿವೆ. ಚಂದ್ರಯಾನ 3 ರ ಉದ್ದೇಶ ಚಂದ್ರನ ಮೇಲೆ ನಿಧಾನವಾಗಿ ಇಳಿದು ಅಲ್ಲಿಂದಲೇ ಚಂದ್ರನ ಅನ್ವೇಷಣೆಯನ್ನು ನಡೆಸುವುದು. ಇದರಿಂದಾಗಿ ಅದರ ಇಳಿಯುವ ಕೋಶದಲ್ಲಿ ನಾಲ್ಕು ವೈಜ್ಞಾನಿಕ ಉಪಕರಣಗಳು ಹಾಗೂ ಆ ಕೋಶದಲ್ಲಿ ಕುಳಿತು ಚಂದ್ರನ ಮೇಲ್ಮೈಯನ್ನು ತಲುಪಿ ಅಲ್ಲಿ ಚಲಿಸುತ್ತಾ ಚಂದ್ರನ ಅಧ್ಯಯನ ಮಾಡುವ ಅದರ ರೋವರ್‌ನಲ್ಲಿ ಎರಡು ವೈಜ್ಞಾನಿಕ ಉಪಕರಣಗಳಿವೆ.

ಇಳಿಯುವ ಕೋಶದ ನಾಲ್ಕು ವೈಜ್ಞಾನಿಕ ಉಪಕರಣಗಳ ಪೈಕಿ ಒಂದು ಚಂದ್ರನ ಮೇಲ್ಮೈಯ ಕಂಪನಗಳನ್ನು ದಾಖಲು ಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಇದು ಚಂದ್ರನ ಒಳರಚನೆಯನ್ನು ಅರಿಯುವಲ್ಲಿ ನೆರವಿಗೆ





**ಚಂದ್ರಯಾನ 3 ನೌಕೆ, ಎಲ್ ವಿ ಎಂ 3 ರಾಕೆಟ್ ವಾಹನದ ಮೇಲೆ ಜೋಡಿಸುವ ಮೊದಲು**

ಬರಬಲ್ಲದು. ಎರಡನೆಯ ವೈಜ್ಞಾನಿಕ ಉಪಕರಣ ಚಂದ್ರನ ಮೇಲ್ಮೈ ಯಾವ ಪ್ರಮಾಣದಲ್ಲಿ ಶಾಖವನ್ನು ತನ್ನ ಮೂಲಕ ಹರಿಯಗೊಡುತ್ತದೆ ಎಂಬುದರ ಅಧ್ಯಯನಕ್ಕೆ ನೆರವಾಗಬಲ್ಲದಾಗಿದೆ. ಇದು ಕೋಟ್ಯಾಂತರ ವರ್ಷಗಳ ಅವಧಿಯಲ್ಲಿ ಚಂದ್ರ ವಿಕಾಸಹೊಂದಿದ ಬಗೆಯನ್ನು ಅರಿಯುವಲ್ಲಿ ನೆರವಿಗೆ ಬರುತ್ತದೆ. ಇನ್ನು ಮೂರನೆಯ ಉಪಕರಣವು ಚಂದ್ರನ ಮೇಲ್ಮೈಯ ಸಮೀಪದ ಅಯಾನುಗಳ ಪರಿಸರವನ್ನು ಅರ್ಥಮಾಡಿಕೊಳ್ಳಲು ನೆರವಾಗಬಲ್ಲದು. ಕೊನೆಯದಾಗಿ ನಾಲ್ಕನೆಯ ಉಪಕರಣವು ಒಂದು ಲೇಸರ್ ಪ್ರತಿಫಲಕವಾಗಿದ್ದು ಚಂದ್ರನ ಚಲನೆ ಹಾಗೂ ಅದು ಇರುವ ದೂರವನ್ನು ನಿಖರವಾಗಿ ಅರಿಯಲು ನೆರವಾಗುತ್ತದೆ.

ಅದೇ ರೀತಿ ಆರು ಚಕ್ರಗಳಿರುವ ರೋವರ್ ವಾಹನದಲ್ಲಿ ಎರಡು ವೈಜ್ಞಾನಿಕ ಉಪಕರಣಗಳನ್ನು ಅಳವಡಿಸಲಾಗಿದೆ. ಆ ಪೈಕಿ ಒಂದು ತಾನು ಅಧ್ಯಯನ ಮಾಡುವ ಚಂದ್ರನ ಸಣ್ಣ ಪ್ರಮಾಣದ ಕಲ್ಲುಮಣ್ಣುಗಳನ್ನು ಲೇಸರ್ ನ ನೆರವಿನೊಡನೆ 'ತುಂಡರಿಸಿ' ನಂತರ ಅವುಗಳಲ್ಲಿನ ಖನಿಜಗಳ ಹಾಗೂ ಧಾತುಗಳ (ಎಲಿಮೆಂಟ್ಸ್) ರೋಹಿತವನ್ನು (ಸ್ಪೆಕ್ಟ್ರಂ) ದಾಖಲುಮಾಡಿಕೊಂಡು ಆ ಮೂಲಕ

ಹರಿಸುವ ಆ ಉಪಕರಣ ಭೂಮಿಯಿಂದ ಬಂದ ಬೆಳಕನ್ನು ವಿಶ್ಲೇಷಣೆಯಿಂದ ಅಧ್ಯಯನ ಮಾಡುತ್ತದೆ. ಆ ಮೂಲಕ ಈಗ ನಮಗೆ ತಿಳಿದಿರುವಂತೆ 'ಬಹುಕೋಟಿ ಜೀವಿಗಳ ತಾಣವಾದ' ಭೂಮಿ ಇಲ್ಲಿ ಜೀವಿಗಳಿವೆ ಎಂಬ ಕುರುಹನ್ನು ಯಾವ ರೀತಿ ಪ್ರದರ್ಶಿಸುತ್ತದೆ ಎಂಬುದನ್ನು ಪರಿಶೀಲಿಸುತ್ತದೆ.

ಇಂದು ನಮ್ಮ ಸೌರವ್ಯೂಹದಾಚೆ ಇತರ ನಕ್ಷತ್ರಗಳನ್ನು ಸುತ್ತುತ್ತಿರುವ ಗ್ರಹಗಳನ್ನು ಐದು ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿ ಪರೋಕ್ಷವಾಗಿ ಗುರುತಿಸಲಾಗಿದೆ. ಅವುಗಳಲ್ಲಿ ಜೀವಿಗಳಿವೆಯೋ ಎಂಬುದನ್ನು ದೂರದ ಆ ಗ್ರಹಗಳಿಂದ ಹೊರಬರುವ ಬೆಳಕನ್ನು ಅಧ್ಯಯನ ಮಾಡುವ ಮೂಲಕ ಪರಿಶೀಲಿಸುವಲ್ಲಿ ಚಂದ್ರಯಾನ 3 ರ 'ನೋದನ ಕೋಶ' ದ ಉಪಕರಣ ನೀಡುವ ಮಾಹಿತಿ ನೆರವಿಗೆ ಬರುತ್ತದೆ ಎಂದು ಆಶಿಸಲಾಗಿದೆ.




ಚಿತ್ರ ಕೃಪೆ : ಇಸ್ರೋ

ಚಂದ್ರಯಾನ 3 – ರೋವರ್

ಅವುಗಳ ಸಂಯೋಜನೆಯನ್ನುಗುರುತಿಸಲು ನೆರವಾಗುತ್ತದೆ. ಮತ್ತೊಂದು ಉಪಕರಣವು ಆಲ್ಫಾ ಕಣ ಹಾಗೂ ಕ್ಷ-ಕಿರಣಗಳ ಸುರಿಮಳೆಯನ್ನು ಸಣ್ಣ ಪ್ರಮಾಣದ ಚಂದ್ರನ ಕಲ್ಲುಮಣ್ಣುಗಳ ಮೇಲೆ ಸುರಿಸಿ, ನಂತರ ಅದರಿಂದ ಜನಿತವಾದ ವಸ್ತುಗಳ ರೋಹಿತವನ್ನು ಅಭ್ಯಸಿಸಿ ಆ ಮೂಲಕ ಚಂದ್ರನ ಮೇಲಿರುವ ಧಾತುಗಳನ್ನು ಗುರುತಿಸಲು ನೆರವಾಗುತ್ತದೆ.

ಭೂಮಿಯ ಮೇಲಿಂದ ಭೂಕಕ್ಷೆಗೆ ಉಡಾಯಿಸಿದ ಎಲ್ ವಿ ಎಂ ರಾಕೆಟ್ಟಿನಿಂದ ಚಂದ್ರಯಾನ 3 ಬೇರ್ಪಟ್ಟ ನಂತರ ಆ ನೌಕೆಯ ಇಳಿಯುವ ಕೋಶವನ್ನು ಹಾಗೂ ಅದರೊಳಗೆ ಕುಳಿತ ರೋವರ್‌ರ್‌ಅನ್ನು ಚಂದ್ರನಲ್ಲಿಗೆ ಕೊಂಡೊಯ್ಯುವ ಜವಾಬ್ದಾರಿಯನ್ನು ನೌಕೆಯ 'ನೋದನಕೋಶ'ಕ್ಕೆ ವಹಿಸಲಾಗಿತ್ತು. ಇದರ ಹಿಂಭಾಗದಲ್ಲಿ ದ್ರವರೂಪದಲ್ಲಿರುವ ನೋದನಕಾರಿಗಳನ್ನು ( ಲಿಕ್ವಿಡ್ ಪ್ರೊಪೆಲೆಂಟ್ಸ್ ಅಂದರೆ ದ್ರವರೂಪದಲ್ಲಿರುವ ಇಂಧನ ದಹನಾನುಕೂಲಿಗಳ ಜೋಡಿ) ಉರಿಸುವ ಒಂದು ರಾಕೆಟ್ ಯಂತ್ರವಿದೆ. ಜುಲೈ 15 ರಿಂದ 25 ರ ನಡುವಿನ ಅವಧಿಯಲ್ಲಿ ಇಡೀ ಚಂದ್ರಯಾನ 3 ರ ಕಕ್ಷೆಯ ಎತ್ತರವನ್ನು ಹೆಚ್ಚಿಸಲು ಹಾಗೂ ಆಗಸ್ಟ್ 1 ರಂದು ನೌಕೆಯನ್ನು 'ಚಂದ್ರ ವರ್ಗಾವಣಾ ಕಕ್ಷೆಗೆ' ಸೇರಿಸಲು ಸಾಧ್ಯವಾದದ್ದು ಆ ಮುಖ್ಯ ರಾಕೆಟ್ ಯಂತ್ರವನ್ನು ಉರಿಸುವ ಮೂಲಕವೇ. ಇನ್ನು ಮುಂದೆ ಆ ನೌಕೆ ಚಂದ್ರನನ್ನು ಸುತ್ತುವಂತೆ ಮಾಡುವುದೂ ಅದೇ ರಾಕೆಟ್ ಯಂತ್ರವೇ.


ಚಂದ್ರಯಾನ 3 ರ 'ನೋದನ ಕೋಶ'ದ ಬಗ್ಗೆ ಇಷ್ಟು ಮಾಹಿತಿಯನ್ನು ಗ್ರಹಿಸಿದಾಗ 'ಓ ಇದು ಆ ನೌಕೆಯ ಇಳಿಯುವ ಕೋಶ-ರೋವರ್ ಜೋಡಿಯನ್ನು ಚಂದ್ರನ ಸುತ್ತಲಿನ ಕಕ್ಷೆಗೆ ಕೊಂಡೊಯ್ಯುವ ಸಾಧನವಷ್ಟೆ' ಎಂದು ಉದ್ಧರಿಸುವಂತಾಗಬಹುದು. ಆದರೆ ಆ ಕೋಶದಲ್ಲೂ ಒಂದು ವೈಜ್ಞಾನಿಕ ಉಪಕರಣವಿದೆ. ನೋದನ ಕೋಶ ಚಂದ್ರನನ್ನು ಸುತ್ತುವಾಗ ಭೂಮಿಯತ್ತ (ಚಂದ್ರನತ್ತ ಅಲ್ಲ!) ತನ್ನ ಗಮನವನ್ನು

## ಸಾಮ್ಯತೆ

ಚಂದ್ರಯಾನ 3 ನೌಕೆಯನ್ನು ಕಂಡಾಗ ಬಹುಮಟ್ಟಿಗೆ ಅದಕ್ಕೆ ಮೊದಲಿನ ಚಂದ್ರಯಾನ 2 ನೌಕೆಯನ್ನು ಕಂಡಂತೆಯೇ ಆಗುತ್ತದೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಚಂದ್ರಯಾನ 2 ರಿಂದ ಏನು ಸಾಧ್ಯವಾಗಲಿಲ್ಲವೋ ಆ ಮಹತ್ತರವಾದ ಕೆಲಸವನ್ನು, ಅಂದರೆ ಚಂದ್ರನ ಮೇಲೆ ನಿಧಾನವಾಗಿ ಇಳಿಯುವ ಹಾಗೂ ಪುಟ್ಟ ರೋಬಾಟ್ ವಾಹನವೊಂದು ತಾನಿಳಿದ ಪ್ರದೇಶದಲ್ಲಿ ಓಡಾಡುತ್ತಾ ಅನ್ವೇಷಣೆ ನಡೆಸುವುದನ್ನು ಮತ್ತೆ ಪ್ರಯತ್ನಿಸುವ ದೃಷ್ಟಿಯಿಂದ ಚಂದ್ರಯಾನ 3 ನ್ನು ಹಾರಿಬಿಡಲಾಗಿದೆ. ಇಂದಿನ ಚಂದ್ರಯಾನ 3 ರಂತೆಯೇ ಹಿಂದಿನ ಚಂದ್ರಯಾನ 2 ರಲ್ಲೂ ಮೂರು ಭಾಗಗಳಿದ್ದವು. ಅದರ ಇಳಿಯುವ ಕೋಶದ ಹೆಸರು 'ವಿಕ್ರಂ' ಎಂದಿದ್ದರೆ ಆ ನೌಕೆಯ 'ರೋವರ್' ನ ಹೆಸರು ಪ್ರಗ್ಯಾನ್ ಎಂಬುದಾಗಿತ್ತು. ವಿಕ್ರಂ ಎಂಬ ಹೆಸರನ್ನು ಭಾರತೀಯ ಅಂತರಿಕ್ಷ ಕಾರ್ಯಕ್ರಮದ ಪಿತಾಮಹ ವಿಕ್ರಂ ಸಾರಾಭಾಯಿಯವರ ಗೌರವಾರ್ಥ ಇಡಲಾಗಿತ್ತು. ಚಂದ್ರಯಾನ 3 ರ ಇಳಿಯುವ ಕೋಶ ಹಾಗೂ ರೋವರ್‌ಗಳಿಗೂ ಅದೇ ಹೆಸರುಗಳನ್ನೇ ಉಳಿಸಿಕೊಳ್ಳಲಾಗಿದೆ.



Scanned with ACE Scanner




ಚಂದ್ರಯಾನ 2 ರ ಕಕ್ಷಾ ನೌಕೆ ಚಂದ್ರಕಕ್ಷೆಯಿಂದ ತೆಗೆದ ಚಂದ್ರನ ಕುಳಿಯೊಂದರ ಸ್ಫುಟವಾದ ಚಿತ್ರ

ಚಂದ್ರಯಾನ 2 ನೌಕೆಯ ಪ್ರಗ್ಯಾನ್ ರೋವರ್ ಅನ್ನು ತನ್ನೊಳಗೆ ಉಳ್ಳ 'ವಿಕ್ರಂ ಇಳಿಯುವ ಕೋಶ'ವನ್ನು ಭೂಕಕ್ಷೆಯಿಂದ ಚಂದ್ರಕಕ್ಷೆಗೆ ಕೊಂಡೊಯ್ಯುವ ಜವಾಬ್ದಾರಿಯನ್ನು ವಹಿಸಿಕೊಂಡದ್ದು ಆ ನೌಕೆಯ ಕಕ್ಷಾ ಕೋಶ (ಆರ್ಬಿಟರ್). ಇಂದಿನ ಚಂದ್ರಯಾನ 3 ರಲ್ಲಿ ಆ ಪ್ರಮುಖವಾದ ಕೆಲಸವನ್ನು ಅದರ 'ನೋದನ ಕೋಶ' ಮಾಡುತ್ತಿದೆಯಲ್ಲವೇ. ಆದರೆ ಚಂದ್ರಯಾನ 2 ರ 'ಕಕ್ಷಾ ಕೋಶ'ದಲ್ಲಿ ಎಂಟು ವೈವಿಧ್ಯಮಯವಾದ ವೈಜ್ಞಾನಿಕ ಉಪಕರಣಗಳನ್ನು ಅಳವಡಿಸಲಾಗಿತ್ತು. ಕಳೆದ ನಾಲ್ಕು ವರ್ಷಗಳಲ್ಲಿ ಆ ಉಪಕರಣಗಳು ಚಂದ್ರನ ಸುತ್ತಲಿನ ಕಕ್ಷೆಯಿಂದ ಆ ಆಕಾಶಕಾಯದ ಸ್ಫುಟವಾದ ಚಿತ್ರಗಳೂ ಸೇರಿದಂತೆ ಅಮೂಲ್ಯವಾದ ವೈಜ್ಞಾನಿಕ ಮಾಹಿತಿಯನ್ನು ವಿಪುಲವಾಗಿ ಒದಗಿಸಿವೆ. ಅಲ್ಲಿಗೆ ಚಂದ್ರಯಾನ 2 ರ ಅನೇಕ ಉದ್ದೇಶಗಳನ್ನು ಸಾಧಿಸಲಾಗಿದೆ ಎಂದಾಯ್ತು. ಆದರೆ ಇದರ ಬಗ್ಗೆ ಇಂದು ಹೆಚ್ಚಿನ ಅರಿವಿಲ್ಲದಿರುವುದು ವಿಷಾದಕರ.

ಚಂದ್ರನನ್ನು ಅನ್ವೇಷಣೆ ಮಾಡುವ ಕಾರ್ಯವನ್ನು ಮುಂದುವರೆಸುವ ಸಲುವಾಗಿ ಭಾರತ ಹಾರಿಬಿಟ್ಟಿರುವ ಚಂದ್ರಯಾನ 3 ನೌಕೆ ಭೂಕಕ್ಷೆಯಿಂದ ಪಾರಾಗಿ ಚಂದ್ರನತ್ತ ತೆರಳುತ್ತಿರುವ ಈ ಸನ್ನಿವೇಶದಲ್ಲಿ ನಾವು ಚಂದ್ರಯಾನ ಕಾರ್ಯಕ್ರಮದ ಜನನ ಹಾಗೂ ಮುನ್ನಡೆಗಳನ್ನು ನೆನಪಿಸಿಕೊಳ್ಳುವುದು ಸೂಕ್ತ. ಅದಕ್ಕೂ ಮೊದಲು ಚಂದ್ರನೆಂಬ ಆಕಾಶಕಾಯವನ್ನು, ಚರಿತ್ರೆಯಲ್ಲಿ ಅದರ ಪ್ರಾಮುಖ್ಯವನ್ನು ಹಾಗೂ ಅಂತರಿಕ್ಷಯುಗದಲ್ಲಿ ಅದರ ಅನ್ವೇಷಣೆ ಸಾಗಿದ ಹಾದಿಯನ್ನು ಪರಿಚಯಮಾಡಿಕೊಳ್ಳುವುದು ಅತ್ಯಗತ್ಯ.

## ಚಂದ್ರನ ಪ್ರಾಮುಖ್ಯತೆ

ಭೂಮಿಯ ಏಕೈಕ ನಿಸರ್ಗದತ್ತ ಉಪಗ್ರಹವಾದ ಚಂದ್ರ ಭೂಮಿಗೆ ಅತಿಹತ್ತಿರವಿರುವ ಆಕಾಶಕಾಯವೂ ಆಗಿದೆ. ಖಗೋಳಶಾಸ್ತ್ರ ಕ್ಷೇತ್ರದಲ್ಲಿ ಆಕಾಶಕಾಯಗಳ ನಡುವೆ ಸಾಮಾನ್ಯವಾಗಿ ಕಂಡುಬರುವ ಅಂತರದ ದೃಷ್ಟಿಯಿಂದ ಚಂದ್ರ ಭೂಮಿಗೆ ಸಾಕಷ್ಟು ಹತ್ತಿರದಲ್ಲಿದೆ ಎನ್ನಬಹುದು. ಈ ಎರಡು ಆಕಾಶಕಾಯಗಳ ನಡುವೆ ಇರುವ ಸರಾಸರಿ ಅಂತರ ಸುಮಾರು ಮೂರು ಲಕ್ಷ ಎಂಭತ್ತನಾಲ್ಕು ಸಾವಿರ ಕಿಲೋಮೀಟರ್ ಗಳಷ್ಟಿದೆ.

ಗಾತ್ರದ ದೃಷ್ಟಿಯಿಂದ ಚಂದ್ರ ಭೂಮಿಯ ಕಾಲುಭಾಗದಷ್ಟಿದ್ದಾನೆ. ಆದರೆ ಚಂದ್ರನಲ್ಲಿರುವ ವಸ್ತುಗಳ ಪ್ರಮಾಣ (ಮಾಸ್) ಭೂಮಿಯದರ 1/81 ಭಾಗದಷ್ಟಿದೆ. ಹೀಗಾಗಿ ಚಂದ್ರನ ಮೇಲಿನ ಗುರುತ್ವ ಕಡಿಮೆಯಿದ್ದು ಇಲ್ಲಿ 100 ಕಿಲೋಗ್ರಾಂ ತೂಗುವ ವ್ಯಕ್ತಿ ಚಂದ್ರನ ಮೇಲೆ 16 ಕಿಲೋಗ್ರಾಂ ತೂಗುತ್ತಾನೆ, ಅಷ್ಟೆ!

ಸುಡುವ ರಣ ಬಿಸಿಲು ಹಾಗೂ ಮೈಮರಗಟ್ಟಿಸುವ ಚಳಿ ಇರುವ ಚಂದ್ರಲೋಕದಲ್ಲಿ ನಾವು ಇಲ್ಲಿನಂತೆ ವಾಸಮಾಡಲು ಸಾಧ್ಯವಿಲ್ಲ. ಉಸಿರಾಡಲು ಗಾಳಿಯೇ ಇಲ್ಲದ ಆ ಲೋಕ ಸೂರ್ಯ ಹಾಗೂ ವಿಶ್ವದ ಇತರ ಭಾಗಗಳಿಂದ ಬರುವ ಮಾರಕ ಕಣಗಳಿಗೆ ಹಾಗೂ ವಿಕಿರಣಗಳಿಗೆ ಮೈಒಡ್ಡುವುದರಿಂದ ಇದು ಭೂಮಿಯಂತೆ ವಾಸಯೋಗ್ಯವಲ್ಲ.

ಮಾನವನಿಗೆ ಚಂದ್ರ ಅನಾದಿಕಾಲದಿಂದಲೂ ರಾತ್ರಿಯ ಆಗಸದಲ್ಲಿನ ಚಿರಪರಿಚಿತವಾದ ಆಕಾಶಕಾಯವಾಗಿದೆ. ಚಂದ್ರನ ಕಲೆಗಳನ್ನು (ಫೇಸಸ್), ಅಂದರೆ ಚಂದ್ರನ ಆಕಾರ ದಿನಕಳೆದಂತೆ ಬದಲಾಗುವುದನ್ನು ಅವಲಂಬಿಸಿ ಕಾಲಗಣನೆಯನ್ನು ಮಾಡುವುದು ಬಹುಹಿಂದಿನಿಂದಲೂ ಕಂಡುಬಂದಿದೆ. ಪಂಚಾಂಗಗಳ (ಕ್ಯಾಲೆಂಡರ್) ಕ್ಷೇತ್ರದಲ್ಲಿ ಕಂಡುಬರುವ 'ಚಾಂದ್ರಮಾನ' ಎಂಬ ಪದ ಚಂದ್ರನನ್ನು ಮಾನದಂಡವಾಗಿಟ್ಟುಕೊಂಡು ಲೆಕ್ಕಹಾಕಲಾದ ಪಂಚಾಂಗ ಎಂಬುದನ್ನು ಸೂಚಿಸುತ್ತದೆ.

ಅದೇ ರೀತಿ ರಾತ್ರಿಯ ವೇಳೆಯಲ್ಲಿನ ಚಂದ್ರನ ಬೆಳದಿಂಗಳು ಪ್ರಾಚೀನ ಮಾನವರು ಸೂರ್ಯನ ಅನುಪಸ್ಥಿತಿಯಲ್ಲೂ ಪಯಣಿಸುವುದನ್ನು ಸಾಧ್ಯಮಾಡಿತ್ತು. ಕಾಳಿದಾಸ, ಶೇಕ್ಸ್‌ಪಿಯರ್, ಈ ಇಬ್ಬರು ಖ್ಯಾತ ಕವಿಗಳೂ ಸೇರಿದಂತೆ ಚಂದ್ರನ ಕಾಂತಿಯಿಂದ ಜನಿತವಾದ ಬೆಳದಿಂಗಳಿನಿಂದ ಪ್ರಭಾವಿತನಾಗದ ಕವಿಯೇ ವಿರಳ ಎಂದು ಹೇಳಬಹುದು. ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳ ಚಲನಚಿತ್ರಗಳಲ್ಲಿ ನಾಯಕಿಯರ ಸೌಂದರ್ಯವನ್ನು ಚಂದ್ರನ ಕಾಂತಿಗೆ ಹೋಲಿಸುವ ಹಾಡುಗಳು ಯಥೇಚ್ಛವಾಗಿ ಕಂಡುಬರುತ್ತವೆ.

ಅಂತೆಯೇ ಹಡಗುಗಳ ಯಾನ ನಿರ್ವಹಣೆಯಲ್ಲಿ (ನ್ಯಾವಿಗೇಷನ್), ಅಂದರೆ ಅವುಗಳ ಗುರಿಯತ್ತ ಆ ವಾಹನಗಳನ್ನು ವಿಶಾಲವಾದ ಸಾಗರ ಸಮುದ್ರ ಪ್ರದೇಶಗಳಲ್ಲಿ ದಕ್ಷವಾಗಿ ಹಾಗೂ ಸುರಕ್ಷಿತವಾಗಿ ಚಾಲನೆಮಾಡುವ ಕಾರ್ಯಕ್ಕೆ ಚಂದ್ರನನ್ನು ಬಳಸಿಕೊಳ್ಳುವುದೂ ಬಹುಹಿಂದಿನಿಂದಲೂ ವಾಡಿಕೆಯಲ್ಲಿರುವ ಮಾರ್ಗವಾಗಿದೆ.




Scanned with ACE Scanner

ಇದು ಹಿಂದಿನ ಕಾಲದ ಮಾತಾಯಿತು. ಆದರೆ ಇಂದಿನ ವಿಜ್ಞಾನಿಗಳಿಗೆ ಹಾಗೂ ಇತರ ಲೋಕಗಳ ಅನ್ವೇಷಣೆಗಾಗಿ ರೋಬಾಟ್‌ಗಳ ಬದಲು ಮಾನವರನ್ನೇ ಅವುಗಳಿಗೆ ಕಳುಹಿಸುವ ಆಸಕ್ತಿಯುಳ್ಳ ಮತ್ತು ಅಂತರಿಕ್ಷ ಚಟುವಟಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸುವ ಆಶಯವುಳ್ಳ ಉತ್ಸಾಹಿಗಳಿಗೆ ಚಂದ್ರ ಇಂದು ಪ್ರಿಯವಾಗಿದ್ದಾನೆ. ಚಂದ್ರನನ್ನು ಕೂಲಂಕಷವಾಗಿ ಅರ್ಥಮಾಡಿಕೊಂಡರೆ ಆ ಮೂಲಕ ನಮ್ಮ ಭೂಮಿಯ ಇತಿಹಾಸವನ್ನು, ಅಷ್ಟೇಕೆ ಸೌರವ್ಯೂಹದ ವಿಕಾಸವನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯ ಎಂಬ ನಂಬಿಕೆ ವಿಜ್ಞಾನಿಗಳ ಚಂದ್ರನನ್ನು ಕುರಿತ ಆಸಕ್ತಿಗೆ ಕಾರಣವಾಗಿದೆ. ಭೂಮಿಯ 'ಬಾಲ್ಯ'ದಲ್ಲಿ ಅದಕ್ಕೆ ಮಂಗಳಗ್ರಹದಷ್ಟು ದೊಡ್ಡದಾದ ಆಕಾಶಕಾಯವೊಂದು ಅನನ್ಯವಾದ ರೀತಿಯಲ್ಲಿ ಬಂದು ಅಪ್ಪಳಿಸಿದುದರಿಂದ ಚಂದ್ರನ ಜನನವಾಯಿತು ಎಂಬ ವಾದಕ್ಕೆ ವೈಜ್ಞಾನಿಕ ಲೋಕದಲ್ಲಿಂದು ಮನ್ನಣೆಯಿದೆ.

ವಿಜ್ಞಾನಿಗಳ ಪ್ರಕಾರ ಈ ನಮ್ಮ ಆಧುನಿಕ ಜಗತ್ತಿನ ಕೈಗಾರಿಕೆಗಳಿಗೆ ಬೇಕಾದ ಅನೇಕ ಸಂಪನ್ಮೂಲಗಳು ಚಂದ್ರನ ಮೇಲೆ ಲಭ್ಯವಿವೆ. ಆ ಪೈಕಿ ಕ್ಯಾಲ್ಸಿಯಂ, ಮೆಗ್ನೀಷಿಯಂ, ಅಲ್ಯೂಮಿನಿಯಂ, ಟೈಟೇನಿಯಂ, ಕಬ್ಬಿಣ, ಸಿಲಿಕಾನ್, ಮುಂತಾದ ಧಾತುಗಳನ್ನು ಉಳ್ಳ ಖನಿಜಗಳು ಅಲ್ಲಿವೆ. ಇವುಗಳೊಂದಿಗೇ ಚಂದ್ರನ ಶಿಲೆಗಳಲ್ಲಿ ಬಂಧನಕ್ಕೊಳಗಾಗಿರುವ ಆಕ್ಸಿಜನ್ ಅನ್ನು ಬಿಡುಗಡೆಮಾಡಿ ಅದನ್ನು ಚಂದ್ರನ ಮಣ್ಣಿನಲ್ಲಿರುವ ಹೈಡ್ರೋಜನ್ ನ ಜೊತೆ ಸಂಯೋಜಿಸುವ ಮೂಲಕ ನೀರನ್ನು ಉತ್ಪಾದಿಸಬಹುದು. ಇಲ್ಲವೇ ಆಕ್ಸಿಜನ್ ಅನ್ನು ಉಸಿರಾಡಲು ಬಳಸಿಕೊಂಡು ಹೈಡ್ರೊಜನ್ ಅನ್ನು ರಾಕೆಟ್ ಇಂಧನವಾಗಿ ಬಳಸಿಕೊಳ್ಳಬಹುದು.

ಇಷ್ಟೇ ಅಲ್ಲದೇ ಚಂದ್ರನ ಮೇಲೆ ನೀರು ಸಹ ಇದೆ. ಆದರೆ ಅದು ನದಿ, ಸರೋವರ, ಸಾಗರ, ಸಮುದ್ರಗಳಲ್ಲಿರುವಂತೆ ದೊಡ್ಡ ಪ್ರಮಾಣದಲ್ಲಿಲ್ಲ. ಅದಕ್ಕೆ ಬದಲಾಗಿ ಚಂದ್ರನ ಮಣ್ಣಿನ ಮೇಲ್ಪದರದಲ್ಲಿ ನೀರಿನ ಅಣುಗಳು ಬೆರತುಕೊಂಡಿವೆ. ಇದನ್ನು ಮೊದಲ ಬಾರಿಗೆ ಖಚಿತವಾಗಿ ಗುರುತಿಸಿದ್ದು ನಮ್ಮ ಚಂದ್ರಯಾನ-1 ನೌಕೆಯೇ. ಇದರ ಜೊತೆಗೇ ಸೂರ್ಯನ ಬೆಳಕಿನಿಂದ ನಿರಂತರವಾಗಿ ಮರೆಯಾಗಿರುವ ಚಂದ್ರನ




**ಚಂದ್ರಯಾನ 3 ರ ವಿಕ್ರಂ ಇಳಿಯುವ ಕೋಶದಿಂದ ಹೊರಬರುತ್ತಿರುವ ಪ್ರಗ್ಯಾನ್ ರೋವರ್**

ಧ್ರುವ ಪ್ರದೇಶಗಳಲ್ಲಿನ ಆಳವಾದ ಹೊಂಡಗಳ ತಳದಲ್ಲಿ ಹಿಮವನ್ನು ಗುರುತಿಸಲಾಗಿದೆ. ಮಾನವನ ಚಟುವಟಿಕೆಗಳಿಗೆ ನೀರು ಅಗತ್ಯವಾಗಿರುವುದರಿಂದ ಇದು ಚಂದ್ರನ ಬಗ್ಗೆ ಮಾನವ ಮತ್ತಷ್ಟು ಆಸಕ್ತಿ ತಳೆಯಲು ಕಾರಣವಾಗಿದೆ.

ಚಂದ್ರನಿಗೆ ಸಂಬಂಧಿಸಿದ ಕೆಲವು ವಿಷಯಗಳಾದ ಅದರ ಗಾತ್ರ, ಭೂಮಿಯಿಂದ ಅದು ಇರುವ ದೂರ, ಮುಂತಾದ ವಿಷಯಗಳ ಬಗ್ಗೆ ಅರಿವು ಸುಮಾರು ಎರಡು ಸಾವಿರ ವರ್ಷಗಳ ಹಿಂದೆಯೇ ಇದ್ದಿತಾದರೂ ಚಂದ್ರಲೋಕದ ವೈಶಿಷ್ಟ್ಯಗಳ ಬಗ್ಗೆ ಮಾನವನಿಗೆ ಸರಿಯಾದ ಅರಿವಿರಲಿಲ್ಲ. ಚಂದ್ರನೂ ಸೇರಿದಂತೆ ಆಗಸದಲ್ಲಿನ ಆಕಾಶಕಾಯಗಳು ಭೂಮಿಯ ಮೇಲಿನವಂತೆ ಇರದೇ 'ದೋಷರಹಿತ'ವಾದುವು ಎಂಬ ನಂಬಿಕೆ ಮಧ್ಯಯುಗದ ಯೂರೋಪಿನಲ್ಲಿ ಬೇರೂರಿತ್ತು. ಆದರೆ ನಾನೂರು ವರ್ಷಗಳ ಹಿಂದೆ ಗೆಲಿಲಿಯೋ ತನ್ನ ಪುಟ್ಟ ದೂರದರ್ಶಕದ (ಟೆಲಿಸ್ಕೋಪ್) ಮೂಲಕ ಚಂದ್ರನ ಮೇಲಿನ ಬೆಟ್ಟಗುಡ್ಡಗಳು ಹಾಗೂ ತಗ್ಗು ಪ್ರದೇಶಗಳನ್ನು ಚಂದ್ರನ ಮೇಲೂ ಕಂಡಾಗ ಆ ನಂಬಿಕೆ ಬುಡಮೇಲಾಗುವ ಪರಿಸ್ಥಿತಿ ಉಂಟಾಯಿತು. ಸೂರ್ಯನನ್ನು ಸೌರವ್ಯೂಹದ ಕೇಂದ್ರವಾಗಿ ಪರಿಗಣಿಸಿದ ಕೋಪರ್ನಿಕಸ್ ನ ಸಿದ್ಧಾಂತಕ್ಕೆ ಬೆಂಬಲ ದೊರೆತು ವಿಜ್ಞಾನ ವಿಜೃಂಭಿಸಿತು.

ಅಲ್ಲಿಂದ ದೂರದರ್ಶಕಗಳು ಚಂದ್ರನಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಮಾನವ ಅರಿಯುವಲ್ಲಿ ಮುಖ್ಯವಾದ ಪಾತ್ರವಹಿಸಿದವು. ಆದರೂ ಆ ಸಂಬಂಧದಲ್ಲಿನ ಕೆಲವು ಬಲವಾದ ಸಂದೇಹಗಳು ಪರಿಹಾರವಾದದ್ದು ತಾನು ನಿರ್ಮಿಸಿದ ರೋಬಾಟ್ ನೌಕೆಗಳನ್ನು ಚಂದ್ರನಲ್ಲಿಗೆ ಕಳುಹಿಸುವ ಹಾಗೂ ನಂತರ ಸ್ವತಃ ತಾನೇ ಚಂದ್ರನಲ್ಲಿಗೆ ತೆರಳುವ ಸಾಮರ್ಥ್ಯ ಮಾನವನಿಗೆ 1957 ರ ನಂತರ ದೊರೆತಾಗಲೇ.

### ರಾಕೆಟ್ ಯುಗದಲ್ಲಿ ಚಂದ್ರನ ಅನ್ವೇಷಣೆ

1957 ರ ಅಕ್ಟೋಬರ್ 4 ರಂದು ಹಿಂದಿನ ಸೋವಿಯತ್ ಒಕ್ಕೂಟ ನಿರ್ಮಿಸಿದ ಒಂದು ಬೃಹತ್ ರಾಕೆಟ್ ವಾಹನ ಸ್ಪುಟ್ನಿಕ್ 1 ಎಂಬ 84 ಕಿಲೋಗ್ರಾಂ ತೂಕದ ಟೊಳ್ಳಾದ ಲೋಹದ ಗೋಲವೊಂದನ್ನು ಭೂಮಿಯ ಸುತ್ತಲಿನ ಕಕ್ಷೆಯೊಂದಕ್ಕೆ ಯಶಸ್ವಿಯಾಗಿ ಸೇರಿಸಿದಾಗ ಅಂತರಿಕ್ಷಯುಗ ಆರಂಭವಾಯಿತು. ಅಷ್ಟೇ ಅಲ್ಲದೇ ನಂತರದ ಎರಡು ವರ್ಷಗಳಲ್ಲೇ ಸೋವಿಯತ್ ರಷ್ಯಾ ಚಂದ್ರನ ಮೇಲೆ ತನ್ನ ರೋಬಾಟ್ ನೌಕೆಯೊಂದು ಅಪ್ಪಳಿಸುವಂತೆ ಮಾಡುವಲ್ಲಿ ಹಾಗೂ ಭೂಮಿಗೆ ಕಾಣದ ಚಂದ್ರನ 'ಹಿಂಭಾಗ'ದ ಚಿತ್ರವನ್ನು ತನ್ನ ನೌಕೆಯೊಂದು ತೆಗೆಯುವಂತೆ ಮಾಡುವಲ್ಲಿ ಯಶಸ್ವಿಯಾಯಿತು. 'ಶೀತಲ ಸಮರ'ಯುಗದಲ್ಲಿ ನಡೆದ ಈ ವಿದ್ಯಮಾನದಿಂದ ನಂತರ ಅಮೇರಿಕಾ ಹಾಗೂ ಸೋವಿಯತ್ ರಷ್ಯಾಗಳ ನಡುವೆ ಒಂದು 'ಚಂದ್ರ ಸ್ಪರ್ಧೆ' ಏರ್ಪಟ್ಟಿತು. ಮೊದಲಿಗೆ ಸೋವಿಯತ್ ರಷ್ಯಾ 1966 ರಲ್ಲಿ ಚಂದ್ರನ ಮೇಲೆ ತನ್ನ ರೋಬಾಟ್



Scanned with ACE Scanner

ನೌಕೆಯೊಂದನ್ನು ನಿಧಾನವಾಗಿ ಇಳಿಸುವಲ್ಲಿ ಯಶಸ್ವಿಯೂ ಆಯಿತು. ಆ ನಂತರ ಅಮೇರಿಕಾ ತನ್ನ ಪ್ರಜೆಯಾದ ನೀಲ್ ಆರ್ಮ್ ಸ್ಟ್ರಾಂಗ್ 'ಚಂದ್ರನ ಮೇಲಿನ ಮೊದಲ ಮಾನವ' ಎಂಬ ಬಿರುದನ್ನು ಗಳಿಸುವುದನ್ನು ಸಾಧ್ಯಮಾಡಿತು. 1969–1972 ರ ನಡುವಿನ ಅವಧಿಯಲ್ಲಿ ಒಟ್ಟು 12 ಜನ ಅಮೇರಿಕಾದ ಗಗನಯಾತ್ರಿಗಳು ತಮ್ಮ ಅಪಾಲೋ ನೌಕೆಗಳಲ್ಲಿ ಚಂದ್ರನ ಮೇಲಿಳಿದು ಬಂದರು. ಸೋವಿಯತ್ ರಷ್ಯಾ ಕೇವಲ ರೋಬಾಟ್ ನೌಕೆಗಳ ನೆರವಿನೊಡನೆ ಅಲ್ಪ ಪ್ರಮಾಣದಲ್ಲಿ ಚಂದ್ರನ ಕಲ್ಲುಮಣ್ಣುಗಳನ್ನು ಭೂಮಿಗೆ ತರಿಸಿಕೊಳ್ಳುವಲ್ಲಿ ಹಾಗೂ ಚಂದ್ರನ ಮೇಲ್ಮೈಯನ್ನು ರೋಬಾಟ್ ವಾಹನವೊಂದರ ನೆರವಿನೊಡನೆ ಅನ್ವೇಷಿಸುವಲ್ಲಿ ತೃಪ್ತಿಪಟ್ಟುಕೊಂಡಿತು. 1976 ರಲ್ಲಿ ಚಂದ್ರನ ಅನ್ವೇಷಣೆಯ ಮೊದಲ ಹಂತ ಮುಕ್ತಾಯವಾಗಿ ಆ ಸಾಹಸಕಾರ್ಯ ಜನಮಾನಸದಿಂದ ನಿಧಾನವಾಗಿ ಮಾಸುತ್ತಾ ಬಂದಿತು.

ಆದರೆ ಆ ಮರೆವು ಕೇವಲ ತಾತ್ಕಾಲಿಕವಾದುದಾಗಿತ್ತು. ಚಂದ್ರನ ಅನ್ವೇಷಣೆಯ ಎರಡನೆಯ ಹಂತ ಜಪಾನಿನ ರೋಬಾಟ್ ನೌಕೆಯೊಂದರ ಉಡಾವಣೆಯೊಂದಿಗೆ 1990 ರಲ್ಲಿ ಆರಂಭವಾಯಿತು. ಆ ಬಳಿಕ ಅಮೇರಿಕಾದ ಒಂದು ಪುಟ್ಟ ರೋಬಾಟ್ ನೌಕೆಗೆ ಚಂದ್ರನ ದಕ್ಷಿಣ ಧೃವಪ್ರದೇಶದಲ್ಲಿ ಹಿಮ ಕಂಡಂತೆ ಭಾಸವಾಗಿ ಚಂದ್ರನ ಬಗ್ಗೆ ವಿಜ್ಞಾನಿಗಳಿಗೆ ಹಾಗೂ ಅಂತರಿಕ್ಷ ಅನ್ವೇಷಕರಿಗೆ ಆಸಕ್ತಿ ಮತ್ತೆ ದಿಢೀರನೆ ಹೆಚ್ಚಿತು. ನೀರು ಮಾನವನಿಗೆ ಅಗತ್ಯವಾದ ವಸ್ತು ಅಲ್ಲವೇ. ಹೀಗಾಗಿ ಚಂದ್ರನ ಮೇಲೆ ನೆಲೆಗಳನ್ನು ಸ್ಥಾಪಿಸುವಲ್ಲಿ ನೀರಿನ ಅಸ್ತಿತ್ವ ಅನುಕೂಲಕರವಾಗಿ ಪರಿಣಮಿಸಬಲ್ಲುದು. ಹೀಗೆ ಚಂದ್ರನ ಬಗ್ಗೆ ಮತ್ತೆ ಆಸಕ್ತಿ ಹೆಚ್ಚಿದ ನಂತರ ಚಂದ್ರನ ಅನ್ವೇಷಣೆಯ ಎರಡನೆಯ ಹಂತ ಇಂದಿಗೂ ಮುಂದುವರೆಯುತ್ತಲೇ ಇದೆ. ಇದರ ಅಂಗವಾಗಿ ಜಪಾನ್, ಅಮೇರಿಕಾ, ಯೂರೋಪ್, ಚೀನಾ, ಭಾರತ, ಇಸ್ರೇಲ್, ದಕ್ಷಿಣ ಕೊರಿಯಾ, ಈ ಎಲ್ಲ ದೇಶಗಳೂ ಚಂದ್ರನತ್ತ ರೋಬಾಟ್ ನೌಕೆಗಳನ್ನು ಹಾರಿಬಿಟ್ಟಿವೆ. ಆ ಪೈಕಿ ಕೆಲವು ಯಶಸ್ವಿಯಾಗಿದ್ದರೆ ಮತ್ತೆ ಕೆಲವು ವಿಫಲವಾಗಿವೆ.

**ಚಂದ್ರಯಾನ ಕಾರ್ಯಕ್ರಮದ ಹಿನ್ನೆಲೆ**

1963 ರಲ್ಲಿ ವಿದ್ಯುಕ್ತವಾಗಿ ಪ್ರಾರಂಭವಾದ ಭಾರತದ ಅಂತರಿಕ್ಷ ಕಾರ್ಯಕ್ರಮ ನಂತರದ ಮೂರು ದಶಕಗಳಲ್ಲಿ ಅಗಾಧವಾಗಿ ಬೆಳೆದು ಅಪಾರವಾದ ಸಾಧನೆಗಳನ್ನು ಮಾಡಿತು. ಇದರ ಅಂಗವಾಗಿ ನಮ್ಮ ಉಪಗ್ರಹಗಳನ್ನು ನಾವೇ ನಿರ್ಮಿಸಿ, ನಮ್ಮ ರಾಕೆಟ್ ವಾಹನಗಳಲ್ಲೇ ಉಡಾಯಿಸಿ ಆ ಬಳಿಕ ಆ ಉಪಗ್ರಹಗಳನ್ನು ಅನೇಕ ತ್ವರಿತವಾದ ಅಭಿವೃದ್ಧಿಕಾರ್ಯಗಳಿಗಾಗಿ ಬಳಸಿಕೊಳ್ಳುವುದು ಆ ವೇಳೆಯಲ್ಲಿ ಸಾಧ್ಯವಾಯಿತು. ಅಲ್ಲಿಗೆ ಭಾರತದ ಅಂತರಿಕ್ಷ ಕಾರ್ಯಕ್ರಮದ ಪಿತಾಮಹ ಡಾ ವಿಕ್ರಂ ಸಾರಾಭಾಯಿಯವರು ಅದಕ್ಕೆ ಮೂರು ದಶಕಗಳ ಹಿಂದೆ ಕಂಡಿದ್ದ ಕನಸು ಬಹುಮಟ್ಟಿಗೆ ನನಸಾಯಿತು.

ನಮ್ಮ ದೇಶದ ದೊಡ್ಡ ಸಂಖ್ಯೆಯ ವಿದ್ಯಾರ್ಥಿ ಸಮೂಹವನ್ನು ಹುರಿದುಂಬಿಸುವ ಸಲುವಾಗಿ ಹಾಗೂ ನಮ್ಮ ಯುವ ವಿಜ್ಞಾನಿಗಳಿಗೆ ಹೊಸ ಆಸಕ್ತಿದಾಯಕ ಕ್ಷೇತ್ರಗಳಲ್ಲಿ ಸಂಶೋಧನೆಯನ್ನು ನಮ್ಮಲ್ಲಿ ನಿರ್ಮಾಣವಾದ ಉನ್ನತ ತಂತ್ರಜ್ಞಾನ ಸಾಧನಗಳ ನೆರವಿನೊಡನೆ ನಡೆಸುವ ಅವಕಾಶವನ್ನು ನೀಡುವ ಸಲುವಾಗಿ ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ 'ಇಸ್ರೋ' ಚಂದ್ರನತ್ತ ರೋಬಾಟ್ ನೌಕೆಯೊಂದನ್ನು ಕಳುಹಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತು.

ನಂತರ ಅದಕ್ಕೆ ದೇಶದ ವೈಜ್ಞಾನಿಕ ಹಾಗೂ ಇಂಜಿನಿಯರಿಂಗ್ ಸಮೂಹದಿಂದ ಉತ್ಸಾಹದಾಯಕವಾದ ಪ್ರತಿಕ್ರಿಯೆ ದೊರೆತ ನಂತರ ಸರ್ಕಾರದ ಪರವಾನಗಿಯೂ 2003 ರಲ್ಲಿ ಅದಕ್ಕೆ ದೊರೆಯಿತು. 2004 ರಿಂದ ಅದು ಕ್ರಮಬದ್ಧವಾಗಿ ಮುಂದೆಸಾಗಲಾರಂಭಿಸಿತು. ಅದರ ಅಂಗವಾಗಿ ಆ ನೌಕೆಯ ವೈಜ್ಞಾನಿಕ ಉಪಕರಣಗಳನ್ನು ಆಯ್ಕೆಮಾಡುವ ಕಾರ್ಯವೂ ಆರಂಭವಾಯಿತು. ಬಳಿಕ ಭಾರತೀಯ ವೈಜ್ಞಾನಿಕ ಉಪಕರಣಗಳ ಆಯ್ಕೆಯೂ ಮುಗಿದು ಇನ್ನೂ ಕೆಲವು ವೈಜ್ಞಾನಿಕ ಉಪಕರಣಗಳಿಗೆ ಸ್ಥಳವಿರಲಾಗಿ ಹೊರದೇಶದ ವಿಜ್ಞಾನಿಗಳಿಗೆ ತಮ್ಮ ಉಪಕರಣಗಳನ್ನು ಚಂದ್ರಯಾನ ನೌಕೆಯಲ್ಲಿ ಹಾರಿಬಿಡಲು ಅವಕಾಶ ಕಲ್ಪಿಸಲಾಯಿತು. ಅದರ ಅಂಗವಾಗಿ ಸಲ್ಲಿಸಲಾದ ಒಂದು ಡಜನ್ ಗೂ ಹೆಚ್ಚು ಕೋರಿಕೆಗಳಿಗೆ ಪ್ರತಿಯಾಗಿ ಆರು ಕೋರಿಕೆಗಳನ್ನು ಆಯ್ಕೆಮಾಡಲಾಯಿತು.

ಆ ನಂತರ ಚಂದ್ರಯಾನ ನೌಕೆಯ ಬಗ್ಗೆ ಮಾಹಿತಿ ಪಡೆದ ಅಂದಿನ ರಾಷ್ಟ್ರಪತಿ ಡಾ ಎಪಿಜೆ ಅಬ್ದುಲ್ ಕಲಾಂ ಅವರು 'ಚಂದ್ರನ ಸುತ್ತಲಿನ ಕಕ್ಷೆಯಲ್ಲಿ ಸುತ್ತುತ್ತಿರುವ ಚಂದ್ರಯಾನ ನೌಕೆಯಿಂದ ಬೇರ್ಪಟ್ಟು ಚಂದ್ರನನ್ನು ಅಪ್ಪಳಿಸುವ ಸಾಧನವೊಂದನ್ನು ನೌಕೆಯಲ್ಲಿ ಕೊಂಡೊಯ್ಯಲು' ಸೂಚಿಸಿದರು. ಆ ಮಹತ್ತರವಾದ ಸೂಚನೆಯನ್ನೂ ಪುರಸ್ಕರಿಸಿದ ನಂತರ ಭಾರತ ಹಾಗೂ ಅಮೇರಿಕಾ, ಬ್ರಿಟನ್, ಜರ್ಮನಿ, ಸ್ವೀಡನ್ ಹಾಗೂ ಬಲ್ಗೇರಿಯಾ ದೇಶಗಳ ಒಟ್ಟು 11 ವೈಜ್ಞಾನಿಕ ಉಪಕರಣಗಳನ್ನು ಹೊತ್ತ 'ಚಂದ್ರಯಾನ 1' ನೌಕೆ ಯಾನಕ್ಕೆ ಸಜ್ಜಾಯಿತು.

ಆ ವೇಳೆಗಾಗಲೇ 1380 ಕಿಲೋಗ್ರಾಂ ತೂಕದ ಆ ನೌಕೆಯನ್ನು ಉಡಾಯಿಸಲು ಅದರ ಉಡಾವಣಾ ವಾಹನವಾದ ಪಿ ಎಸ್ ಎಲ್ ವಿ ರಾಕೆಟ್ ನ ಶಕ್ತಿಯನ್ನು ವೃದ್ಧಿಸುವ ಕಾರ್ಯವೂ ಸಂಪೂರ್ಣವಾಯಿತು. ಜೊತೆಗೇ ಚಂದ್ರನ ಸಮೀಪದಿಂದ ಚಂದ್ರಯಾನ 1 ನೌಕೆ 'ಪಿಸುಗುಟ್ಟುವ' ಮಾಹಿತಿಯನ್ನು ಪಡೆದು ಗ್ರಹಿಸಬಲ್ಲ 105 ಅಡಿ ಅಗಲವಿರುವ ಬಾಣಲೆಯಾಕಾರದ ಒಂದು ಅತ್ಯಾಧುನಿಕ ಸಂಪರ್ಕ ಆಂಟೆನಾವನ್ನು ಬೆಂಗಳೂರಿನ ಸಮೀಪದ ಬ್ಯಾಲಾಳುವಿನಲ್ಲಿ ನಿರ್ಮಿಸುವಲ್ಲೂ ಭಾರತೀಯ ವಿಜ್ಞಾನಿಗಳು ಸಮರ್ಥರಾದರು.

2008 ರ ಅಕ್ಟೋಬರ್ 22 ರಂದು ಚಂದ್ರಯಾನ 1 ನೌಕೆ 'ಪಿಎಸ್ಎಲ್ವಿ–ಸಿ11' ರಾಕೆಟ್ ವಾಹನದಲ್ಲಿ ಹವಾಮಾನದ ವೈಪರೀತ್ಯದಿಂದ ಜನಿತವಾಗುವ ವಿಘ್ನಗಳ ನಡುವೆಯೂ ಶ್ರೀಹರಿಕೋಟಾದಿಂದ ಪವಾಡಸದೃಶವಾದ ರೀತಿಯಲ್ಲಿ ಉಡಾಯಿಸಲ್ಪಟ್ಟಿತು. ಮೊದಲಿಗೆ ಭೂಮಿಯನ್ನು ಸುತ್ತಿದ ಆ ನೌಕೆ ಕೆಲಕಾಲದ ನಂತರ ಚಂದ್ರನತ್ತ ತೆರಳಿ, ಅಂತಿಮವಾಗಿ ಚಂದ್ರನ ಸುತ್ತಲಿನ 100 ಕಿಲೋಮೀಟರ್ ಎತ್ತರದ ಕಕ್ಷೆಯನ್ನು ತಲುಪಿತು. ಆ ನಂತರ 37 ಕಿಲೋಗ್ರಾಂ ತೂಕದ 'ಚಂದ್ರನನ್ನು ಅಪ್ಪಳಿಸುವ ಸಾಧನ'ವು ಅದರಿಂದ ಬೇರ್ಪಟ್ಟು ಆ ಆಕಾಶಕಾಯವನ್ನು ಅಪ್ಪಳಿಸಿದಾಗ ಚಂದ್ರನ ಮೇಲ್ಮೈಯನ್ನು ತಲುಪಿದ ನಾಲ್ಕನೆಯ ರಾಷ್ಟ್ರವೆಂಬ



Scanned with ACE Scanner

ಹೆಗ್ಗಳಿಕೆಗೆ ಭಾರತ ಪಾತ್ರವಾಯಿತು. ಇಷ್ಟೇ ಸಾಲದೆಂಬಂತೆ ಚಂದ್ರನ ಮೇಲೆ ನೀರಿನ ಅಸ್ತಿತ್ವವನ್ನು ಚಂದ್ರಯಾನ 1 ಖಚಿತವಾಗಿ ಗುರುತಿಸಿದೆ ಎಂಬ ವಿಷಯ 2009 ರಲ್ಲಿ ವರದಿಯಾದಾಗ ಜಗತ್ತಿನಾದ್ಯಂತ ಭಾರತಕ್ಕೆ ಶ್ಲಾಘನೆ ಸಂದಿತು.

ಅದಾದ ನಂತರ ಚಂದ್ರನ ಮೇಲೆ ನಿಧಾನವಾಗಿ ನೌಕೆಯೊಂದನ್ನು ಇಳಿಸಿ ಆ ನೌಕೆಯಲ್ಲಿ ಕೊಂಡೊಯ್ದ ಚಕ್ರಗಳುಳ್ಳ ಪುಟ್ಟ ರೋಬಾಟ್ ವಾಹನ ಚಂದ್ರನ ಮೇಲೆ ಓಡಾಡಿ ಅನ್ವೇಷಣೆ ನಡೆಸುವಂತೆ ಮಾಡುವ ಉದ್ದೇಶದಿಂದ 2019 ರಲ್ಲಿ ಉಡಾಯಿಸಲಾದ ಚಂದ್ರಯಾನ 2 ರ ಆ ಉದ್ದೇಶ ಈಡೇರಿಕೆ ಸವಾಲೆನಿಸಿತು. ಆ ಸವಾಲೆನ್ನಿಸುವ ಕಾರ್ಯವನ್ನು ಸಾಧಿಸಿ ತೋರಿಸುವ ಪ್ರಯತ್ನವೇ ಚಂದ್ರಯಾನ 3 ಆಗಿದೆ.

### ಸವಾಲೆನ್ನಿಸುವ ಕಾರ್ಯಗಳು

ಚಂದ್ರನನ್ನು ಸಂಧಿಸಿ ಮೊದಲಿಗೆ ಅದರ ಸುತ್ತಲಿನ ಕಕ್ಷೆಯೊಂದನ್ನು ಪ್ರವೇಶಿಸುವ ಉದ್ದೇಶದಿಂದ ಇಂದು ಅಂತರಿಕ್ಷದಲ್ಲಿ ಧಾವಿಸುತ್ತಿರುವ ಚಂದ್ರಯಾನ 3 ಆ ನಂತರ ನಿರ್ವಹಿಸಲಿರುವ ಕಾರ್ಯಗಳು ಕುತೂಹಲ ಕಾರಿಯಾಗಿರುವುದರೊಂದಿಗೇ ಸವಾಲಿನಿಂದ ಕೂಡಿದ್ದೂ ಆಗಿವೆ. ಮೊದಲಿಗೆ ಆ ನೌಕೆ ಚಂದ್ರನ ಹಿಂಭಾಗದಲ್ಲಿರುವಾಗ ಅದನ್ನು ಹಿಂದುಮುಂದಾಗಿ ತಿರುಗಿಸಿ ಒಂದು ನಿರ್ದಿಷ್ಟವಾದ ವೇಳೆಯಲ್ಲಿ ಅದರ ರಾಕೆಟ್ ಯಂತ್ರವನ್ನು ಕೆಲಕಾಲ ಉರಿಸಲಾಗುತ್ತದೆ. ಇದರಿಂದಾಗ ಆ ನೌಕೆಯ ವೇಗಕ್ಕೆ ಕಡಿವಾಣ ಬೀಳಲಾಗಿ ಚಂದ್ರನ ಗುರುತ್ವಾಕರ್ಷಣೆ ಚಂದ್ರಯಾನ 3 ನ್ನು ತನ್ನ ಸುತ್ತಲಿನ ಕೋಳಿಮೊಟ್ಟೆಯಾಕಾರದ ಕಕ್ಷೆಯೊಂದರಲ್ಲಿ ಬಂಧಿಸುತ್ತದೆ.

ಇದಾದ ನಂತರ ಆ ರಾಕೆಟ್ಟನ್ನು ಸಕಾಲದಲ್ಲಿ ಮತ್ತೆ ಮತ್ತೆ ಉರಿಸುವ ಮೂಲಕ ಚಂದ್ರಯಾನ 3 ರ ಕಕ್ಷೆಯ ಎತ್ತರವನ್ನು ಹಂತಹಂತವಾಗಿ ಕಡಿಮೆಮಾಡಿ ಕೊನೆಗೆ ಚಂದ್ರಯಾನ 3 ನೌಕೆ ಚಂದ್ರನ ಮೇಲ್ಮೈಯಿಂದ ಸುಮಾರು 100 ಕಿಲೋಮೀಟರ್ ಎತ್ತರದಲ್ಲಿರುವ ಕಕ್ಷೆಯಲ್ಲಿ ಆ ಆಕಾಶಕಾಯವನ್ನು ಸುತ್ತುವಂತೆ ಮಾಡಲಾಗುತ್ತದೆ.

ತನ್ನೊಳಗೆ ಪ್ರಗ್ಯಾನ್ ರೋವರ್‌ಅನ್ನು ಉಳ್ಳ ಚಂದ್ರಯಾನ 3 ರ 'ವಿಕ್ರಂ ಇಳಿಯುವ ಕೋಶ' ಆ ಬಳಿಕ ತನ್ನನ್ನು ಸರಿಯಾದ ಚಂದ್ರಕಕ್ಷೆಗೆ ಸೇರಿಸಿದ 'ನೋದನ ಕೋಶ'ದಿಂದ ಬೇರ್ಪಟ್ಟು ಚಂದ್ರನನ್ನು ಸ್ವತಂತ್ರವಾಗಿ ಸುತ್ತುಹಾಕಲಾರಂಭಿಸುತ್ತದೆ. ನೋದನ ಕೋಶವೂ ಚಂದ್ರನನ್ನು ಸುತ್ತುವ ಕಾರ್ಯವನ್ನು ತನ್ನಷ್ಟಕ್ಕೆ ತಾನೆ ಪ್ರತ್ಯೇಕವಾಗಿ ಮುಂದುವರೆಸುತ್ತದೆ. ಅಲ್ಲಿಂದ ಮುಂದೆ ವಿಕ್ರಂ ಕೋಶದ ಕಕ್ಷೆಯ ಎತ್ತರವನ್ನು ಕಡಿಮೆ ಮಾಡುವ ಮೂಲಕ ಅದು ಚಂದ್ರನ ಮೇಲ್ಮೈಯಿಂದ ಕೇವಲ 30 ಕಿಲೋಮೀಟರ್ ಎತ್ತರದಲ್ಲಿ ಧಾವಿಸುವುದನ್ನು ಸಾಧ್ಯಮಾಡುವ ಕಕ್ಷೆಗೆ ಅದನ್ನು ವರ್ಗಾಯಿಸಲಾಗುತ್ತದೆ. ಈ ನಿಟ್ಟಿನಲ್ಲಿ ವಿಕ್ರಂ ಕೋಶದ ರಾಕೆಟ್ ಯಂತ್ರಗಳು ನೆರವಿಗೆ ಬರುತ್ತವೆ.

ಕೊನೆಗೆ ಸದವಕಾಶ ಬಂದಾಗ ವಿಕ್ರಂ ಕೋಶದ ರಾಕೆಟ್ ಯಂತ್ರಗಳನ್ನು ಮತ್ತೆ ಉರಿಸಿ ಅದು ಚಂದ್ರನ ಮೇಲ್ಮೈಯತ್ತ ಧಾವಿಸುವುದನ್ನು ಸಾಧ್ಯಮಾಡಲಾಗುತ್ತದೆ. ಆ ವೇಳೆಯಲ್ಲಿ ಅದರ ವೇಗವನ್ನು ಎಚ್ಚರಿಕೆಯಿಂದ ನಿಯಂತ್ರಿಸುವ ಮೂಲಕ ವಿಕ್ರಂ ಚಂದ್ರನ ದಕ್ಷಿಣ ಧ್ರುವ ಪ್ರದೇಶದ ಮೇಲೆ ಇಳಿಯುವಂತೆ ಮಾಡಲಾಗುತ್ತದೆ. ಮೈಜುಂ ಎನ್ನಿಸುವ ಈ ಇಳಿಯುವ ಕಾರ್ಯವನ್ನು ನಿರ್ವಹಿಸುವುದು ನೇರವಾಗಿ ಇಸ್ರೋ ವಿಜ್ಞಾನಿಗಳಲ್ಲ, ಅವರು ನಿರ್ಮಿಸಿರುವ ವಿಕ್ರಂ ನ ಕಂಪ್ಯೂಟರ್ ಮೆದುಳು.

ಇದಾದ ಬಳಿಕ ವಿಕ್ರಂ ಕೋಶದಿಂದ ಹೊರಬರುವ ಪ್ರಗ್ಯಾನ್ ರೋವರ್ ವಾಹನ ಜಾರುಹಲಗೆಯೊಂದರ ನೆರವಿನೊಡನೆ ಚಂದ್ರನ ಮೇಲ್ಮೈಯನ್ನು ತಲುಪಿ ಆ ಸ್ಥಳದ ಸುತ್ತಲಿನ ಪ್ರದೇಶದಲ್ಲಿ ಓಡಾಡುತ್ತಾ ಅನ್ವೇಷಣೆ ನಡೆಸುತ್ತದೆ.

ಚಂದ್ರನ ಮೇಲಿನಿಂದಲೇ ನಡೆಸಲಾಗುವ ಆ ಆಕಾಶಕಾಯದ ಅನ್ವೇಷಣೆಗಾಗಿ ವಿಕ್ರಂ ನಲ್ಲಿ ನಾಲ್ಕು ಹಾಗೂ ಪ್ರಗ್ಯಾನ್ ನಲ್ಲಿ ಎರಡು ವೈಜ್ಞಾನಿಕ ಉಪಕರಣಗಳಿವೆಯಲ್ಲವೆ, ಅವು ಕನಿಷ್ಠಪಕ್ಷ ಸುಮಾರು ಹದಿನಾಲ್ಕು ದಿನಗಳ ಕಾಲ ಮಾಹಿತಿಯನ್ನು ಸಂಗ್ರಹಿಸುತ್ತವೆ. ಆ ಬಳಿಕ ಪ್ರಾರಂಭವಾಗುವ 'ಭೂಮಿಯ ಮೇಲಿನ 14 ದಿನಗಳಿಗೆ ಸಮನಾದ ಚಂದ್ರನ ರಾತ್ರಿ'ಯ ಮೂಳೆಯನ್ನು ಮರಗಟ್ಟಿಸುವ ಚಳಿಯಲ್ಲಿ ವಿಕ್ರಂ ಹಾಗೂ ಪ್ರಗ್ಯಾನ್ ಬದುಕುಳಿಯುವ ಬಗ್ಗೆ ಖಾತ್ರಿಯಿಲ್ಲ. ಹೀಗೆ ಚಂದ್ರನ ಮೇಲೆ ಇಳಿದು ಅನ್ವೇಷಿಸುವ ಪ್ರಮುಖ ಸವಾಲನ್ನು ಭಾರತ ಸ್ವೀಕರಿಸಿ ಆ ನಿಟ್ಟಿನಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ಧೈರ್ಯದಿಂದ ನಡೆಸುತ್ತಿರುವುದು ಭಾರತದ ಆತ್ಮನಿರ್ಭರತೆಯ ಪ್ರತೀಕವಾಗಿದೆ.

### ಆರ್ಟೆಮಿಸ್ ನಲ್ಲಿ ಭಾಗಿಯಾಗುತ್ತಿರುವ ಭಾರತ

ಇದೊಂದು ಮಹತ್ವಪೂರ್ಣವಾದ ಕಾಲ. ಐವತ್ತು ವರ್ಷಗಳ ಹಿಂದೆ ಅಲ್ಲಿಂದ ಕಾಲ್ತೆಗೆದ ನಂತರ ಮಾನವ ಚಂದ್ರನಲ್ಲಿಗೆ ಮತ್ತೆ ಹಿಂತಿರುಗುತ್ತಿದ್ದಾನೆ. ಈ ಸಂಬಂಧದಲ್ಲಿ ಅಮೇರಿಕಾ ತನ್ನ ಕೆಲವು ಮಿತ್ರರಾಷ್ಟ್ರಗಳ ಹಾಗೂ ಖಾಸಗಿ ಕಂಪನಿಗಳ ಭಾಗವಹಿಸುವಿಕೆಯೊಂದಿಗೆ ಆರ್ಟೆಮಿಸ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಚಂದ್ರನ ಮೇಲೆ ಮಾನವ ಹಿಂತಿರುಗುವಂತೆ ಮಾಡುವುದು, ಅಲ್ಲಿ ಮಾನವನ ಸುಸ್ಥಿರವಾದ ಉಪಸ್ಥಿತಿಗೆ, ಅಂದರೆ ಮಾನವ ಅಲ್ಲಿ ನಿರಂತರವಾಗಿ ನೆಲೆಸುವುದನ್ನು ಸಾಧ್ಯಮಾಡುವುದು ಮತ್ತು ಚಂದ್ರನನ್ನು ಒಂದು ಬಗೆಯ 'ಜಿಗಿಯುವ ಹಲಗೆ'ಯಂತೆ ಬಳಸಿಕೊಂಡು ದೂರದ ಲೋಕಗಳತ್ತ ಮಾನವರು ತೆರಳುವುದಕ್ಕೆ ಎಡೆಮಾಡಿಕೊಡುವುದು ಆರ್ಟೆಮಿಸ್ ಕಾರ್ಯಕ್ರಮದ ಉದ್ದೇಶವಾಗಿದೆ. ಈ ವರ್ಷದ ಜೂನ್ 24 ರಂದು ಭಾರತವೂ ಆರ್ಟೆಮಿಸ್ ಒಪ್ಪಂದಕ್ಕೆ ಸಹಿಹಾಕಿ ಆ ಮಹತ್ತರವಾದ ಉದ್ದೇಶ ಸಾಧನೆಯಲ್ಲಿ ತಾನೂ ಭಾಗಿಯಾಗುವುದಕ್ಕೆ ಸಿದ್ಧವಾಗಿದ್ದೇನೆಂಬುದನ್ನು ಸೂಚಿಸಿದೆ.

ಇವೆಲ್ಲವೂ ಇಂದು ಭಾರತ ಅಂತರಿಕ್ಷ ಕ್ಷೇತ್ರದಲ್ಲಿ ಮಹತ್ತರವಾದ ಸಾಧನೆಗಳನ್ನು ಮಾಡಿದೆ ಮತ್ತು ಈ ನಿಟ್ಟಿನಲ್ಲಿ ಮತ್ತಷ್ಟು ಮಹತ್ವಪೂರ್ಣವಾದ ಸಾಧನೆಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದೆ ಎಂಬುದನ್ನು ಹೊರಜಗತ್ತು ನಿಚ್ಚಳವಾಗಿ ಗುರುತಿಸಿರುವ ಸಂಕೇತಗಳಾಗಿವೆ. ಭಾರತೀಯರಾದ ನಮಗೆ ಇದು ಹೆಮ್ಮೆಯ ವಿಷಯವಲ್ಲವೇ?


ಖಂಡಿತ. ಸದ್ಯಕ್ಕೆ ನಮ್ಮೆಲ್ಲರ ಗಮನ ಇವೆಲ್ಲಕ್ಕೂ ಪೂರಕವಾಗುವ ಚಂದ್ರಯಾನ 3 ರ ಸಾಹಸದತ್ತ ಕೇಂದ್ರೀಕೃತವಾಗಿದೆ.



Scanned with ACE Scanner

ನಿರೀಕ್ಷೆ

# ಚಂದ್ರಯಾನ-3 ನೌಕೆ ಯಶಸ್ವಿ ಉಡಾವಣೆ




ಚಿತ್ರ ಕೃಪೆ : ಇಸ್ರೋ


ಚಂದ್ರನ ಮೇಲಿಳಿಯಲು ಉದ್ದೇಶಿಸಿರುವ ದಿನಾಂಕ ಆಗಸ್ಟ್ 23/24 2023



ಚಿತ್ರ ಕೃಪೆ : ಇಸ್ರೋ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ ಜುಲೈ 14 ರಂದು ಚಂದ್ರಯಾನ – 3 ನೌಕೆಯನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ.

ಶ್ರೀ ಹರಿಕೋಟಾದ ಸತೀಶ್‌ಧವನ್ ಅಂತರಿಕ್ಷಕೇಂದ್ರದಿಂದ ಎಲ್‌ವಿಎಂ 3 ರಾಕೆಟ್ ಜುಲೈ 14 ರಂದು ಮಧ್ಯಾಹ್ನ 2.35ಕ್ಕೆ ಯಶಸ್ವಿಯಾಗಿ ಉಡಾವಣೆ ನೆರವೇರಿಸಿತು.



ಚಿತ್ರ ಕೃಪೆ : ಇಸ್ರೋ



Scanned with ACE Scanner

ಪತಾಕೆ

# ಏಶಿಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್



ಥಾಯ್ಲೆಂಡಿನ ಬ್ಯಾಂಕಾಕ್‌ನಲ್ಲಿರುವ ಸುಪಚಲಾಸೈಯ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಜುಲೈ 12 ರಿಂದ 16 ರ ವರೆಗೆ ನಡೆದ ಏಶಿಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ 27 ಪದಕಗಳನ್ನು ಗಳಿಸಿದೆ. ಭಾರತ ಒಟ್ಟು 6 ಚಿನ್ನ, 12 ಬೆಳ್ಳಿ, 9 ಕಂಚು ಪಡೆದಿದೆ. ಚಾಂಪಿಯನ್‌ಶಿಪ್‌ನಲ್ಲಿ ಜಪಾನ್ 37 ಪದಕಗಳೊಂದಿಗೆ ಮೊದಲ ಸ್ಥಾನ, ಚೀನಾ 22 ಪದಕಗಳೊಂದಿಗೆ ದ್ವಿತೀಯ ಸ್ಥಾನ ಹಾಗೂ ಭಾರತ 27 ಪದಕಗಳೊಂದಿಗೆ ಮೂರನೆಯ ಸ್ಥಾನ ಗಳಿಸಿವೆ.

## ಚಿನ್ನ

ಭಾರತದ ಪದಕ ವಿಜೇತರ ವಿವರ ಮುಂದಿನಂತಿದೆ.






ಜ್ಯೋತಿ ಯರ‍್ರಾಜಿ
(ಮಹಿಳೆಯರ 100 ಮೀ. ಹರ್ಡಲ್ಸ್)



ಅಬ್ದುಲ್ಲಾ ಅಬೂಬಕರ್
(ಪುರುಷರ ಟ್ರಿಪಲ್ ಜಂಪ್)



ಪಾರುಲ್ ಚೌಧರಿ
(ಮಹಿಳೆಯರ 3000 ಮೀ. ಸ್ಟೀಪಲ್ ಚೇಸ್)




ಅಜಯ್ ಕುಮಾರ್ ಸರೋಜ್
(ಪುರುಷರ 1500 ಮೀ.)




ತೇಜಿಂದರ್‌ಪಾಲ್ ಸಿಂಗ್ ತೂರ್
(ಪುರುಷರ ಶಾಟ್‌ಪುಟ್)



ರಾಜೇಶ್, ಐಶ್ವರ್ಯ, ಶುಭಾ, ಅಮೋಜ್
(ಮಿಶ್ರ 4x400 ಮೀ. ರಿಲೇ ತಂಡ)

## ಬೆಳ್ಳಿ





ಶೈಲಿ ಸಿಂಗ್
(ಮಹಿಳಾ ಲಾಂಗ್‌ಜಂಪ್)



ಅನಿಲ್ ಸರ್ವೇಶ್ ಕುಶಾರೆ
(ಪುರುಷರ ಹೈಜಂಪ್)



ಶ್ರೀಶಂಕರ್
( ಲಾಂಗ್‌ಜಂಪ್)



ಸ್ವಪ್ನಾ ಬರ್ಮನ್
(ಹೆಪಲ್ತಾನ್)




ಪ್ರಿಯಾಂಕಾ ಗೋಸ್ವಾಮಿ
(ಮಹಿಳೆಯರ 20 ಕಿ.ಮೀ. ರೇಸ್‌ವಾಕ್)



ಚಂದಾ
(ಮಹಿಳೆಯರ 800 ಮೀ.)



Scanned with ACE Scanner

# ಪದಕ ವಿಜೇತರು






ಪಾರುಲ್ ಚೌಧರಿ
(ಮಹಿಳೆಯರ 5000 ಮೀ.)



ಕೃಷ್ಣ ಕುಮಾರ್
(ಪುರುಷರ 800 ಮೀ.)



ಆಭಾ ಖಟುವಾ
(ಮಹಿಳೆಯರ ಶಾಟ್‌ಪುಟ್)



ಡಿಪಿ ಮನು
(ಪುರುಷರ ಜಾವೆಲಿನ್ ಥ್ರೊ)



ಜ್ಯೋತಿ ಯರ್ರಾಜಿ
(ಮಹಿಳೆಯರ 200 ಮೀ.)




ಅಮೋಜ್, ಎಂ. ಅಜ್ಮಲ್, ಮಿಜೊ, ರಾಜೇಶ್
(ಪುರುಷರ 4x400 ಮೀ. ರಿಲೇ ತಂಡ)

## ಕಂಚು






ಅಭಿಷೇಕ್ ಪಾಲ್
(ಪುರುಷರ 10000 ಮೀ.)



ಐಶ್ವರ್ಯ ಕೈಲಾಶ್ ಮಿಶ್ರಾ
(ಮಹಿಳೆಯರ 400 ಮೀ.)




ತೇಜಸ್ವಿನ್ ಶಂಕರ್
(ಪುರುಷರ ಡೆಕಾಥ್ಲಾನ್)



ಮನ್‌ಪ್ರೀತ್ ಕೌರ್
(ಮಹಿಳೆಯರ ಶಾಟ್‌ಪುಟ್)




ತಮಿಳುರಸನ್ ಸಂತೋಷ್ [illegible]
(ಪುರುಷರ 400 ಮೀ. [illegible])




ವಿಕಾಸ್ ಸಿಂಗ್
(ಪುರುಷರ 20 ಕಿ.ಮೀ. ರೇಸ್‌ವಾಕ್)



ಅಂಕಿತಾ
(ಮಹಿಳೆಯರ 5000 ಮೀ.)



ಗುಲ್‌ವೀರ್ ಸಿಂಗ್
(ಪುರುಷರ 5000 ಮೀ.)




[illegible] ಜ್ಯೋತಿಕಾ, ಐಶ್ವರ್ಯ, ಶುಭಾ
([illegible] 4x400 ಮೀ. ರಿಲೇ ತಂಡ)



Scanned with ACE Scanner

ಉಡಾವಣೆ

# ಉಪಗ್ರಹ ಉಡಾವಣೆ







ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಜುಲೈ 30 ರಂದು ಸಿಂಗಾಪುರದ ಒಟ್ಟು ಏಳು ಉಪಗ್ರಹಗಳನ್ನು ಯಶಸ್ವಿಯಾಗಿ ಹಾರಿಬಿಟ್ಟಿದೆ. ಶ್ರೀ ಹರಿಕೋಟಾದ ಸತೀಶ್‌ಧವನ್ ಬಾಹ್ಯಾಕಾಶ ಕೇಂದ್ರದಿಂದ ಪಿಎಸ್‌ಎಲ್‌ವಿ ರಾಕೆಟ್ ಮೂಲಕ ಉಡಾವಣೆ ನೆರವೇರಿಸಲಾಯಿತು.

ಇದರಲ್ಲಿ ಸಿಂಗಾಪುರದ ಸರ್ಕಾರಿ ಪ್ರತಿನಿಧಿ ಸಂಸ್ಥೆ ಡಿಎಸ್‌ಟಿಎ–ಎಸ್‌ಟಿ ಇಂಜಿನಿಯರಿಂಗ್ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲಾದ ಡಿ.ಎಸ್. – ಎಸ್‌ಎಆರ್ ಉಪಗ್ರಹ ಹಾಗೂ ಇತರ ಆರು ಉಪಗ್ರಹಗಳೂ ಸೇರಿವೆ.



Scanned with ACE Scanner

# ಶಿಕ್ಷಣದಲ್ಲಿ ತಂತ್ರಜ್ಞಾನ ಬಳಕೆ

* ಅನಿಲ್ ಸಹಸ್ರಬುಧೆ

**ರಾಷ್ಟ್ರೀಯ ಶಿಕ್ಷಣ ನೀತಿ 2020, ಶಿಕ್ಷಣ ಕ್ಷೇತ್ರದಲ್ಲಿ ಎಲ್ಲರಿಗೂ ಕೈಗೆಟಕುವ, ಸಮಾನ ಅವಕಾಶ ನೀಡುವ ಹಾಗೂ ಉನ್ನತ ಗುಣಮಟ್ಟದ ಶಿಕ್ಷಣವನ್ನು ಸೃಷ್ಟಿಸಲು ಹಲವಾರು ಮುನ್ನಡೆಯ ಸುಧಾರಣೆಗಳಿಗೆ ಎಡೆಮಾಡಿಕೊಡುತ್ತದೆ. ಆಗುಮೆಂಟೆಡ್ ರಿಯಾಲಿಟಿ, ವರ್ಚುವಲ್ ರಿಯಾಲಿಟಿ, ಎಕ್ಸ್‌ಟೆಂಡೆಡ್ ರಿಯಾಲಿಟಿ, ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ (ಎವಿಜಿಸಿ) ಗಳಂತಹ ಹೊಸ ಸಾಧನಗಳು ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಗಳ ಶಕ್ತಿಯೊಂದಿಗೆ ಶೈಕ್ಷಣಿಕ ಗುಣಮಟ್ಟವನ್ನು ವರ್ಧಿಸಿವೆ ಹಾಗೂ ಕಲಿಕೆಯ ಅನುಭವವನ್ನು ಹೆಚ್ಚಿಸಿವೆ.**




ಹದಿನೇಳನೆಯ ಶತಮಾನದಿಂದ ಹಿಡಿದು ಇಲ್ಲಿಯವರೆಗೆ ಅಂದರೆ ತಂತ್ರಜ್ಞಾನವು ಉದ್ಯಮ 1.0 ರಿಂದ ಉದ್ಯಮ 4.0 ವರೆಗೆ, ಆವಿ ಯಂತ್ರದ ಆವಿಷ್ಕಾರದಿಂದ ಬಾಹ್ಯಾಕಾಶ ನೌಕೆಯವರೆಗೆ, ದೂರವಾಣಿಯಿಂದ ಮೊಬೈಲ್ ಫೋನುಗಳವರೆಗೆ, ಅಂತರ್ಜಾಲದ 2ಜಿ ನಿಂದ 5ಜಿ ವರೆಗೆ ಮತ್ತು ಪಿಸಿಗಳಿಂದ ಸೂಪರ್ ಕಂಪ್ಯೂಟರ್‌ಗಳವರೆಗೆ ನಮ್ಮ ಬದುಕನ್ನು ಕ್ರಾಂತಿಕಾರಕಗೊಳಿಸಿದೆ. ತಂತ್ರಜ್ಞಾನ ಬದಲಾಗುತ್ತಿರುವ ವೇಗವು ನಿಜಕ್ಕೂ ಆಶ್ಚರ್ಯವುಂಟುಮಾಡುವಂತಿದ್ದು ಇದರ ವೇಗ ಊಹಿಸಿಕೊಳ್ಳುವುದು ಕಷ್ಟವಾಗುತ್ತಿದೆ. ತಂತ್ರಜ್ಞಾನದ ಬದಲಾವಣೆಗಳು ಕೇವಲ ವಸತಿ, ನೀರು, ನೈರ್ಮಲ್ಯ, ಇಂಧನ ಮೂಲಗಳು, ಸಂಪರ್ಕ, ಸಾರಿಗೆ ಇತ್ಯಾದಿ ನಮ್ಮ ಪ್ರತಿನಿತ್ಯ ಬದುಕಿನ ಬೇರೆ ಬೇರೆ ಅಂಶಗಳಲ್ಲಿ ಮಾತ್ರವಲ್ಲದೆ ಪ್ರಮುಖವಾಗಿ ಶಿಕ್ಷಣ, ಆರೋಗ್ಯ ಮತ್ತು ಕೃಷಿಯಲ್ಲಿಯೂ ಜರುಗುತ್ತಿವೆ.

ಕಪ್ಪು ಹಲಗೆಗಳು ಮತ್ತು ಸೀಮೆಸುಣ್ಣ, ಪೆನ್ಸಿಲ್‌ಗಳು, ಪೆನ್ನುಗಳು ಮತ್ತು ಕಾಗದದಿಂದ ಓವರ್‌ಹೆಡ್ ಪ್ರೊಜೆಕ್ಟರ್‌ಗಳು, ಎಲ್‌ಸಿಡಿಗಳು, ಪಿಸಿಗಳು, ಲ್ಯಾಪ್‌ಟಾಪ್‌ಗಳು, ಸಿಡಿಗಳು, ಡಿವಿಡಿಗಳು ಮತ್ತು ಟಿವಿಗಳ ಸ್ಮಾರ್ಟ್ ಬಿಳಿ ಹಲಗೆಗಳು, ಅಂತರ್ಜಾಲ, ಆನ್‌ಲೈನ್ ಕೋರ್ಸ್‌ಗಳು ಮತ್ತು ಎಂಓಓಸಿ ವೇದಿಕೆಗಳ ಮೂಲಕ ಶಿಕ್ಷಣವನ್ನು ಒದಗಿಸುವ ವ್ಯವಸ್ಥೆಯಲ್ಲಿ ಜರುಗುತ್ತಿರುವ ಬದಲಾವಣೆಗಳು ಶಿಕ್ಷಣವು ಮನೆ ಬಾಗಿಲಿಗೆ ತಲುಪುವಂತೆ ಮಾಡಿವೆ. ಇಂದು ಶಿಕ್ಷಣವು ಯಾವುದೇ ವ್ಯಕ್ತಿಯಿಂದ ಯಾವುದೇ ಸಾಧನದ ಮೂಲಕ ಯಾವುದೇ ಸಮಯದಲ್ಲಿ, ಎಲ್ಲಿಯಾದರೂ ಸಿಗುವಂತಾಗಿದೆ. ಇಂದು ನಮಗೆ ಲಭ್ಯವಿರುವ ಕೋರ್ಸ್‌ಗಳು ಮತ್ತು ಕಾರ್ಯಕ್ರಮಗಳಲ್ಲಿ ಹಲವಾರು ರೀತಿಯ ಆಯ್ಕೆಗಳಿದ್ದು ಆಯ್ಕೆ ಮಾಡುವುದೇ ಕೆಲವೊಮ್ಮೆ ಕಷ್ಟದ ಕೆಲಸವಾಗಿ ಬಿಟ್ಟಿದೆ.

* ಅಧ್ಯಕ್ಷರು, ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆ, ನವದೆಹಲಿ. ಇಮೇಲ್: chairman-netf@gov.in



Scanned with ACE Scanner




ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಕೃತಕ ಬುದ್ಧಿಮತ್ತೆ) (ಎಐ), ಮೆಷಿನ್ ಲರ್ನಿಂಗ್ (ಎಂಎಲ್) ಮತ್ತು ಎಐ ಆಧರಿತ ಚಾಟ್ ಬಾಟ್‌ಗಳ ಬಲದೊಂದಿಗೆ ಆಗ್ಮೆಂಟೆಡ್ ರಿಯಾಲಿಟಿ (ಎಆರ್), ವರ್ಚುವಲ್ ರಿಯಾಲಿಟಿ (ವಿಆರ್), ಎಕ್ಸ್‌ಟೆಂಡೆಡ್ ರಿಯಾಲಿಟಿ (ಎಕ್ಸ್‌ಆರ್), ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಅಂಡ್ ಕಾಮಿಕ್ಸ್ (ಎವಿಜಿಸಿ) ಇತ್ಯಾದಿ ಹೊಸ ಸಾಧನಗಳು ಗುಣಮಟ್ಟ ವರ್ಧಿಸಿವೆ ಮತ್ತು ಕಲಿಕೆಯ ಅನುಭವ ಹೆಚ್ಚಿಸಿವೆ.

ಜುಲೈ 29, 2020 ರಂದು ಅಂಗೀಕರಿಸಲಾದ ರಾಷ್ಟ್ರೀಯ ಶಿಕ್ಷಣ ನೀತಿ, 2020 ಎಲ್ಲರಿಗೂ ಸಿಗುವ, ಸಮಾನ ಅವಕಾಶದ ಉನ್ನತ ಗುಣಮಟ್ಟದ ಶಿಕ್ಷಣವನ್ನು ರೂಪಿಸಲು ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಮೂಲಭೂತ ಸುಧಾರಣೆಗಳಿಗೆ ಎಡೆಮಾಡಿಕೊಡುತ್ತದೆ. ಇದನ್ನು ಕೇವಲ ಇಟ್ಟಿಗೆ ಮತ್ತು ಗಾರೆ ಕಟ್ಟಡಗಳ ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಮೂಲಕ ನಾವು ಸಾಧಿಸುವುದು ಕಷ್ಟ. ಕೇವಲ ತಂತ್ರಜ್ಞಾನ ಮತ್ತದರ ಬಳಕೆ ಮಾತ್ರ ನಾವು ಕಾಣುವ ಅಂತರವನ್ನು ಮತ್ತು ವಿಭಜನೆಯನ್ನು ತಗ್ಗಿಸಿ ಶಿಕ್ಷಣದಲ್ಲಿ ಪ್ರವೇಶ ಸಾಧ್ಯತೆ ಹೆಚ್ಚಳ, ಸಮಾನ ಅವಕಾಶ, ಉನ್ನತ ಗುಣಮಟ್ಟ, ಕೈಗೆಟುಕುವಿಕೆ ಮತ್ತು ಹೊಣೆಗಾರಿಕೆಗಳಿಗೆ ಎಡೆಮಾಡಿಕೊಡುತ್ತದೆ. ಇದಲ್ಲದೆ, ಸರ್ಕಾರದ ದೃಷ್ಟಿಯಲ್ಲಿ ಇದು ಹೂಡಿಕೆಗೆ ಹೆಚ್ಚಿನ ಲಾಭ ನೀಡುವ ಮಿತವ್ಯಯದ ಹೂಡಿಕೆ ಯೋಜನೆಯೂ ಆಗಿದೆ.

ಇಲ್ಲಿಯವರೆಗೆ ಹೇಳಲಾದ ತಂತ್ರಜ್ಞಾನಗಳು ಸಂಪೂರ್ಣವಾಗಿ ಹೊಸವೇನೂ ಅಲ್ಲ. ಸುಮಾರು ಎರಡು ದಶಕಗಳಿಂದ ಅವು ಒಂದಲ್ಲ ಇನ್ನೊಂದು ಸ್ವರೂಪದಲ್ಲಿ ಇದ್ದಂತಹವೇ. ಆದರೆ ಅವುಗಳ ಬಳಕೆ ಬಹಳ ಕಡಿಮೆಯಾಗಿತ್ತು. ಇತರ ಯಾವುದೇ ಕ್ಷೇತ್ರದಂತೆ ಇಡಿ ವಿಶ್ವದಲ್ಲಿ ಕೊವಿಡ್-19 ಸಾಂಕ್ರಾಮಿಕ ರೋಗವು ಶಿಕ್ಷಣ ಕ್ಷೇತ್ರದಲ್ಲೂ ಅಡ್ಡಿಯುಂಟುಮಾಡಿ ಮಾರ್ಚ್ 2020 ರಲ್ಲಿ ಸಂಪೂರ್ಣವಾಗಿ ಅದು ಸ್ಥಗಿತವಾಗುವಂತೆ ಮಾಡಿತು. ಆಗ ಡಿಜಿಟಲ್ ಆನ್‌ಲೈನ್ ವಿಧಾನಕ್ಕೆ ಮೊರೆ ಹೋಗುವುದು ಅಂತೆಯೇ ತಂತ್ರಜ್ಞಾನವನ್ನು ಉನ್ನತೀಕರಿಸಿ, ಜನಸಾಮಾನ್ಯರ ಶಿಕ್ಷಣವನ್ನು ಮುಂದುವರಿಸುವುದನ್ನು ಬಿಟ್ಟು ಬೇರೆ ಮಾರ್ಗವಿರಲಿಲ್ಲ. ಭಾರತವೂ ಕೂಡ ಇದಕ್ಕೆ ಹೊರತಾಗಿ ಉಳಿಯಲಿಲ್ಲ. ಶಿಕ್ಷಣ, ಆರೋಗ್ಯ ಅಥವಾ ಆರ್ಥಿಕ ಕ್ಷೇತ್ರವಿರಬಹುದು, ಭಾರತವು ಎಲ್ಲಾ ಕ್ಷೇತ್ರಗಳಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಒಂದು ರಾಷ್ಟ್ರವಾಗಿದೆ. ಫೈಬರ್ ಸಂಪರ್ಕ, ಅಂತರ್ಜಾಲ ಮತ್ತು ಉಪಗ್ರಹಗಳ ಮೂಲಕ, ಡಿಟಿಹೆಚ್ ವಿತರಣೆಯಂತಹ ತಂತ್ರಜ್ಞಾನದ ಮೂಲಕ ನಮ್ಮ ಶಿಕ್ಷಣವು ಅಡೆತಡೆಯಿಲ್ಲದೆ ನಿರಂತರವಾಗಿ ಮುಂದುವರೆದವು. ಆದರೆ ಪ್ರವೇಶಗಳು, ಪರೀಕ್ಷೆಗಳು ಮತ್ತು ಫಲಿತಾಂಶಗಳು ಕೆಲವು ತಿಂಗಳು ತಡವಾದರೂ ಈಗ ಎಲ್ಲವೂ ಸುಸೂತ್ರವಾಗಿ ನಡೆಯುತ್ತಾ ಬಂದಿವೆ. ಹಲವಾರು ರಾಷ್ಟ್ರಗಳು ಇಡಿ ಶೈಕ್ಷಣಿಕ ವರ್ಷವನ್ನು ಕಳೆದುಕೊಂಡವು. ಆದರೆ ನಮ್ಮ ದೇಶದಲ್ಲಿ ಎಲ್ಲಾ ನಾಗರಿಕರಿಗೆ ಲಸಿಕೆ ಮತ್ತು ಕೋವಿನ್ ಅಪ್ಲಿಕೇಶನ್ ಮೂಲಕ ತಕ್ಷಣವೇ ಮೊಬೈಲ್‌ನಲ್ಲಿ ಪ್ರಮಾಣಪತ್ರಗಳ ಆನ್‌ಲೈನ್ ವಿತರಣೆ ಮಾಡಿದ್ದು ಇನ್ನೊಂದು ದೊಡ್ಡ ಸಾಧನೆಯಾಗಿದೆ. ಇದಕ್ಕೆ ಕಾರಣವೇ ರಾಷ್ಟ್ರೀಯ ಡಿಜಿಟಲ್ ಮೂಲಸೌಕರ್ಯ. ಇದೇ ರೀತಿ ನಾವು ಆರ್ಥಿಕ ವಲಯದಲ್ಲೂ ಕಾಣಬಹುದು. ಇಂದು ಇಡಿ ವಿಶ್ವದ 40% ರಷ್ಟು ಹಣಕಾಸು ವಹಿವಾಟು ಭಾರತದ ಡಿಜಿಟಲ್ ವ್ಯವಸ್ಥೆಯ ಮೂಲಕ ನಡೆಯುತ್ತಿದೆ.

ಹಾಗೆಂದ ಮಾತ್ರಕ್ಕೆ ದೇಶದಲ್ಲಿ ಯಾವ ಸವಾಲುಗಳೇ ಇಲ್ಲ ಮತ್ತು ಎಲ್ಲವೂ ಸುಸೂತ್ರವಾಗಿದೆ ಎಂದರ್ಥವೇ? ಖಂಡಿತವಾಗಿಯೂ ಇಲ್ಲ. ಕೊವಿಡ್-19 ಸಾಂಕ್ರಾಮಿಕ ಅವಧಿಯಲ್ಲಿ ನಾವು ಅರಿತ ಶೈಕ್ಷಣಿಕ ಫಲಗಳು ಬಹಳ ಕಳಪೆಯಾಗಿದ್ದವು ಎಂದು ಕೆಲವು ಅಧ್ಯಯನಗಳು ಹೇಳುತ್ತಿವೆ. ನಮ್ಮಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಮಧ್ಯೆ ಡಿಜಿಟಲ್ ತಿಳುವಳಿಕೆಗೆ ಸಂಬಂಧಿಸಿದಂತೆ ಬಹಳ ಅಂತರವಿತ್ತು. ಸಣ್ಣ ಮನೆಗಳಲ್ಲಿ ವಾಸ ಹಾಗೂ ಮಾಲಿನ್ಯ ಪೀಡಿತ ಪ್ರದೇಶಗಳು ಮಾನಸಿಕ ಮತ್ತು ಆರೋಗ್ಯ ಸಮಸ್ಯೆಗಳು ಉಲ್ಬಣಗೊಳ್ಳಲು ಕಾರಣವಾದವು. ಬಹುತೇಕ ಮಕ್ಕಳು ಅಂತರ್ಜಾಲ ಸಂಪರ್ಕ, ಸಾಧನ ಹಾಗೂ ಸಮಯಕ್ಕೆ ಸಂಬಂಧಿಸಿದಂತೆ ಸಮಾನ ಅವಕಾಶ ಹೊಂದಿರಲಿಲ್ಲ. ಆದರೂ ನಮ್ಮ



Scanned with ACE Scanner

Ministry of Education
Government of India

Azadi Ka Amrit Mahotsav




# ಪಿಎಂ ಶ್ರೀ

## ಉದಯೋನ್ಮುಖ ಭಾರತಕ್ಕೆ ಪಿಎಂ ಶಾಲೆಗಳು

### ಭವಿಷ್ಯವನ್ನು ರೂಪಿಸುವ – ನಾಗರಿಕರ ತಯಾರಿ

* ಎನ್ಇಪಿ 2020ರ ಎಲ್ಲ ಅಂಶಗಳನ್ನು ಶಾಲೆಗಳು ಪ್ರದರ್ಶಿಸತಕ್ಕದ್ದು
* ಪ್ರತಿ ಮಗುವಿಗೆ ವಿಶಿಷ್ಟ ಸಂಖ್ಯೆಯ ನೊಂದಾವಣೆ
* ಪ್ರತಿಯೊಂದು ಮಗುವಿನ ನೋಂದಣಿ ಮತ್ತು ಕಲಿಕಾ ಪ್ರಕ್ರಿಯೆಯತ್ತ ಗಮನಹರಿಸುವುದು
* ಶಾಲಾ ಪೂರ್ವ ಹಂತದಿಂದ 12ನೆಯ ತರಗತಿಯವರೆಗೆ ಅತ್ಯಾಧುನಿಕ ಜ್ಞಾನಕ್ಕೆ ಮತ್ತು 21ನೆಯ ಶತಮಾನದ ಕೌಶಲ್ಯಗಳಿಗೆ ಪರಿಚಯ ಮಾಡಿಸುವುದು
* 3ನೆಯ ತರಗತಿಯ ವೇಳೆಗೆ ಪ್ರತಿಯೊಂದು ಮಗುವು ಮೂಲ ಸಾಕ್ಷರತೆ ಮತ್ತು ಸಂಖ್ಯಾಜ್ಞಾನವನ್ನು ಪಡೆದಿರತಕ್ಕದ್ದು
* ಮಾಧ್ಯಮಿಕ ಶಾಲೆಯಲ್ಲಿ ಪ್ರತಿಯೊಂದು ಮಗುವಿಗೆ ವೃತ್ತಿಶಿಕ್ಷಣವನ್ನು ಪರಿಚಯಿಸುವುದು
* ಪ್ರತಿಯೊಂದು ಮಾಧ್ಯಮಿಕ ತರಗತಿಯನ್ನು ಪ್ರತಿ ಮಗುವು ಕನಿಷ್ಠ ಒಂದು ಕೌಶಲ್ಯದೊಂದಿಗೆ ಉತ್ತೀರ್ಣವಾಗುವುದು
* ಪ್ರತಿಯೊಂದು ಮಗುವಿಗೆ ಕ್ರೀಡೆ, ಕಲೆ, ಐಸಿಟಿ
* ಪ್ರತಿಯೊಂದು ತರಗತಿಯು ಸೃಜನಶೀಲ ಶಿಕ್ಷಣ ಕಲೆಯಲ್ಲಿ ತೊಡಗುವುದು
* ಪ್ರತಿಯೊಂದು ಶಾಲೆಯು ಮಾರ್ಗದರ್ಶನಕ್ಕಾಗಿ ಉನ್ನತ ಶಿಕ್ಷಣ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿರತಕ್ಕದ್ದು/ಜೋಡಿಸಲ್ಪಟ್ಟಿರುವುದು
* ಪ್ರತಿಯೊಂದು ಶಾಲೆಯು ಸ್ಥಳೀಯ ಉದ್ದಿಮೆದಾರಿಕೆ ಪರಿಸರದೊಂದಿಗೆ ಸಂಪರ್ಕ ಹೊಂದಿರತಕ್ಕದ್ದು/ಜೋಡಿಸಲ್ಪಟ್ಟಿರುವುದು
* ಪ್ರತಿಯೊಂದು ಶಾಲೆಯು ಹಸಿರು ಶಾಲೆಯಾಗಿರತಕ್ಕದ್ದು
* ಚಾರಿತ್ರ್ಯ ನಿರ್ಮಾಣ, ಹಸಿರು ಜೀವನಶೈಲಿ, ನಾಗರಿಕ ಮೌಲ್ಯ, ಮೂಲಭೂತ ಕರ್ತವ್ಯಗಳು ಮತ್ತು ದೇಶವನ್ನು ಕಟ್ಟುವ ಜವಾಬ್ದಾರಿಗಳತ್ತ ಗಮನಹರಿಸಬೇಕಾದ್ದು ಅತ್ಯಗತ್ಯ
* ಪ್ರತಿಯೊಂದು ಶಾಲೆಯು ಆಧುನಿಕ ಶೈಕ್ಷಣಿಕ, ಸೇರ್ಪಡೆಯ ಮತ್ತು ಕೈಗೆಟಕುವ ಮೂಲಸೌಕರ್ಯಗಳಿಂದ ಸಜ್ಜಾಗಿರತಕ್ಕದ್ದು
* ಪ್ರತಿಶಾಲೆಯಿಂದ ಆನ್‌ಲೈನ್‌ನಲ್ಲಿ ಶಾಲಾಗುಣಮಟ್ಟ ಮಾಪನ ಚೌಕಟ್ಟು (ಎಸ್‌ಕ್ಯುಎಎಫ್) ಸ್ವಯಂ ಘೋಷಣೆ



@EduMinOfIndia @EduMinOfIndia HRDMinistry @eduminofindia


ದೇಶದ ಪರಿಸ್ಥಿತಿ ಇತರ ದೇಶಗಳಿಗಿಂತ ಉತ್ತಮವಾಗಿತ್ತು. ಇದಕ್ಕೆ ಕಾರಣವೆಂದರೆ ಉಪಗ್ರಹದ ಮೂಲಕ ನೇರವಾಗಿ ಬಹು ದೂರದ ಮನೆಗಳಿಗೂ ಸಂಪರ್ಕ ನೀಡುವ ವ್ಯವಸ್ಥೆ ಮಾಡಿದ್ದು ಮತ್ತು ಕಡಿಮೆ ಬೆಲೆಯಲ್ಲಿ ಡೇಟಾ ದರ ಒದಗಿಸಿದ್ದು.


ಶಿಕ್ಷಣವು ಕೈಗೆಟಕುವಂತಾಗಲು ಮತ್ತು ಗುಣಮಟ್ಟ ಕಾಪಾಡಿಕೊಳ್ಳಲು ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಲಾಗುತ್ತಿದೆ ಎಂದು ನಾವು ನೋಡೋಣ. 2005 ರಲ್ಲಿಯೇ ಎನ್‌ಪಿಟಿಇಎಲ್ (ತಂತ್ರಜ್ಞಾನ ವರ್ಧಿತ ಕಲಿಕೆಯ ರಾಷ್ಟ್ರೀಯ ಕಾರ್ಯಕ್ರಮ) ಕೋರ್ಸುಗಳಾಗಿ ಐಐಟಿಗಳ ಅಥವಾ ಇನ್ಸಿಟ್ಯೂಟುಗಳ ಸ್ಟುಡಿಯೊಗಳಲ್ಲಿ ತರಗತಿ ಕೊಠಡಿಗಳಲ್ಲಿ ವಿಡಿಯೊ-ರೆಕಾರ್ಡ್ ಆದ ಎಂಜಿನಿಯರಿಂಗ್ ಕೋರ್ಸ್‌ಗಳು ಪ್ರಾರಂಭವಾದವು. ಇವುಗಳನ್ನು ಐಐಟಿ ಮದ್ರಾಸ್‌ನ ಸಿ.ಡಿ.ಗಳಲ್ಲಿ ಮಾಡಿ ಮತ್ತು ಎನ್‌ಪಿಟಿಇಎಲ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದಾಗಿತ್ತು. ಹೀಗಾಗಿ, ಪರೋಕ್ಷವಾಗಿ 2 ಮತ್ತು 3ನೆಯ ಹಂತದ ಕಾಲೇಜುಗಳಲ್ಲಿ ಅತ್ಯುತ್ತಮ ಪ್ರಾಧ್ಯಾಪಕರ ಉಪನ್ಯಾಸಗಳಿಗೆ ಪ್ರವೇಶವನ್ನು ಒದಗಿಸಲಾಗಿತ್ತು. ಇದು ಮೊದಲ ಹಂತದ ಸಬಲೀಕರಣವಾಗಿದ್ದು ತದ ನಂತರ 2008 ರಲ್ಲಿ ಉನ್ನತ ಮಟ್ಟದ ಉಪಕರಣಗಳು ಇರದ ಎಲ್ಲಾ ಕಾಲೇಜುಗಳಿಗೆ ಸಿಮ್ಯುಲೇಶನ್ ಆಧರಿತ ಪ್ರಯೋಗಗಳೊಂದಿಗೆ ವರ್ಚುವಲ್ ಲ್ಯಾಬ್‌ಗಳ ಸೌಲಭ್ಯವನ್ನು ನೀಡಲಾಯಿತು. ವರ್ಚುವಲ್ ಲ್ಯಾಬ್‌ಗಳ ಮೂಲಕ ಕಲಿಕೆಯು ಮತ್ತೊಂದು ಸಬಲೀಕರಣದ



Scanned with ACE Scanner

Ministry of Education
Government of India

Azadi Ka Amrit Mahotsav



# ರಾಷ್ಟ್ರೀಯ ಶಿಕ್ಷಣ ನೀತಿ 2020

## ಇಲ್ಲಿಯವರೆಗಿನ ಮುನ್ನಡೆ ಮತ್ತು ಮುಂದಿನ ದಾರಿ

ಇಟಿ ಮತ್ತು ಐಸಿಟಿ (ಶೈಕ್ಷಣಿಕ ತಂತ್ರಜ್ಞಾನ ಮತ್ತು ಮಾಹಿತಿ ಹಾಗೂ ಸಂಪರ್ಕ ತಂತ್ರಜ್ಞಾನ) ಗಳ ಸಮಗ್ರೀಕರಣದ ಮೂಲಕ **ಶಿಕ್ಷಕರ ತರಬೇತಿ ಮತ್ತು ಮಾರ್ಗದರ್ಶನ**

### ಪ್ರಮುಖ ಪ್ರಯತ್ನಗಳು

ಹಲವಾರು ಐಸಿಟಿ ಉಪಕರಣಗಳು ಮತ್ತು ಡಿಜಿಟಲ್ ಮುಂದೊಡಗುಗಳ ಮೂಲಕ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಇತರೆ ಪಾಲುದಾರರಿಗೆ ತರಬೇತಿ ನೀಡಲು ಸಿಐಇಟಿ–ಎನ್ ಸಿಇಆರ್‌ಟಿ ಮುಂದೊಡಗಿನ ಒಂದು ಸರಣಿ ವೆಬಿನಾರ್ ಉಪಕ್ರಮ

ಯುಟ್ಯೂಬ್ ಲೈವ್, ಮೂಲಕ ಪ್ರಧಾನಮಂತ್ರಿ ಇವಿದ್ಯಾ ಡಿಟಿಎಚ್ ಟಿವಿ 12 ವಾಹಿನಿಗಳಲ್ಲಿ ಮತ್ತು ಮೊಬೈಲ್ ಆ್ಯಪ್‌ಗಳ ಮೂಲಕ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಹಲವಾರು ಕಲಿಕಾ ತರಗತಿಗಳನ್ನು ಆಯೋಜಿಸಲಾಗಿತ್ತು.

ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನಕ್ಕಾಗಿ ಐಸಿಟಿ ಉಪಕರಣಗಳಲ್ಲಿ ಪ್ರತಿ ಒಂದು ಗಂಟೆಯ 369 ಲೈವ್ ನೇರ ಸಭೆಗಳನ್ನು ಏರ್ಪಡಿಸಲಾಗಿತ್ತು (ಜುಲೈ 19,2021ವರೆಗೆ)

@EduMinOfIndia @EduMinOfIndia HRDMinistry @eduminofindia


ಹಂತವಾಗಿತ್ತು. ಈ ಪ್ರವಚನ ಪಾಠಗಳನ್ನು ಪ್ರಮುಖ ಶಿಕ್ಷಣ ಸಂಸ್ಥೆಗಳಿಗೆ ನೀಡಿದ 1 ಜಿಬಿಪಿಎಸ್ ಇಂಟರ್ನೆಟ್ ಸಂಪರ್ಕದ ಮೂಲಕ ಪಡೆಯುವುದು ಈ ನಿಟ್ಟಿನಲ್ಲಿ ಮತ್ತೊಂದು ಪ್ರಮುಖ ಮೈಲಿಗಲ್ಲಾಗಿದೆ.

ರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖವಾಗಿರುವ ಸಂಸ್ಥೆಗಳ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಈ ಪ್ರಯತ್ನಗಳು ನಡೆಯುತ್ತಿದ್ದು ವೈಯಕ್ತಿಕ ಅಥವಾ ಆರೋಗ್ಯ ಸಮಸ್ಯೆಗಳಿಂದಾಗಿ ತರಗತಿಗಳಿಗೆ ಪ್ರವೇಶ ಪಡೆಯದವರಿಗೆ ಶಿಕ್ಷಣವನ್ನು ಒದಗಿಸಲು ರಾಜ್ಯ, ವಿಶ್ವವಿದ್ಯಾಲಯ ಮತ್ತು ಕಾಲೇಜು ಮಟ್ಟದಲ್ಲೂ ಆನ್‌ಲೈನ್ ಕಲಿಕಾ ವೇದಿಕೆಗಳನ್ನು (ಎಲ್‌ಎಮ್‌ಎಸ್) ರೂಪಿಸಲು ಅಥವಾ ಇದರಲ್ಲಿ ತೊಡಗಲು ಹಲವಾರು ಉತ್ಸಾಹಿ ತಜ್ಞರಿಂದ ಪ್ರಯತ್ನಗಳು ನಡೆದವು. ಮುಕ್ತ ಶಿಕ್ಷಣ ಸಂಪನ್ಮೂಲಗಳ ಹರಡುವಿಕೆ ಮತ್ತು ಅವುಗಳು ವಿಶ್ವದಾದ್ಯಂತ ಉಚಿತವಾಗಿ ಸಿಗುತ್ತಿರುವುದು ಶೈಕ್ಷಣಿಕ ಸಬಲೀಕರಣವನ್ನು ಮತ್ತಷ್ಟು ದೃಢಪಡಿಸಿವೆ.

ಪರಿಣಾಮಕಾರಿಯಾದ ಬೋಧನೆ ಮತ್ತು ಕಲಿಕೆಗೆ ಶಿಕ್ಷಕರ ತರಬೇತಿಯು ಬಹಳ ಮುಖ್ಯ. ಆದರೆ ಅನೇಕ ರಾಜ್ಯಗಳ ಶ್ರೇಣಿ–2 ಮತ್ತು ಶ್ರೇಣಿ–3 ಕಾಲೇಜುಗಳಲ್ಲಿ ಉತ್ತಮ ತರಬೇತಿ ಪಡೆದ ಶಿಕ್ಷಕರ ಒಂದು ದೊಡ್ಡ ಕೊರತೆಯಿದೆ. ದೈಹಿಕ ಉಪಸ್ಥಿತಿ ಕ್ರಮದಲ್ಲಿ ಏರ್ಪಡಿಸುವ ತರಬೇತಿ ಕಾರ್ಯಕ್ರಮಗಳಲ್ಲಿ ಸಂಸ್ಥೆಯಿಂದ ರಜೆ, ಪ್ರಯಾಣ ಮತ್ತು ವಸತಿ ಖರ್ಚುಗಳಿಗೆ ಸಂಬಂಧಪಟ್ಟಂತೆ ಹಲವಾರು ಮಿತಿಗಳಿದ್ದವು. ಕೆಲವು ಮಹಿಳಾ ಶಿಕ್ಷಕರು



Scanned with ACE Scanner




ಮತ್ತು ಅಧ್ಯಾಪಕರು ತಮ್ಮ ಕುಟುಂಬ ಮತ್ತು ಚಿಕ್ಕ ಮಕ್ಕಳ ಜವಾಬ್ದಾರಿಗಳನ್ನು ಪರಿಗಣಿಸಿ ಹೊರಗೆ ಬರಲು ಸಾಧ್ಯವಾಗದ ಸಮಸ್ಯೆಗಳನ್ನು ಹೊಂದಿದ್ದರು. ಅಮೃತ ವಿಶ್ವವಿದ್ಯಾಲಯವು ರಚಿಸಿದ ಸರಳವಾದ ಎ-ವ್ಯೂ ವೇದಿಕೆಯ ಎಂಹೆಚ್‌ಆರ್‌ಡಿ ಬೆಂಬಲದ ಆನ್‌ಲೈನ್ ತರಬೇತಿ ಬಹಳ ಯಶಸ್ವಿಯಾಯಿತು. ಐಐಟಿ ಬಾಂಬೆ ಮತ್ತು ಐಐಟಿ ಖರಗ್ಪುರ ನಡೆಸುತ್ತಿರುವ ಟಿ10ಕೆಟಿ ಕಾರ್ಯಕ್ರಮವು ಬಹಳಷ್ಟು ಸಂಖ್ಯೆಯ ಅಧ್ಯಾಪಕರಿಗೆ ಅದರಲ್ಲೂ ಹೆಚ್ಚಾಗಿ ಮಹಿಳೆಯರಿಗೆ ತರಬೇತಿ ನೀಡುವಲ್ಲಿ ಯಶಸ್ವಿಯಾಗಿದೆ. ಇದು ತಂತ್ರಜ್ಞಾನ ಮತ್ತು ಇಂಟರ್ನೆಟ್ ಸೌಲಭ್ಯದಿಂದಲೇ ಸಾಧ್ಯವಾದದ್ದು. ಎಐಸಿಟಿಇಯ ಅಟಲ್ ಅಕಾಡೆಮಿ ಕಾರ್ಯಕ್ರಮಗಳಲ್ಲಿ ಹೊರಹೊಮ್ಮುತ್ತಿರುವ ಉನ್ನತ ಮಟ್ಟದ ತಂತ್ರಜ್ಞಾನಗಳಾದ ಎಐ, ಎಮ್‌ಎಲ್, ರೊಬೊಟಿಕ್ಸ್, ಡ್ರೋನ್ಸ್, ಸೈಬರ್ ಸೆಕ್ಯುರಿಟಿ, ಕ್ಲೌಡ್ ಕಂಪ್ಯೂಟಿಂಗ್, ಡೇಟಾ ಅನಾಲಿಟಿಕ್ಸ್ ಮತ್ತು ಕ್ವಾಂಟಮ್ ಕಂಪ್ಯೂಟಿಂಗ್‌ಗಳಲ್ಲಿ 1.5 ಲಕ್ಷ ಅಧ್ಯಾಪಕರು ವರ್ಷದಿಂದ ವರ್ಷಕ್ಕೆ ತರಬೇತಿ ಪಡೆದಿರುವುದು ಮತ್ತೊಂದು ಯಶಸ್ಸಿನ ನಿದರ್ಶನವಾಗಿದೆ. ಎಐಸಿಟಿಇಯು ಇಂಜಿನಿಯರಿಂಗ್‌ನ ಪಾತ್ರ, ಬೋಧನಾ ಶಿಕ್ಷಣ, ಪಠ್ಯಕ್ರಮದ ರಚನೆ, ತಂತ್ರಜ್ಞಾನ ಬಳಕೆ, ಪರೀಕ್ಷಾ ಪತ್ರಿಕೆ ತಯಾರಿ, ಸಂಶೋಧನೆ, ಸೃಜನಶೀಲತೆ ಮತ್ತು ಸಂಸ್ಥೆಯ ಆಡಳಿತವೆಂಬ ಎಂಟು ಫ್ಯಾಕಲ್ಟಿ ಇಂಡಕ್ಷನ್ ಮಾಡ್ಯೂಲ್‌ಗಳನ್ನು ಕೂಡ ತಯಾರಿಸಿದೆ. ಇದು ಶಿಕ್ಷಣ ವಲಯವನ್ನು ಸೇರುವ ನವ ಶಿಕ್ಷಕರನ್ನು ಸಬಲಗೊಳಿಸುತ್ತದೆ.

ಈ ಬೆಳವಣಿಗೆಗಳು ಜರುಗುತ್ತಿರುವಾಗಲೇ 2011 ರಲ್ಲಿ ಮೊಟ್ಟಮೊದಲ ಬಾರಿಗೆ ಎಂಓಓಸಿ (ಮಾಸಿವ್ ಓಪನ್ ಆನ್‌ಲೈನ್ ಕೋರ್ಸ್) ಅಸ್ತಿತ್ವಕ್ಕೆ ಬಂತು. ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾನಿಲಯದಿಂದ ಕೋರ್ಸೆರಾ, ಎಂಐಟಿಯ ಇಡಿಎಕ್ಸ್ ಮತ್ತು ಇನ್ನೂ ಹಲವು ಬಹಳ ಜನಪ್ರಿಯ ಗಳಿಸಿದವು. ತಾನೂ ಹಿಂದೆ ಬೀಳಬಾರದೆಂದು ಭಾರತವು ಎಂಹೆಚ್‌ಆರ್‌ಡಿಯ ಧನಸಹಾಯದೊಂದಿಗೆ ಎಐಸಿಟಿಇ ಮೂಲಕ ಸ್ವಯಂ ಎಂಬ ತನ್ನದೇ ಆದ ಸ್ಥಳೀಯ ಎಂಓಓಸಿ ಪ್ಲಾಟ್‌ಫಾರ್ಮ್‌ಅನ್ನು ರೂಪಿಸಿತು. ಐಐಟಿಇ ರೂಪಿಸಿದ ಈ ಬಲಪಡಿಸಿದ ಸ್ವಯಂ 2.0 ಎಂಓಓಸಿಯು ಈಗ 3000 ಕ್ಕೂ ಹೆಚ್ಚು ಕೋರ್ಸ್‌ಗಳನ್ನು ಹೊಂದಿದ್ದು ದೇಶದ ಮೂಲೆ ಮೂಲೆಗಳಿಂದಲ್ಲದೆ ಹಲವಾರು ಅಭಿವೃದ್ಧಿಶೀಲ ರಾಷ್ಟ್ರಗಳಿಂದ 3 ಕೋಟಿ ನೊಂದಾಯಿತ ಬಳಕೆದಾರರನ್ನು ಹೊಂದಿದೆ. ಇಲ್ಲಿ ಕಲೆ, ವಾಣಿಜ್ಯ, ವಿಜ್ಞಾನ, ಎಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ಕೋರ್ಸ್‌ಗಳಿದ್ದು ಇವೆಲ್ಲವೂ ಉಚಿತವಾಗಿ ಸಿಗುತ್ತವೆ.. ಇದು ವಿದ್ಯಾರ್ಥಿಗಳನ್ನು ಇನ್ನಷ್ಟು ಸಬಲರನ್ನಾಗಿಸಿದೆ.

ವಿದ್ಯಾರ್ಥಿಗಳಿಗೆ ಉದ್ಯೋಗ ಸಾಮರ್ಥ್ಯವಿಲ್ಲವೆಂಬುದು ಉದ್ಯಮ ಸಂಸ್ಥೆಗಳು ಆಗಾಗ್ಗೆ ಎತ್ತುವ ಒಂದು ಸಮಸ್ಯೆಯಾಗಿದೆ. ಹೀಗಾಗಿ ಇದನ್ನು ನಿವಾರಿಸಲು ನೇರ ಅನುಭವ, ಅನುಭವ ಕಲಿಕೆ ಮತ್ತು ಪ್ರಾಯೋಗಿಕ ಅಪ್ಲಿಕೇಶನ್ ಆಧರಿತ ತರಬೇತಿ ಬಹಳ ಅಗತ್ಯವೆಂದು ಭಾವಿಸಲಾಗಿದೆ. ಆದ್ದರಿಂದ, ವಿದ್ಯಾರ್ಥಿಗಳಿಗೆ ಉದ್ಯಮದ ಜೊತೆ ಸಂಪರ್ಕವನ್ನು ಒದಗಿಸಲು ಒಂದು ವಿಶೇಷ ಇಂಟರ್ನ್‌ಶಿಪ್ ಪೋರ್ಟಲನ್ನು ರಚಿಸಲಾಗಿದೆ. ಇಲ್ಲಿ ಕೈಗಾರಿಕೆಗಳು, ಸಣ್ಣ ಮತ್ತು ದೊಡ್ಡ, ಎಂಎಸ್‌ಎಂಇಗಳು ಮತ್ತು ಸ್ಟಾರ್ಟ್‌ಅಪ್‌ಗಳು ತಮ್ಮ ಇಂಟರ್ನ್‌ಶಿಪ್ ಹುದ್ದೆಗಳ ಅವಕಾಶಗಳನ್ನು ಪ್ರಕಟಿಸುತ್ತವೆ. ಹಾಗೆಯೇ ಇಂಟರ್ನ್‌ಶಿಪ್ ಮಾಡಲು ಇಷ್ಟಪಡುವ ವಿದ್ಯಾರ್ಥಿಗಳು ತಮ್ಮ ಬಯೋಡೇಟಾ, ಸಾಮರ್ಥ್ಯಗಳು ಮತ್ತು ಆಸಕ್ತಿಗಳನ್ನು ಅದರಲ್ಲಿ ಅಪ್‌ಲೋಡ್ ಮಾಡುತ್ತಾರೆ. ಎಐ ಆಧರಿತವಾಗಿ ವಿದ್ಯಾರ್ಥಿಗಳು ಎರಡು ತಿಂಗಳಿಂದ ಆರು ತಿಂಗಳವರೆಗೆ ಇಂಟರ್ನ್‌ಶಿಪ್‌ಗಳನ್ನು ಪಡೆದು ತಮ್ಮ ಕೌಶಲ್ಯಗಳು, ತಿಳಿವಳಿಕೆಯನ್ನು ಸುಧಾರಿಸಿಕೊಂಡು ವರ್ಧಿಸಿಕೊಳ್ಳುತ್ತಾರೆ. ತನ್ಮೂಲಕ ಉದ್ಯೋಗ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಾರೆ. ಸಣ್ಣ ಮತ್ತು ದೊಡ್ಡ ಕಂಪನಿಗಳು ಮತ್ತು ಸ್ಟಾರ್ಟ್‌ಅಪ್‌ಗಳಿಂದ ಪ್ರೋಗ್ರಾಮಿಂಗ್ ಕೌಶಲ್ಯಗಳು, ಉನ್ನತ ಮಟ್ಟದ ಹೊರಹೊಮ್ಮುತ್ತಿರುವ ತಂತ್ರಜ್ಞಾನ ತರಬೇತಿ ಮಾಡ್ಯೂಲ್‌ಗಳು, ಭಾಷಾ ಕೌಶಲ್ಯಗಳು, ಸಂಪರ್ಕ ಕೌಶಲ್ಯಗಳು ಇತ್ಯಾದಿಗಳನ್ನು ಹೆಚ್ಚಿಸಲು ನ್ಯಾಷನಲ್ ಎಜುಕೇಶನಲ್ ಅಲೈಯನ್ಸ್ ಫಾರ್ ಟೆಕ್ನಾಲಜೀಸ್ ಎಂಬ ಮತ್ತೊಂದು ವೇದಿಕೆಯು ಎಐ ಆಧರಿತ ವೈಯಕ್ತಿಕ ಕಲಿಕೆಯ ಉತ್ಪನ್ನಗಳನ್ನು ಆನ್‌ಬೋರ್ಡ್ ಮಾಡಿದೆ. ಇದೂ ಕೂಡ ವಿದ್ಯಾರ್ಥಿಗಳಲ್ಲಿ ಉದ್ಯೋಗ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ಉದ್ಯಮಶೀಲ ಮನೋಭಾವವನ್ನು ರೂಪಿಸಲು ಸಹಾಯ ಮಾಡಿದೆ.

ಮಾತೃಭಾಷೆಯಲ್ಲಿ ಶಿಕ್ಷಣ ಪಡೆದ ದೇಶದ ಗ್ರಾಮೀಣ ಹಾಗೂ ದೂರ ಪ್ರದೇಶಗಳ ಬಹಳಷ್ಟು ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಶಿಕ್ಷಣದ ಖರ್ಚು ಸಮಸ್ಯೆ ಅಡ್ಡಿಯಾಗಿದೆ. ಹಲವು ತಂದೆ ತಾಯಿಗಳ ಆದಾಯವು ಬಹಳ ಕಡಿಮೆಯಾಗಿರುವುದರಿಂದ ಅವರಿಗೆ ತಮ್ಮ ಪ್ರತಿಭಾವಂತ ಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ಪಟ್ಟಣ ಮತ್ತು ನಗರಗಳಿಗೆ ಕಳುಹಿಸಲು ಸಾಧ್ಯವಾಗುವುದಿಲ್ಲ. ಎಐ ಆಧರಿತ ಭಾಷಾಂತರ ಸಾಧನ ಅನುವಾದಿನಿಯನ್ನು ಬಳಸಿಕೊಂಡು ಉನ್ನತ ಗುಣಮಟ್ಟದ ಫಲಿತಾಂಶ ಪೂರಿತ ಪುಸ್ತಕಗಳನ್ನು ಆಯಾ ಆಯಾ ವಿವಿಧ ಭಾರತೀಯ ಮಾತೃಭಾಷೆಯಲ್ಲಿ ಅನುವಾದಿಸಿ ಉನ್ನತ ಶಿಕ್ಷಣವನ್ನು ಒದಗಿಸಿ ತನ್ಮೂಲಕ ದೂರದ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಲಭ್ಯವಾಗುವಂತೆ ಮಾಡಲಾಗುತ್ತಿದೆ. ವಿಶೇಷ ಚೇತನ ಪಿಡಬ್ಲ್ಯುಡಿ ಮಕ್ಕಳನ್ನು ಸಬಲೀಕರಣಗೊಳಿಸಲು ಹಲವಾರು ತಂತ್ರಜ್ಞಾನಗಳು ಕೂಡ ಈಗ ಚಾಲ್ತಿಯಲ್ಲಿವೆ. ಎಆರ್, ವಿಆರ್, ಎಕ್ಸ್‌ಆರ್ ಮತ್ತು ಮೆಟವರ್ಸ್‌ಗಳಂತಹ ತಂತ್ರಜ್ಞಾನಗಳು ಉನ್ನತ ಗುಣಮಟ್ಟದ ವಿಷಯಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವ ಪಠ್ಯ ವಿಷಯವನ್ನು ರಚಿಸಲು ಸಹಾಯ ಮಾಡುತ್ತವೆ.

ಎಂಹೆಚ್‌ಆರ್‌ಡಿನಿಂದ ಧನ ಸಹಾಯವನ್ನು ಹೊಂದಿರುವ ಮತ್ತು ಐಟಿ ಖರಗ್ಪುರದಿಂದ ಸ್ಥಾಪಿಸಲ್ಪಟ್ಟಿರುವ ರಾಷ್ಟ್ರೀಯ ಡಿಜಿಟಲ್ ಲೈಬ್ರರಿ ಪ್ರಾಜೆಕ್ಟ್ ಲಕ್ಷಾಂತರ ಪುಸ್ತಕಗಳು ಮತ್ತು ದಾಸ್ತಾವೇಜುಗಳಿಗೆ ಉಚಿತ ಪ್ರವೇಶವನ್ನು ಒದಗಿಸುತ್ತದೆ. ಅಂತೆಯೇ, ಸಂಶೋಧನಾ ಜರ್ನಲ್‌ಗಳು, ಪ್ರಬಂಧಗಳು ಮತ್ತು ವರದಿಗಳಿಗೆ ಪ್ರವೇಶವನ್ನು ಐಎನ್‌ಎಫ್‌ಎಲ್‌ಐಬಿಎನ್‌ಇಟಿ ಒದಗಿಸುತ್ತದೆ.

ಇದಲ್ಲದೆ ಡಿಜಿಲಾಕರ್/ಎಡುಲಾಕರ್‌ನಲ್ಲಿ ವಿದ್ಯಾರ್ಥಿಗಳು ತಾವು ಗಳಿಸಿರುವ ಎಲ್ಲಾ ಪರಿಚಯ ಪತ್ರಗಳು ಮತ್ತು ಅಂಕಗಳನ್ನು ಸಂಗ್ರಹಿಸಲು ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ಸ್ (ಎಬಿಸಿ) ಅನ್ನು ಒಳಗೊಂಡ ಕೆಲವು ಹೊಸ ಡಿಜಿಟಲ್ ಮತ್ತು ತಾಂತ್ರಿಕ ಮುಂದೊಡಗುಗಳು ಜಾರಿಯಲ್ಲಿವೆ. ವಿದ್ಯಾರ್ಥಿ ಮತ್ತು ಅಧ್ಯಾಪಕರ ನೊಂದಣಿ ಯೋಜನೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ಶಿಕ್ಷಕ ವಿಶಿಷ್ಟವಾದ ಒಂದು ಆಜೀವ ಎಪಿಎಎಆರ್ ಗುರುತಿನ ಚೀಟಿಯನ್ನು ಪಡೆಯುತ್ತಾರೆ ಮತ್ತು ಅದನ್ನು ಆ ವ್ಯಕ್ತಿಯ ಎಬಿಸಿ ದಾಖಲೆಯೊಂದಿಗೆ ಲಿಂಕ್ ಮಾಡಲಾಗುತ್ತದೆ. ಹೀಗಾಗಿ ಆನ್‌ಲೈನ್‌ನಲ್ಲಿ ಪರಿಚಯ ಪತ್ರಗಳನ್ನು ಪ್ರಮಾಣೀಕರಿಸುವುದು ಮತ್ತು ದೃಢೀಕರಿಸುವ ವ್ಯವಸ್ಥೆ ಏರ್ಪಡುತ್ತದೆ. ಎಲ್ಲಾ ಶಿಕ್ಷಣ ಸಂಸ್ಥೆಗಳ ಮಾಹಿತಿ ಸಿಗುವಂತಹ ಒಂದೇ ದೇಶ ಒಂದೇ ಪೋರ್ಟಲ್ (ಒನ್ ನೇಷನ್ ಒನ್ ಡೇಟಾ ಪೋರ್ಟಲ್) ವ್ಯವಸ್ಥೆಯಿಂದ ವಿದ್ಯಾರ್ಥಿಗಳು ಮತ್ತು ಪೋಷಕರು ಮಾಹಿತಿಸಿದ ಆಯ್ಕೆಗಳನ್ನು ಮಾಡಬಹುದು. ಹಾಗೆಯೇ ಭಾರತದ ಸಾಮರ್ಥ್ಯವನ್ನು ಪ್ರದರ್ಶಿಸುವ ಸ್ಟಡಿ ಇನ್ ಇಂಡಿಯಾ ಪೋರ್ಟಲ್ ವಿದೇಶಿ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತದೆ.

ಇಂದು ತಂತ್ರಜ್ಞಾನವು ಅತಿ ವೇಗವಾಗಿ ಬದಲಾಗುತ್ತಿದೆ. ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಣ ಸಂಸ್ಥೆಗಳು ಅಥವಾ ರಾಜ್ಯ ಸರ್ಕಾರಗಳಾಗಲಿ ಎಲ್ಲ ಶಿಕ್ಷಣ ಕ್ಷೇತ್ರದ ಪಾಲುದಾರರಿಗೆ ರಾಷ್ಟ್ರೀಯ ಶೈಕ್ಷಣಿಕ ತಂತ್ರಜ್ಞಾನ ವೇದಿಕೆಯ ಮೂಲಕ ಮಾಹಿತಿಸಿದ ಆಯ್ಕೆಗಳನ್ನು ಒದಗಿಸಲು ಎಲ್ಲಾ ಇತ್ತೀಚಿನ ತಂತ್ರಜ್ಞಾನ ತಿಳಿವಳಿಕೆಯನ್ನು ನೀಡಲು ಪ್ರಯತ್ನಿಸುತ್ತಿದ್ದೇವೆ. ಈ ಮೂಲಕ ಎಲ್ಲರೂ ಪ್ರವೇಶ ಪಡೆಯಬಹುದಾದ, ಸಮಾನ ಅವಕಾಶವಿರುವ, ಕೈಗೆಟುಕುವ ಗುಣಮಟ್ಟದ ಶಿಕ್ಷಣಕ್ಕಾಗಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ನಾವು 21 ನೇ ಶತಮಾನದ ಸಶಕ್ತ ಹೊಸ ಭಾರತವನ್ನು ರಚಿಸಬಹುದಾಗಿದೆ.



Scanned with ACE Scanner

# ಸಮಗ್ರ ನಾವಿನ್ಯ ಪರಿಸರ ವ್ಯವಸ್ಥೆಯ ನಿರ್ಮಾಣ

* ಪ್ರಮೀತ್ ದಾಶ್

ಕೈಗಾರಿಕಾ ಕ್ರಾಂತಿಯೊಂದಿಗೆ ಅದರಲ್ಲೂ ವಿಶೇಷವಾಗಿ ಕಳೆದ ಶತಮಾನದಲ್ಲಿ, ಆವಿಷ್ಕಾರ / ನಾವಿನ್ಯತೆಯ ಪ್ರಭಾವವು ಹೆಚ್ಚು ಸ್ಪಷ್ಟವಾಗಿದೆ. ಇದು ತಂತ್ರಜ್ಞಾನದಲ್ಲಿ ರಚನಾತ್ಮಕ ಬದಲಾವಣೆಗಳಿಗೆ ಮತ್ತು ಪ್ರಪಂಚದಾದ್ಯಂತ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳಲ್ಲಿ ಗಮನಾರ್ಹ ಸುಧಾರಣೆಗಳಿಗೆ ಕಾರಣವಾಗಿದೆ. ಇದು ಬೆಳೆಯುತ್ತಿರುವ ಜನಸಂಖ್ಯೆಯ ಅಗತ್ಯಗಳು ಹಾಗೂ ಬೇಡಿಕೆಗಳಿಗೆ ಬೆಂಬಲವಾಗಿ ನಿಂತಿದೆ. ಜೊತೆಗೆ ಇದು ನಮ್ಮ ಜೀವನವನ್ನು ಉತ್ತಮಗೊಳಿಸುವುದರೊಂದಿಗೆ ಸಮೃದ್ಧ-ವಾಗಿಸಿದೆ.

### ನಾವಿನ್ಯತೆ ಎಂದರೇನು?

ನಾವಿನ್ಯತೆ ಎಂದರೆ ಸಮಸ್ಯೆಗಳಿಗೆ ಅರ್ಥಪೂರ್ಣ ಹೊಸ ಪರಿಹಾರಗಳನ್ನು ಸೃಷ್ಟಿಸುವ ಪ್ರಕ್ರಿಯೆ ಮತ್ತು ಹೊಸ ಅಥವಾ ಈಗಾಗಲೇ ಇರುವ ತಂತ್ರಜ್ಞಾನಗಳಿಗೆ ಹೊಸ ಅನ್ವಯಿಕಗಳನ್ನು ಸೃಷ್ಟಿಸುವುದು.

ಸಾಂಪ್ರದಾಯಿಕ ಜಿಡಿಪಿ ಅಂದಾಜಿನ ಪ್ರಕಾರ ಪ್ರಪಂಚದ ನೈಜ ಜಿಡಿಪಿಯು ಕ್ರಿಶ 1700 ರವರೆಗೆ ವರ್ಷಕ್ಕೆ 0.1% ಕ್ಕಿಂತ ಕಡಿಮೆಯಿತ್ತು. ಏಕೆಂದರೆ ಇದು ಜನಸಂಖ್ಯೆ ಹೆಚ್ಚಳ ಜೊತೆಗೆ ಬಳಕೆಯ ಹೆಚ್ಚಳದೊಂದಿಗೆ ಸಂಬಂಧ ಹೊಂದಿದೆ. ಜಾಗತಿಕ ಜಿಡಿಪಿಯು 1750ರ ನಂತರ ತೀವ್ರ ಬೆಳವಣಿಗೆ ಕಂಡಿತು. ಕೈಗಾರಿಕಾ ಕ್ರಾಂತಿಯ ಸಮಯದಲ್ಲಿ ತಂತ್ರಜ್ಞಾನದ ಆಗಮನ ಮತ್ತು ತಂತ್ರಜ್ಞಾನಾಧರಿತ ಆವಿಷ್ಕಾರಗಳು ಈ ಬದಲಾವಣೆಗೆ ಕಾರಣವೆಂದು ಹೇಳಬಹುದು. 18 ನೇ ಶತಮಾನದಲ್ಲಿ ಉಗಿಯಂತ್ರದ ತಂತ್ರಜ್ಞಾನದ



**“ಭವಿಷ್ಯವನ್ನು ಕಾಣುವ ಅತ್ಯುತ್ತಮ ಮಾರ್ಗವೆಂದರೆ ಅದನ್ನು ರೂಪಿಸಿಕೊಳ್ಳುವುದು” – ಅನಾಮಿಕ.**

**ನಾವಿನ್ಯತೆಯು ಅನಾದಿ ಕಾಲದಿಂದಲೂ ಮಾನವ ಅಭಿವೃದ್ಧಿಯ ಮೂಲಾಧಾರ-ವಾಗಿದೆ. ಬೆಂಕಿಯ ಆವಿಷ್ಕಾರದಿಂದ ಹಿಡಿದು ಅದನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವವರೆಗೆ ಚಕ್ರದ ಆವಿಷ್ಕಾರ ಮತ್ತು ಅದರ ಹಲವು ಬಗೆಯ ಬಳಕೆಗಳವರೆಗೆ, ನಾವಿನ್ಯತೆಯು ಇತಿಹಾಸಪೂರ್ವ ಕಾಲದಿಂದಲೂ ಕ್ರಾಂತಿಕಾರಿ ರೂಪಾಂತರಗಳಿಗೆ ಕಾರಣವಾಗಿದೆ.**

* ಕಾರ್ಯಕ್ರಮ ನಿರ್ದೇಶಕರು, ಅಟಲ್ ಇನ್ನೋವೇಷನ್ ಮಿಷನ್, ನೀತಿ ಆಯೋಗ. ಇಮೇಲ್: pramitdash.aim@govcontractor.in



Scanned with ACE Scanner

ಅಭಿವೃದ್ಧಿಯು ಇದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. ಇದು ಸಣ್ಣ ಮತ್ತು ಹೆಚ್ಚು ಪರಿಣಾಮಕಾರಿ ಎಂಜಿನ್‌ಗಳ ರಚನೆಗೆ ಕಾರಣವಾಯಿತು. ಇದರಿಂದ ಸರಕುಗಳು ಸಾಮೂಹಿಕ ಉತ್ಪಾದನೆಗೆ ಕಾರಣವಾಯಿತು. ಸರಕು ಹಾಗೂ ಜನರ ಸಾಗಾಣಿಕೆಯಲ್ಲಿ ಕ್ರಾಂತಿಯನ್ನುಂಟುಮಾಡಿತು. ಇಡೀ ಜಾಗತಿಕ ಆರ್ಥಿಕತೆಯು ಕೇವಲ ಒಂದು ಪರಿಹಾರದೊಂದಿಗೆ ಹಲವಾರು ಹಂತ ಮೇಲೇರಿತು.

ಹೀಗಾಗಿ ದೇಶದ ಆರ್ಥಿಕತೆಯನ್ನು ರೂಪಿಸುವಲ್ಲಿ ನಾವೀನ್ಯತೆ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಆರ್ಥಿಕ ದೃಷ್ಟಿಕೋನದಿಂದ ನೋಡಿದಾಗ ಬೆಳವಣಿಗೆಯ ಸಿದ್ಧಾಂತವು ಒಟ್ಟು ಉತ್ಪಾದಕತೆಯನ್ನು ಕಾರ್ಮಿಕ, ಬಂಡವಾಳ ಮತ್ತು ಒಟ್ಟು ಅಂಶ ಉತ್ಪಾದಕತೆಯ ಕಾರ್ಯವೆಂದು ವ್ಯಾಖ್ಯಾನಿಸಲಾಗಿದೆ. ಸರಳವಾಗಿ ಹೇಳುವುದಾದರೆ, ಒಟ್ಟು ಉತ್ಪಾದನೆ ಅಥವಾ ಜಿಡಿಪಿಗಿಂತ ಒಟ್ಟು ಘಟಕ ಉತ್ಪಾದಕತೆ – ಟಿಎಫ್‌ಟಿಗೆ ಅನುಗುಣವಾಗಿರುತ್ತದೆ. ಅಲ್ಲಿ ನಾವೀನ್ಯತೆ, ತಂತ್ರಜ್ಞಾನದ ಬೆಳವಣಿಗೆ ಮತ್ತು ಗಳಿಕೆಗಳು ಟಿಎಫ್‌ಪಿಯ ದೊಡ್ಡ ಉಪ–ವಿಭಾಗಗಳಾಗಿವೆ.

ಪ್ರಾಯೋಗಿಕವಾಗಿ, ವಿಶ್ವದ ಅತ್ಯಂತ ಅಭಿವೃದ್ಧಿ ಹೊಂದಿದ ದೇಶಗಳಾದ ಅಮೆರಿಕ, ಯುಕೆ, ಫ್ರಾನ್ಸ್, ಜರ್ಮನಿ, ಜಪಾನ್ ತಾಂತ್ರಿಕವಾಗಿ ಅತ್ಯಂತ ನಾವಿನ್ಯತೆಯನ್ನು ಹೊಂದಿವೆ.

ಇದು ದೇಶದ ಬೆಳವಣಿಗೆಯ ಕತೆಯಲ್ಲಿ ನಾವಿನ್ಯತೆಯ ಪ್ರಾಮುಖ್ಯತೆಯನ್ನು ಹೇಳುತ್ತದೆ. ಆದರೆ ದೇಶವು ತನ್ನ ವಂಶವಾಹಿನಿಯಲ್ಲೇ ನಾವಿನ್ಯತೆಯನ್ನು ಹೇಗೆ ಹೊಂದಿರುತ್ತದೆ?

ಐತಿಹಾಸಿಕವಾಗಿ ನೋಡಿದಾಗ ವಿಶ್ವದಾದ್ಯಂತ ಈ ಬೀಜವನ್ನು ಬಿತ್ತುವ ಕೆಲಸವನ್ನು ಸರ್ಕಾರಗಳು ಮೊದಲು ಮಾಡುತ್ತವೆ.

ಇಸ್ರೇಲ್‌ನ ಇಸ್ರೇಲ್ ಡಿಫೆನ್ಸ್ ಫೋರ್ಸಸ್ ಆಗಿರಬಹುದು ಅಥವಾ ಅಮೆರಿಕೆಯ ಎಸ್‌ಬಿಐ ಮತ್ತು ಸ್ಮಾಲ್ ಬಿಸಿನೆಸ್ ಇನ್ನೋವೇಶನ್ ರಿಸರ್ಚ್ ಆಗಿರಲಿ ನಾವಿನ್ಯತೆಯ ಕೇಂದ್ರ ವಿಚಾರದಲ್ಲಿ ಎಲ್ಲ ಕಡೆ ಸರ್ಕಾರದ ಪಾತ್ರವು ಅತ್ಯಂತ ಮಹತ್ವದ್ದಾಗಿದೆ.

ATAL INNOVATION MISSION

ಸಹಸ್ರಮಾನದ ತಿರುವಿನ ಘಟ್ಟದಲ್ಲಿ ತಳಮಟ್ಟದ ತಾಂತ್ರಿಕ ಆವಿಷ್ಕಾರಗಳು ಮತ್ತು ಸಾಂಪ್ರದಾಯಿಕ ಜ್ಞಾನವನ್ನು ಬಲಪಡಿಸಲು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಭಾರತವು ರಾಷ್ಟ್ರೀಯ ಆವಿಷ್ಕಾರ ಪ್ರತಿಷ್ಠಾನವನ್ನು (ಎನ್‌ಐಎಫ್) ಸ್ಥಾಪಿಸಿತು. ಸುಮಾರು ಒಂದು ದಶಕದ ನಂತರ, 2013 ರಲ್ಲಿ, ವಿಜ್ಞಾನ, ತಂತ್ರಜ್ಞಾನ ಮತ್ತು ನಾವಿನ್ಯತೆ ನೀತಿಯನ್ನು ತರಲಾಯಿತು. ಭಾರತವನ್ನು ಜಾಗತಿಕವಾಗಿ ವೈಜ್ಞಾನಿಕವಾಗಿ ಪ್ರಬಲವಾಗಿರುವ ಐದು ಶಕ್ತಿಗಳಲ್ಲಿ ಒಂದನ್ನಾಗಿಸಲು ನೀತಿಯು ಬಯಸುತ್ತದೆ. ಇದಕ್ಕಾಗಿ ಕಾರ್ಯಸಾಧ್ಯವಾದಂತಹ ವಿಜ್ಞಾನ, ಸಂಶೋಧನೆ ಮತ್ತು ನಾವಿನ್ಯತೆ ವ್ಯವಸ್ಥೆಯನ್ನು (ಸೃಷ್ಟಿ) ಸ್ಥಾಪಿಸುವ ಆಶಯವನ್ನು ಹೊಂದಲಾಗಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ನಾವಿನ್ಯತೆ ನೀತಿ 2013ರ ಅನ್ವಯ ದೇಶದಾದ್ಯಂತ ನಾವಿನ್ಯತೆ ಮತ್ತು ಉದ್ಯಮಶೀಲತೆಯ ಸಂಸ್ಕೃತಿಯನ್ನು ಉತ್ತೇಜಿಸಲು, ಭಾರತ ಸರ್ಕಾರವು 2016 ರಲ್ಲಿ ನೀತಿ ಆಯೋಗದಡಿಯಲ್ಲಿ ಅಟಲ್ ಇನ್ನೋವೇಶನ್ ಮಿಷನ್ (ಎಐಎಂ) ಅನ್ನು ಸ್ಥಾಪಿಸಿತು.


ಭಾರತದಲ್ಲಿ ನಾವಿನ್ಯತೆ ಮತ್ತು ಉದ್ಯಮಶೀಲತೆಯ ಸಂಸ್ಕೃತಿಯನ್ನು ಸೃಷ್ಟಿಸುವುದು ಎಐಎಂನ ಆದೇಶವಾಗಿದೆ. ಸಂಸ್ಕೃತಿಯ ಸೃಷ್ಟಿ ಎನ್ನುವುದು ದೀರ್ಘಾವಧಿಯ ಕಾರ್ಯ. ಇದಕ್ಕೆ ಸುಸ್ಥಿರವಾದ ನಿರಂತರವಾದ ಆವಿಷ್ಕಾರಗಳ ಅಗತ್ಯವಿದೆ. ನಾವಿನ್ಯತೆಯು ಸಂಪೂರ್ಣ ಮೌಲ್ಯ ಸರಪಳಿಯನ್ನು ಒಳಗೊಳ್ಳಬೇಕು. ಎಐಎಂ ತನ್ನ ಉದ್ದೇಶ ಪೂರೈಕೆಗಾಗಿ ಸಮಗ್ರ ವಿಧಾನವನ್ನು ಅಳವಡಿಸಿಕೊಂಡಿದೆ. ಇದು ಶಾಲಾ ವಿದ್ಯಾರ್ಥಿಗಳಿಂದ ಹಿಡಿದು ಸ್ಥಾಪಿತ ಸ್ಟಾರ್ಟ್–ಅಪ್‌ಗಳವರೆಗೆ ಕಲ್ಪನೆಯಿಂದ ನಿಯೋಜನೆಯವರೆಗೆ ಎಲ್ಲವನ್ನೂ ಒಳಗೊಂಡ ಕಾರ್ಯಕ್ರಮಗಳು, ನೀತಿಗಳು ಮತ್ತು ಸಂಸ್ಥೆಗಳನ್ನು ಅಭಿವೃದ್ಧಿಪಡಿಸಿದೆ. ಈ ರೀತಿಯ ನಿರಂತರ ಮಧ್ಯಸ್ಥಿಕೆಗಳಿಂದ ನವನಿರ್ಮಿತಿಕಾರರು ಬೆಂಬಲದ ಕೊರತೆಯ ಹೊರತಾಗಿಯೂ ಹಾದಿತಪ್ಪದಂತೆ ನೋಡಿಕೊಳ್ಳುತ್ತದೆ.

ಮುಂದಿನ ಪುಟದಲ್ಲಿರುವ ಚಿತ್ರ 1 ನವನಿರ್ಮಾಣಕಾರರ ಪ್ರಯಾಣದಲ್ಲಿ ಎಐಎಂನ ಮಧ್ಯಸ್ಥಿಕೆಗಳನ್ನು ವಿವರಿಸುತ್ತದೆ.

ಆರಂಭಿಕ ಹಂತದಲ್ಲಿ, ಯುವ ಮನಸ್ಸಿನಲ್ಲಿ ನಾವಿನ್ಯತೆಯ ಬೀಜಗಳನ್ನು ಬಿತ್ತಲು, ಶಾಲೆಗಳಲ್ಲಿ ಅಟಲ್ ಟಿಂಕರಿಂಗ್ ಲ್ಯಾಬ್ಸ್ (ಎಟಿಎಲ್) ಸ್ಥಾಪಿಸಲಾಯಿತು. ಇದು ಮಕ್ಕಳಲ್ಲಿ ಪ್ರಯೋಗದ ಪರಿಕಲ್ಪನೆಯನ್ನು ಉತ್ತೇಜಿಸುತ್ತದೆ. ಇದು ಸಮಸ್ಯೆಗಳನ್ನು ಪರಿಹರಿಸುವ, ವಿಷಯಗಳನ್ನು ಅರ್ಥಮಾಡಿಕೊಳ್ಳುವ ಮತ್ತು ತಯಾರಿಸುವಾಗಿನ ನವೀನ ಮನಸ್ಥಿತಿಯನ್ನು ಉತ್ತೇಜಿಸುತ್ತದೆ. ನಂತರದ ದಿನಗಳಲ್ಲಿ, ಈ ಯುವ ಮನಸ್ಸುಗಳು ಕಾಲೇಜನ್ನು ಪ್ರವೇಶಿಸಿದಾಗ, ತಮ್ಮ ಆಲೋಚನೆಗಳನ್ನು ಪರಿಕಲ್ಪನೆಗಳಾಗಿ ಮತ್ತು ಸ್ಟಾರ್ಟ್ ಅಪ್‌ಗಳಾಗಿ ಅಭಿವೃದ್ಧಿ**ಪಡಿಸಲು ಬಯಸಿದಾಗ, ಉನ್ನತ ಶಿಕ್ಷಣ** ಅಥವಾ ಸಂಶೋಧನಾ ಸಂಸ್ಥೆಗಳಲ್ಲಿ ಸ್ಥಾಪಿಸಲಾದ



Scanned with ACE Scanner




**ಚಿತ್ರ 1 : ನಾವಿನ್ಯತೆಯ ಮೌಲ್ಯ ಸರಪಳಿಯಲ್ಲಿ ಎಐಎಂ ಕಾರ್ಯಕ್ರಮಗಳು**

ಅಟಲ್ ಇನ್ಕ್ಯುಬೇಶನ್ ಕೇಂದ್ರಗಳು (ಎಐಸಿ) ಇನ್ಕ್ಯುಬೇಟರ್‌ನಲ್ಲಿರುವ ಅಭ್ಯರ್ಥಿಗೆ ಮಾಡುವಂತೆ ಎಲ್ಲಾ ಬಗೆಯಲ್ಲೂ ಅಗತ್ಯ ಪರಿಸರ ವ್ಯವಸ್ಥೆಯ ಬೆಂಬಲ ನೀಡುತ್ತವೆ ಹಾಗೂ ಪೋಷಿಸುತ್ತವೆ. ಪ್ರಮುಖ ನಗರಗಳಲ್ಲಿನ ನಾವಿನ್ಯತೆಯ ಸಾಮಾನ್ಯ ಗುಂಪುಗಳನ್ನು ಮೀರಿ ಮುಂದುವರೆಯಲು ಮತ್ತು ನವನಿರ್ಮಿತಿಕಾರರು ಹಾಗೂ ಸಣ್ಣ ಉದ್ಯಮಿಗಳನ್ನು ಉತ್ತೇಜಿಸಲು 2 ಮತ್ತು 3 ಹಂತದ ನಗರಗಳಲ್ಲಿನ ಅಟಲ್ ಸಮುದಾಯ ನಾವಿನ್ಯತೆ ಕೇಂದ್ರಗಳು (ಎಸಿಐಸಿ) ನಾವಿನ್ಯತೆಯು ಭೌಗೋಳಿಕವಾಗಿ ಮತ್ತು ಭಾಷಿಕವಾಗಿ ಒಳಗೊಳ್ಳುವಂತೆ ಮಾಡುತ್ತವೆ. ಅಟಲ್ ನ್ಯೂ ಇಂಡಿಯಾ ಚಾಲೆಂಜ್ (ಎಎನ್‌ಐಸಿ) ಕಾರ್ಯಕ್ರಮಗಳ ಮೂಲಕ, ಎಐಎಂ ಕಲ್ಪನೆಯಿಂದ ವಾಣಿಜ್ಯೀಕರಣದವರೆಗೆ ಸ್ಟಾರ್ಟ್–ಅಪ್‌ಗಳು ಮತ್ತು ಎಮ್‌ಎಸ್‌ಎಂಇಗಳಿಗೆ ರಾಷ್ಟ್ರೀಯ ಪ್ರಾಮುಖ್ಯತೆ ಮತ್ತು ಸಾಮಾಜಿಕ ಪ್ರಸ್ತುತತೆಯ ವಲಯದ ಸವಾಲುಗಳನ್ನು ಪರಿಹರಿಸಲು ಕೆಲಸ ಮಾಡುತ್ತವೆ.

### ಅಟಲ್ ಇನ್ನೋವೇಶನ್ ಮಿಷನ್ ಕಾರ್ಯಕ್ರಮದ ಆಧಾರ ಸ್ತಂಭಗಳು

ಎಐಎಂಗೆ ಹಲವಾರು ಆಧಾರ ಸ್ತಂಭಗಳಿವೆ. ಅವುಗಳ ಮೂಲಕ ಆತ್ಮನಿರ್ಭರ ಭಾರತ ಎನ್ನುವ ಕಾಣ್ಕೆಯನ್ನು ನಿಜವಾಗಿಸಿಕೊಳ್ಳುತ್ತಿದೆ. ಎಐಎಂ, ಅಟಲ್ ಟಿಂಕರಿಂಗ್ ಲ್ಯಾಬ್ಸ್ (ಎಟಿಎಲ್), ಅಟಲ್ ಇನ್ಕ್ಯುಬೇಶನ್ ಸೆಂಟರ್‌ಗಳು (ಎಐಸಿಎಸ್), ಅಟಲ್ ಕಮ್ಯುನಿಟಿ ಇನ್ನೋವೇಶನ್ ಸೆಂಟರ್‌ಗಳು (ಎಸಿಐಸಿ), ಅಟಲ್ ನ್ಯೂ ಇಂಡಿಯಾ ಚಾಲೆಂಜ್ (ಎಎನ್‌ಐಸಿ), ಮತ್ತು ಬದಲಾವಣೆಯ ಮಾರ್ಗದರ್ಶಕರಿಗೆ ಅವರ ನಾವಿನ್ಯತೆಯ ಪ್ರಯೋಗದ ಹಾದಿಯಲ್ಲಿ ಬೆಂಬಲಿಸಲು ಪ್ರಾರಂಭಿಸಿದೆ. ಭಾರತದ ನಾವಿನ್ಯತೆಯಗಾಥೆಯನ್ನು ಪ್ರಭಾವಿಸುತ್ತಿದೆ.

### 1. ಅಟಲ್ ಟಿಂಕರಿಂಗ್ ಲ್ಯಾಬ್ಸ್ (ಎಟಿಎಲ್)

ಭಾರತದಲ್ಲಿ ಒಂದು ಮಿಲಿಯನ್ ಮಕ್ಕಳನ್ನು ನವನಿರ್ಮಿತಿಕಾರರನ್ನಾಗಿ (ನಿಯೋಟೆರಿಕ್ ಇನ್ನೋವೇಟರ್) ಬೆಳೆಸುವ ದೃಷ್ಟಿಯೊಂದಿಗೆ, ಎಐಎಂ ಭಾರತದಾದ್ಯಂತ ಶಾಲೆಗಳಲ್ಲಿ ಎಟಿಎಲ್‌ಗಳನ್ನು ಸ್ಥಾಪಿಸಿದೆ. ಎಟಿಎಲ್ 6ನೇ ಮತ್ತು 12ನೇ ತರಗತಿಗಳ ನಡುವಿನ ಯುವ ಮನಸ್ಸುಗಳಲ್ಲಿ ಕುತೂಹಲ ಮತ್ತು ನಾವಿನ್ಯತೆಯನ್ನು ಬೆಳೆಸಲು ಮತ್ತು ಸಮಸ್ಯೆ–ಪರಿಹರಿಸುವ ಹೊಸ ಮನಸ್ಥಿತಿಯನ್ನು ಉತ್ತೇಜಿಸುವಂತಹ ಆಧುನಿಕ ಸ್ಥಳವಾಗಿದೆ.

ಎಟಿಎಲ್‌ಗಳು 21ನೇ ಶತಮಾನದ ಉಪಕರಣಗಳು ಮತ್ತು ತಂತ್ರಜ್ಞಾನಗಳಾದ ಐಒಟಿ, 3ಡಿ ಮುದ್ರಣ, ರ್‍ಯಾಪಿಡ್ ಪ್ರೊಟೊಟೈಪಿಂಗ್ ಉಪಕರಣಗಳು, ರೊಬೊಟಿಕ್ಸ್, ಮಿನಿಯೇಚರೈಸ್ಡ್ **ಎಲೆಕ್ಟ್ರಾನಿಕ್ಸ್, ಡಿಐವೈ ಕಿಟ್‌ಗಳು ಇತ್ಯಾದಿಗಳನ್ನು** ಹೊಂದಿವೆ. ಇಲ್ಲಿ, ಯುವ ಮನಸ್ಸುಗಳು ತಮ್ಮಷ್ಟಕ್ಕೆ ತಾವೇ ಮಾಡುವ ಚಟುವಟಿಕೆಗಳ ಮೂಲಕ ತಮ್ಮ ಆಲೋಚನೆಗಳಿಗೊಂದು ರೂಪ ಕೊಡಬಹುದು.

ಎಟಿಎಲ್‌ಗಳಲ್ಲಿ "ತೋಡ್–ಫೋಡ್–ಜೋಡ್" (ಮುರಿ–ಜೋಡಿಸು) ಮಾಡಲು


Scanned with ACE Scanner

ವಿದ್ಯಾರ್ಥಿಗಳಿಗೆ ಅವಕಾಶವಿರುತ್ತದೆ. ಇಲ್ಲಿ ಅವರಿಗೆ ಹೊಸತನ್ನು ಸೃಷ್ಟಿಸುವ ಸ್ವಾತಂತ್ರ್ಯವಿರುತ್ತದೆ. ಎಟಿಎಲ್ 21 ನೇ ಶತಮಾನದ ವಿದ್ಯಾರ್ಥಿಗಳ ಕೌಶಲ್ಯ ಸಾಮರ್ಥ್ಯವನ್ನು ರೂಪಿಸಲು ಕಾಲಕ್ಕೆ ತಕ್ಕಂತೆ ಹೊಸ ಪಠ್ಯಕ್ರಮ ಮತ್ತು ಮಾಡ್ಯೂಲ್‌ಗಳನ್ನು ರೂಪಿಸುತ್ತಿದೆ. ಎಟಿಎಲ್ ಮ್ಯಾರಥಾನ್ ಮತ್ತು ಟಿಂಕರ್‌ಪ್ರೆನ್ಯೂರ್ ಎಟಿಎಲ್‌ನ ಪ್ರಮುಖ ಉಪಕ್ರಮಗಳು. ಇದು ವಿದ್ಯಾರ್ಥಿಗಳಿಗೆ ಉತ್ಪನ್ನಗಳನ್ನು ತಯಾರಿಸಲು ಮತ್ತು ಯುವ ವಾಣಿಜ್ಯೋದ್ಯಮಿಗಳಾಗಿ ಜಗತ್ತನ್ನು ಪ್ರವೇಶಿಸಲು ವೇದಿಕೆ ರೂಪಿಸುತ್ತದೆ.




ಪ್ರತಿಭಾವಂತ ವಿದ್ಯಾರ್ಥಿಗಳಿಗೆ 'ಸ್ಟೂಡೆಂಟ್ ಇನ್ನೋವೇಟರ್ ಪ್ರೋಗ್ರಾಂ' ಮೂಲಕ ಉದ್ಯಮಕ್ಕೆ ತೆರೆದುಕೊಳ್ಳುವ ಅವಕಾಶ ಸಿಗುತ್ತದೆ. ವಿವಿಧ ಉದ್ಯಮಗಳ ತಜ್ಞರ ಮಾರ್ಗದರ್ಶನದಲ್ಲಿ ತಮ್ಮ ಯೋಜನೆಗಳನ್ನು ಅಭಿವೃದ್ಧಿಪಡಿಸಿ ಕಾರ್ಯಸಾಧ್ಯವಾಗುವಂತೆ ಮಾಡುತ್ತಾರೆ. ಎಟಿಎಲ್‌ಗಳು ನವನಿರ್ಮಿತಿಕಾರರಿಗೆ ಅಗತ್ಯವಾದ ಕೌಶಲ್ಯಗಳನ್ನು ಕಲಿಯುವ ಅವಕಾಶ ಒದಗಿಸುತ್ತದೆ. ಇಂದು, 10,000 ಶಾಲೆಗಳು 35 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ವ್ಯಾಪಿಸಿರುವ ದೇಶದ 700ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಅಟಲ್ ಟಿಂಕರಿಂಗ್ ಲ್ಯಾಬ್‌ಗಳಿವೆ. 60% ಸರ್ಕಾರಿ ಶಾಲೆಗಳಲ್ಲಿ ಎಟಿಎಲ್‌ಗಳನ್ನು ಸ್ಥಾಪಿಸಲಾಗಿದ್ದು 12 ಲಕ್ಷಕ್ಕೂ ಹೆಚ್ಚು ನವೀನ ಯೋಜನೆಗಳನ್ನು ರೂಪಿಸಲಾಗಿದ್ದು ಒಟ್ಟು 75 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಒಳಗೊಂಡಿದೆ.

**2. ಅಟಲ್ ಇನ್ಕ್ಯುಬೇಶನ್ ಸೆಂಟರ್‌ಗಳು (ಎಐಸಿಎಸ್)**

ಎಐಎಂ 2017 ರಿಂದ ಅಟಲ್ ಇನ್ಕ್ಯುಬೇಶನ್ ಸೆಂಟರ್ಸ್ ಎಂಬ ಇನ್ಕ್ಯುಬೇಶನ್ ಕೇಂದ್ರಗಳ ಸ್ಥಾಪನೆಗೆ ಬೆಂಬಲ ನೀಡುತ್ತಿದ್ದು ನವೋದ್ಯಮಗಳ ಹೆಚ್ಚಳಕ್ಕೆ ಹಾಗೂ ಅವು ಸುಸ್ಥಿರ ಉದ್ಯಮಗಳಾಗಿರುವಂತೆ ಪೋಷಿಸುತ್ತಿದೆ. ದೇಶದಾದ್ಯಂತ ಇರುವ ವಿಶ್ವದರ್ಜೆಯ ಎಐಸಿಗಳು ಇನ್ಕ್ಯುಬೇಶನ್ ಸೆಂಟರ್‌ಗಳಲ್ಲಿ ಬಂಡವಾಳ, ಅಗತ್ಯ ಸೌಲಭ್ಯಗಳೊಂದಿಗೆ ನವೋದ್ಯಗಳಿಗೆ ಮಾರ್ಗದರ್ಶನ ಮಾಡಲು ವಿವಿಧ ವಲಯಗಳ ತಜ್ಞರು, ವ್ಯಾಪಾರ ಯೋಜನೆಗಳ ಬೆಂಬಲ, ಆರಂಭಿಕ ಬಂಡವಾಳ ಲಭ್ಯತೆ, ಉದ್ಯಮ ಪಾಲುದಾರರು, ತರಬೇತಿಗಳು ಮತ್ತು ನವೋದ್ಯಮ ಸ್ಥಾಪನೆಗೆ ಅಗತ್ಯವಾದ ಇತರ ಘಟಕಗಳಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿದೆ.

ಎಐಎಂನ ಎಐಸಿ ಕಾರ್ಯಕ್ರಮವು ಕ್ರಾಸ್-ಸೆಕ್ಟೋರಲ್ ಇನ್ಕ್ಯುಬೇಟರ್‌ಗಳನ್ನು ರೂಪಿಸಿ, ಬೆಂಬಲ ನೀಡುತ್ತದೆ. ಎಐಸಿಗಳನ್ನು ಸರ್ಕಾರಿ ಮತ್ತು ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸಂಶೋಧನಾ ಸಂಸ್ಥೆಗಳು, ಕಾರ್ಪೋರೇಟ್ ಸಂಸ್ಥೆಗಳು ಮೊದಲಾದೆಡೆಗಳಲ್ಲಿ ಕಾರ್ಯಗತಗೊಳಿಸಲಾಗಿದೆ. ಎಐಸಿಗಳನ್ನು ಸ್ಥಾಪಿಸುವುದರ ಹಿಂದಿನ ಉದ್ದೇಶ ವಿವಿಧ ವಲಯಗಳಲ್ಲಿ – ಸಾಂಪ್ರದಾಯಿಕ ವಿಜ್ಞಾನ ಮತ್ತು ತಂತ್ರಜ್ಞಾನದಳ ಇನ್ಕ್ಯುಬೇಟರ್‌ಗಳಿಗಿಂತ ಹೆಚ್ಚು ವಿಸ್ತಾರವಾದ ವ್ಯಾಪ್ತಿಯಲ್ಲಿ ಮತ್ತು ಐಐಟಿಗಳು ಮತ್ತು ಎನ್‌ಐಟಿಗಳನ್ನು ಮೀರಿ ಉಳಿದ ಸಂಸ್ಥೆಗಳಲ್ಲಿ ಇನ್‌ಕ್ಯುಬೇಟರ್‌ಗಳನ್ನು ಅಭಿವೃದ್ಧಿಪಡಿಸುವುದು. ಜವಳಿ, ಡೈರಿ, ಕಾಫಿ ಮೊದಲಾದ ವಲಯಗಳು, ತುರ್ತು ನಿಗಾ ಬೇಡುವ ಕೃಷಿ–ಟೆಕ್, ಎಡ್–ಟೆಕ್, ಮೆಡ್–ಟೆಕ್, ಕ್ಲೀನ್–ಟೆಕ್ ಇತ್ಯಾದಿಗಳಲ್ಲದೆ ಅಗತ್ಯಕ್ಕೆ ತಕ್ಕಂತೆ, ಸ್ಪೇಸ್ ಟೆಕ್, ನ್ಯೂಕ್ಲಿಯರ್ ಟೆಕ್ ಇತ್ಯಾದಿ ವಲಯಗಳನ್ನು ಕೂಡ ಒಳಗೊಳ್ಳಲಾಗಿದೆ.

ಇದು ಯಶಸ್ವಿ ನವೋದ್ಯಮಗಳ ಬೆಳವಣಿಗೆ ಹಾಗೂ ಭವಿಷ್ಯದ ನವೋದ್ಯಮಗಳ ಸೃಷ್ಟಿಗೆ ಕಾರಣವಾಗಿದೆ.

ಇಲ್ಲಿಯವರೆಗೆ, 70 ಎಐಸಿಗಳನ್ನು ಸ್ಥಾಪಿಸಲಾಗಿದೆ. ಇದರಿಂದಾಗಿ 3000ಕ್ಕೂ ಹೆಚ್ಚು ನವೋದ್ಯಮಗಳು ಮತ್ತು 30,000ಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಿದೆ. ಈ ರೀತಿ ಭಾರತವನ್ನು ಸ್ವಾವಲಂಬನೆಯ ಕನಸಿನತ್ತ ಕೊಂಡೊಯ್ಯುತ್ತದೆ.

**3. ಅಟಲ್ ಕಮ್ಯುನಿಟಿ ಇನ್ನೋವೇಶನ್ ಸೆಂಟರ್‌ಗಳು (ಎಸಿಐಸಿ)**

ಎಐಎಂ ಭೌಗೋಳಿಕ ಹಾಗೂ ಭಾಷಿಕ ಪರಿಸರವನ್ನೊಳಗೊಂಡ ಪರಿಸರವ್ಯವಸ್ಥೆಯನ್ನು ರೂಪಿಸುತ್ತದೆ. ಎಸಿಐಸಿ 2/3 ಹಂತದ ನಗರಗಳು, ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶಗಳು, ಈಶಾನ್ಯ ಪ್ರದೇಶಗಳು, ಜಮ್ಮು ಮತ್ತು ಕಾಶ್ಮೀರ, ಲಡಾಕ್ ಪ್ರದೇಶಗಳಂತಹ ಇನ್ನೂ ನಾವಿನ್ಯತೆ ಸಂಸ್ಕೃತಿಯ ಭಾಗವಾಗಿರದ ಹಾಗೂ ಅದನ್ನು ಬೆಂಬಲಿಸುವ ವ್ಯವಸ್ಥೆಗಳ ಕೊರತೆಯಿರುವ ಪ್ರದೇಶಗಳಲ್ಲಿ ನಾವಿನ್ಯತೆ ಮತ್ತು ಉದ್ಯಮಶೀಲತೆಯ ಅಭಿವೃದ್ಧಿ ಸಾಧ್ಯವಾಗುವಂತಹ ಪರಿಸರ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ.

ಎಸಿಐಸಿಗಳು ತಳಮಟ್ಟದ ನವೋದ್ಯಮಿಗಳನ್ನು ತಲುಪುವ ಗುರಿಯನ್ನು ಹೊಂದಿವೆ. ಸಮುದಾಯದ ಉನ್ನತಿ ಮತ್ತು ಸುಸ್ಥಿರ ರೂಪಾಂತರಕ್ಕಾಗಿ ಹೊಸ ಪರಿಹಾರಗಳನ್ನು ವಿನ್ಯಾಸಗೊಳಿಸಲು ಅಗತ್ಯವಾದ ಮೂಲಸೌಕರ್ಯ, ಹಣಕಾಸು ಮತ್ತು ಕಲಿಕೆಯ ಬೆಂಬಲವನ್ನು ಒದಗಿಸುವ ಮೂಲಕ ಅವರಿಗೆ ಸಮಾನ ಅವಕಾಶಗಳನ್ನು ನೀಡುತ್ತವೆ. ಜಗತ್ತನ್ನು ಬದಲಾಯಿಸುವ ಆವಿಷ್ಕಾರಕ್ಕಾಗಿ ಸಮುದಾಯವನ್ನು ಒಳಗೊಳ್ಳುವುದು ಮುಖ್ಯ. ತಳಮಟ್ಟದಲ್ಲಿ ಕ್ರಾಂತಿಯನ್ನುಂಟುಮಾಡುವ ಮೂಲಕ ನಾವಿನ್ಯತೆಯನ್ನು ತರುವುದು ಎಸಿಐಸಿನ ಉದ್ದೇಶ.



Scanned with ACE Scanner

ಎಐಎಂ, 10 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 14 ಎಸಿಐಸಿಗಳನ್ನು ಸ್ಥಾಪಿಸಿದೆ. ಇದು 50ಕ್ಕೂ ಹೆಚ್ಚು ನವೋದ್ಯಮಗಳು ಮತ್ತು ಸಮುದಾಯ ಇನ್ನೋವೇಟರ್ ಫೆಲೋಶಿಪ್ ಅಡಿಯಲ್ಲಿ 20ಕ್ಕೂ ಹೆಚ್ಚು ನಾವಿನ್ಯಕಾರರ ಸಮೂಹವನ್ನು ಬೆಂಬಲಿಸಿದೆ.

**4. ಅಟಲ್ ನ್ಯೂ ಇಂಡಿಯಾ ಚಾಲೆಂಜ್ (ಎಎನ್ಐಸಿ)**

ಅಟಲ್ ನ್ಯೂ ಇಂಡಿಯಾ ಚಾಲೆಂಜ್ ರಾಷ್ಟ್ರೀಯ ಪ್ರಾಮುಖ್ಯತೆ ಮತ್ತು ಸಾಮಾಜಿಕ ಪ್ರಸ್ತುತತೆಯ ವಲಯದ ಸವಾಲುಗಳನ್ನು ಪರಿಹರಿಸುವ ತಂತ್ರಜ್ಞಾನ ಆಧರಿತ ನಾವಿನ್ಯತೆಗಳನ್ನು ಹುಡುಕುವ, ಆಯ್ಕೆ ಮಾಡುವ, ಬೆಂಬಲಿಸುವ ಮತ್ತು ಪೋಷಿಸುವ ರಾಷ್ಟ್ರೀಯ ಉಪಕ್ರಮವಾಗಿದೆ. ಭಾರತದ ಅಭಿವೃದ್ಧಿ ಮತ್ತು ಬೆಳವಣಿಗೆಗೆ ನಿರ್ಣಾಯಕವಾದ ಶಿಕ್ಷಣ, ಆರೋಗ್ಯ, ನೀರು ಮತ್ತು ನೈರ್ಮಲ್ಯ, ಕೃಷಿ, ಆಹಾರ ಸಂಸ್ಕರಣೆ, ವಸತಿ, ಇಂಧನ, ಸಾಗಾಣಿಕೆ, ಬಾಹ್ಯಾಕಾಶ ಅಪ್ಲಿಕೇಶನ್‌ಗಳು ಇತ್ಯಾದಿ ಕ್ಷೇತ್ರಗಳಲ್ಲಿ ನಾವಿನ್ಯತೆಗಳನ್ನು ಉತ್ತೇಜಿಸುವುದು ಎಎನ್ಐಸಿ ಕಾರ್ಯಕ್ರಮದ ಪ್ರಾಥಮಿಕ ಗುರಿಗಳಾಗಿವೆ.

ನಾವಿನ್ಯತೆಗಳನ್ನು ಮಾರುಕಟ್ಟೆಯು ಒಪ್ಪಿಕೊಳ್ಳುವ ಮತ್ತು ವಾಣಿಜ್ಯೀಕರಣದ ಆರಂಭಿಕ ಹಂತದಲ್ಲಿ ಹಲವು ಸವಾಲುಗಳ ಕಠಿಣ ಹಾದಿಯಲ್ಲಿ ಹಾದುಹೋಗಬೇಕಾಗುತ್ತದೆ. ಎಐಎಮ್‌ನ ನಾವಿನ್ಯತೆ ಪರಿಸರ ವ್ಯವಸ್ಥೆಯ ನೆರವಿನಿಂದ ಹಣ ಮತ್ತಿತರ ನೆರವನ್ನು ಪಡೆದು ಪರೀಕ್ಷೆ, ಪೈಲಟಿಂಗ್ ಮತ್ತು ಮಾರುಕಟ್ಟೆ ಸೃಷ್ಟಿಗೆ ಸಂಪನ್ಮೂಲಗಳನ್ನು ಪಡೆಯುತ್ತದೆ. ತನ್ಮೂಲಕ ನವೋದ್ಯಮಗಳಿಗೆ ಸವಾಲಿನ ಹಾದಿಯನ್ನು ಕ್ರಮಿಸಲು ಎಎನ್ಐಸಿ ಬೆಂಬಲ ನೀಡುವ ಗುರಿಯನ್ನು ಹೊಂದಿದೆ.

ಎಐಎಂ 50ಕ್ಕೂ ಹೆಚ್ಚು ನವೋದ್ಯಮಗಳಿಗೆ ನೇರವಾಗಿ ಹಣಹೂಡಿಕೆ ಮಾಡಿ ಬೆಂಬಲಿಸಿದೆ. ಜೊತೆಗೆ 100ಕ್ಕೂ ಹೆಚ್ಚು ನವೋದ್ಯಮಗಳನ್ನು ಆಯ್ಕೆಮಾಡಿಕೊಂಡಿದೆ.

**5. ಬದಲಾವಣೆಯ ಮಾರ್ಗದರ್ಶಕರು (ಎಂಓಸಿ)**

ಮೆಂಟರ್ ಇಂಡಿಯಾವು ಭಾರತದಾದ್ಯಂತ ಎಐಎಂ ಸ್ಥಾಪಿಸಿರುವ 10,000ಕ್ಕೂ ಹೆಚ್ಚು ಅಟಲ್ ಟಿಂಕರಿಂಗ್ ಲ್ಯಾಬ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಮತ್ತು ಅದಕ್ಕಾಗಿ ನಾಯಕರು ಸ್ವಯಂಪ್ರೇರಿತರಾಗಿ ಅದರಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಕಾರ್ಯತಂತ್ರವನ್ನು ಅನುಸರಿಸುತ್ತಿದೆ.

ಇಂದು ದೇಶಾದ್ಯಂತ 6000ಕ್ಕೂ ಹೆಚ್ಚು ಮಾರ್ಗದರ್ಶಕರು ಎಐಎಂನ ಈ ಕನಸನ್ನು ನನಸಾಗಿಸಲು ತಮ್ಮ ಬೆಂಬಲವನ್ನು ನೀಡುತ್ತಿದ್ದಾರೆ. ಉದ್ಯಮ ಮತ್ತು ಶೈಕ್ಷಣಿಕ ವಲಯದ ಈ ಮಾರ್ಗದರ್ಶಕರು ಒಂದಕ್ಕಿಂತ ಹೆಚ್ಚಿನ ಲ್ಯಾಬ್‌ಗಳಲ್ಲಿ ಸ್ವಯಂಪ್ರೇರಿತರಾಗಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ವಿನ್ಯಾಸ, ಕಂಪ್ಯೂಟೇಶನಲ್ ಥಿಂಕಿಂಗ್, ವಿಮರ್ಶಾತ್ಮಕ ಚಿಂತನೆ ಮತ್ತು ತರಗತಿಗಳಲ್ಲಿ ಕಲಿತದ್ದನ್ನು ಪ್ರಯೋಗಿಸಲು ಕಲಿಸುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ ಎಐಎಂ ತಮ್ಮ ಭೌಗೋಳಿಕ ಪ್ರದೇಶಕ್ಕೆ ನಿರ್ದಿಷ್ಟವಾದ ಹಲವಾರು ಸಮಸ್ಯೆಗಳಿಗೆ ಪರಿಹಾರಗಳನ್ನು ರೂಪಿಸಿರುವ ಹಲವಾರು ಯುವ ಟಿಂಕರ್‌ಗಳನ್ನು ಹಾಗೂ ನವೋದ್ಯಮಗಳನ್ನು ಬೆಂಬಲಿಸಿದೆ. ಈ ನಿರಂತರ ಮಧ್ಯಸ್ಥಿಕೆಗಳ ಮೂಲಕ ಎಐಎಂ ಮನಸ್ಥಿತಿ ಮತ್ತು ಸಾಂಸ್ಕೃತಿಕ ಬದಲಾವಣೆಯನ್ನು ತರುವ ಮೂಲಕ ಭಾರತವನ್ನು 'ಆತ್ಮನಿರ್ಭರ ಭಾರತ' ವಾಗಿಸುತ್ತಿದೆ.

**ಅಧ್ಯಯನ**

ಪ್ರತಿ ದಿನವೂ 'ನೋ ಹಾರ್ನ್ ಡೇ' ಆಗಿದ್ದರೆ ಎಷ್ಟು ಶಾಂತಿಯುತವಾಗಿರುತ್ತದೆ ಎಂದು ನೀವು ಎಂದಾದರೂ ಊಹಿಸಿದ್ದೀರಾ?

ದಿನದ ದಟ್ಟಣೆಯ ಅವಧಿಯಲ್ಲಿ ವಾಹನಗಳು ರಸ್ತೆಯಲ್ಲಿ ಓಡಾಡುತ್ತಿವೆ. ಸಿಗ್ನಲ್ಲುಗಳಲ್ಲಿ ಕೆಂಪುದೀಪಗಳು, ವಾಹನ ದಟ್ಟಣೆಯ ನಡುವೆಯೂ ಹಾರ್ನ್ ಸದ್ದು ನಿಮ್ಮ ಕಿವಿಗಳಿಗೆ ಬಡಿಯುತ್ತಿಲ್ಲದಿರುವುದನ್ನು ಊಹಿಸಿ. ರಸ್ತೆಗಳಲ್ಲಿ ಶಬ್ದಮಾಲಿನ್ಯವನ್ನು ಕಡಿಮೆ ಮಾಡಲು ಹಲವು ಕ್ರಮಗಳನ್ನು ಕೈಗೊಂಡಿದ್ದರೂ ನಾಗರಿಕರು ಈ ನಿಟ್ಟಿನಲ್ಲಿ ಶ್ರಮವಹಿಸಿರುವುದು ಕಡಿಮೆ. ರಾಜಸ್ಥಾನದ 18 ವರ್ಷದ ವಿದ್ಯಾರ್ಥಿಯೊಬ್ಬ ಈ ಸಮಸ್ಯೆಯನ್ನು ಪರಿಹರಿಸಲು ಮುಂದಾದ.

ಈ ವಿದ್ಯಾರ್ಥಿ ನವನಿರ್ಮಾತೃ ಬಿ.ಟೆಕ್ ಓದುತ್ತಿದ್ದು ಶಬ್ದ ಮಾಲಿನ್ಯವನ್ನು ಕಡಿಮೆ ಮಾಡಲು ಸಾಧನವೊಂದನ್ನು ರೂಪಿಸಿದ. ಅವನು ವೆಹಿಕಲ್ ಹಾರ್ನ್ ಕಂಟ್ರೋಲ್ ಅಸೆಂಬ್ಲಿಯ (ವಿಹೆಚ್‌ಸಿಎ) ಬಗ್ಗೆ ಅಭ್ಯಸಿಸಿ ಸಾಧನವೊಂದನ್ನು ರೂಪಿಸಿದ. ಅದು ಕೆಲವು ಪ್ರದೇಶಗಳಲ್ಲಿ ಹಾರ್ನ್ ಸದ್ದನ್ನು ತಡೆಗಟ್ಟುತ್ತದೆ ಮತ್ತೆ ಹಾರ್ನ್ ಪ್ರತಿಬಂಧಿತ ಪ್ರದೇಶಗಳಲ್ಲಿ ಸದ್ದನ್ನು ತಗ್ಗಿಸುತ್ತದೆ. ವಿಹೆಚ್‌ಸಿಎ ಎನ್ನುವುದು ವಾಹನಗಳಲ್ಲಿ ಹಾರ್ನ್ ಉಂಟುಮಾಡುವ ಶಬ್ದಮಾಲಿನ್ಯವನ್ನು ತಡೆಯುವಂತಹ ವ್ಯವಸ್ಥೆ. ಈ ಆವಿಷ್ಕಾರವು ಸುಸ್ಥಿರ ನಗರಗಳು ಮತ್ತು ಸಮುದಾಯಗಳ ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸುವ ಉದ್ದೇಶ ಹೊಂದಿದೆ. ಈ ಆವಿಷ್ಕಾರವು ಪೇಟೆಂಟ್ ಪಡೆದಿದ್ದು ಕೈಗೆಟಕುವ ದರದಲ್ಲಿ ಸಿಗುವ ಪರಿಹಾರವಾಗಿದೆ. ಈ ಸಾಧನವು ಸುಲಭವಾಗಿ ಸಾಗಿಸುವಂತಹದ್ದಾಗಿದ್ದು ಕಡಿಮೆ ದರದಲ್ಲಿ ಸಿಗುವಂತಿದ್ದು ಆಟೋಮೊಬೈಲ್ ತಯಾರಿಕಾ ಘಟಕಗಳಲ್ಲಿ ಕೂಡ ಶಬ್ದಮಾಲಿನ್ಯವನ್ನು ತಡೆಯಲು ಅಳವಡಿಸಬಹುದಾಗಿದೆ. ರಸ್ತೆ ಅಪಘಾತಗಳನ್ನು ತಡೆಯುವಲ್ಲಿಯೂ ಇದು ಸಹಾಯಕವಾಗಲಿದೆ. ಎಷ್ಟು ಅದ್ಭುತ ಅಲ್ಲವೇ?

ಇದನ್ನು ಸಾಧಿಸಲು ಹೊರಟ ಪ್ರಯಾಣ ಕುತೂಹಲಕಾರಿಯಾಗಿದೆ. ಈ ಆವಿಷ್ಕಾರದ ಬೀಜ ಬಿತ್ತಿದ್ದು ಅಟಲ್ ಟಿಂಕರಿಂಗ್ ಲ್ಯಾಬಿನಲ್ಲಿ. ಶಾಲೆಯ ಎಟಿಎಲ್‌ನ ತರಗತಿಗಳು ಅವನ ಕುತೂಹಲಕ್ಕೆ ನೀರೆರೆಯಿತು. ಅವನು ತನ್ನ ಆವಿಷ್ಕಾರಗಳನ್ನು ಅಭಿವೃದ್ಧಿಗೊಳಿಸುವಲ್ಲಿ ನಿರತನಾದ. ಸಾಮಾಜಿಕ ಸಮಸ್ಯೆಗಳಿಗೆ ವಿನೂತನ ಪರಿಹಾರಗಳನ್ನು ಹುಡುಕಲು ಬಯಸುವ ಪ್ರಯತ್ನದಲ್ಲಿ ವಿದ್ಯಾರ್ಥಿ ನವನಿರ್ಮಾತೃವಾಗಿ ಎಟಿಎಲ್ ಮ್ಯಾರಥಾನ್ 2017ರಲ್ಲಿ ಭಾಗವಹಿಸಿದ ಮತ್ತು ಅದರಲ್ಲಿ ಮೊದಲಿಗನಾದ. ಎಐಸಿ ಮೂಲಕ ಸ್ಟುಡೆಂಟ್ ಇನ್ನೋವೇಟರ್ ಪ್ರೋಗ್ರಾಂ ಅವಕಾಶ ಪಡೆದ. ಮೊಹಾಲಿಯಲ್ಲಿ ಎಸಿಐಸಿ ಆರ್‌ಐಎಸ್‌ಇ ಆಯೋಜಿಸಿದ್ದ ಐಡಿಯಾಥಾನ್‌ನಲ್ಲಿ ಭಾಗವಹಿಸಿದ ಮೇಲೆ ಅವನಿಗೆ ತನ್ನ ವ್ಯಾಪಾರಿ ಯೋಜನೆಯನ್ನು ರೂಪಿಸಲು ನೆರವು ಸಿಕ್ಕಿತು. ಇದು ಎಐಎಂ ಮಧ್ಯಸ್ಥಿಕೆಗಳ ನಿರಂತರತೆಯಿಂದ ಬೆಂಬಲಿತವಾಗಿದೆ.


ಎಟಿಎಲ್ ಅವನ ಕುತೂಹಲ, ಕಲ್ಪನೆಗಳಿಗೆ ಆಶ್ರಯ ತಾಣವಾಯಿತು. ಎಟಿಎಲ್, ಯುವ ಆವಿಷ್ಕಾರಗಳ



Scanned with ACE Scanner

ಆಲೋಚನೆಗಳಿಗೆ ರೂಪುಕೊಟ್ಟು ತಮ್ಮ ಕೈಯಾರೆ ತಾವೇ ಮಾದರಿ ರೂಪಿಸುವ ಅವಕಾಶ ಮಾಡಿಕೊಡುತ್ತದೆ. ವಿದ್ಯಾರ್ಥಿಯ ಐಡಿಯಾಗಳಿಗೆ ಎಐಸಿ – ಕೇಂದ್ರಗಳಲ್ಲಿ ಎಸ್‌ಐಪಿ ಮೂಲಕ ಪೋಷಣೆ ದೊರೆಯಿತು. ಇದು ವಿಶ್ವ ದರ್ಜೆಯ ನಾವಿನ್ಯತೆ ಮತ್ತು ಸುಸ್ಥಿರ ಉದ್ಯಮಗಳನ್ನು ನಿರ್ಮಿಸಲು ಬಯಸುವ ಕ್ರಿಯಾತ್ಮಕ ಉದ್ಯಮಿಗಳನ್ನು ಪೋಷಿಸುವ ಮತ್ತು ಬೆಂಬಲಿಸುವ ಗುರಿಯನ್ನು ಹೊಂದಿದೆ. ಎಸಿಐಸಿ– ಕೇಂದ್ರಗಳಲ್ಲಿ ತಳಮಟ್ಟದ ನಾವಿನ್ಯತೆಗೆ ಅನುಕೂಲಕರ ವಾತಾವರಣವನ್ನು ನಿರ್ಮಿಸಲಾಗಿದೆ. ಅಂತಿಮವಾಗಿ ವಿದ್ಯಾರ್ಥಿ / ನವನಿರ್ಮಾತೃ ತನ್ನ ನವೋದ್ಯಮಕ್ಕೆ ಅಟಲ್ ನ್ಯೂ ಇಂಡಿಯಾ ಚಾಲೆಂಜ್ (ಎಎನ್‌ಐಸಿ) ಅಡಿಯಲ್ಲಿ ಅನುದಾನವನ್ನು ಪಡೆಯಲು ಸಾಧ್ಯವಾಯಿತು.

ಸಾಮಾಜಿಕ ಅಥವಾ ಸಮುದಾಯದ ಸವಾಲುಗಳಿಗೆ ಉತ್ತಮವಾದ ಪರಿಹಾರಗಳನ್ನು ನಿರ್ಮಿಸಲು ಭಾರತದಾದ್ಯಂತ ನವನಿರ್ಮಾತೃಗಳಲ್ಲಿ ಮತ್ತು ಉದ್ಯಮಿಗಳಲ್ಲಿ ಉತ್ಸಾಹವನ್ನು ಮೂಡಿಸುವುದು ಎಐಎಂ ನ ಗುರಿಯಾಗಿದೆ. ವಿಭಿನ್ನ ಉಪಕ್ರಮಗಳು ಮತ್ತು ಕಾರ್ಯಕ್ರಮಗಳನ್ನು ವಿವಿಧ ಹಂತದ ನಾವಿನ್ಯತೆಗಳಿಗೆ ಸಮರ್ಥ ಬೆಂಬಲವನ್ನು ಒದಗಿಸುವಂತೆ ರೂಪಿಸಲಾಗಿದೆ. ಮಧ್ಯಸ್ಥಗಾರರ ಮೂಲಕ ವಿಭಿನ್ನ ಉಪಕ್ರಮಗಳ ನಡುವೆ ಸಾವಯವ ಸಹಯೋಗವನ್ನು ಸಕ್ರಿಯವಾಗಿಸುವ ದೃಷ್ಟಿಕೋನವನ್ನು ಹೊಂದಿದೆ.



ಚಿತ್ರ 2: ಎಐಎಮ್‌ನ ವಿವಿಧ ಕಾರ್ಯಕ್ರಮಗಳ ಮೂಲಕ ನವನಿರ್ಮಾತೃವಿನ ಪಯಣ

### ಉಪಸಂಹಾರ

ಇದೊಂದೇ ಘಟನೆಯಲ್ಲ ಪ್ರತಿ ವರ್ಷವೂ ಇಂತಹ ಪಟ್ಟಿ ಬೆಳೆಯುತ್ತಲೇ ಇದೆ. ಹಲವು ನವನಿರ್ಮಾತೃಗಳು ಎಐಎಂ ನ ನಾವಿನ್ಯತೆಯ ಸಹಾಯ ಪಡೆದು ಸುಸ್ಥಿರ ಉದ್ಯಮಗಳನ್ನು ಆರಂಭಿಸುತ್ತಿದ್ದು ರಾಷ್ಟ್ರೀಯ ಸಮಸ್ಯೆಗಳಿಗೆ ಪರಿಹರಿಸುತ್ತಿದ್ದಾರೆ.

ವರ್ಷಗಳು ಕಳೆದಂತೆ ನಾವಿನ್ಯತೆಯ ಅಳವಡಿಕೆಯು ಹೆಚ್ಚಾಗುತ್ತಿದೆ ಹಾಗೂ ಇದೊಂದು ತಂತ್ರವಾಗಿಯೂ ಬೆಳೆಯುತ್ತಿದೆ. 2025ರ ಹೊತ್ತಿಗೆ 5 ಟ್ರಿಲಿಯನ್ ಆರ್ಥಿಕತೆಯನ್ನು ಸಾಧಿಸುವ ಗುರಿಯನ್ನು ಹೊಂದಿರುವ ಭಾರತದ ಬೆಳವಣಿಗೆಗೆ ನಾವಿನ್ಯತೆಯ ಪರಿಸರವನ್ನು ಪೋಷಿಸುವುದು ಅತ್ಯಗತ್ಯವಾಗಿದೆ.

ಭಾರತವು ನಾವಿನ್ಯತೆಯ ಪರಿಸರವನ್ನು ಪೋಷಿಸುವತ್ತ ದಾಪುಗಾಲನ್ನಿಡುತ್ತಿದೆ. ಈ ನಿಟ್ಟಿನಲ್ಲಿ ನಡೆಸಲಾದ ಸುಸ್ಥಿರ ಪ್ರಯತ್ನಗಳ ಫಲವಾಗಿ ಭಾರತವು ಜಾಗತಿಕ ನಾವಿನ್ಯತೆಯ ಇಂಡೆಕ್ಸ್‌ನಲ್ಲಿ 2018ರಲ್ಲಿ 57ನೇ ಸ್ಥಾನದಲ್ಲಿ ಇದ್ದದ್ದು 2022ರಲ್ಲಿ 40ನೇ ಸ್ಥಾನಕ್ಕೇರಿದೆ. ಭಾರತದ ಆವಿಷ್ಕಾರಗಳು ಜಾಗತಿಕ ಮಟ್ಟದಲ್ಲಿ ಪ್ರಭಾವ ಬೀರುತ್ತಿವೆ. ಇಲ್ಲಿ 100ಕ್ಕೂ ಹೆಚ್ಚು ಯೂನಿಕಾರ್ನ್‌ಗಳಿವೆ. ಆಧಾರ್, ಯುಪಿಐ, ಓಎನ್‌ಡಿಸಿ ಇತ್ಯಾದಿ ಡಿಜಿಟಲ್ ಸಾರ್ವಜನಿಕ ಮಾದರಿಗಳನ್ನು ಜಗತ್ತಿಗೆ ನೀಡಿದೆ. ಹೀಗಿದ್ದೂ, ಅಮೆರಿಕ, ಇಸ್ರೇಲ್ ಇತ್ಯಾದಿಗಳಿಗೆ ಹೋಲಿಸಿದಲ್ಲಿ ದೇಶದಲ್ಲಿ ಪ್ರತಿಲಕ್ಷ ಜನಸಂಖ್ಯೆಗೆ ಅನುಗುಣವಾಗಿ ನವೋದ್ಯಮಗಳ ಸಂಖ್ಯೆ ಹೆಚ್ಚಾಗಬೇಕಿದೆ. ತಂತ್ರಜ್ಞಾನದ ಕ್ಷೇತ್ರದಲ್ಲಿ ಇನ್ನೂ ಬಹಳಷ್ಟು ಕೆಲಸವಾಗಬೇಕಿದೆ.

ಹಿಂದೆ ಭಾರತವು ಪ್ರತಿಭಾವಂತ ಮನಸ್ಸುಗಳ ಮೂಲಕ ಜಗತ್ತಿಗೆ ಕೊಡುಗೆ ನೀಡಿದೆ. ಇಂದು ಕೂಡ ವಿಭಿನ್ನವಾಗಿ ಯೋಚಿಸಬಲ್ಲ ಜನರಿಂದಾಗಿ ಮತ್ತು ಎಐಎಂನಂತಹ ಮಿಷನ್‌ಗಳ ಸಾಂಸ್ಥಿಕ ನೆರವಿನೊಂದಿಗೆ ಕಡಿಮೆ ವೆಚ್ಚದಲ್ಲಿ ತಂತ್ರಜ್ಞಾನಗಳನ್ನು ರೂಪಿಸುತ್ತಿದ್ದು ಭವಿಷ್ಯದ ನಾವಿನ್ಯತೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಯುವ ಭಾರತೀಯರು ಮತ್ತು ನವೋದ್ಯಮಗಳು ಹಿಂದೆಂದೂ ಕಾಣದಂತಹ ಅವಕಾಶಗಳನ್ನು ಪಡೆಯುತ್ತಿದ್ದಾರೆ. ಇಂತಹ ಸಣ್ಣ ಸಣ್ಣ ಹೆಜ್ಜೆಗಳನ್ನಿಡುತ್ತಲೇ ಭಾರತವು ಸಹಕಾರಿಯಾದ, ತೀಕ್ಷ್ಣಮತಿಯಾದ ಹಾಗೂ ಎಲ್ಲವನ್ನೂ ಒಳಗೊಂಡಂತಹ ನಾವಿನ್ಯತೆಯ ಪರಿಸರವನ್ನು ರೂಪಿಸಿಕೊಳ್ಳುವ ತನ್ನ ಹಾದಿಯನ್ನು ಸುಗಮಗೊಳಿಸಿಕೊಂಡಿದೆ. ನವಭಾರತದ ಆರ್ಥಿಕ ಸಾಮರ್ಥ್ಯವನ್ನು ರೂಪಿಸಲು ಹಾಗೂ ತಂತ್ರಜ್ಞಾನವನ್ನು ಮುನ್ನಡೆಸಲು ಎಲ್ಲರೂ ಒಟ್ಟಾಗಿ ಪ್ರಯತ್ನಿಸಬೇಕಿರುವುದು ನಮ್ಮ ಕರ್ತವ್ಯವಾಗಿದೆ.


**ಲೇಖನಕ್ಕೆ ನೆರವು :**

**ತನ್ವಿ ಮಿಸ್ರಾ**
– ಯಂಗ್ ಪ್ರೊಫೆಷನಲ್ ಎಐಎಂ ನೀತಿ ಆಯೋಗ

ಮತ್ತು

**ಅನ್‌ಮೋಲ್ ಸೆಹಗಲ್**
ಕಾರ್ಯಕ್ರಮ ನಿರ್ವಾಹಕರು,
ಐಡಿಇಎಕ್ಸ್ ರಕ್ಷಣಾ ಸಚಿವಾಲಯ





Scanned with ACE Scanner


# ಜಿ 20; ಭಾರತದ ಅಧ್ಯಕ್ಷತೆ

* ಪ್ರೊ. ಹರ್ಷ್ ವಿ. ಪಂತ್




**ಜಾಗತಿಕ ಕ್ರಮದಲ್ಲಿ 'ಪ್ರಮುಖ ನಾಯಕತ್ವ' ಬಯಸುವ ದೇಶವಾಗಿ, ಹವಾಮಾನ ಬದಲಾವಣೆ, ಆಹಾರ ಭದ್ರತೆ, ಆರೋಗ್ಯ ರಕ್ಷಣೆ ಮತ್ತು ತಂತ್ರಜ್ಞಾನ ಸೇರಿದಂತೆ ತನ್ನ ನಾಯಕತ್ವದ ಮೂಲಕ ವಿಶ್ವದ ಒತ್ತಡದ ಸಮಸ್ಯೆಗಳನ್ನು ಪರಿಹರಿಸಲು ಭಾರತ ಉತ್ಸುಕವಾಗಿದೆ. ಜಿ20 ಅಧ್ಯಕ್ಷತೆಯೊಂದಿಗೆ, ಭಾರತವು ಹೆಚ್ಚು ಸಮಾನತೆಯ ವಿಶ್ವದತ್ತ ಶ್ರಮಿಸುತ್ತಿದೆ. ಜಾಗತಿಕ ಆಡಳಿತದ ಸವಾಲುಗಳನ್ನು ಚರ್ಚಿಸಲು ಮತ್ತು ಪರಿಹಾರಗಳನ್ನು ಕಂಡುಕೊಳ್ಳಲು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳನ್ನು ಒಟ್ಟುಗೂಡಿಸುವ ನಿಟ್ಟಿನಲ್ಲಿ ಜಿ20 ಕಾರ್ಯೋನ್ಮುಖವಾಗಿದೆ. ಪ್ರಮುಖ ಜಾಗತಿಕ ವಿಷಯಗಳ ಬಗ್ಗೆ ಒಮ್ಮತವನ್ನು ರೂಪಿಸುವ ಮೂಲಕ ಭಾರತವು ಪರಿಣಾಮಕಾರಿ ಸೇತುವೆಯಾಗಿ ಕಾರ್ಯನಿರ್ವಹಿಸಬಹುದು.**

ಪ್ರಕ್ಷುಬ್ಧ ಜಾಗತಿಕ ವಾತಾವರಣದಲ್ಲಿ ಭಾರತವು ಜಿ20 ಅಧ್ಯಕ್ಷತೆಯನ್ನು ವಹಿಸಿಕೊಂಡಿದೆ. ಆದರೆ ಭಾರತದ ಆರ್ಥಿಕ ಬೆಳವಣಿಗೆಯ ಕಥೆ ತನ್ನದೇ ಆದ ನಿರೀಕ್ಷಿತ ರೀತಿಯಲ್ಲಿ ಬರುತ್ತಿರುವುದರಿಂದ ನವದೆಹಲಿ ಪಾಲಿಗೆ ಇದು ಸದವಕಾಶದ ಸಮಯವಾಗಿತ್ತು. ಭಾರತವು ಇಂಗ್ಲೆಂಡ್ ಅನ್ನು ಮೀರಿಸಿ, ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಅಷ್ಟೇ ಅಲ್ಲ, ವಿಶ್ವದ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಜಾಗತಿಕ ಜಿಡಿಪಿಯ ಶೇ.80ಕ್ಕಿಂತ ಹೆಚ್ಚು, ಜಾಗತಿಕ ವ್ಯಾಪಾರದ ಶೇ.75ರಷ್ಟು ಮತ್ತು ವಿಶ್ವದ ಜನಸಂಖ್ಯೆಯ ಶೇ.60ರಷ್ಟು ಹೊಂದಿರುವ ಈ ಗುಂಪಿಗೆ ಪ್ರಸ್ತುತದ ಸವಾಲುಗಳ ಬಗ್ಗೆ ಒತ್ತಿ ಹೇಳುವ ಕ್ಷಣವೂ ಒದಗಿ ಬಂದಿದೆ. ಹೊಸ ಅಂತಾರಾಷ್ಟ್ರೀಯ ಕ್ರಮ ಮತ್ತು ಚಂಚಲ ಜಾಗತಿಕ ಪರಿಸರ ನಡುವೆ, ಭಾರತದ ವಿಶ್ವಾಸಾರ್ಹತೆ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿದೆ. ಬೆಳೆಯುತ್ತಿರುವ ಆರ್ಥಿಕ ಶಕ್ತಿಯಾಗಿ ಮಾತ್ರವಲ್ಲದೆ, ಜಾಗತಿಕ ಬಹುಪಕ್ಷೀಯತೆಗೆ ತನ್ನ ದೀರ್ಘಕಾಲದ ಬದ್ಧತೆ ಮತ್ತು ಜಾಗತಿಕ ಸಾರ್ವಜನಿಕ ಸರಕುಗಳನ್ನು ತಲುಪಿಸುವ ಸಾಮರ್ಥ್ಯದ ಜತೆಗೆ ಜಾಗತಿಕ ಕಾನೂನಿನ ನಿಯಮವನ್ನು ಎತ್ತಿಹಿಡಿಯುವ ಮತ್ತು ಜಾಗತಿಕ ಶಾಂತಿ ಹಾಗೂ ಭದ್ರತೆಯನ್ನು ಉತ್ತೇಜಿಸಲು ಬದ್ಧವಾಗಿರುವ ರಾಷ್ಟ್ರವಾಗಿ ಭಾರತ ಗುರುತಿಸಿಕೊಂಡಿದೆ. ಕೊವಿಡ್–19



* ಉಪಾಧ್ಯಕ್ಷ, ಅಧ್ಯಯನ ಮತ್ತು ವಿದೇಶಾಂಗ ನೀತಿ ವಿಭಾಗ, ಅಬ್ಸರ್ವರ್ ರಿಸರ್ಚ್ ಫೌಂಡೇಶನ್, ನವದೆಹಲಿ. ಇ–ಮೇಲ್ : harshpant@orfonline.org



Scanned with ACE Scanner





ಸಾಂಕ್ರಾಮಿಕ ರೋಗದ ಉತ್ತುಂಗದಲ್ಲಿ ವೈದ್ಯಕೀಯ ಸರಬರಾಜು ಮತ್ತು ಲಸಿಕೆಗಳನ್ನು ಒದಗಿಸುವಲ್ಲಿ ಭಾರತ ಮುಂಚೂಣಿಯಲ್ಲಿತ್ತು, ಇಂತಹ ದೊಡ್ಡ ಬಿಕ್ಕಟ್ಟಿನ ಸಮಯದಲ್ಲಿ ಜಗತ್ತಿನ ಜತೆಗೆ ತಾನು ಸಂಪರ್ಕದಲ್ಲಿ ಇರಬಲ್ಲೆ ಎಂಬುದನ್ನು ಭಾರತ ಸಾಬೀತುಪಡಿಸಿತು.

ಹೆಚ್ಚೆಚ್ಚು ಛಿದ್ರವಾಗುತ್ತಿರುವ ಜಗತ್ತಿನಲ್ಲಿ, ಅಸ್ತಿತ್ವದಲ್ಲಿರುವ ಶಕ್ತಿಗಳು ಆಂತರಿಕವಾಗಿ ಕೇಂದ್ರೀಕೃತವಾಗಿವೆ ಮತ್ತು ವಿಸ್ತರಣಾವಾದಿ ಶಕ್ತಿಗಳು ಹೆಚ್ಚು ದೃಢವಾಗುತ್ತಿವೆ. ಭಾರತದ ಜಿ20 ನಾಯಕತ್ವವು ಜಗತ್ತಿನ ಮೂಲೆಗಳ ಸಮಸ್ಯೆಗಳನ್ನು ಜಾಗತಿಕ ಸಂವಾದಗಳ ಕೇಂದ್ರ ಬಿಂದುವನ್ನಾಗಿ ಮಾಡಲು ಪ್ರಯತ್ನಿಸಿದೆ. ಜಾಗತಿಕ ವ್ಯವಸ್ಥೆಯು ಹಿಂದೆಂದಿಗಿಂತಲೂ ಹೆಚ್ಚು ಸ್ಪಷ್ಟವಾದ ಹರಿವು ಮತ್ತು ಪ್ರಮಾಣ ಬದಲಾವಣೆಯಲ್ಲಿ ಅಧಿಕಾರದ ಸಮತೋಲನದೊಂದಿಗೆ ಒಳಹರಿವಿನ ಬಿಂದುವಿನ ಮೂಲಕ ಹಾದುಹೋಗುತ್ತಿದೆ. ಎರಡನೆಯ ಮಹಾಯುದ್ಧದ ನಂತರದ ವ್ಯವಸ್ಥೆಯು ನಿಜವಾಗಿಯೂ ಮುಗಿದಿದೆ ಮತ್ತು ಅದರ ಸ್ಥಾನದಲ್ಲಿ ಸುತ್ತಲೂ ಪ್ರಕ್ಷುಬ್ಧತೆಯನ್ನು ಉಂಟುಮಾಡುವ ನಿರ್ವಾತವಿದೆ. ಪ್ರಮುಖ ಶಕ್ತಿಗಳು ಆಂತರಿಕವಾಗಿ ಕೇಂದ್ರೀಕೃತವಾಗಿವೆ. ತಮ್ಮ ಜಾಗತಿಕ ಬಾಧ್ಯತೆಗಳ ವೆಚ್ಚದಲ್ಲಿ ತಮ್ಮ ದೇಶೀಯ ಸಮಸ್ಯೆಗಳನ್ನು ನಿಭಾಯಿಸಲು ಪ್ರಯತ್ನಿಸುತ್ತಿವೆ. ಉದಯೋನ್ಮುಖ ಸವಾಲುಗಳಿಗೆ ಪ್ರತಿಕ್ರಿಯಿಸಲು ಅಂತಾರಾಷ್ಟ್ರೀಯ ಸಂಸ್ಥೆಗಳು ಮರು ಕಾರ್ಯತಂತ್ರ ರೂಪಿಸಬೇಕಾಗಿದೆ. ಕೊವಿಡ್–19ರ ಮೇಲಿನ ಪ್ರವೃತ್ತಿಗಳನ್ನು ವೇಗಗೊಳಿಸಿತು. ಏಕೆಂದರೆ ಜಗತ್ತು ತಳಹದಿಯ ದೋಷ ರೇಖೆಗಳ ಬಗ್ಗೆ ಹೆಚ್ಚು ಅರಿತುಕೊಂಡಿತು. ವಾಸ್ತವವು ಕೆಲವೇ ಜನರು ಅರ್ಥಮಾಡಿಕೊಳ್ಳಲು ಸಾಧ್ಯವಾಗುವ ಒಂದು ವಿಶ್ವ ಅಸ್ವಸ್ಥತೆಯಾಗಿದೆ. ಆದ್ದರಿಂದ ನೀತಿ ಪ್ರತಿಕ್ರಿಯೆಗಳು ಅಸಮರ್ಪಕವಾಗಿ ಉಳಿದಿದ್ದು, ಬಹುಪಕ್ಷೀಯ ಸಂಸ್ಥೆಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳು ಮತ್ತು ಉದಯೋನ್ಮುಖ ಆರ್ಥಿಕತೆಗಳ ವಿಶಾಲ ಪ್ರಾತಿನಿಧ್ಯದ ಕೊರತೆಯಿಂದಾಗಿ ಬಹುಪಕ್ಷೀಯತೆಯ ಬಿಕ್ಕಟ್ಟು ಇನ್ನಷ್ಟು ಹದಗೆಡುತ್ತಿದೆ. ಆರ್ಥಿಕ ಜಾಗತೀಕರಣವೂ ಒತ್ತಡಕ್ಕೆ ಒಳಗಾಗಿದೆ. ರಾಷ್ಟ್ರಗಳು ಆರ್ಥಿಕ ಸಹಕಾರಕ್ಕೆ ಕಾಲಿಡುವ ಮೊದಲು ರಾಜಕೀಯ ಒತ್ತಡದ ಪರೀಕ್ಷೆಗೆ ಒತ್ತಾಯಿಸಿದವು. 'ವ್ಯಾಪಾರ ಮಾಡೋಣ ಮತ್ತು ಸ್ನೇಹಿತರಾಗೋಣ' ಎಂಬ ಮಂತ್ರದಿಂದ, "ಸ್ನೇಹಿತರ ನಡುವೆ ವ್ಯಾಪಾರ ಮಾಡೋಣ" ಎಂಬ ಮಂತ್ರ ಶುರುವಾಯಿತು. ಫ್ರಾನ್ಸಿಸ್ ಫುಕುಯಾಮಾ ಅವರ 'ಇತಿಹಾಸದ ಅಂತ್ಯ'ದ ಆಶಾವಾದವು ಮಾಯವಾಯಿತು, ಇತಿಹಾಸವು ಅಬ್ಬರದೊಂದಿಗೆ ಹಿಂತಿರುಗಿತು. ರಾಷ್ಟ್ರಗಳು ಡಿಕಪ್ಲಿಂಗ್ ಮತ್ತು ಡಿ–ರಿಸ್ಕ್ ಕಡೆಗೆ ಸಾಗುತ್ತಿದ್ದಂತೆ ಜಾಗತೀಕರಣವು ವಿಶ್ವಾಸಾರ್ಹ ಆಯ್ಕೆಯಾಗಿ ಹೊರಹೊಮ್ಮಿತು. ಒಂದು ಕಾಲದಲ್ಲಿ ಜಾಗತಿಕ ಸಾರ್ವಜನಿಕ ಒಳಿತು ಎಂದು ಪರಿಗಣಿಸಲ್ಪಟ್ಟ ಆರ್ಥಿಕ ಪರಸ್ಪರ ಅವಲಂಬನೆಯು ಒಂದು ಸವಾಲಾಗಿ ಹೊರಹೊಮ್ಮಿತು. ಏಕೆಂದರೆ ಅದು ಬಳಸಿಕೊಳ್ಳಬಹುದಾದ ದುರ್ಬಲತೆಗಳನ್ನು ಸೃಷ್ಟಿಸಿತು. ರಾಷ್ಟ್ರಗಳು ತಮ್ಮ ವ್ಯಾಪಾರ ಪಾಲುದಾರರ ವೈವಿಧ್ಯೀಕರಣದತ್ತ ವೇಗವಾಗಿ ಸಾಗಿದವು ಮತ್ತು ಜಾಗತಿಕ ಪೂರೈಕೆ ಸರಪಳಿಗಳ ಪುನರ್‌ರಚನೆ ಆದ್ಯತೆಯ ಕ್ಷೇತ್ರವಾಗಿ ಹೊರಹೊಮ್ಮಿತು.

ಆದ್ದರಿಂದ, ಭಾರತವು ತನ್ನ ಜಿ20 ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ ವಿಷಯವು ವಸುಧೈವ ಕುಟುಂಬಕಂ, ಅಂದರೆ "ಜಗತ್ತು – ಭೂಮಿಯೇ ಒಂದು ಕುಟುಂಬ". 2023ರ ಜಿ20 ಲಾಂಛನವನ್ನು ಅನಾವರಣಗೊಳಿಸುವಾಗ, ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಜಗತ್ತು ಪ್ರಸ್ತುತ 'ಶತಮಾನಕ್ಕೊಮ್ಮೆ ಎದುರಾಗುವ ಸಾಂಕ್ರಾಮಿಕ ಸಂಘರ್ಷ' ಮತ್ತು ಆರ್ಥಿಕ ಅನಿಶ್ಚಿತತೆಯ ನಂತರದ ಪರಿಣಾಮಗಳನ್ನು ಅನುಭವಿಸುತ್ತಿದೆ ಎಂಬುದನ್ನು ಒತ್ತಿಹೇಳಿದರು. ಈ ಮೂಲಕ ಹೆಚ್ಚಿನ ಜಾಗತಿಕ ಸಹಕಾರದ ಅಗತ್ಯವನ್ನು ಒತ್ತಿಹೇಳಿದರು.

ತನ್ನ ಒಂದು ವರ್ಷದ ಅಧ್ಯಕ್ಷತೆಯ ಅವಧಿಯಲ್ಲಿ, ಭಾರತವು ವಿವಿಧ ಉಪಕ್ರಮಗಳ ಮೂಲಕ ಜಾಗತಿಕ






Scanned with ACE Scanner

ನಾಯಕತ್ವದಲ್ಲಿ ಭಾರತದ ಹಕ್ಕನ್ನು ಪ್ರದರ್ಶಿಸಲು ತೀವ್ರ ಪ್ರಯತ್ನ ಮಾಡಿದೆ. ಇದರ ಗೋಚರ ಆಯಾಮವು ಅದರ ಭಾಗವಹಿಸುವ ಸ್ವಭಾವದಲ್ಲಿ ಪ್ರತಿಫಲಿಸುತ್ತದೆ. 2023ರ ಜನವರಿ 9ರಂದು ಇಂದೋರ್‌ನಲ್ಲಿ 17ನೇ ಪ್ರವಾಸಿ ಭಾರತೀಯ ದಿವಸ್ ಸಮಾವೇಶವನ್ನು ಉದ್ಘಾಟಿಸುವಾಗ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಮಾಡಿದ ಭಾಷಣದಲ್ಲಿ ಭಾಗವಹಿಸುವಿಕೆಯ ರಾಜತಾಂತ್ರಿಕತೆಗೆ ಒತ್ತು ಸ್ಪಷ್ಟವಾಗಿದೆ. ಅಲ್ಲಿ ಭಾರತವು ಜಿ20 ಅನ್ನು ಕೇವಲ ರಾಜತಾಂತ್ರಿಕ ಘಟನೆಯಾಗಿ ಮಾತ್ರವಲ್ಲದೆ ಜನರ ಭಾಗವಹಿಸುವಿಕೆಯ ಐತಿಹಾಸಿಕ ಘಟನೆಯನ್ನಾಗಿ ಮಾಡಬೇಕಾಗಿದೆ ಎಂದು ಹೇಳಿದರು. ಇದೇ ರೀತಿಯ ಭಾವನೆಯನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯ





(ಎಂಇಎ) ಪ್ರತಿಧ್ವನಿಸಿತು. ಇದರಲ್ಲಿ ಜಿ20 ಅನ್ನು 'ನಿಜವಾಗಿಯೂ ಜನರ ಜಿ20' ಮಾಡುವ ಭಾರತದ ಉದ್ದೇಶವನ್ನು ಪುನರುಚ್ಚರಿಸಿತು. ಭಾರತವು ವಿವಿಧ ನಾಗರಿಕ ಕಾರ್ಯಕ್ರಮಗಳ ಮೂಲಕ ಜಿ20ನಲ್ಲಿ ಜನ ಭಾಗೀದಾರಿ (ಜನರ ಭಾಗವಹಿಸುವಿಕೆ) ಮತ್ತು 50 ನಗರಗಳು ಮತ್ತು 32 ಕೆಲಸದ ಹರವುಗಳಲ್ಲಿ 200ಕ್ಕೂ ಹೆಚ್ಚು ಸಭೆಗಳನ್ನು ಆಯೋಜಿಸಿದೆ. ಈ ಭಾಗವಹಿಸುವ ರಾಜತಾಂತ್ರಿಕತೆಯ ಮತ್ತೊಂದು ಮಹತ್ವದ ಅಂಶವೆಂದರೆ ಪ್ರಾಂತ್ಯಗಳು ಮತ್ತು ಪ್ರದೇಶಗಳ ಆದ್ಯತೆ ಮತ್ತು ಈ ಹಿಂದೆ ಸೂಕ್ತ ಗಮನ ಪಡೆಯದ ಸಂಸ್ಕೃತಿಗಳ ಪ್ರದರ್ಶನಕ್ಕೆ ದೊರೆತ ಅವಕಾಶ.





21ನೇ ಶತಮಾನದ ಸಂಕೀರ್ಣ ಸವಾಲುಗಳಿಂದಾಗಿ ಜಾಗತಿಕ ಸಹಕಾರದ ಸಾಂಪ್ರದಾಯಿಕ ಮಾದರಿಗಳು ಒತ್ತಡದಲ್ಲಿವೆ. ಜಾಗತಿಕ ಕ್ರಮದಲ್ಲಿ 'ಪ್ರಮುಖ ನಾಯಕತ್ವ' ಬಯಸುವ ದೇಶವಾಗಿ, ಹವಾಮಾನ ಬದಲಾವಣೆ, ಆಹಾರ ಭದ್ರತೆ, ಆರೋಗ್ಯ ರಕ್ಷಣೆ ಮತ್ತು ತಂತ್ರಜ್ಞಾನ ಸೇರಿದಂತೆ ತನ್ನ ನಾಯಕತ್ವದ ಮೂಲಕ ವಿಶ್ವದ ಒತ್ತಡದ ಸಮಸ್ಯೆಗಳನ್ನು ಪರಿಹರಿಸಲು ಭಾರತ ಉತ್ಸುಕವಾಗಿದೆ. ಬಹುಪಕ್ಷೀಯ ವೇದಿಕೆಗಳಲ್ಲಿ ಜಾಗತಿಕ ಸಮಸ್ಯೆಗಳ ಪರವಾಗಿ ಭಾರತ ಐತಿಹಾಸಿಕವಾಗಿ ಕಳವಳಗಳನ್ನು ವ್ಯಕ್ತಪಡಿಸಿದೆ. ಭಾರತಕ್ಕೆ ಜಿ20 ಅಧ್ಯಕ್ಷತೆಯು ಜಾಗತಿಕ ವೇದಿಕೆಯಲ್ಲಿ ಬೆಳೆಯುತ್ತಿರುವ ತನ್ನ ಪ್ರಭಾವವನ್ನು ಪ್ರದರ್ಶಿಸಲು ಹೊಸ ವೇದಿಕೆಯನ್ನು ಒದಗಿಸಿದೆ. ಇದರ ಭಾಗವಾಗಿ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ಉದ್ಯಮಶೀಲತೆ ಮತ್ತು ನಾವಿನ್ಯತೆ, ಹವಾಮಾನ ನ್ಯಾಯ ಮತ್ತು ಆರೋಗ್ಯ ರಕ್ಷಣೆಗೆ ಕೈಗೆಟುಕುವ ಪ್ರವೇಶ




Scanned with ACE Scanner



ಕುರಿತಂತೆ ಉದಯೋನ್ಮುಖ ಆರ್ಥಿಕತೆಗಳಿಗೆ ಮುಖ್ಯವಾದ ಸಮಸ್ಯೆಗಳನ್ನು ಭಾರತ ಎತ್ತಿ ತೋರಿಸಿದೆ. ಆದರೆ ಜಿ20ರಲ್ಲಿ ಪ್ರಮುಖ ಶಕ್ತಿಗಳ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆ ಮತ್ತು ಬಹುಪಕ್ಷೀಯ ಸಂಸ್ಥೆಗಳ ವಿಶ್ವಾಸಾರ್ಹತೆಯ ಬಿಕ್ಕಟ್ಟು, ರಾಷ್ಟ್ರಗಳನ್ನು ಒಟ್ಟುಗೂಡಿಸುವ ಕಾರ್ಯವನ್ನು ಇನ್ನಷ್ಟು ಕಷ್ಟಕರವಾಗಿಸಿರುವುದರಿಂದ ಭಾರತದ ಜಿ20 ಅಧ್ಯಕ್ಷ ಸ್ಥಾನಕ್ಕೆ ಸವಾಲುಗಳಿಲ್ಲದೆ ಇಲ್ಲ. ಗಮನವನ್ನು ಜಾಗತಿಕ ಸಮಸ್ಯೆಗಳ ಆದ್ಯತೆಗಳ ಮೇಲೆ ಕೇಂದ್ರೀಕರಿಸುವ ಮೂಲಕ, ಭಾರತವು ಪ್ರಮುಖ ಮಧ್ಯಸ್ಥಗಾರರನ್ನು ಒಟ್ಟುಗೂಡಿಸಲು ಮತ್ತು ಬಹುಪಕ್ಷೀಯತೆಯಲ್ಲಿ ಅಂತಾರಾಷ್ಟ್ರೀಯ ಸಮುದಾಯದ ನಂಬಿಕೆಯನ್ನು ಪುನರುಜ್ಜೀವನಗೊಳಿಸಲು ಆಶಿಸಿದೆ. ಇದು ಖಂಡಿತವಾಗಿಯೂ ಒಂದು ಅತ್ಯುತ್ತಮ ಆಶಯವಾಗಿದೆ.. ನವದೆಹಲಿಯ ರಾಜತಾಂತ್ರಿಕ ತಂತ್ರವು ಅದರ ಜಿ20 ಅಧ್ಯಕ್ಷತೆಯನ್ನು ಜಾಗತಿಕ ಆಡಳಿತದ ಬಗ್ಗೆ ಸಂಭಾಷಣೆಯನ್ನು ಹೆಚ್ಚಿಸುತ್ತದೆ ಎಂಬುದನ್ನು ಖಚಿತಪಡಿಸಿದೆ. ಭಾರತದ ಜಿ20 ಅಧ್ಯಕ್ಷತೆಯು ಅವ್ಯವಸ್ಥೆ ಮತ್ತು ಅಡೆತಡೆಗಳತ್ತ ಸಾಗುತ್ತಿರುವ ಅಂತಾರಾಷ್ಟ್ರೀಯ ವ್ಯವಸ್ಥೆಗೆ ಸ್ವಲ್ಪ ಕ್ರಮಬದ್ಧತೆಯನ್ನು ನೀಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳುವುದು ನ್ಯಾಯೋಚಿತವಾಗಿದೆ. ಇಂದು, ಭಯೋತ್ಪಾದನೆ, ಸಾಂಕ್ರಾಮಿಕ ರೋಗಗಳು ಮತ್ತು ಹವಾಮಾನ ಬದಲಾವಣೆಯಂತಹ ಬಹುರಾಷ್ಟ್ರೀಯ ಸವಾಲುಗಳ ನಿವಾರಣೆ ಹೆಚ್ಚಿನ ಆದ್ಯತೆ ಸಹಕಾರವನ್ನು ಬಯಸುತ್ತಿದ್ದರೂ, ಪ್ರಪಂಚದಾದ್ಯಂತದ ದೇಶಗಳು ತಮ್ಮ ಸ್ವಹಿತಾಸಕ್ತಿಗಳಿಗೆ ಹೆಚ್ಚು ಆದ್ಯತೆ ನೀಡುತ್ತಿವೆ. ತಾತ್ಕಾಲಿಕ ಹಿತಾಸಕ್ತಿ ಆಧರಿತ ಒಕ್ಕೂಟಗಳನ್ನು ನಿರ್ಮಿಸುತ್ತಿವೆ. ಬಹುಪಕ್ಷೀಯ ಸ್ವರೂಪಗಳ ತಲುಪಿಸುವ ಸಾಮರ್ಥ್ಯದಲ್ಲಿ ಜಾಗತಿಕ ನಂಬಿಕೆಯನ್ನು ಪುನರುಜ್ಜೀವನಗೊಳಿಸಲು ಭಾರತ ಪ್ರಯತ್ನಿಸಿದೆ. ಜಿ20 ಒಂದು ಆಸಕ್ತಿದಾಯಕ ವೇದಿಕೆಯಾಗಿದ್ದು, ಇದು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ಜಗತ್ತನ್ನು ಬೇರೆ ಯಾವುದೇ ವೇದಿಕೆ ಮಾಡದ ರೀತಿಯಲ್ಲಿ ಒಟ್ಟುಗೂಡಿಸುತ್ತಿದೆ. ಭಾರತದ ಜಿ20 ಅಧ್ಯಕ್ಷತೆಯು ವಿಶ್ವವನ್ನು ಹೆಚ್ಚಿನ ಒಗ್ಗಟ್ಟಿನ ಪ್ರಜ್ಞೆಯತ್ತ ಕೊಂಡೊಯ್ಯುವ ಗುರಿಯನ್ನು ಹೊಂದಿದೆ. ಬಹುಸಂಸ್ಕೃತಿಯ ಪ್ರಜಾಪ್ರಭುತ್ವ ಎಂಬ ಅದರ ಸ್ವಂತ ವಾಸ್ತವವು ಜಾಗತಿಕ ಸವಾಲುಗಳನ್ನು ಎದುರಿಸಲು ಕಾರ್ಯನಿರ್ವಹಿಸಲು ಮತ್ತು ಹೆಚ್ಚು ವೈವಿಧ್ಯಮಯ ಮಧ್ಯಸ್ಥಗಾರರನ್ನು ಒಟ್ಟುಗೂಡಿಸುವಲ್ಲಿ ಉತ್ತಮವಾಗಿ ಮಾರ್ಗದರ್ಶನ ನೀಡಬೇಕು. ಇಂಡಿಯಾ@75 ಜಾಗತಿಕ ವೇದಿಕೆಯಲ್ಲಿ ಮಹತ್ವಾಕಾಂಕ್ಷೆಯ ಪಾತ್ರವನ್ನು ವಹಿಸಲು ಉತ್ತಮ ಸ್ಥಾನದಲ್ಲಿದೆ ಮತ್ತು ಅದರ ಜಿ20 ಅಧ್ಯಕ್ಷತೆಯು ವಿಶ್ವಾಸಾರ್ಹ ಜಾಗತಿಕ ಸಂವಾದಕವಾಗಿ ತನ್ನ ರುಜುವಾತುಗಳನ್ನು ಸಾಬೀತುಪಡಿಸಿದೆ.



# ಕೃಷಿ : ಕೊರತೆಯಿಂದ ಮಿಗುತೆವರೆಗಿನ ಯಾನ

* ಡಾ. ಜಗದೀಪ್ ಸಕ್ಸೆನಾ

**ತೀವ್ರ ಹಸಿವು ಮತ್ತು ಬಡತನದಿಂದ ನರಳುತ್ತಿದ್ದ ನಮ್ಮ ದೇಶವು ಕೃಷಿ ಉತ್ಪಾದನೆಗೆ ಹೆಚ್ಚಿನ ಆದ್ಯತೆ ನೀಡಿ ಹಸಿವನ್ನು ತೊಡೆದು ಹಾಕಲು ತನ್ನ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ (1951-56) ಒಂದು ಕರಡು ಯೋಜನೆಯನ್ನು ರೂಪಿಸಿತು. ಅದರ ಪರಿಣಾಮ ಕೃಷಿ ಉತ್ಪಾದನೆ ಏರಿಕೆಯಾಗಿದ್ದರಿಂದ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾ ಅಭಿವೃದ್ಧಿ ಕಡೆಗೆ ತನ್ನ ಗಮನ ಕೇಂದ್ರೀಕರಿಸಿತು. ಈಗ ಭಾರತ ಜಾಗತಿಕವಾಗಿ ಕೃಷಿಯ ಅನೇಕ ಸ್ತರಗಳಲ್ಲಿ ಉನ್ನತ ಸ್ಥಾನದಲ್ಲಿದೆ. ಭಾರತ ತನ್ನ ಜನಸಂಖ್ಯೆ ಬೆಳವಣಿಗೆ ಗತಿಗಿಂತ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಗಮನಾರ್ಹ ಹೆಚ್ಚಳ ಕಂಡಿದೆ. ತನ್ನ ಸ್ವಯಂ ಪರಿಪೂರ್ಣತೆಯಿಂದ ಮೇಲೆದ್ದ ಭಾರತ ಈಗ ಕೃಷಿಯಲ್ಲಿ ಜಾಗತಿಕ ಮಟ್ಟದ ಶಕ್ತಿಯಾಗುವ ಕಡೆ ಚಲಿಸುತ್ತಿದೆ.**




ಕಳೆದ 75 ವರ್ಷಗಳಲ್ಲಿ ಭಾರತ ಕೃಷಿಯಲ್ಲಿ ಅಭೂತಪೂರ್ವ ಸಾಧನೆಯನ್ನು ದಾಖಲಿಸಿದ್ದು ನೆನಪಿನಲ್ಲಿ ಉಳಿಯುವಂತಹ ಯಶಸ್ಸನ್ನು ಕಂಡಿದೆ. ಸ್ವಾತಂತ್ರ್ಯ ಸಮಯದಲ್ಲಿನ ಆಹಾರ ಧಾನ್ಯಗಳ ಅತ್ಯಂತ ಕೊರತೆಯಿಂದ ಪ್ರಾರಂಭವಾಗಿ ಈಗ ಆಹಾರ ಧಾನ್ಯಗಳ ಹೆಚ್ಚುವರಿಯಿಂದಾಗಿ ವಿದೇಶಗಳಿಗೆ ರಫ್ತು ಮಾಡುವ ಸ್ಥಿತಿಯಲ್ಲಿರುವುದು ಭಾರತಕ್ಕೆ ಹೆಮ್ಮೆಯ ವಿಷಯವಾಗಿದೆ. ಹಿಂತಿರುಗಿ ನೋಡುವುದಾದರೆ 1943–44ರ ಬಂಗಾಳದ ತೀವ್ರ ಬರದ ಹದಗೆಟ್ಟ ಪರಿಸ್ಥಿತಿಯ ನೆರಳಲ್ಲಿ ಭಾರತ ಸ್ವಾತಂತ್ರ್ಯ ಪಡೆಯಿತು. ಆ ಸಮಯದಲ್ಲಿ ಸುಮಾರು ಮೂರು ಮಿಲಿಯನ್ ಜನರು ಅಪೌಷ್ಟಿಕತೆಯಿಂದ ಮತ್ತು ಭೀಕರ ಖಾಯಿಲೆಗಳಿಂದ ಪ್ರಾಣ ಕಳೆದುಕೊಂಡರು. ಆಹಾರದ ತೀವ್ರ ಕೊರತೆ, ಆಗಾಗಿನ ಬರ ಇತ್ಯಾದಿಗಳಿಂದ ಭಾರತದ ಜನರು ತೀವ್ರ ಅಪೌಷ್ಟಿಕತೆಯಿಂದ ನರಳಿದರು. ಭಾರತದ ಶೇಕಡ 85 ಜನರು ಗ್ರಾಮೀಣ ವಾಸಿಗಳಾಗಿದ್ದು ಕೃಷಿಯಿಂದಲೇ ತಮ್ಮ ಜೀವನ ಸಾಗಿಸಿದರೂ, ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಬ್ರಿಟಿಷರ ಅಪಕ್ವ ನೀತಿಯಿಂದಾಗಿ ನಮ್ಮ ದೇಶ ಆಹಾರ ಧಾನ್ಯಗಳ ತೀವ್ರ ಕೊರತೆ ಅನುಭವಿಸುತ್ತಿತ್ತು. 1950–51 ರಲ್ಲಿ ಭಾರತದ ಆಹಾರ ಉತ್ಪಾದನೆ ಕೇವಲ 50.82 ಮಿಲಿಯನ್ ಮೆಟ್ರಿಕ್ ಟನ್‌ಗಳಾಗಿದ್ದು ಏರುತ್ತಿರುವ ಜನಸಂಖ್ಯೆಗೆ ಇದು ಕೊರತೆಯಾಗಿದ್ದರಿಂದ ಅಮೆರಿಕ ಮತ್ತು ಇತರ ಅಭಿವೃದ್ಧಿ ದೇಶಗಳಿಗೆ ಆಹಾರಧಾನ್ಯಕ್ಕೆ ಬೇಡಿಕೆ ಇಡುವ ಅನಿವಾರ್ಯತೆ ಉಂಟಾಯಿತು. ಇದಲ್ಲದೆ 1948, 1962 ಮತ್ತು 1965 ರಲ್ಲಿನ ಸತತ ಯುದ್ಧಗಳು, ಜೊತೆಗೆ ಆಗಾಗ್ಗೆ ಸಂಭವಿಸುತ್ತಿದ್ದ ಬರಗಾಲಗಳು ಈ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣ ಗೊಳಿಸಿತು. ಭಾರತದ ಈ ಕಠೋರ ಪರಿಸ್ಥಿತಿಯು ಹಿಂದೆಂದೂ ಕಂಡಿಲ್ಲದ 'ನಾಕೆಯಿಂದ ನೇರ ಬಾಯಿಗೆ' ಸನ್ನಿವೇಶವನ್ನು ಸೃಷ್ಟಿ ಮಾಡಿದ್ದಲ್ಲದೆ ಭಾರತ ಭಿಕ್ಷಾ ದೇಶ ಎನ್ನುವ ಅಪಖ್ಯಾತಿಗೆ ಒಳಗಾಯಿತು. ಭಾರತದ ಲಕ್ಷಾಂತರ ಜನರನ್ನು ಹಸಿವಿನಿಂದ ಪಾರು ಮಾಡಲು ಅಮೆರಿಕ ಪಿಎಲ್ 480 ಯೋಜನೆಯಡಿಯಲ್ಲಿ ಅಧಿಕ ಪ್ರಮಾಣದಲ್ಲಿ ಗೋಧಿಯನ್ನು ಉದಾರವಾಗಿ ನೀಡಿತು. ಆದರೆ ಅಂತಾರಾಷ್ಟ್ರೀಯ ಸಂಬಂಧದ ಕೊರತೆಯಿಂದಾಗಿ ಬೇಗನೆ ಈ ನೀಡಿಕೆ ಪ್ರಮಾಣ ಕುಸಿಯಿತು. ಈ ದಿನಗಳಲ್ಲೇ ವಿಲಿಯಂ ಮತ್ತು ಪಾಲ್ ಪಾಡಕ್ ಬರೆದ ಜನಪ್ರಿಯ ಪುಸ್ತಕ "ಫೆಮೈನ್ 1975" ರಲ್ಲಿ ಮುಂಬರುವ ದಿನಗಳಲ್ಲಿ ಭಾರತದ ಲಕ್ಷಾಂತರ

* ಮಾಜಿ ಮುಖ್ಯ ಸಂಪಾದಕರು, ಐಸಿಎಆರ್ ನವದೆಹಲಿ. ಇ-ಮೇಲ್ : jagdeepsaxena@yahoo.com



Scanned with ACE Scanner




ಜನ ಹಸಿವಿನಿಂದ ಸಾಯಬಹುದು ಎಂದು ಭವಿಷ್ಯ ನುಡಿದಿದ್ದರು.

### ಪರಿವರ್ತನೆಯ ಕಥೆಗಳು

ಅತೀವ ಹಸಿವು ಮತ್ತು ಬಡತನದಿಂದ ಬಳಲುತ್ತಿದ್ದ ಭಾರತ 1951–56ರ ತನ್ನ ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಹಸಿವಿನ ನಿರ್ಮೂಲನೆಗೋಸ್ಕರ ಕೃಷಿ ಉತ್ಪಾದನೆಗೆ ಹೆಚ್ಚಿನ ಮಹತ್ವ ನೀಡುವ ಯೋಜನೆಯನ್ನು ರೂಪಿಸಿತು. ಸುಮಾರು ಮೂರನೇ ಒಂದು ಭಾಗದಷ್ಟು ಯೋಜನಾ ವೆಚ್ಚವನ್ನು ನೀರಾವರಿ ಸೌಲಭ್ಯಕ್ಕೆ ಮತ್ತು ರಾಸಾಯನಿಕ ಗೊಬ್ಬರ ಉತ್ಪಾದನೆಗೆ ಹಂಚಿಕೆ ಮಾಡಲಾಯಿತು. ಇದರ ಪರಿಣಾಮ ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ ಕಂಡುಬಂದುದರಿಂದ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ(1956–61) ಕೈಗಾರಿಕಾ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಲಾಯಿತು. ಕೃಷಿ ಕ್ಷೇತ್ರಕ್ಕೆ ಶೇಕಡ 20ರಷ್ಟು ಹಂಚಿಕೆ ಕಡಿತಗೊಳಿಸಲಾಯಿತು. 1961–66 ರ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಯಂ ಪೂರ್ಣತೆ ಸಾಧಿಸಿದರೂ 1962ರ ಚೀನಾ ಸಂಘರ್ಷ ಮತ್ತು 1965ರ ಪಾಕ್ ಯುದ್ಧ ಹಾಗೂ 1965–66ರ ಅತ್ಯಂತ ದೀರ್ಘಕಾಲದ ಬರ ಈ ಉತ್ಪಾದನೆಯ ಪರಿಣಾಮಗಳನ್ನು ವಿಫಲಗೊಳಿಸಿತು. ಇದು ದೇಶದಲ್ಲಿ ಬಾರಿ ಪ್ರಮಾಣದ ಆಹಾರ ಬಿಕ್ಕಟ್ಟಿಗೆ ಕಾರಣವಾಗಿ ಸರ್ಕಾರವು ಜನರಿಗೆ ವಾರದಲ್ಲಿ ಒಂದು ದಿನ ಉಪವಾಸ ಆಚರಣೆಗೆ ಕೋರಿಕೊಂಡಿತು ಹಾಗೂ ತಮ್ಮ ಆಹಾರದಲ್ಲಿ ಗೆಡ್ಡೆ ಗೆಣಸು ಮತ್ತು ಸಿರಿಧಾನ್ಯಗಳನ್ನು ಬಳಸುವಂತೆ ಕರೆ ಕೊಟ್ಟಿತು.

ಈ ಮಧ್ಯೆ ಮೆಕ್ಸಿಕೊದ ವಿಜ್ಞಾನಿ ಡಾ. ನಾರ್ಮನ್ ಬೋರ್ಲಾಗ್ ಗೋಧಿಯ ಅನೇಕ ತಳಿಗಳನ್ನು ಅಭಿವೃದ್ಧಿಪಡಿಸಿದ್ದುದು ಒಂದು ಮಹತ್ವಪೂರ್ಣ ತಿರುವು ಪಡೆದುಕೊಂಡಿತು. ಅವು ಅರೆಕುಬ್ಜ ತಳಿಗಳಾಗಿದ್ದು ಹೆಚ್ಚಿನ ಇಳುವರಿ ನೀಡುವಂತಾಗಿದ್ದು ರೋಗನಿರೋಧಕ ಗುಣ ಹೊಂದಿದ್ದು ಶೀಘ್ರ ಬೆಳವಣಿಗೆ ಮತ್ತು ರಾಸಾಯನಿಕ ಗೊಬ್ಬರಗಳಿಗೆ ಉತ್ತಮವಾಗಿ ಸ್ಪಂದಿಸುತ್ತಿದ್ದುದು ಅದರ ವಿಶೇಷವಾಗಿತ್ತು. 1966 ರಲ್ಲಿ ಭಾರತ ಸರ್ಕಾರ 18000 ಮೆಟ್ರಿಕ್ ಟನ್ ಗಳಷ್ಟು ಹೊಸ ವಿಧದ ಗೋಧಿಯ ತಳಿಗಳ ಆಮದಿಗೆ ಚಾಲನೆ ನೀಡಿತು. ಈ ಬೀಜಗಳನ್ನು 5 ಕೆ.ಜಿ ಪ್ಯಾಕಗಳಲ್ಲಿ ದೆಹಲಿ, ಹರ್ಯಾಣ ಮತ್ತು ಪಂಜಾಬ್‌ಗಳ ರೈತರಿಗೆ ಹಂಚಿಕೆ ಮಾಡಿದ್ದಲ್ಲದೆ ಕೃಷಿ ತಜ್ಞ ಡಾ. ಎಂ.ಎಸ್. ಸ್ವಾಮಿನಾಥನ್ ನೇತೃತ್ವದಲ್ಲಿ ಸಾವಿರಕ್ಕೂ ಅಧಿಕ ಪ್ರಾಯೋಗಿಕ ಪ್ರದರ್ಶನಗಳನ್ನು ರೈತರ ಜಮೀನಿನಲ್ಲಿ ನಡಸಲಾಯಿತು. ಇದರಿಂದ ಉತ್ತೇಜನಗೊಂಡ ರೈತರು ಅತ್ಯಂತ ಯಶಸ್ವಿಯಾಗಿ ಹೆಕ್ಟೇರ್‌ಗೆ ನಾಲ್ಕರಿಂದ ಐದು ಟನ್‌ಗಳಷ್ಟು ಗೋಧಿ ಬೆಳೆದರು. ಇದು ಈ ಮೊದಲು ಹೆಕ್ಟೇರ್‌ಗೆ ಕೇವಲ ಒಂದು ಟನ್ ಮಾತ್ರವಾಗಿತ್ತು. ಈ ಕಾರಣದಿಂದ 1966 ರಲ್ಲಿ ಕೇವಲ 11 ಮಿಲಿಯನ್ ಟನ್ ಗಳಷ್ಟಿದ್ದ ಗೋಧಿ ಉತ್ಪಾದನೆ 1968ರ ಹೊತ್ತಿಗೆ 17 ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟು ಬಂಪರ್ ಉತ್ಪಾದನೆಯಾಯಿತು. ಪ್ರಪಂಚದ ಗೋಧಿ ಉತ್ಪಾದನೆಯಲ್ಲಿ ಇದು ಒಂದು ದಾಖಲೆಯಾಯಿತು. ಇದನ್ನೇ 'ಹಸಿರು ಕ್ರಾಂತಿ' ಎಂದು ಕರೆಯಲಾಯಿತು. ಅಕ್ಕಿ ಉತ್ಪಾದನೆಯಲ್ಲೂ ಏರಿಕೆಯಾಗಿದ್ದಲ್ಲದೆ ಉಳಿದ ಕೃಷಿ ಉತ್ಪನ್ನಗಳಾದ ಕಬ್ಬು, ಹತ್ತಿ, ಹಣ್ಣುಗಳು ಮತ್ತು ತರಕಾರಿಗಳ ಉತ್ಪಾದನೆಯೂ ಏರತೊಡಗಿತು. ಇದು ಸ್ವಾವಲಂಬನೆಗೆ ಬುನಾದಿ ಹಾಕಿದ್ದಲ್ಲದೆ ಭಾರತ ಹೆಚ್ಚಿನ ಆಹಾರಧಾನ್ಯ ಹೊಂದಿರುವ ರಾಷ್ಟ್ರವಾಗಿ ಪರಿಣಮಿಸಿದಲ್ಲದೇ ಆಹಾರ ಧಾನ್ಯಗಳ ಪ್ರಮುಖ ರಫ್ತುದಾರರಾಗಿಯೂ ಬೆಳೆಯಲು ಕಾರಣವಾಯಿತು. ಇಂತಹ ಒಂದು ಅನನ್ಯ ಬದಲಾವಣೆಯು ವೈಜ್ಞಾನಿಕ ಮನೋಭಾವ, ರಾಜಕೀಯ ಇಚ್ಛಾಶಕ್ತಿ ಮತ್ತು ರೈತರ ಅಭೂತಪೂರ್ವ ಶ್ರಮ ಎಲ್ಲಾ ಒಗ್ಗೂಡಿಸಿದರಿಂದ ಸಾಧ್ಯವಾಯಿತು.

ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿದರ ಪರಿಣಾಮ ಭಾರತದ ಕೃಷಿಯಲ್ಲಿ ಒಂದು ಹೊಸ ಯುಗಕ್ಕೆ ನಾಂದಿಯಾಯಿತು. ಸರ್ಕಾರದಿಂದ ಕೃಷಿ ಕ್ಷೇತ್ರಕ್ಕೆ ಸೂಕ್ತ ನೀತಿ ನಿಯಮಗಳ ಬೆಂಬಲ, ಹಣದ ಹಂಚಿಕೆ ಮತ್ತು ನಿರ್ದಿಷ್ಟ ಯೋಜನೆಗಳಿಗೆ ಸಬ್ಸಿಡಿ ನೀಡಿಕೆ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಾಗಿ ಇಂದು ಭಾರತ ಕೃಷಿಯಲ್ಲಿ ಜಾಗತಿಕ ಮಟ್ಟದಲ್ಲಿ ಉನ್ನತ ಸ್ಥಾನದಲ್ಲಿದೆ. ಸಕ್ಕರೆ ಉತ್ಪಾದನೆಯಲ್ಲಿ ಪ್ರಪಂಚದಲ್ಲೇ ಮೊದಲನೇ ಸ್ಥಾನದಲ್ಲಿದ್ದು, ಅಕ್ಕಿ ಉತ್ಪಾದನೆಯಲ್ಲಿ ಚೀನಾದ ನಂತರ ಎರಡನೇ ಸ್ಥಾನದಲ್ಲಿದೆ.



Scanned with ACE Scanner


ಗೋಧಿ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದ್ದು 2020ರಲ್ಲಿ ಗೋಧಿಯ ಜಾಗತಿಕ ಉತ್ಪಾದನೆಯ ಶೇಕಡ 14.14 ಪಾಲು ಭಾರತದ್ದಾಗಿದೆ. ಕಾಳುಗಳ ಉತ್ಪಾದನೆ ಮತ್ತು ಬಳಕೆಯಲ್ಲೂ ಭಾರತ ಹೆಚ್ಚಿನ ಪಾಲು ಹೊಂದಿದ್ದು ಸ್ವಯಂ ಪೂರ್ಣತೆ ಕಡೆಗೆ ದಾಪುಗಾಲು ಇಡುತ್ತಿದೆ. 2022–23ರ ಎರಡನೇ ಮುಂಗಡ ಅಂದಾಜಿನ ಪ್ರಕಾರ ಆಹಾರ ಧಾನ್ಯಗಳ ಉತ್ಪಾದನೆ 323.5 ಮಿಲಿಯನ್ ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದ್ದು, ಇದು 2021–22 ಕ್ಕಿಂತ 7.9 ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟು ಅಧಿಕವಾಗಿದೆ. ಮೂರನೇ ಮುಂಗಡ ಅಂದಾಜಿನ ಪ್ರಕಾರ 2021–22ರಲ್ಲಿ ತೋಟಗಾರಿಕೆ ಉತ್ಪನ್ನವು 342.33 ಮಿಲಿಯನ್ ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದ್ದು, ಇದು 2020–21 ಕ್ಕಿಂತ 7.73 ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟು ಅಧಿಕವಾಗಿರುತ್ತದೆ. 2022–23ರಲ್ಲಿ ಕಬ್ಬಿನ ಉತ್ಪಾದನೆ ದಾಖಲೆ ಪ್ರಮಾಣದ 468.8 ಮಿಲಿಯನ್ ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದ್ದು, ಇದು ಕಬ್ಬಿನ ಸರಾಸರಿ ಉತ್ಪನ್ನಕ್ಕಿಂತ 155.3 ಮಿಲಿಯನ್ ಮೆಟ್ರಿಕ್ ಟನ್ ಗಳಷ್ಟು ಅಧಿಕವಾಗಿರುತ್ತದೆ. 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಣ್ಣೆ ಬೀಜಗಳು ಮತ್ತು ಪಾಮ್ ಎಣ್ಣೆಗಳ ವಿಶೇಷ ರಾಷ್ಟ್ರೀಯ ಮಿಷನ್ ಅನ್ನು ಪ್ರಾರಂಭಿಸಿದ್ದು ಇದು ಕೊರತೆ ಬೆಳೆಗಳು ಮತ್ತು ಎಣ್ಣೆ ಬೀಜ ಗಳಿಗೆ ವಿಶೇಷ ಗಮನ ಹರಿಸಿತು. ಇತ್ತೀಚಿನ ಆಧುನಿಕ ಬೆಳೆ ಉತ್ಪಾದನೆ ತಂತ್ರಜ್ಞಾನವನ್ನು ಹೊಸ ಹೊಸ ಪ್ರದೇಶಗಳಿಗೆ ವಿಸ್ತರಿಸಿಕೊಂಡಿರುವುದು ಎಣ್ಣೆ ಬೀಜಗಳ ಉತ್ಪಾದನೆಯಲ್ಲಿ ಮಹತ್ವದ ತಿರುವು ಪಡೆದುಕೊಂಡಿದೆ. ಇದರಿಂದಾಗಿ 1985–86ರಲ್ಲಿ ಕೇವಲ 108.30 ಲಕ್ಷ ಮೆಟ್ರಿಕ್ ಟನ್ ಗಳಷ್ಟಿದ್ದ ಎಣ್ಣೆಕಾಳುಗಳ ಉತ್ಪಾದನೆ 2022–23ರ ಹೊತ್ತಿಗೆ 400 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಏರಿಕೆ ಕಂಡಿದೆ. 2015–16 ರಿಂದ 2020–21 ರ ಅವಧಿಯಲ್ಲಿ ಒಟ್ಟಾರೆ ವಾರ್ಷಿಕ ಬೆಳವಣಿಗೆ ದರ ಶೇಕಡ 7.7 ರಷ್ಟಾಗಿದೆ. 2020–21ರ ಹಿಂಗಾರು ಹಂಗಾಮಿನಲ್ಲಿ ಹಾಕಿಕೊಂಡ ವಿಶೇಷ ಸಾಸಿವೆ ಕಾರ್ಯಕ್ರಮವು ಅದ್ಭುತ ಫಲಿತಾಂಶ ಕೊಟ್ಟಿದೆ. ಸಾಸಿವೆ ಉತ್ಪಾದನಾ ಪ್ರಮಾಣವು ಶೇಕಡ 40ರ ದರದಲ್ಲಿ ಏರಿಕೆಯಾಗಿದ್ದು 91.24 ರಿಂದ 128.18 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಏರಿಕೆ ಕಂಡಿದೆ. ಪ್ರತಿ ಹೆಕ್ಟೇರ್‌ಗೆ ಶೇಕಡ 11ರ ದರದಲ್ಲಿ ಬೆಳವಣಿಗೆಯಾಗಿದ್ದು ಇದು ಪ್ರತಿ ಹೆಕ್ಟೇರ್‌ಗೆ 1331 ರಿಂದ 1447 ಕೆ.ಜಿ. ಗಳಿಗೆ ಏರಿಕೆ ಕಂಡಿದೆ. ಖಾದ್ಯ ತೈಲ ಬೀಜಗಳು ಮತ್ತು ಸಾಸಿವೆಗಳ ಬಿತ್ತನೆ ಪ್ರಮಾಣ ಶೇಕಡ 29ರಷ್ಟು ಏರಿಕೆಯಾಗಿದ್ದು 2019–20ರಲ್ಲಿ 68.56 ಲಕ್ಷ ಹೆಕ್ಟೇರ್‌ಗಳಿಂದ 2020–23ರ ಅವಧಿಯಲ್ಲಿ 88.58 ಲಕ್ಷ ಹೆಕ್ಟೇರ್‌ಗಳಿಗೆ ಏರಿಕೆ ಕಂಡಿದೆ. ಎಣ್ಣೆ ಬೀಜಗಳ ಈ ಭಾರಿ ಉತ್ಪಾದನೆಯು ಭಾರತದ ಕೃಷಿ ದಾಖಲೆಯಲ್ಲಿ 'ಹಳದಿ ಕ್ರಾಂತಿ' ಎಂದು ಹೆಸರಾಗಿದೆ.




ಭಾರತದ ಆಹಾರ ಧಾನ್ಯಗಳ ಉತ್ಪಾದನೆಯು ಜನಸಂಖ್ಯೆ ಬೆಳವಣಿಗೆಯನ್ನು ಮೀರಿಸಿರುವುದು ಗಮನಾರ್ಹ ಸಂಗತಿಯಾಗಿದೆ. 1951 ರಿಂದ 2022ರ ಅವಧಿಯಲ್ಲಿ ಆಹಾರಧಾನ್ಯದ ಉತ್ಪಾದನೆಯು ಶೇಕಡ 2.61 ರ ಪ್ರಮಾಣದ ಸಂಯುಕ್ತ ಬೆಳವಣಿಗೆ ಕಂಡಿದ್ದು ಜನಸಂಖ್ಯೆ ಬೆಳವಣಿಗೆ ಪ್ರಮಾಣವು ಶೇಕಡ 1.95ರಲ್ಲೇ ನಿಂತಿದೆ. ಈ ಅವಧಿಯಲ್ಲಿ ಧಾನ್ಯಗಳ ಉತ್ಪಾದನೆ ಪ್ರಮಾಣ ಏಳು ಪಟ್ಟು ಹೆಚ್ಚಾಗಿದೆ, ದ್ವಿದಳ ಧಾನ್ಯಗಳ ಪ್ರಮಾಣ 3.25ಪಟ್ಟು ಹೆಚ್ಚಾಗಿದೆ. ಪ್ರತಿ ವ್ಯಕ್ತಿಗತ ಆಹಾರದ ಲಭ್ಯತೆ ಪ್ರಮಾಣ 1951ರಲ್ಲಿ 395 ಗ್ರಾಂಗಳಿದ್ದರೆ 2022 ರಲ್ಲಿ ಆ ಪ್ರಮಾಣ 514.5 ಗ್ರಾಂ ಗೆ ಏರಿದೆ. ತೋಟಗಾರಿಕೆ ಉತ್ಪನ್ನಗಳಾದ ತರಕಾರಿ(60%) ಮತ್ತು ಹಣ್ಣುಗಳ (31%) ಉತ್ಪಾದನೆಯು ಇತ್ತೀಚೆಗೆ ಆಹಾರ ಧಾನ್ಯಗಳಿಗಿಂತ ಏರಿಕೆಯಾಗಿದ್ದು ಆ ಮೂಲಕ ದೇಶದ ಪೌಷ್ಠಿಕ ಭದ್ರತೆಗೆ ಬಲವಾದ ಕೊಡುಗೆ ನೀಡುತ್ತಿದೆ. ಭಾರತವು ಅಧಿಕತಮ ಆಹಾರ ಉತ್ಪಾದನೆಯ ರಾಷ್ಟ್ರವಾಗಿದ್ದು ರೈತರ ಮತ್ತು ಕೃಷಿ ವಾಣಿಜ್ಯೋದ್ಯಮಿಗಳ ಹಿತಾಸಕ್ತಿಗಾಗಿ ರಫ್ತಿಗೆ ಹೆಚ್ಚು ಉತ್ತೇಜನ ನೀಡುತ್ತಿದೆ. ಈ ಕಾರಣ ಕೃಷಿ ಮತ್ತು ಅದರ ಉಪ ಉತ್ಪನ್ನಗಳ ರಫ್ತು ಪ್ರಮಾಣವು 2020–21 ರ 41.86 ಬಿಲಿಯನ್ ಡಾಲರ್‌ಗಳಿಂದ 2021–22ರಲ್ಲಿ 50.24 ಬಿಲಿಯನ್ ಡಾಲರ್‌ಗೆ ಏರಿಕೆಯಾಗಿದ್ದು ಅದು ಹತ್ತಿರ ಹತ್ತಿರ ಶೇಕಡ 20ರಷ್ಟು ಹೆಚ್ಚಳವಾಗಿದೆ. 2023ರನ್ನು ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಆಚರಿಸಲಾಗುತ್ತಿದ್ದು ಭಾರತವು ಸಿರಿಧಾನ್ಯಗಳ ಅಂತಾರಾಷ್ಟ್ರೀಯ ಕೇಂದ್ರವಾಗಲು ಸಜ್ಜಾಗಿದ್ದು ಅದನ್ನು ಇತ್ತೀಚೆಗಷ್ಟೇ "ಶ್ರೀ ಅನ್ನ" ಎಂದು ಹೆಸರಿಸಲಾಗಿದೆ. ಅದರ



Scanned with ACE Scanner




ವಿವಿಧ ಪ್ರಚಾರ ಕ್ರಮಗಳಿಂದಾಗಿ 2022–23ರಲ್ಲಿ ಸಿರಿಧಾನ್ಯಗಳ ಉತ್ಪಾದನೆಯು 159 ಲಕ್ಷ ಮೆಟ್ರಿಕ್ ಟನ್ ಗಳಾಗಿದ್ದು, ಸರ್ಕಾರವು ಆ ಪ್ರಮಾಣವನ್ನು 2023–24ರಲ್ಲಿ 170 ಲಕ್ಷ ಮೆಟ್ರಿಕ್ ಟನ್ ಗಳಿಗೇರಿಸುವ ಗುರಿಯನ್ನು ಹೊಂದಿದೆ. ಕೊವಿಡ್ 19ರ ಅವಧಿಯಲ್ಲಿ ಭಾರತದ ಕೃಷಿಯು ದಾಖಲೆ ಪ್ರಮಾಣದ ಆಹಾರ ಉತ್ಪಾದನೆ ಮಾಡಿದ್ದು ಅದು ಕೊವಿಡ್–19 ಪೀಡಿತ ಬಡ ರಾಷ್ಟ್ರಗಳಿಗೆ ಆಹಾರ ಪೂರೈಕೆ ಮಾಡಲು ನೆರವಾಯಿತು.

### ವರ್ಣಮಯ ಕ್ರಾಂತಿಗಳು

ಹಸಿರು ಕ್ರಾಂತಿ ಮತ್ತು ಶ್ವೇತ ಕ್ರಾಂತಿಗಳ ನಡುವೆ ಅನೇಕ ಸಾಮ್ಯತೆಗಳಿದ್ದು ಎರಡು ಕ್ರಮವಾಗಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸ್ವಾವಲಂಬನೆ ಸಾಧಿಸುವಲ್ಲಿ ಸಮಾನ ಪಾತ್ರ ವಹಿಸಿವೆ. ಆಹಾರ ಧಾನ್ಯಗಳ ರೀತಿಯಲ್ಲೇ ಸ್ವಾತಂತ್ರ್ಯ ಸಮಯದಲ್ಲಿ ಹಾಲಿನ ಉತ್ಪಾದನೆಯಲ್ಲೂ ನಮ್ಮ ದೇಶ ದೀನ ಸ್ಥಿತಿಯಲ್ಲಿದ್ದು ಅದು ಕೇವಲ 17 ಮಿಲಿಯನ್ ಮೆಟ್ರಿಕ್ ಟನ್ ಮಾತ್ರ ಆಗಿತ್ತು. ಜನಸಂಖ್ಯೆಯ ನಿರಂತರ ಏರಿಕೆ ಮತ್ತು ಹಾಲಿನ ಇಳಿಕೆ ಪೂರೈಕೆ ದೇಶವನ್ನು ಹಾಲಿನ ಸಂಕಷ್ಟಕ್ಕೆ ದೂಡಿತು. ಇದಕ್ಕಾಗಿ ಸರ್ಕಾರ ಮೆಟ್ರೊ ನಗರಗಳಲ್ಲಿ ಹಾಲಿನ ಡೈರಿಗಳನ್ನು ಸ್ಥಾಪಿಸಿತು. ಆದರೆ ಆ ಡೈರಿಗಳ ಬಹುಪಾಲು ಪೂರೈಕೆಯು ವಿದೇಶಗಳಿಂದ ಆಮದಾಗುತ್ತಿದ್ದ ಹಾಲಿನ ಪುಡಿಯನ್ನು ಅವಲಂಬಿಸಿತ್ತು. ಸರ್ದಾರ್ ವಲ್ಲಭಭಾಯಿ ಪಟೇಲರ ಸಲಹೆ ಮೇರೆಗೆ ಗುಜರಾತನ ಆನಂದ್ ನಲ್ಲಿ ಸಹಕಾರಿ ತತ್ವದ ಅಡಿಯಲ್ಲಿ ಯಶಸ್ವಿಯಾಗಿ ಹಾಲಿನ ಡೈರಿ ಕಾರ್ಯ ಆರಂಭಿಸಲಾಯಿತು. 1964 ರಲ್ಲಿ ಡಾ. ವರ್ಗೀಸ್ ಕುರಿಯನ್ ನೇತೃತ್ವದಲ್ಲಿ ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿ (ಎನ್‌ಡಿಡಿಬಿ) ಯನ್ನು ಸ್ಥಾಪಿಸಲಾಯಿತು. ಎನ್‌ಡಿಡಿಬಿ 1970ರಲ್ಲಿ ಹಾಲಿನ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ನೆರವಾಗುವಂತೆ "ಆಪರೇಷನ್ ಫ್ಲಡ್" ಎಂಬ ಪ್ರಮುಖ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಗ್ರಾಮ ಮಟ್ಟದಲ್ಲಿ ಹಾಲಿನ ಸಂಗ್ರಹಣೆ, ಸಂಸ್ಕರಣೆ, ಮಾರಾಟ ಇತ್ಯಾದಿಗಳಿಗೆ ಜಾಲಬಂಧಗಳನ್ನು ಸೃಷ್ಟಿಸಲು ಅನುಕೂಲವಾಗುವಂತೆ ಮೂಲಸೌಕರ್ಯ ಕಲ್ಪಿಸಲಾಯಿತು. ಆಧುನಿಕ ಹಾಲಿನ ಸಂಸ್ಕರಣಾ ಕೇಂದ್ರಗಳನ್ನು ಸ್ಥಾಪಿಸಿ ಆ ಮೂಲಕ ಹೆಚ್ಚಿನ ಸಂಗ್ರಹಣೆ ಸ್ಥಳಗಳಿಂದ ಕಡಿಮೆ ಸಂಗ್ರಹಣೆ ಸ್ಥಳಗಳಿಗೆ ಹಾಲೂ ಪೂರೈಕೆ ಆಗುವಂತೆ ನೋಡಿಕೊಳ್ಳಲು ಒಂದು "ರಾಷ್ಟ್ರೀಯ ಗ್ರಿಡ್" ಸೃಷ್ಟಿಸಿತು. ಈ ಆಂದೋಲನ ಹೆಚ್ಚಿನ ವೇಗವನ್ನು ಪಡೆದುಕೊಂಡು ಹಾಲಿನ ಉತ್ಪಾದನೆಯಲ್ಲಿ ತ್ವರಿತವಾಗಿ ತೃಪ್ತಿಕರ ಮಟ್ಟ ತಲುಪಲು ಸಾಧ್ಯವಾಯಿತು. 1976ರ ಹೊತ್ತಿಗೆ ವಾಣಿಜ್ಯಿಕ ಹಾಲಿನ ಆಮದು ನಿಂತು ಹೋಯಿತು. ಕ್ಷೀರಕ್ರಾಂತಿ ನಂತರ ಇಲ್ಲಿಯವರೆಗೆ ಭಾರತ ಹಾಲಿನ ಉತ್ಪಾದನೆಯಲ್ಲಿ ಹಿಂತಿರುಗಿ ನೋಡಲಿಲ್ಲ.

ಹಾಲಿನಲ್ಲಿ ಸ್ವಾವಲಂಬನೆ ಹೊರತಾಗಿ ಭಾರತವು ಹಾಲಿನ ಉತ್ಪಾದನೆಯಲ್ಲಿ ದಶಕಗಳವರೆಗೆ ಜಾಗತಿಕ ನಾಯಕನಾಗಿದ್ದು2021–22ರಲ್ಲಿ ಸುಮಾರು 222 ಮಿಲಿಯನ್ ಟನ್ ಹಾಲಿನ ಉತ್ಪಾದನೆ ಮಾಡಿದೆ. ಅದು ಪ್ರಪಂಚದ ಹಾಲಿನ ಉತ್ಪಾದನೆಯ (931 ಮಿಲಿಯನ್ ಟನ್) ಶೇಕಡ 24ರಷ್ಟಾಗಿದೆ. 1973 ರಲ್ಲಿ ಹಾಲಿನ ಉತ್ಪಾದನೆಯು ಕೇವಲ ಶೇಕಡ 6 ರಷ್ಟಿತ್ತು. ಪ್ರಸ್ತುತ ಭಾರತದ ಹಾಲಿನ ಉತ್ಪಾದನೆಯು ಶೇಕಡ 6ರ ದರದಲ್ಲಿ ಬೆಳವಣಿಗೆಯಾಗುತ್ತಿದ್ದು, ಜಾಗತಿಕ ಹಾಲಿನ ಬೆಳವಣಿಗೆ ಗಾತ್ರವು ಕೇವಲ ಶೇಕಡ 2ರಷ್ಟಿದೆ. ಜಾಗತಿಕ ಮಟ್ಟದಲ್ಲಿ ಪ್ರತಿತಲಾ ಹಾಲಿನ ಲಭ್ಯತಾ ಪ್ರಮಾಣವು 308 ಗ್ರಾಮ್‌ಗಳಾಗಿದ್ದು ಭಾರತದಲ್ಲಿ ಹಾಲಿನ ಲಭ್ಯತಾ ಪ್ರಮಾಣವು 444 ಗ್ರಾಂ ಗಳಾಗಿದೆ. ಶ್ವೇತ ಕ್ರಾಂತಿಯೆಂದು ಉಲ್ಲೇಖಿಸಲಾಗುವ ಈ ಅದ್ಭುತ ಯಶಸ್ಸು ಡೈರಿ ಕ್ಷೇತ್ರವನ್ನು ಮತ್ತು ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಆರ್ಥಿಕತೆಯನ್ನು ಸದೃಢಗೊಳಿಸಿದೆ. ಸುಮಾರು 80 ಮಿಲಿಯನ್ ಕುಟುಂಬಗಳು ನೇರವಾಗಿ ಡೈರಿ ಕ್ಷೇತ್ರದಿಂದ ಉದ್ಯೋಗವನ್ನು ಪಡೆದಿವೆ ಮತ್ತು ಅವರೆಲ್ಲರೂ ಸಣ್ಣ ರೈತರು ಮತ್ತು ಭೂ ರಹಿತರಾಗಿರುವುದು ವಿಶೇಷವಾಗಿದೆ. 2047ರ ಹೊತ್ತಿಗೆ ಭಾರತದ ಹಾಲಿನ ಉತ್ಪಾದನೆಯು 628 ಮಿಲಿಯನ್ ಟನ್‌ಗಳಾಗುವ ನಿರೀಕ್ಷೆ ಇದ್ದು, ಹಾಲು ಮತ್ತು ಹಾಲಿನ ಉತ್ಪನ್ನಗಳ ಬೇಡಿಕೆಯು 517 ಮಿಲಿಯನ್ ಟನ್‌ಗಳಾಗುವ ನಿರೀಕ್ಷೆ ಇದೆ. ಇನ್ನೂ ರಫ್ತಿಗಾಗಿ 111 ಮಿಲಿಯನ್ ಟನ್‌ಗಳು ಅಧಿಕವಾಗಿ ಉಳಿಯುತ್ತದೆ.

ವರ್ಣ ಪಟಲದ ಇನ್ನೊಂದು ಕಡೆ ಚಲಿಸಿದರೆ ಸಿಗುವ "ನೀಲಿ ಕ್ರಾಂತಿಯು" ಸ್ವಾತಂತ್ರ್ಯದ ನಂತರ ಭಾರತದ ಗರಿಷ್ಠ ಪ್ರಮಾಣದ ಮೀನಿನ ಉತ್ಪಾದನೆಯನ್ನು

(70ನೇ ಪುಟಕ್ಕೆ)




Scanned with ACE Scanner

# ಜೇನುತುಪ್ಪ ಉತ್ಪಾದನೆಯಲ್ಲಿ ಹೆಚ್ಚಳ

* ಡಾ. ಶೈಲೇಶ್ ಕುಮಾರ್ ಮಿಶ್ರಾ
** ಡಾ. ಧೀರಜ್ ಕುಮಾರ್ ತಿವಾರಿ

**ಸಿಹಿ ಕ್ರಾಂತಿ ಎನ್ನುವುದು, ಉತ್ತಮ ಗುಣಮಟ್ಟದ ಜೇನು ಮತ್ತು ಅದರ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸುವ, 'ಜೇನು ಸಾಕಾಣಿಕೆ' ಎಂದೇ ಜನಪ್ರಿಯವಾಗಿರುವ ಭಾರತ ಸರ್ಕಾರದ ಒಂದು ಪ್ರಮುಖ ಯೋಜನೆಯಾಗಿದೆ. ಜೇನು ಸಾಕಾಣಿಕೆ ಕಡಿಮೆ ಹೂಡಿಕೆಯ ಮತ್ತು ಗರಿಷ್ಠ ಕೌಶಲ್ಯದ ಉದ್ಯಮ ಮಾದರಿಯಾಗಿದ್ದು, ಇದರಲ್ಲಿ ತಂತ್ರಜ್ಞಾನದ ಅಳವಡಿಕೆಯು ಸಾಮಾಜಿಕ-ಆರ್ಥಿಕ ಬೆಳವಣಿಗೆಯ ಒಂದು ಮುಖ್ಯ ಸಾಧನವಾಗಿ ಹೊರಹೊಮ್ಮಿದೆ. ಈ ಸಿಹಿ ಕ್ರಾಂತಿಗೆ ವೇಗ ನೀಡಲು ಮತ್ತು ವೈಜ್ಞಾನಿಕ ಜೇನುಸಾಕಾಣಿಕೆಯ ಸಮಗ್ರ ಅಭಿವೃದ್ಧಿ ಮತ್ತು ಉತ್ತೇಜನವನ್ನು ಮಿಷನ್ ಮಾದರಿಯಲ್ಲಿ ಕೈಗೊಳ್ಳಲು ಸರ್ಕಾರವು ರಾಷ್ಟ್ರೀಯ ಜೇನು ಸಾಕಾಣಿಕೆ ಮತ್ತು ಜೇನು ಮಿಷನ್ ಅನ್ನು ಆರಂಭಿಸಿದೆ.**




ಭಾರತದಲ್ಲಿ ಕೃಷಿ ಆಧರಿತ ಪೂರಕ ಉದ್ಯೋಗವಾಗಿ ಬೆಳೆದಿರುವ ಜೇನುಸಾಕಾಣಿಕೆ ವಾಸ್ತವಾಂಶ-ಆಧರಿತ ಅಸಾಧಾರಣ ಬೆಳವಣಿಗೆಯನ್ನು ಕಂಡಿದೆ. ಭಾರತದಲ್ಲಿ ಜೇನುಸಾಕಾಣಿಕೆಯನ್ನು ಪರ್ವತ ಪ್ರದೇಶಗಳಲ್ಲಿ, ಬೆಟ್ಟ-ಗುಡ್ಡಗಳ ತಪ್ಪಲಿನಲ್ಲಿ, ಅರಣ್ಯಗಳಲ್ಲಿ, ಕೃಷಿ ಭೂಮಿಗಳಲ್ಲಿ, ಕಾಡು ಮುಂತಾದೆಡೆಗಳಲ್ಲಿ ಕೈಗೊಳ್ಳಲಾಗುತ್ತಿದೆ. ಜೇನುಸಾಕಾಣಿಕೆಯಲ್ಲಿ ಅಳವಡಿಸಿಕೊಳ್ಳಲಾಗಿರುವ ತಾಂತ್ರಿಕತೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿವೆ. ಎಪಿಸ್ ದೊರಸ್ಟಾ, ಎಪಿಸ್ ಸರನ, ಮತ್ತು ಎಪಿಸ್ ಮೆಲ್ಲಿಫೆರಾ ಪ್ರಭೇದಗಳ ಜೇನಿನಿಂದ ಮುಖ್ಯ ಫಸಲು ಬರುತ್ತಿದೆ. ಎಪಿಸ್ ಮೇಲ್ಲಿಫೆರಾ ಪ್ರಭೇದವನ್ನು ಉತ್ತರ ಮತ್ತು ಪೂರ್ವ ಬಯಲು ಪ್ರದೇಶಗಳಲ್ಲಿ ಯಶಸ್ವಿಯಾಗಿ ಪರಿಚಯಿಸಲಾಗಿದೆ. ದೇಶದ ನಿರ್ದಿಷ್ಟ ಪ್ರದೇಶಗಳಲ್ಲಿ ನಿರ್ವಹಣಾ ತಂತ್ರಜ್ಞಾನದ ಮಾದರಿಗಳು ವಿಕಾಸಗೊಂಡಿವೆ. ಹವಾಮಾನ ಮತ್ತು ಸಸ್ಯರಾಶಿಯ ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ತಕ್ಕಂತೆ ಜೇನುಸಾಕಾಣಿಕೆಗೆ ಒತ್ತು ನೀಡಲಾಗುತ್ತಿದೆ. ಇದೆಲ್ಲದರ ಜೊತೆಗೆ ಪ್ರತಿಯೊಂದು ಕೃಷಿ-ಹವಾಮಾನ ಪ್ರದೇಶದ ಋತುಮಾನಕ್ಕೆ ತಕ್ಕ ನಿರ್ವಹಣೆ, ಜೇನಿನ ಉತ್ಪಾದಕತೆ, ಅದರ ವಸಾಹತು ಉತ್ಪಾದಕತೆ, ಜೇನುಮೇಣ, ಪರಾಗರೇಣು, ಜೇನುತುಪ್ಪ ಮುಂತಾದವುಗಳ ವೃದ್ಧಿಗೆ ಸೂಕ್ತ ನಿರ್ವಹಣಾ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ. ಈ ಎಲ್ಲ ಪ್ರಯತ್ನಗಳ ಫಲವಾಗಿ ಇವತ್ತು ಜೇನುಸಾಕಾಣಿಕೆಯು ಪೌಷ್ಟಿಕ, ಆರ್ಥಿಕ, ಮತ್ತು ಪಾರಿಸರಿಕ ಭದ್ರತೆ ಮತ್ತು ಸಮತೋಲನವನ್ನು ಒದಗಿಸುವುದರಿಂದ ಇದು ಭಾರತದ ಗ್ರಾಮೀಣ ಅಭಿವೃದ್ಧಿಯ ಕಾರ್ಯಕ್ರಮದಲ್ಲಿ ಒಂದು ಮುಖ್ಯವಾದ, ಸುಸ್ಥಿರವಾದ ಹಾಗೂ ಕೃಷಿಯ ಅವಿಭಾಜ್ಯ ಆರ್ಥಿಕ ಚಟುವಟಿಕೆಯಾಗಿದೆ. ಕೃಷಿ-ಹವಾಮಾನದ ಪರಿಸ್ಥಿತಿಗಳು, ವೈವಿಧ್ಯಮಯ ಸಸ್ಯಸಂಪತ್ತು, ಕೃಷಿ/ತೋಟಗಾರಿಕೆ ಬೆಳೆಯ ಬದಲಾಗುತ್ತಿರುವ ಮಾದರಿಗಳು, ಜೇನ್ನೊಣದ ಪ್ರಕಾರಗಳು, ನಿರ್ವಹಣಾ ಅಭ್ಯಾಸ, ಇತ್ಯಾದಿಗಳು ದೇಶದಲ್ಲಿ ಜೇನುಸಾಕಾಣಿಕೆ ಉದ್ಯಮದ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಜೇನುತುಪ್ಪ ಮತ್ತು ಇತರ ಉತ್ಪನ್ನಗಳ ಉತ್ಪಾದನೆಗಾಗಿ ಜೇನ್ನೊಣಗಳನ್ನು ಸಾಕುವುದು ಮತ್ತು ನಿರ್ವಹಿಸುವ ಅಭ್ಯಾಸವೇ ಜೇನುಕೃಷಿ ಆಗಿದೆ. ಜೇನುತುಪ್ಪ ಎನ್ನುವುದು ಹಲವಾರು ಆರೋಗ್ಯದ ಲಾಭಗಳನ್ನು ಹೊಂದಿರುವ ಒಂದು ನೈಸರ್ಗಿಕ ಸಿಹಿಕಾರಕವಾಗಿದೆ. ಈ ಉತ್ಪನ್ನವನ್ನು ಜೇನುಮೇಣ, ಪಾಕ, ಜೇನಿನ ಅಂಟು, ಮತ್ತು ಪರಾಗರೇಣುನಂಥ ಇತರ ಉತ್ಪನ್ನಗಳ ತಯಾರಿಕೆಗೂ ಬಳಸಲಾಗುತ್ತಿದೆ. ಜೇನು ವಸಾಹತುಗಳು, ಜೇನುಸಾಕಾಣಿಕೆದಾರರು, ಸಾಕಾಣಿಕೆಯ ಉಪಕರಣಗಳು, ಮತ್ತು ಜೇನು ವಸಾಹತುಗಳಿಂದ ಉತ್ಪಾದಿಸಲಾದ ಉತ್ಪನ್ನಗಳು ಜೇನುಕೃಷಿಯ ಘಟಕಗಳಲ್ಲಿ ಸೇರಿವೆ. ಜೇನುನೊಣಗಳು, ಬೆಳೆಗಳು ಮತ್ತು ಹಣ್ಣುಗಳನ್ನು ಬೆಳೆಯಲು ಅತ್ಯಾವಶ್ಯವಾಗಿ ಬೇಕಾಗುವ ಪರಾಗಸ್ಪರ್ಶದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಕೃಷಿಯ ಇತರ ವಿಧಾನಗಳಿಗೆ ಹೋಲಿಸಿದರೆ ಜೇನುಕೃಷಿಗೆ ತುಂಬಾ ಕಡಿಮೆ ಭೂಮಿ ಮತ್ತು ನೀರು ಸಾಕು ಮತ್ತು ಇದರ ಇಂಗಾಲದ ಹೆಜ್ಜೆಗುರುತು ಕೂಡ ತುಂಬಾ ಕಡಿಮೆ ಇರುತ್ತದೆ. ಜೇನುನೊಣಗಳನ್ನು ಕೃತಕ ಗೂಡುಗಳಲ್ಲಿ ಸಾಕಾಣಿಕೆದಾರನಿಗೆ ಪರೀಕ್ಷೆಗಾಗಿ ಮತ್ತು ಹೆಚ್ಚುವರಿ ಜೇನನ್ನು ತೆಗೆಯುವಂತೆ

* ನಿರ್ದೇಶಕರು, (ವಿಸ್ತರಣೆ) ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ. ** ವಿಜ್ಞಾನಿ, ಕೃಷಿ ವಿಜ್ಞಾನ ಕೇಂದ್ರ, ಉನ್ನಾವೊ.
* ಇಮೇಲ್ : shaileshk.mishra29@gov.in ** dk9hau@gmail.com



Scanned with ACE Scanner




ಮಾಡಲು ಸುಲಭವಾಗಿ ಸಿಗುವಂತೆ ಇರಿಸಲಾಗುತ್ತದೆ ಮತ್ತು ಅವುಗಳಿಗಾಗಿ ಅಲ್ಲಿ ಸಾಕಷ್ಟು ಬಾಚಣಿಕೆ ಗೂಡುಗಳಿರುತ್ತವೆ. ಜೇನು, ಹೂವುಗಳಿಂದ ದೊರೆಯುವ ಮತ್ತು ಸಕ್ಕರೆಯನ್ನು ಹೊಂದಿರುವ ಮಕರಂದವನ್ನು ಒಗ್ಗೂಡಿಸುವ, ನೊಣಗಳ ಒಂದು ಉತ್ಪನ್ನವಾಗಿದೆ. ಗೂಡಿನಿಂದ ತೆಗೆಯುತ್ತಲೇ ಸಾಧ್ಯವಾದಷ್ಟು ಬೇಗ ಜೇನನ್ನು ಸಂಸ್ಕರಿಸಬೇಕು. ಜೇನಿನ ಸಂಸ್ಕರಣವು ಒಂದು ಒಂದು ಜಿಗುಟಾದ ಪ್ರಕ್ರಿಯೆಯಾಗಿದ್ದು, ಉತ್ತಮ ಫಲಿತಾಂಶ ಬೇಕಾದರೆ ತುಂಬಾ ತಾಳ್ಮೆ ಮತ್ತು ಸಮಯ ಬೇಕಾಗುತ್ತದೆ. ಸಂಸ್ಕರಣೆಯ ಎಲ್ಲ ಹಂತಗಳಲ್ಲಿ ಇರುವೆಗಳು ಮತ್ತು ಹಾರುವ ಕೀಟಗಳಿಂದ ಕಾಳಜಿಪೂರ್ವಕ ರಕ್ಷಣೆ ಬೇಕಾಗುತ್ತದೆ. ಅನೇಕ ಸಣ್ಣ ಉದ್ಯಮಗಳು ಜೇನ್ನೊಣ ಮತ್ತು ಅವುಗಳ ಉತ್ಪನ್ನಗಳನ್ನು ಅವಲಂಬಿಸಿವೆ.

### ಇತಿಹಾಸ

ನಮ್ಮ ಹಿಂದಿನ ಕಾಲದ ಜನ ಮರದ ಪೊಟರೆ, ಬಂಡೆಗಲ್ಲು, ಸಾಂಪ್ರಾದಾಯಿಕ ಮಣ್ಣಿನ ಮನೆಗಳು ಹೀಗೆ ಎಲ್ಲೆಂದರಲ್ಲಿ ಕಂಡುಬರುವ ಗೂಡುಗಳಿಂದ ಜೇನನ್ನು ಕಿತ್ತುಕೊಳ್ಳುತ್ತಿದ್ದರು. ಇಂದಿಗೂ ಈ ಕ್ರಮ ಕೆಲವು ಬುಡಕಟ್ಟು ಪಂಗಡಗಳಲ್ಲಿ ಜಾರಿಯಲ್ಲಿ ಇದೆ. ಹದಿನಾರನೆಯ ಶತಮಾನದವರೆಗೆ ಜೇನುಸಾಕಾಣಿಕೆಯಲ್ಲಿ ಯಾವುದೇ ಪ್ರಗತಿ ಆಗಿರಲಿಲ್ಲ. ಯಾವಾಗ ಪ್ರಕೃತಿಯಲ್ಲಿ ಕಂಡುಬರುವ ಜೇನುಗೂಡುಗಳಿಗೆ ಮಾನವ ರಕ್ಷಣೆ ನೀಡಲು ಮುಂದಾದನೋ ಅಂದಿನಿಂದ ವ್ಯವಸ್ಥಿತವಾದ ಜೇನುಸಾಕಾಣಿಕೆ ಆರಂಭವಾಯಿತು. ಮರದ ಪೊಟರೆಗಳ ಗೂಡಿನಲ್ಲಿ ಜೇನು ಸಾಕುವ ಪರಿಕಲ್ಪನೆ, ನೆಲಕ್ಕುರುಳಿದ ಮರಗಳಲ್ಲಿ ಕುಳಿ-ಗೂಡು ಕಟ್ಟುವ ಜೇನು ನೊಣಗಳಿಂದ ಬಂದಿದೆ ಎಂದು ನಂಬಲಾಗಿದೆ. ಆಧುನಿಕ ಜೇನುಸಾಕಾಣಿಕೆಯ ಮೂಲ ಇಸವಿ 1500 ರಿಂದ 1851ರ ಮಧ್ಯೆ ಕಂಡುಬರುತ್ತದೆ. ಈ ಅವಧಿಯಲ್ಲಿ ಜೇನುನೊಣ ಸಾಕಾಣಿಕೆಗೆ ಹಲವು ವಿಧಾನಗಳಲ್ಲಿ ಗೂಡುಗಳನ್ನು ಕಟ್ಟುವ ಪ್ರಯತ್ನಗಳು ನಡೆದವು. ಆದರೆ ಜೇನುತುಪ್ಪ ತೆಗೆಯುವಾಗ ತಮ್ಮ ಬಾಚಣಿಕೆ ಹಾಗೂ ಗೂಡಿನ ಗೋಡೆಗಳಿಗೆ ಅಂಟಿಕೊಂಡಿರುತ್ತಿದ್ದ ನೊಣಗಳನ್ನು ಕತ್ತರಿಸಿಯೇ ತೆಗೆಯಬೇಕಾಗುತ್ತಿತ್ತು. ಜೇನುನೊಣದ ಸ್ಥಳಾವಕಾಶದ ತತ್ವದ ಬಗ್ಗೆ ಎಲ್.ಎಲ್. ಲ್ಯಾಂಗ್ಸ್ಟ್ರಾತ್ ಎಂಬಾತ 1851ರಲ್ಲಿ ನಡೆಸಿದ ಸಂಶೋಧನೆಯಿಂದ ಮೊದಲ ಚಲಿಸುವ ಚೌಕಟ್ಟಿನ ಗೂಡು ಅಭಿವೃದ್ಧಿ ಆಯಿತು. ಇದೇ ಸಂಶೋಧನೆಯ ಆಧಾರದ ಮೇಲೆ ಬಾಚಣಿಕೆ ಆಧರಿತ ಗಾಣ, ಜೇನುತುಪ್ಪ ತೆಗೆಯುವ ಇಕ್ಕಳ, ಹೊಗೆ ಎಬ್ಬಿಸುವ ಉಪಕರಣ, ಮುಂತಾದವುಗಳ ಪ್ರಯೋಗಗಳು ನಡೆದು, ಇಂದಿನ ಆಧುನಿಕ ಜೇನುಸಾಕಾಣಿಗೆ ನೆರವಾದವು.

### ಭಾರತದಲ್ಲಿ ಜೇನುಸಾಕಾಣಿಕೆ

ಭಾರತದಲ್ಲಿ ಕೊಂಡೊಯ್ಯಬಹುದಾದ, ಚೌಕಟ್ಟಿನ ಗೂಡುಗಳಲ್ಲಿ ಜೇನು ಸಾಕುವ ಮೊದಲ ಪ್ರಯತ್ನ 1882ರಲ್ಲಿ ಬಂಗಾಳದಲ್ಲಿ ನಡೆಯಿತು. ನಂತರದಲ್ಲಿ 1883-84ರಲ್ಲಿ ಪಂಜಾಬದಲ್ಲಿ ನಡೆಯಿತು. ದಕ್ಷಿಣ ಭಾರತದಲ್ಲಿ 1911-17ರಲ್ಲಿ ಅನೇಕ ಜೇನುಸಾಕಾಣಿಕೆದಾರರಿಗೆ ತರಬೇತಿ ನೀಡಲಾಗಿತ್ತು. ಜೇನುನೊಣದ ಸ್ಥಳಾವಕಾಶದ ತತ್ವದ ತಳಹದಿಯ ಮೇಲೆ ದೇಸಿ ಎಪಿಸೇರನ ಜೇನುನೊಣಕ್ಕೆ ಗೂಡನ್ನು ರೂಪಿಸಲಾಗಿತ್ತು. ತಿರುವಾನಂಕೂರು ರಾಜ್ಯದಲ್ಲಿಯೂ 1917ರಲ್ಲಿ ಮತ್ತು ಮೈಸೂರಿನಲ್ಲಿ 1925ರಲ್ಲಿ ಜೇನುಸಾಕಾಣಿಕೆ ಆರಂಭವಾಗಿತ್ತು. ಹಿಮಾಚಲ ಪ್ರದೇಶದಲ್ಲಿ ದೇಸಿ ಜೇನುನೊಣ ಎ. ಸೆರೆನಾದ ಸಾಕಾಣಿಕೆ 1934ರಲ್ಲಿ ಕುಲ್ಲುನಲ್ಲಿ ಮತ್ತು 1936ರಲ್ಲಿ ಕಾಂಗ್ರಾದಲ್ಲಿ ಆರಂಭವಾಯಿತು. ವಿದೇಶಿ ಜೇನ್ನೊಣ ಎ. ಮೆಲ್ಲಿಫರ ಹೆಚ್ಚಿನ ಪ್ರಮಾಣದ ಜೇನನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಇದನ್ನು 1962ರಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಅಂದಿನ ಪಂಜಾಬ್ ನಲ್ಲಿದ್ದ ಇಂದು ಹಿಮಾಚಲ ಪ್ರದೇಶದಲ್ಲಿರುವ ನಾಗರೋತ ಬಗ್ವಾನ್ ನಲ್ಲಿ ಯಶಸ್ವಿಯಾಗಿ ಪರಿಚಯಿಸಲಾಯಿತು. ಸದ್ಯ ಆಧುನಿಕ ಜೇನುಸಾಕಾಣಿಕೆಯಲ್ಲಿ ಎರಡೂ ಗೂಡು ನೊಣ ಪ್ರಭೇದಗಳನ್ನು ಬಳಸಲಾಗುತ್ತಿದೆ ಮತ್ತು ಎ. ದೊರ್ಸಾಟಾ ಹಾಗೂ ಎ. ಫ್ಲೋರೆಯದಂಥ ಕಾಡು ಜೇನ್ನೊಣಗಳಿಂದ ಸಾಕಷ್ಟು ಜೇನನ್ನು ಸಂಗ್ರಹಿಸಲಾಗುತ್ತಿದೆ. ಭಾರತ ನಾಲ್ಕೂ ಪ್ರಭೇದಗಳ ಜೇನುನೊಣಗಳಿಂದ ಪ್ರತಿವರ್ಷ ಸುಮಾರು 70,000 ಮೆಟ್ರಿಕ್ ಟನ್ ಜೇನನ್ನು ಉತ್ಪಾದಿಸುತ್ತಿದೆ.

ಪೋಷಕಾಂಶಗಳು ಮತ್ತು ಆಮ್ಲ ನಿರೋಧಕಗಳಿಂದ ಸಂಪದ್ಭರಿತವಾಗಿರುವ ಜೇನಿನಲ್ಲಿ ಬ್ಯಾಕ್ಟೀರಿಯಾ ನಿರೋಧಕ ಗುಣಗಳೂ ಅಡಗಿವೆ. ಸಮತೋಲಿತ ಆಹಾರ ಪದ್ಧತಿಯ ಭಾಗವಾಗಿ ಈ ಜೇನು ಮಧುಮೇಹ ನಿರ್ವಹಣೆಯಲ್ಲೂ ಪ್ರಮುಖ ಪಾತ್ರ ವಹಿಸಬಲ್ಲದು. ಈ ಉತ್ಪನ್ನದಲ್ಲಿ ಅನೇಕ ಆರೋಗ್ಯ ಲಾಭಗಳಿದ್ದು, ಮನೆ ಔಷಧವಾಗಿ ಹಲವು ಪರಿಹಾರಗಳನ್ನು ಒದಗಿಸುವಲ್ಲಿ ಸಹಾಯ ಮಾಡುತ್ತದೆ ಹಾಗೂ ಪರ್ಯಾಯ ಚಿಕಿತ್ಸೆಗಳಲ್ಲಿ ಬಳಕೆಯಾಗುತ್ತಿದೆ. ಕಚ್ಚಾ ಜೇನು ರುಚಿಕರವಾಗಿರುವುದರ ಜೊತೆಗೆ



Scanned with ACE Scanner



ಪ್ರತಿಯೊಬ್ಬರ ಆರೋಗ್ಯಕ್ಕೂ ಒಳ್ಳೆಯದಾಗಿದೆ. ಜೇನುಸಾಕಾಣಿಕೆಯು ಪೌಷ್ಟಿಕ, ಆರ್ಥಿಕ, ಹಾಗೂ ಪಾರಿಸರಿಕ ಸಮತೋಲನದ ಜೊತೆಗೆ ಉದ್ಯೋಗ ಮತ್ತು ಆದಾಯವನ್ನೂ ನೀಡುತ್ತಿರುವುದರಿಂದ ಇದು ಅರಣ್ಯ, ಸಾಮಾಜಿಕ ಅರಣ್ಯ ಹಾಗೂ ಕೃಷಿ ಬೆಂಬಲಿತ ಚಟುವಟಿಕೆಗಳನ್ನು ಒಳಗೊಂಡಿರುವ ಒಂದು ಮಹತ್ವದ ಸುಸ್ಥಿರ ಹಾಗೂ ಪರಿಸರ ಸ್ನೇಹಿ ಚಟುವಟಿಕೆಯಾಗಿದೆ. ಭಾರತ, ಒಂದು ಪ್ರಮುಖ ಜೇನು ರಫ್ತು ದೇಶವಾಗಲು ಹಾಗೂ ಜೇನುಸಾಕಾಣಿಕೆಗೆ ಬೇಕಾದ ಎಲ್ಲ ಸಂಪನ್ಮೂಲಗಳನ್ನು ಹೊಂದಿದೆ. ಜೇನು ಉತ್ಪಾದನೆ ಕಡಿಮೆ ಹೂಡಿಕೆ ಬಯಸುವ ನೈಸರ್ಗಿಕ ಸಂಪನ್ಮೂಲ ಆಧರಿತ ಒಂದು ಸುಸ್ಥಿರ ಆದಾಯದ ಮೂಲವಾಗಿದೆ. ಜೇನು ಹೇರಳವಾದ ಆರೋಗ್ಯದ ಲಾಭಗಳೊಂದಿಗೆ ಅತ್ಯಂತ ಜನಪ್ರಿಯ ಮತ್ತು ಎಲ್ಲೆಡೆ ಬಳಸುವ ಸಿಹಿಕಾರಕಗಳಲ್ಲಿ ಒಂದಾಗಿದೆ. ಜಗತ್ತಿನ ಅನೇಕ ಸಂಸ್ಕೃತಿಗಳು ಈ ಜೇನನ್ನು ತಮ್ಮ ಸಾಂಪ್ರದಾಯಿಕ ಔಷಧಗಳಿಗೆ, ವಿಶೇಷವಾಗಿ ಆಯುರ್ವೇದದಲ್ಲಿ ಒಂದು ಮೂಲ ವಸ್ತುವನ್ನಾಗಿ ಬಳಸಲಾಗುತ್ತಿದೆ. ಜೇನುಸಾಕಾಣಿಕೆಯ ಅಭಿವೃದ್ಧಿಗೆ ಅವಕಾಶ ನೀಡಿರುವ ಪ್ರಮುಖ ಭೌಗೋಳಿಕ ಪ್ರದೇಶಗಳನ್ನು ದಕ್ಷಿಣ ಪರ್ಯಾಯ ಪ್ರದೇಶ, ಈಶಾನ್ಯ ಪ್ರದೇಶ, ಗಂಗಾನದಿ ಬಯಲು ಪ್ರದೇಶ, ಹಾಗೂ ಉತ್ತರದ ಪರ್ವತೀಯ ಪ್ರದೇಶ ಎಂದು ವರ್ಗೀಕರಿಸಬಹುದು.

### ಸಿಹಿ ಕ್ರಾಂತಿ

ಸಿಹಿ ಕ್ರಾಂತಿ ಎನ್ನುವುದು, ಉತ್ತಮ ಗುಣಮಟ್ಟದ ಜೇನು ಮತ್ತು ಅದರ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸುವ, 'ಜೇನು ಸಾಕಾಣಿಕೆ' ಎಂದೇ ಜನಪ್ರಿಯವಾಗಿರುವ ಜೇನುಕೃಷಿಯನ್ನು ಉತ್ತೇಜಿಸುವ ಗುರಿ ಹೊಂದಿರುವ ಭಾರತ ಸರ್ಕಾರದ ಒಂದು ಪ್ರಮುಖ ಯೋಜನೆಯಾಗಿದೆ. ಜೇನು ಸಾಕಾಣಿಕೆ ಕಡಿಮೆ ಹೂಡಿಕೆಯ ಮತ್ತು ಗರಿಷ್ಠ ಕೌಶಲ್ಯದ ಉದ್ಯಮ ಮಾದರಿಯಾಗಿದ್ದು, ಇದರಲ್ಲಿ ತಂತ್ರಜ್ಞಾನದ ಅಳವಡಿಕೆಯು ಸಾಮಾಜಿಕ-ಆರ್ಥಿಕ ಬೆಳವಣಿಗೆಯ ಒಂದು ಮುಖ್ಯ ಉದ್ಯಮದ ಮಾದರಿಯಾಗಿ ಹೊರಹೊಮ್ಮಿದೆ. ಉತ್ತಮ ಗುಣಮಟ್ಟದ ಜೇನನ್ನು ನೈಸರ್ಗಿಕವಾದ ಪೌಷ್ಟಿಕ ಉತ್ಪನ್ನ ಎಂದು ಪರಿಗಣಿಸಲಾಗಿರುವುದರಿಂದ ಇತ್ತೀಚಿನ ವರ್ಷಗಳಲ್ಲಿ ಇದಕ್ಕೆ ಬೇಡಿಕೆ ವ್ಯಾಪಕವಾಗಿ ಹೆಚ್ಚಿದೆ. ಜೇನುಕೃಷಿಯ ಜೇನುಮೇಣ, ಪಾಕ, ಪರಾಗರೇಣುನಂಥ ಉತ್ಪನ್ನಗಳನ್ನು ಔಷಧ, ಆಹಾರ, ಪಾನೀಯ, ಸೌಂದರ್ಯ ಮತ್ತಿತರ ಕ್ಷೇತ್ರಗಳಲ್ಲೂ ಬಳಸಲಾಗುತ್ತಿದೆ. ಜೇನುಸಾಕಾಣಿಕೆಯನ್ನು ಬೆಳೆಸುವುದರಿಂದ ರೈತರ ಆದಾಯವನ್ನು ಹೆಚ್ಚಿಸಬಹುದು, ಉದ್ಯೋಗಗಳನ್ನು ಸೃಷ್ಟಿಸಬಹುದು, ಆಹಾರ ಭದ್ರತೆಯನ್ನು ಖಚಿತಪಡಿಸಿಕೊಂಡು ಜೇನುನೊಣ ಸಂರಕ್ಷಣೆ ಮಾಡಬಹುದು. ಜೊತೆಗೆ ಬೆಲೆ ಉತ್ಪಾದನೆ ಮತ್ತು ಪರಾಗಸ್ಪರ್ಶವನ್ನು ಹೆಚ್ಚಿಸಬಹುದು. ಈ ಸಿಹಿ ಕ್ರಾಂತಿಗೆ ವೇಗ ನೀಡಲು ಮತ್ತು ವೈಜ್ಞಾನಿಕ ಜೇನುಸಾಕಾಣಿಕೆಯ ಸಮಗ್ರ ಅಭಿವೃದ್ಧಿ ಮತ್ತು ಉತ್ತೇಜನವನ್ನು ಮಿಷನ್ ಮಾದರಿಯಲ್ಲಿ ಕೈಗೊಳ್ಳಲು ಸರ್ಕಾರವು ರಾಷ್ಟ್ರೀಯ ಜೇನುಸಾಕಾಣಿಕೆ ಮತ್ತು ಜೇನು ಮಿಷನ್ ಅನ್ನು ಆರಂಭಿಸಿದೆ.

### ಸರ್ಕಾರದ ಕ್ರಮಗಳು

ಶ್ವೇತ ಮತ್ತು ಹಸಿರು ಕ್ರಾಂತಿಯ ಮಾದರಿಯಲ್ಲಿ ದೇಶದಲ್ಲಿ ಜೇನುಕೃಷಿಯನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲು 'ಸಿಹಿ ಕ್ರಾಂತಿ'ಯನ್ನು ಆರಂಭಿಸುವಂತೆ ಪ್ರಧಾನ ಮಂತ್ರಿಯವರು ಗುಜರಾತಿನ ಅಮೆರಿಲಿಯಲ್ಲಿ ಸೆಪ್ಟೆಂಬರ್ 17, 2017ರಂದು ನಡೆದ ರೈತರ ಸಮಾವೇಶದಲ್ಲಿ ಕರೆ ನೀಡಿದರು. ಜೇನುಸಾಕಾಣಿಕೆಯ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಹಾಗೂ 'ಸಿಹಿ ಕ್ರಾಂತಿ'ಯ ಗುರಿಯನ್ನು ಸಾಧಿಸಲು ಜೇನುಸಾಕಾಣಿಕೆಯ ಸಮಗ್ರ ಅಭಿವೃದ್ಧಿಯ ಅವಶ್ಯಕತೆಯನ್ನು ಮನಗಾಣಲಾಯಿತು. ಅದರಂತೆ ವೈಜ್ಞಾನಿಕ ಜೇನುಸಾಕಾಣಿಕೆ ಮತ್ತು ಗುಣಮಟ್ಟದ ಜೇನು ಉತ್ಪಾದನೆಗಾಗಿ ಹಾಗೂ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಜೇನುಗೂಡಿನ ಇತರ ಉತ್ಪನ್ನಗಳ ಅಭಿವೃದ್ಧಿಗಾಗಿ ಒಂದು ಹೊಸ ಕೇಂದ್ರೀಯ ಯೋಜನೆ ರಾಷ್ಟ್ರೀಯ ಜೇನುಸಾಕಾಣಿಕೆ ಮತ್ತು ಜೇನು ಮಿಷನ್ (ನ್ಯಾಷನಲ್ ಬೀಕೀಪಿಂಗ್ ಅಂಡ್ ಹನಿ ಮಿಷನ್ - ಎನ್.ಬಿ.ಹೆಚ್.ಎಂ.)ಅನ್ನು ಜಾರಿಗೊಳಿಸಲಾಯಿತು. ಈ ಯೋಜನೆಯನ್ನು ರಾಷ್ಟ್ರೀಯ ಜೇನು ಮಂಡಳಿಯ (ಎನ್.ಬಿ.ಬಿ.) ಮೂಲಕ ಕೇಂದ್ರೀಯ ವಲಯ ಯೋಜನೆಯನ್ನಾಗಿ ಜಾರಿಗೊಳಿಸಲಾಗುತ್ತಿದೆ. (ಭಾರತ ಸರಕಾರ ಇದಕ್ಕೆ ಶೇ 100ರಷ್ಟು ಹಣಕಾಸು ನೀಡುತ್ತಿದೆ.) ಎನ್.ಬಿ.ಬಿ.ಯ ಮುಖ್ಯ ಉದ್ದೇಶ ಭಾರತದಲ್ಲಿ ವೈಜ್ಞಾನಿಕ ಜೇನುಸಾಕಾಣಿಕೆಗೆ ಉತ್ತೇಜನ ನೀಡುವುದರ ಮೂಲಕ ಜೇನು ಉತ್ಪಾದನೆಯನ್ನು ಹೆಚ್ಚಿಸುವುದು ಹಾಗೂ ಪರಾಗಸ್ಪರ್ಶದ ಮೂಲಕ ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸುವುದರ ಮೂಲಕ ಜೇನುಸಾಕಾಣಿಕೆದಾರ / ರೈತರ ಆದಾಯವನ್ನು ಹೆಚ್ಚಿಸುವುದೇ ಆಗಿದೆ.

ರಾಷ್ಟ್ರೀಯ ಜೇನುಸಾಕಾಣಿಕೆ ಮತ್ತು ಜೇನು ಮಿಷನ್ (ಎನ್.ಬಿ.ಹೆಚ್.ಎಂ.)ನಲ್ಲಿ ಈ ಮುಂದಿನ ಉಪ-ಯೋಜನೆಗಳು/ ಮೂರು ಮಿನಿ ಮಿಷನ್ ಗಳು ಲಭ್ಯ ಇವೆ-

**ಎ. ಮಿನಿ ಮಿಷನ್-1 :** ಈ ಮಿಷನ್ ಅಡಿಯಲ್ಲಿ ವೈಜ್ಞಾನಿಕ ಜೇನುಸಾಕಾಣಿಕೆಯನ್ನು ಅಳವಡಿಸಿಕೊಳ್ಳುವುದರ ಮೂಲಕ ಪರಾಗಸ್ಪರ್ಶದ ನೆರವಿನಿಂದ ಅನೇಕ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಸುಧಾರಿಸಲು ಒತ್ತು ನೀಡುವುದು.

**ಬಿ. ಮಿನಿ ಮಿಷನ್-2 :** ಈ ಮಿಷನ್, ಕ್ರೋಢೀಕರಿಸುವಿಕೆ, ಸಂಸ್ಕರಣೆ, ಸಂಗ್ರಹಣೆ, ಮಾರುಕಟ್ಟೆ, ಮೌಲ್ಯವರ್ಧನೆ ಮುಂತಾದ ಚಟುವಟಿಕೆಗಳೂ ಸೇರಿದಂತೆ ಜೇನುಸಾಕಾಣಿಕೆಯ / ಜೇನುಗೂಡು ಉತ್ಪನ್ನಗಳ ಕೊಯ್ಲೋತ್ತರ ನಿರ್ವಹಣೆಯ ಮೇಲೆ ಹಾಗೂ ಈ ಚಟುವಟಿಕೆಗಳಿಗೆ ಬೇಕಾದ ಮೂಲ ಸೌಲಭ್ಯಗಳ ಅಭಿವೃದ್ಧಿಗೆ ಒತ್ತು ಕೊಡುವತ್ತ ಗಮನ ಕೇಂದ್ರೀಕರಿಸಿದೆ.

**ಸಿ. ಮಿನಿ ಮಿಷನ್-3 :** ಈ ಮಿಷನ್, ವಿವಿಧ ಪ್ರದೇಶಗಳು / ರಾಜ್ಯಗಳು / ಕೃಷಿ ಹವಾಮಾನಗಳಿಗೆ ಹಾಗೂ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳಿಗೆ ಬೇಕಾದ ಸಂಶೋಧನೆ ಮತ್ತು ತಂತ್ರಜ್ಞಾನ ಅಭಿವೃದ್ಧಿಗೆ ಒತ್ತು ನೀಡುತ್ತದೆ.

ಎನ್.ಬಿ.ಹೆಚ್.ಎಂ., ದೇಶದಲ್ಲಿ ಜೇನುಸಾಕಾಣಿಕೆಯ ಸಮಗ್ರ ಉತ್ತೇಜನ



Scanned with ACE Scanner



ಹಾಗೂ ವೈಜ್ಞಾನಿಕ ಜೇನುಸಾಕಾಣಿಕೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಎಂಐಡಿಹೆಚ್ ಆರ್‌ಕೆವಿವೈ, ಡಬ್ಲ್ಯುಐಸಿಯ ಜೇನು ಮಿಷನ್, ಎಂಎಸ್ಎಂಇ, ಎನ್‌ಎಲ್‌ಆರ್‌ಎಂ / ಎಸ್‌ಎಲ್‌ಆರ್‌ಎಂ, ಗ್ರಾಮೀಣಾಭಿವೃದ್ಧಿ ಸಚಿವಾಲಯ; ಅರಣ್ಯ, ಪರಿಸರ, ಹವಾಮಾನ ವೈಪರೀತ್ಯ ಸಚಿವಾಲಯ; ಬುಡಕಟ್ಟು ವ್ಯವಹಾರಗಳ ಸಚಿವಾಲಯ; ವಾಣಿಜ್ಯ ಮತ್ತು ಕೈಗಾರಿಕೆಗಳ ಸಚಿವಾಲಯ; ಆಯುಷ್, ಐಸಿಎಆರ್ ಮುಂತಾದ ಸರ್ಕಾರಿ ಇಲಾಖೆ/ಯೋಜನೆಗಳ ಜೊತೆ ಸಮನ್ವಯ ಸಾಧಿಸಲು ಕಾರ್ಯ ಮಾಡುತ್ತದೆ. ಇದು ಯೋಜನೆಯ ಸುಗಮ ಹಾಗೂ ಪರಿಣಾಮಕಾರಿ ಅನುಷ್ಠಾನಕಾಗಿ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಸಂಸ್ಥೆಗಳಿಗೆ ಬೇಕಾದ, ತಾಂತ್ರಿಕ ಮಾರ್ಗದರ್ಶನ/ಸಲಹೆ ಮತ್ತು ಆಡಳಿತಾತ್ಮಕ ಬೆಂಬಲ ನೀಡುತ್ತದೆ. 2021–22ರ ಮತ್ತು ಪರಿಷ್ಕೃತ ಅಂದಾಜಿನ ಪ್ರಕಾರ ಎನ್.ಬಿ.ಹೆಚ್.ಎಂ.ನ ಸತತ ಪ್ರಯತ್ನಗಳಿಂದಾಗಿ ಜೇನುತುಪ್ಪ ಉತ್ಪಾದನೆ ಸುಮಾರು 1,33,200 ಮೆಟ್ರಿಕ್ ಟನ್ ನಷ್ಟು ಹೆಚ್ಚಿದೆ ಎಂದು ಅಂದಾಜಿಸಲಾಗಿದೆ. ಭಾರತ ಇತರ ದೇಶಗಳಿಗೆ 1221 ಕೋಟಿ ರೂಪಾಯಿ ಮೌಲ್ಯದ 74413 ಮೆಟ್ರಿಕ್ ಟನ್ ನೈಸರ್ಗಿಕ ಜೇನುತುಪ್ಪವನ್ನು 2020–2021ರಲ್ಲಿ ರಫ್ತು ಮಾಡಿದೆ. ಈ ರಫ್ತಿನ ಮೂಲಕ ವಿಶ್ವದ ಐದು ಜೇನುತುಪ್ಪ ಉತ್ಪಾದಕ ದೇಶಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಜೇನಿನ ಮೂಲವನ್ನು ಖಚಿತ ಪಡಿಸಿಕೊಳ್ಳಲು ಮಧು ಕ್ರಾಂತಿ ಪೋರ್ಟಲ್ ಅನ್ನು ಆರಂಭಿಸಲಾಗಿದೆ. ಇದು ಎನ್.ಬಿ.ಹೆಚ್.ಎಂ.ನ ಅತ್ಯುತ್ತಮ ಜಾರಿಯ ಫಲಶೃತಿಯಾಗಿದೆ. ಹತ್ತು ಸಾವಿರಕ್ಕೂ ಹೆಚ್ಚು ಜೇನುಸಾಕಾಣಿಕೆದಾರರು/ ಜೇನು ಸೊಸೈಟಿಗಳು/ತೋಟಗಳು/ ಕಂಪನಿಗಳು ತಮ್ಮ 16 ಲಕ್ಷ ಜೇನು ವಸಾಹತುಗಳೊಂದಿಗೆ ರಾಷ್ಟ್ರೀಯ ಜೇನು ಮಂಡಳಿಯಲ್ಲಿ ನೊಂದಾಯಿಸಿಕೊಂಡು ಮಧು ಕ್ರಾಂತಿ ಪೋರ್ಟಲ್ ಜೊತೆ ಲಿಂಕ್ ಹೊಂದಿವೆ. ಇದುವರೆಗೆ 16 ಇಂಟಿಗ್ರೇಟೆಡ್ ಬೀಕೀಪಿಂಗ್ ಡೆವಲಪ್ಮೆಂಟ್ ಸೆಂಟರ್ (ಐಡಿಬಿಸಿ)ಗಳನ್ನು, ಮೂರು ಜೇನು ಪರೀಕ್ಷಾ ಪ್ರಯೋಗಾಲಯಗಳನ್ನು (ಹೊಸದಿಲ್ಲಿಯ ಐಎಆರ್‌ಐನಲ್ಲಿ ಒಂದು, ಬೆಂಗಳೂರಿನ ಐಐಹೆಚ್‌ಆರ್‌ನಲ್ಲಿ ಒಂದು ಮತ್ತು ವಾರಣಾಸಿಯ ಐಐವಿಆರ್‌ನಲ್ಲಿ ಒಂದು), ವಿಭಿನ್ನ ಕೃಷಿ ಪರಿಸರದ ಪ್ರದೇಶಗಳಲ್ಲಿ 28 ಮಿನಿ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಹೊಸದಿಲ್ಲಿಯ ಐಸಿಎಆರ್ ಕೂಡ ಜೇನುನೊಣ ಮತ್ತು ಪರಾಗರೇಣುಗಳ ಎಲ್ಲ ಪ್ರಮುಖ ಸವಾಲುಗಳಿಗೆ ಸಂಬಂಧಿಸಿದ ಅಖಿಲ ಭಾರತ ಸಮನ್ವಯದ ಸ್ಥಳ ಮತ್ತು ಸ್ಥಿತಿ ಆಧರಿತ ಸಂಶೋಧನಾ ಕಾರ್ಯಕ್ರಮಗಳನ್ನು ಉತ್ತೇಜಿಸುತ್ತದೆ. (ದೇಶದ ನಾನಾ ಕೃಷಿ-ಪರಿಸರ ಪ್ರದೇಶಗಳಲ್ಲಿ 26 ಕೇಂದ್ರಗಳನ್ನು ಸ್ಥಾಪಿಸಲಾಗಿದೆ.)

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಗುಣಮಟ್ಟ ಮಾನದಂಡಗಳನ್ನು ಕಾಪಾಡಿಕೊಳ್ಳುವುದರ ಮೂಲಕ ಜೇನಿನ ಉತ್ಪಾದನೆ ಮತ್ತು ಪರೀಕ್ಷೆಯನ್ನು ಹೆಚ್ಚಿಸಲು ಮತ್ತು ಅದರ ಪರಾಗರೇಣು, ಜೇನುಚೀಲ, ಪಾಕ, ಜೇನಿನ ಅಂಟು, ಮೊದಲಾದ ಜೇನುಗೂಡಿನ ಉತ್ಪನ್ನಗಳನ್ನು ಹೆಚ್ಚಿಸಲು ವೈಜ್ಞಾನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಇದರಿಂದ ಜೇನುಸಾಕಾಣಿಕೆದಾರರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಮತ್ತು ದೇಸಿ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಜೇನು ಮತ್ತು ಜೇನುಗೂಡಿಗೆ ಬೇಡಿಕೆ ಹೆಚ್ಚಿಸಿಕೊಳ್ಳಲು ಅನುಕೂಲವಾಗಿದೆ.

### ತಂತ್ರಜ್ಞಾನದ ಅನ್ವಯ

ಜೇನುಕೃಷಿಯಲ್ಲಿ ತಂತ್ರಜ್ಞಾನದ ಬಳಕೆಯಿಂದ ಉದ್ಯಮವನ್ನು ಹೊಸ ಎತ್ತರಕ್ಕೆ ಬೆಳೆಸಬಹುದು. ಈ ದಿಸೆಯಲ್ಲಿ ಸ್ಥಳೀಯದಿಂದ ಹಿಡಿದು ಹೈಟೆಕ್ ಶೆಡ್ ವರೆಗಿನ ಒಂದು ವ್ಯವಸ್ಥಿತ ಮಹತ್ವದ ಪಾತ್ರ ಜೇನುಕೃಷಿಯು ವಹಿಸಬಹುದು. ಎಲ್ಲವನ್ನೂ ಬೆಸೆಯುವ ಅಂತರ್ಜಾಲ (ಐಓಟಿ), ಕೃತಕ ಬುದ್ಧಿಮತ್ತೆ (ಎಐ), ಮೊಬೈಲ್ ಸೂಕ್ಷ್ಮಸಂವೇದಿಗಳು, ಮತ್ತು ಸ್ಮಾರ್ಟ್ ಫೋನ್ ಆ್ಯಪ್‌ಗಳು ಜೇನುಸಾಕಾಣಿಕೆದಾರರಿಗೆ ಆರೋಗ್ಯಕರ ಜೇನು ವಸಾಹತುಗಳನ್ನು ನಿರ್ವಹಿಸಲು ಮತ್ತು ಗುಣಮಟ್ಟದ ಜೇನು ಮತ್ತಿತರ ಉತ್ಪನ್ನಗಳನ್ನು ಉತ್ಪಾದಿಸಲು ನೆರವಾಗುತ್ತವೆ. ದೊಡ್ಡ ಪ್ರಮಾಣದ ಜೇನುಕೃಷಿಯ ಚಟುವಟಿಕೆಗಳಿಗೆ ನೆರವಾಗುವಂತೆ ವಾಣಿಜ್ಯ ಸಾಕಾಣಿಕೆದಾರರಿಗಾಗಿ ಅಲ್ಗಾರಿದಮ್-ಆಧರಿತ ಭವಿಷ್ಯಸೂಚಕ ಮಾದರಿಗಳನ್ನು ವಿನ್ಯಾಸಗೊಳಿಸಬಹುದು. ರೈತರು ತೋಟಗಳಲ್ಲಿ ಆರೋಗ್ಯಕರ ಜೇನುನೊಣಗಳನ್ನು ಬೆಳೆಸುವ ಮತ್ತು ತಮ್ಮ ಗೂಡುಗಳ ಆರೋಗ್ಯವನ್ನು ಸೆನ್ಸಾರ್‌ಗಳ ಮೂಲಕ ತಿಳಿಯುವಂತೆ ಮಾಡುವ ಅಥವಾ ಕ್ಲೌಡ್ ಮಾಹಿತಿಯಂಥ ಕಡಿಮೆ ಖರ್ಚಿನ ತಂತ್ರಜ್ಞಾನ ಅಭಿವೃದ್ಧಿಯನ್ನು ಕೂಡ ಈ ವಲಯದಲ್ಲಿ ಪರಿಚಯಿಸಬಹುದು. ತಂತ್ರಜ್ಞಾನವು ಜೇನುನೊಣ ಸಂರಕ್ಷಣೆಗೆ ಸಹಾಯ ಮಾಡುತ್ತದೆ, ರೋಗಗಳನ್ನು ಅಥವಾ ಜೇನುನೊಣ ವಸಾಹತುಗಳ ಹಾನಿಯನ್ನು ನಿಯಂತ್ರಿಸುತ್ತದೆ, ಮತ್ತು ಜೇನು ಕೃಷಿಯ ಉತ್ಪನ್ನಗಳ ಗುಣಮಟ್ಟ ಹಾಗೂ ಪ್ರಮಾಣವನ್ನು ಯಥೇಚ್ಛವಾಗಿ ವೃದ್ಧಿಸುತ್ತದೆ. ವಾಣಿಜ್ಯದ ಜೇನುಸಾಕಾಣಿಕೆಗೆ ಹೈಟೆಕ್ ಶೆಡ್‌ಗಳನ್ನು ಬಳಸುವುದರಿಂದ ಹೆಚ್ಚಿನ ಪ್ರಮಾಣದ ಮಾರುಕಟ್ಟೆಯ ಉತ್ಪನ್ನಗಳನ್ನು ತಯಾರಿಸಬಹುದು. ಒಳ್ಳೆಯ ಕೃಷಿ, ಚಟುವಟಿಕೆಗಳು ದೇಸಿ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಬೇಕಾದ ಉತ್ಕೃಷ್ಟ ಗುಣಮಟ್ಟದ ಜೇನು ಮತ್ತು ಇತರ ಉತ್ಪನ್ನಗಳನ್ನು ಉತ್ಪಾದಿಸಲು ನೆರವಾಗುತ್ತವೆ. ಜೇನುಸಾಕಾಣಿಕೆ, ಜೇನು ನಡೆವಳಿಕೆ ಮುಂತಾದ ವಿಷಯಗಳ ಸಂಶೋಧನೆಯಿಂದ ಆರೋಗ್ಯಕರ ಜೇನುನೊಣ ವಸಾಹುತುಗಳ ಮತ್ತು ಜೇನುಕೃಷಿಯ ವಾಣಿಜ್ಯ ಸಾಕಾಣಿಕೆಯ ಅವಕಾಶಗಳು ಹೆಚ್ಚುತ್ತವೆ.


ತಂತ್ರಜ್ಞಾನದ ವಿಷಯದಲ್ಲಿ ಹೇಳುವುದಾದರೆ ಸಾಂಪ್ರಾದಾಯಿಕ ಜೇನುಸಾಕಾಣಿಕೆ ಉದ್ಯಮ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಪ್ರಗತಿ ಕಂಡಿದೆ. ಈ ಮಾತಿಗೆ ಒಂದು ಉದಾಹರಣೆ ಎಂದರೆ ಜೇನು ತೆಗೆಯಲು 'ಸೂಪರ್' ಚೇಂಬರ್ ಅನ್ನು ಬಳಸುತ್ತಿರುವುದು. ಈ ಸೂಪರ್ ಚೇಂಬರ್ ಬಳಕೆಯಿಂದ ನಾವು ಒಂದು ಗೂಡಿನಿಂದ 70–80 ಕೆ.ಜಿ. ಜೇನುತುಪ್ಪವನ್ನು ತೆಗೆಯಬಹುದು. ಸೂಪರ್ ಚೇಂಬರ್ ಇಲ್ಲದೇ ಜೇನು ಕೃಷಿ ಕೈಕೊಂಡರೆ ಕೇವಲ 10–15 ಕೆ.ಜಿ. ಜೇನುತುಪ್ಪ ಸಿಗಬಹುದು. ಈಗ ರಾಣಿ ಜೇನು ಸಾಕುವ ಹೊಸ ತಂತ್ರಜ್ಞಾನವೂ ಬಂದಿದೆ. ●



Scanned with ACE Scanner

# ಭಾರತೀಯ ಸಿನಿಮಾ ಯಾನ

* ಅಮಿತವ ನಾಗ್



ಆರಂಭದ ದಿನದಿಂದಲೂ ಭಾರತೀಯ ರಂಗಭೂಮಿಯ ಪ್ರಭಾವಕ್ಕೆ
ಭಾರತದ ಪ್ರಧಾನ / ಮುಖ್ಯ ವಾಹಿನಿ ಸಿನಿಮಾ, ಆರಂಭದ ದಿನದಿಂದಲೂ ಭಾರತೀಯ ರಂಗಭೂಮಿಯ ಪ್ರಭಾವಕ್ಕೆ
ಭಾರತದ ಪ್ರಧಾನ / ಮುಖ್ಯ ವಾಹಿನಿ ಸಿನಿಮಾ, ಪರಂಪರೆಯಿಂದ ಪ್ರೇರಣೆಯನ್ನು ಪಡೆದಿತ್ತು. 1940ರ ದಶಕದ ಬೆಳವಣಿಗೆಯ
ಒಳಗಾಗಿತ್ತು. ಭರತ ಮುನಿಯ 'ನಾಟ್ಯಶಾಸ್ತ್ರ'ದ ಪರಂಪರೆಯಿಂದ ಪ್ರೇರಣೆಯನ್ನು ಪಡೆದಿತ್ತು. 1940ರ ದಶಕದ ಬೆಳವಣಿಗೆಯ
ಒಳಗಾಗಿತ್ತು. ಭರತ ಮುನಿಯ 'ನಾಟ್ಯಶಾಸ್ತ್ರ'ದ 'ಪ್ರಧಾನ' ಪ್ರತಿನಿಧಿಯಾಗಿತ್ತು. ಪನ್ನಾ ಶಾ ಅವರ 'ದಿ
ಕಾಲದಿಂದಲೂ ಹಿಂದಿ ಚಿತ್ರರಂಗವು ಭಾರತೀಯ ಚಿತ್ರರಂಗದ 'ಪ್ರಧಾನ' ಪ್ರತಿನಿಧಿಯಾಗಿತ್ತು. ಪನ್ನಾ ಶಾ ಅವರ 'ದಿ
ಕಾಲದಿಂದಲೂ ಹಿಂದಿ ಚಿತ್ರರಂಗವು ಭಾರತೀಯ ದಾಖಲಾದಂತೆ 1945ರಲ್ಲಿ ಹಿಂದಿಯ 73 ಚಿತ್ರಗಳು ಬಿಡುಗಡೆಯಾಗಿದ್ದವು.
ಇಂಡಿಯನ್ ಫಿಲಂ' (1950) ಪುಸ್ತಕದಲ್ಲಿ ದಾಖಲಾದಂತೆ 1945ರಲ್ಲಿ ಹಿಂದಿಯ 73 ಚಿತ್ರಗಳು ಬಿಡುಗಡೆಯಾಗಿದ್ದವು.
ಇಂಡಿಯನ್ ಫಿಲಂ' (1950) ಪುಸ್ತಕದಲ್ಲಿ 'ಪಥೇರ್ ಪಾಂಚಾಲಿ' ಭಾರತೀಯ ಚಿತ್ರರಂಗದ ಅತ್ಯಂತ ಪ್ರಮುಖ ಚಿತ್ರವಾಗಿ ಮೂಡಿ
ಸತ್ಯಜಿತ್ ರೇ ಅವರ ಬಂಗಾಲಿ ಚಿತ್ರ 'ಪಥೇರ್ ಪಾಂಚಾಲಿ' ಭಾರತೀಯ ಚಿತ್ರರಂಗದ ಅತ್ಯಂತ ಪ್ರಮುಖ ಚಿತ್ರವಾಗಿ ಮೂಡಿ
ಸತ್ಯಜಿತ್ ರೇ ಅವರ ಬಂಗಾಲಿ ಚಿತ್ರ ವಿದೇಶಿ ಚಿತ್ರೋತ್ಸವಗಳಲ್ಲಿ ಗಮನ ಸೆಳೆಯಲು ಆರಂಭಿಸಿ ದೇಶಕ್ಕೆ
ಬಂದಿತು. 1957ರ ವೇಳೆಗೆ ಭಾರತೀಯ ಚಿತ್ರಗಳು ವಿದೇಶಿ ಚಿತ್ರೋತ್ಸವಗಳಲ್ಲಿ ಗಮನ ಸೆಳೆಯಲು ಆರಂಭಿಸಿ ದೇಶಕ್ಕೆ
ಬಂದಿತು. 1957ರ ವೇಳೆಗೆ ಭಾರತೀಯ ಚಿತ್ರಗಳು ಎಸ್.ಕೆ.ಪಾಟೀಲ್ ಸಮಿತಿಯ ಶಿಫಾರಸ್ಸಿನಂತೆ ಫಿಲಂ ಫೈನ್ಸಾನ್ಸ್
ಗೌರವವನ್ನು ತಂದು ಕೊಟ್ಟವು. 1951ರಲ್ಲಿ ನೇಮಕವಾದ ಎಸ್.ಕೆ.ಪಾಟೀಲ್ ಸಮಿತಿಯ ಶಿಫಾರಸ್ಸಿನಂತೆ ಫಿಲಂ ಫೈನ್ಸಾನ್ಸ್
ಗೌರವವನ್ನು ತಂದು ಕೊಟ್ಟವು. 1951ರಲ್ಲಿ ಫಿಲಂ ಡೆವೆಲೆಪ್‌ಮೆಂಟ್ ಕಾರ್ಪೋರೇಷನ್ ಎಂದು ಕರೆಯಲಾಯಿತು)
ಕಾರ್ಪೋರೇಷನ್ (ಮುಂದೆ ಇದನ್ನು ನ್ಯಾಷನಲ್ ಫಿಲಂ ಡೆವೆಲೆಪ್‌ಮೆಂಟ್ ಕಾರ್ಪೋರೇಷನ್ ಎಂದು ಕರೆಯಲಾಯಿತು)
ಕಾರ್ಪೋರೇಷನ್ (ಮುಂದೆ ಇದನ್ನು ನ್ಯಾಷನಲ್ ಪ್ರೋತ್ಸಾಹಿಸಲು 1960ರಲ್ಲಿ ಸ್ಥಾಪಿಸಲಾಯಿತು. ಏಳೂವರೆ ದಶಕಗಳ
ಅನ್ನು ಚಲನಚಿತ್ರದಲ್ಲಿನ ಕಲಾತ್ಮಕ ಬೆಳವಣಿಗೆಯನ್ನು ಪ್ರೋತ್ಸಾಹಿಸಲು 1960ರಲ್ಲಿ ಸ್ಥಾಪಿಸಲಾಯಿತು. ಏಳೂವರೆ ದಶಕಗಳ
ಅನ್ನು ಚಲನಚಿತ್ರದಲ್ಲಿನ ಕಲಾತ್ಮಕ ಅಳವಡಿಕೆ ಮತ್ತು ಓಟಿಟಿ ವೇದಿಕೆ ಬಳಸಿಕೊಂಡು ತನ್ನನ್ನು ಪುನರ್
ನಂತರ ಭಾರತೀಯ ಚಿತ್ರರಂಗವು ತಾಂತ್ರಿಕತೆ ಅಳವಡಿಕೆ ಮತ್ತು ಓಟಿಟಿ ವೇದಿಕೆ ಬಳಸಿಕೊಂಡು ತನ್ನನ್ನು ಪುನರ್
ಆವಿಷ್ಕಾರಗೊಳಿಸಿಕೊಳ್ಳುತ್ತಿದೆ.

* ಸ್ವತಂತ್ರ ಸಿನಿಮಾ ವಿಮರ್ಶಕರಾಗಿದ್ದು ಸಿಲ್ ಹೌತೆ ಸಿನಿಮಾ ಪತ್ರಿಕೆಯ ಸ್ಥಾಪಕರಲ್ಲೊಬ್ಬರಾಗಿದ್ದು ಪ್ರಸ್ತುತ ಈ ಪತ್ರಿಕೆಯ ಸಂಪಾದಕರಾಗಿದ್ದಾರೆ.
* ಇಮೇಲ್ : amitava.nag@gmail.com



Scanned with ACE Scanner

ಮಾರ್ಚ್ 22 1895.. ಮನುಕುಲ ಒಂದು ಹೊಸ ಬೆಳವಣಿಗೆಗೆ ಸಜ್ಜಾಗಿತ್ತು. ಮೊಟ್ಟ ಮೊದಲ ಚಲನಚಿತ್ರವು ಪ್ರದರ್ಶಿತವಾಯಿತು. ಲ್ಯೂಮಿಯರ್ ಸಹೋದರರು ಆಗಸ್ಟೆ ಮತ್ತು ಲೂಯಿಸ್. ಪ್ಯಾರೀಸ್‌ನಲ್ಲಿ ಈ ಪ್ರದರ್ಶನವನ್ನು ನಡೆಸಿದ್ದರು. ಖಾಸಗಿಯಾಗಿದ್ದ ಈ ಪ್ರದರ್ಶನದಲ್ಲಿ ಪ್ರದರ್ಶಿತವಾದದ್ದು ಒಂದೇ ಚಿತ್ರ ಲಾ ಸಾರ್ಟಿ ದೆ ಲುಸಿನಿ ಲುಮೆರೆ ಅ ಲಯಾನ್. ಇದನ್ನು ಚಿಕ್ಕ ಸಂಖ್ಯೆಯ ಪ್ರೇಕ್ಷಕರ ಎದುರು ಪ್ರದರ್ಶಿಸಲಾಗಿತ್ತು. ಇದನ್ನು ಅನುಸರಿಸಿ ಅದೇ ವರ್ಷದ ಡಿಸೆಂಬರ್ 28ರಂದು ಹತ್ತು ಕಿರು ಚಿತ್ರಗಳ ವ್ಯಾಪಾರಿ ಪ್ರದರ್ಶನ ಆರಂಭವಾಯಿತು. ಹೀಗೆ ಹುಟ್ಟಿ ಕೊಂಡ ಸಿನಿಮಾ ಜಗತ್ತನ್ನೆಲ್ಲವನ್ನೂ ಸಂಚರಿಸಲು ಆರಂಭಿಸಿತು. ಹೀಗೆ ಹುಟ್ಟಿದ ಆರು ತಿಂಗಳ ಒಳಗಾಗಿಯೇ ಸಿನಿಮಾ ಭಾರತವನ್ನು ತಲುಪಿತು. ಮೊದಲು ಬಾಂಬೆಯಲ್ಲಿ ನಂತರ ಕೊಲ್ಕತ್ತಾದಲ್ಲಿ ನಂತರ ಮದ್ರಾಸಿನಲ್ಲಿ ಚಿತ್ರಗಳು ಪ್ರದರ್ಶಿತವಾದವು. ಭಾರತೀಯ ಚಿತ್ರೋದ್ಯಮ ಮುಖ್ಯವಾಗಿ ಮೆಟ್ರೋಪಾಲಿಟನ್ ನಗರಗಳಲ್ಲಿ ಶೀಘ್ರ ಬೆಳವಣಿಗೆಯನ್ನು ಕಂಡಿತು. ಮೊದಲ




ಮೂಕಿ ಚಿತ್ರ ರಾಜಾ ಹರಿಶ್ಚಂದ್ರವನ್ನು 1913ರಲ್ಲಿ ದಾದಾ ಸಾಹೇಬ್ ಫಾಲ್ಕೆಯವರು ರೂಪಿಸಿದರು. ಹೀಗೆ ಸಾಗುತ್ತಾ ಬಂದ ಚಿತ್ರರಂಗ 1931ರಲ್ಲಿ ಮಾತನ್ನು ಪಡೆದು ಕೊಂಡಿತು. ಅರ್ದಿಶ್ಕರ್ ಇರಾನಿಯವರ 'ಅಲಂ ಆರಾ' ಬಿಡುಗಡೆಯಾಯಿತು. ಅಲ್ಲಿಂದ ಮುಂದೆ ವಾಕ್ಚಿತ್ರಗಳ ಯುಗ ಆರಂಭವಾಯಿತು.

ಆರಂಭದಿಂದಲೂ ಭಾರತೀಯ ಚಿತ್ರರಂಗ ಭರತ ಮುನಿ 'ನಾಟ್ಯ ಶಾಸ್ತ್ರ' ಪ್ರಣೀತ ಭಾರತೀಯ ನಾಟಕ ಪರಂಪರೆಯಿಂದ ಪ್ರೇರಿತವಾಯಿತು. ಇಲ್ಲಿನ ಸಂಗೀತ ಮತ್ತು ನೃತ್ಯಗಳು ಪಾಶ್ಚಾತ್ಯ ರಂಗಭೂಮಿಗಿಂತಲೂ ಭಿನ್ನವಾಗಿತ್ತು. ಹೀಗಾಗಿ ಭಾರತೀಯ ಪ್ರಧಾನ ವಾಹಿನಿ ಚಿತ್ರವು ಸಂಗೀತ ನೃತ್ಯಗಳನ್ನು ಗಮನಾರ್ಹವಾಗಿ ಹೊಂದಿರುತ್ತಿತ್ತು. ಕೆಲವೊಂದು ಸಲ ಅತಿ ಎನ್ನಿಸುವಷ್ಟು ಜೆ..ಜೆ.ಮದನ್ ಅವರ 1932ರಲ್ಲಿ ಬಿಡುಗಡೆಯಾದ 'ಇಂದ್ರಸಭಾ' ಚಿತ್ರವು 70 ಗೀತೆಗಳನ್ನು ಹೊಂದಿದ್ದು ಚಿತ್ರ ಸರಿ ಸುಮಾರು ನಾಲ್ಕು ಗಂಟೆಗಳಷ್ಟು ದೀರ್ಘವಾಗಿತ್ತು. ಸ್ಟುಡಿಯೊ ವ್ಯವಸ್ಥೆಯು ಬೆಳೆದಂತೆ 'ಸ್ಟಾರ್' ಪದ್ಧತಿಯು ಭಾರತೀಯ ಚಿತ್ರರಂಗದಲ್ಲಿ ರೂಪುಗೊಂಡಿತ್ತು.

ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಯೂರೋಪಿನ ಬಹುತೇಕ ಚಿತ್ರರಂಗ ಸಂಕಷ್ಟದಲ್ಲಿದ್ದಾಗ ಭಾರತೀಯ ಚಿತ್ರರಂಗದಲ್ಲಿ ಹಣದ ಹೊಳೆಯೇ ಹರಿಯುತ್ತಿತ್ತು. ರಾತ್ರೋರಾತ್ರಿ ನಿರ್ಮಾಪಕರ ಸಂಖ್ಯೆ ಹೆಚ್ಚಾದಂತೆ ನಿರ್ಮಾಣವೂ ಹೆಚ್ಚಾಯಿತು. ಪ್ರಧಾನ ವಾಹಿನಿಯು ಯಶಸ್ವಿ ಸೂತ್ರದ ಹುಡುಕಾಟದಲ್ಲಿ ತೊಡಗಿಸಿ ಕೊಂಡಿತು. ಅವುಗಳಲ್ಲಿ ಹಾಡು ಮತ್ತು ನೃತ್ಯಗಳು ಮುಖ್ಯವಾದವು. ಕ್ರಮೇಣ ಫೈಟಿಂಗ್ ಕೂಡ ಸೇರಿ ಕೊಂಡು 'ಮಸಾಲಾ' ಎಂದು ಕರೆಯಲ್ಪಡುವ ವಾಣಿಜ್ಯ ಚಿತ್ರಗಳು ಕಾಣಿಸಿ ಕೊಂಡವು.

ಬೆಳವಣಿಗೆ ಕಂಡ 40ರ ದಶಕದ ಆರಂಭದಿಂದಲೂ ಹಿಂದಿ ಚಿತ್ರರಂಗವು ಭಾರತೀಯ ಚಿತ್ರರಂಗದ ಪ್ರಮುಖ ಪ್ರತಿನಿಧಿಯಾಗಲು ಆರಂಭಿಸಿತು. ಪನ್ನಾ ಶಾ ಅವರ 'ದಿ ಇಂಡಿಯನ್ ಫಿಲಂ' (1950) ಪುಸ್ತಕದಲ್ಲಿ ದಾಖಲಾದಂತೆ 1945ರಲ್ಲಿ ಬಿಡುಗಡೆಯಾದ ಚಿತ್ರಗಳಲ್ಲಿ ಹಿಂದಿಯ 73 (ಶೇ 74%) ಚಿತ್ರಗಳು ಸೇರಿದ್ದವು. ಹಿಂದಿನ ಮೂರು ವರ್ಷಗಳಲ್ಲಿ ಅಂದರೆ 1942,1943




ಮತ್ತು 1944ರಲ್ಲಿ ಕೂಡ ಹಿಂದಿ ಚಿತ್ರಗಳ ಸಂಖ್ಯೆ 165ರಲ್ಲಿ 99 (60%) 149ರಲ್ಲಿ 98 (66%) ಮತ್ತು 124ರಲ್ಲಿ 88 (71%) ಇತ್ತು. 1947ರಲ್ಲಿ ಭಾರತವು ಸ್ವಾತಂತ್ರ್ಯವಾದಾಗ ನಡೆದ ಮುಖ್ಯ ಬೆಳವಣಿಗೆ ಎಂದರೆ ದೇಶ ವಿಭಜನೆಯಿಂದ ಪಂಜಾಬಿನಲ್ಲಿ ಚಿತ್ರರಂಗವು ಗಟ್ಟಿಯಾಗಿ ಇಲ್ಲದೆ ಹೋದರೂ ಬಂಗಾಳದಲ್ಲಿ ಇತ್ತು. ವಿಭಜನೆಯ ನಂತರ ಬಂಗಾಳಿ ಚಿತ್ರರಂಗದ ಮಾರುಕಟ್ಟೆಯು ಅರ್ಧಕ್ಕಿಂತಲೂ ಹೆಚ್ಚಾಗಿ ಕುಸಿಯಿತು. ಹೀಗಾಗಿ ಬಿಮಲ್ ರಾಯ್, ಸಲೀಲ್ ಚೌಧರಿ ಮತ್ತು ಹೃಷಿಕೇಷ ಮುಖರ್ಜಿ ಸೇರಿದಂತೆ ತಂತ್ರಜ್ಞರು ಮತ್ತು ನಿರ್ದೇಶಕರು ಹೆಚ್ಚಿನ ಅವಕಾಶಗಳು ಮತ್ತು ದೊಡ್ಡ ಮಾರುಕಟ್ಟೆಯನ್ನು ಹುಡುಕಿ ಕೊಂಡು ಬಾಂಬೆಗೆ ಬಂದರು.

ಸ್ವಾತಂತ್ರ್ಯ ಪೂರ್ವ ಭಾರತೀಯ ಚಿತ್ರರಂಗದ ಬೆಳವಣಿಗೆ ಬಹು ಮಟ್ಟಿಗೆ ಅಸಂಘಟಿತವೂ ಮತ್ತು ಸ್ವಚ್ಛಂದವೂ ಆಗಿತ್ತು. ಈ ತಾಂತ್ರಿಕ ಮಾಧ್ಯಮದಲ್ಲಿ ಕೆಲವರು ಮಾತ್ರ ವಿದೇಶದಲ್ಲಿ ತರಬೇತಿಯನ್ನು ಪಡೆಯಲು ಶಕ್ತರಾಗಿದ್ದರು. ಈ ಅಂಶಗಳು ಚಿತ್ರಗಳು ಗುಣಮಟ್ಟದ ಮೇಲೆ ಕೂಡ ಪರಿಣಾಮವನ್ನು ಬೀರಿತು. ದೇಶದಲ್ಲಿರುವ ಅನಕ್ಷರಸ್ಥರ ಬಹು ದೊಡ್ಡ ಸಂಖ್ಯೆ ಬಾಕ್ಸ್ ಆಫೀಸ್ ಸಾರ್ವಜನಿಕ ಅಭಿರುಚಿಯ ಸಾಕ್ಷಿಯಲ್ಲ ಎನ್ನುವುದನ್ನು ರುಜುವಾತು ಮಾಡಿತು. 1948ರಲ್ಲಿ ಆಗಿನ ಜನಪ್ರಿಯ ಇಂಗ್ಲೀಷ್ ದೈನಿಕ 'ದಿ ಸ್ಟೇಟ್ಸ್ ಮೆನ್'ನಲ್ಲಿ ಮೇರು ನಿರ್ದೇಶಕ ಸತ್ಯಜಿತ್ ರೇ ಬರೆಯುತ್ತಾರೆ. 'ಇವತ್ತು ಭಾರತೀಯ ಚಿತ್ರರಂಗಕ್ಕೆ ಬೇಕಾಗಿರುವುದು ವೈಭವವಲ್ಲ, ಹೆಚ್ಚು ಕಲ್ಪನೆ, ಹೆಚ್ಚು ಬದ್ಧತೆ ಮತ್ತು ಮಾಧ್ಯಮದ ಕುರಿತು ಜವಾಬ್ದಾರಿಯುತ ನಿರ್ವಹಣೆ. ಚಿತ್ರರಂಗಕ್ಕೆ ಈಗ ಬೇಕಾಗಿರುವುದು ಎಲ್ಲಕ್ಕಿಂತಲೂ ಹೆಚ್ಚಾಗಿ ತನ್ನದೇ ಆದ ಶೈಲಿ ಮತ್ತು ಪರಿಭಾಷೆ ಮುಖ್ಯವಾಗಿ ತನ್ನದೇ ಆದ ರೀತಿಯ ಸ್ವಂತಿಕೆ. ಬಹಳ ಸ್ಪಷ್ಟವಾಗಿ ಭಾರತೀಯ ಎಂದು ಕರೆಯ ಬಹುದಾದ ಗುಣವನ್ನು ಮಾಧ್ಯಮವು ಅಳವಡಿಸಿ ಕೊಳ್ಳ ಬೇಕಾಗಿದೆ.' ರೇ ತನ್ನ ಸ್ನೇಹಿತರಾದ ಚಿದಾನಂದ ದಾಸಗುಪ್ತ, ಆರ್.ಪಿ.ಗುಪ್ತ, ಹರಿಸದನ್ ದಾಸ್‌ಗುಪ್ತ ಮತ್ತು ಇತರರ ಜೊತೆ ಸೇರಿ ಇದಕ್ಕಿಂತಲೂ ಒಂದು ವರ್ಷ ಮೊದಲು ಕೊಲ್ಕತ್ತ ಫಿಲಂ ಸೊಸೈಟಿಯನ್ನು ಸ್ಥಾಪಿಸಿದ್ದರು. ಇದು ಫೀಚರ್ ಫಿಲಂಗಳಿಗಾಗಿ ಸ್ಥಾಪಿತವಾದ ಮೊದಲ ಚಿತ್ರ ಸಮಾಜ.



Scanned with ACE Scanner

ಇದಕ್ಕಿಂತಲೂ ಮೊದಲು ಸಾಕ್ಷ್ಯಚಿತ್ರ ನಿರ್ಮಾಪಕರು 1942ರಲ್ಲಿ ಬಾಂಬೆಯಲ್ಲಿ ಇಂತಹ ಪ್ರಯತ್ನವನ್ನು ನಡೆಸಿದ್ದರು. ಮುಂದಿನ ಮೂರು ದಶಕಗಳಲ್ಲಿ ಚಿತ್ರ ಸಮಾಜಗಳು ದೇಶದ ಎಲ್ಲೆಡೆ ಸ್ಥಾಪಿತವಾದವು. ಈ ಚಿತ್ರ ಸಮಾಜಗಳ ಮುಖ್ಯ ಉದ್ದೇಶ ಸಿನಿಮಾವನ್ನು ಕಲಾತ್ಮಕ ಮಾಧ್ಯಮವಾಗಿ ಅಧ್ಯಯನ ಮಾಡುವುದು ಪ್ರೇಕ್ಷಕರಲ್ಲಿ ಸತ್ವಯುತ ಮತ್ತು ಸೃಜನಾತ್ಮಕ ಅಂಶಗಳ ಕುರಿತು ಆಸಕ್ತಿ ಬೆಳೆಯುವಂತೆ ಮಾಡುವುದು. ಆದರೆ ಹೆಚ್ಚಿನ ಇಂತಹ ಚಿತ್ರ ಸಮಾಜಗಳು ವಿದೇಶಿ ಚಿತ್ರಗಳ ಕುರಿತು ಹೆಚ್ಚಾಗಿ ಚರ್ಚೆ ನಡೆಸಿ ಭಾರತೀಯ ಚಿತ್ರಗಳನ್ನು ಬಹು ಮಟ್ಟಿಗೆ ನಿರ್ಲಕ್ಷಿಸಿದವು. ಈ ಕಾರಣದಿಂದ ತಮ್ಮ ಮಹತ್ವವನ್ನು ಕಳೆದು ಕೊಂಡು ಕಾಲಕ್ರಮೇಣ ಅಪ್ರಸ್ತುತವಾದವು.

ಸತ್ಯಜಿತ್ ರೇ ಗುರುತಿಸಿದಂತೆ ಚೇತನ್ ಆನಂದ್ ಅವರ 'ನೀಚಾ ನಗರ್'



ಕೆ.ಎ.ಅಬ್ಬಾಸ್ ಅವರ 'ಧರ್ತಿ ಕಿ ಲಾಲ್' ಎರಡೂ 1946ರಲ್ಲಿ ನಿರ್ಮಾಣವಾದವು. ಈ ಎರಡೂ ಚಿತ್ರಗಳು ವೈಭವಕ್ಕೆ ಗಮನ ಕೊಡದೆ 'ಸಮಗ್ರತೆ ಮತ್ತು ಸ್ಪಷ್ಟವಾದ ಭಾರತೀಯತೆಗೆ' ಮಹತ್ವ ನೀಡಿದವು. ನೀಚಾ ನಗರ್ ಕಾನ್ ಚಿತ್ರೋತ್ಸವದಲ್ಲಿ ಮನ್ನಣೆಯನ್ನು ಪಡೆದ ಮೊದಲ ಭಾರತೀಯ ಚಿತ್ರ ಎನ್ನಿಸಿ ಕೊಂಡಿತು. ಅತ್ಯುತ್ತಮ ಚಿತ್ರ ಎನ್ನುವ ಪ್ರಶಸ್ತಿಯನ್ನು ಕಾನ್ ಚಿತ್ರೋತ್ಸವದಲ್ಲಿ ಈ ಚಿತ್ರವು ಬೇರೆ ಚಿತ್ರಗಳೊಂದಿಗೆ ಹಂಚಿಕೊಂಡಿತು. 1948ರಲ್ಲಿ ಉದಯಶಂಕರ್ ಅವರ ದೃಶ್ಯಾತ್ಮಕ ಚಿತ್ರ 'ಕಲ್ಪನಾ' ನೃತ್ಯ ಮತ್ತು ಸಂಗೀತವನ್ನು




ಚಲನಚಿತ್ರಕ್ಕೆ ಹಿತಮಿತವಾಗಿ ಅಳವಡಿಸುವ ಸಾಧ್ಯತೆಗಳನ್ನು ತೋರಿಸಿಕೊಟ್ಟಿತು. ಈ ಚಿತ್ರದ ಹಾಡು ಮತ್ತು ನೃತ್ಯಗಳು ಜನಪ್ರಿಯವಾದವು.

ಆದರೆ ಭಾರತೀಯ ಚಿತ್ರರಂಗದ ಅತಿ ದೊಡ್ಡ ತಿರುವು ಎನ್ನುವುದು ಬಂದಿದ್ದು 1955ರಲ್ಲಿ. ಅದೂ ಸತ್ಯಜಿತ್ ರೇ ಅವರಿಂದಲೇ. ಈ ಸಲ ಚಿತ್ರ



ನಿರ್ಮಾತೃವಾಗಿ. ಅವರ 'ಪಥೇರ್ ಪಾಂಚಾಲಿ' ಚಿತ್ರ ಆವರೆಗೂ ನಿರ್ಮಿತವಾಗಿದ್ದ ಭಾರತೀಯ ಚಿತ್ರಗಳೆಲ್ಲವಕ್ಕಿಂತಲೂ ಅತಿ ಹೆಚ್ಚಿನ ಜಾಗತಿಕ ಮನ್ನಣೆಯನ್ನು ಪಡೆದು ಕೊಂಡಿತು. ಅಂತಹ ಪರಂಪರೆಗೂ ಕೂಡ ನಾಂದಿಯನ್ನು ಹಾಡಿತು.

1950ರ ದಶಕ ಭಾರತೀಯ ಚಿತ್ರಗಳ ಮಟ್ಟಿಗೆ ಮುಖ್ಯ ಬದಲಾವಣೆಗೆ ಕಾರಣವಾಯಿತು. ಭಾರತೀಯ ಚಿತ್ರಗಳು ವಿದೇಶಿ ಚಿತ್ರೋತ್ಸವದಲ್ಲಿ ಪ್ರದರ್ಶಿತಗೊಂಡು ದೇಶಕ್ಕೆ ಮನ್ನಣೆಯನ್ನು ತರಲು ಆರಂಭಿಸಿದವು. 1957ರಲ್ಲಿ ಬಿಡುಗಡೆಯಾದ ರೇ ಅವರ ಎರಡನೆಯ ಚಿತ್ರ ಅಪರಾಜಿತೋ (ಪಥೇರ್ ಪಾಂಚಾಲಿಯ ಸರಣಿ ಚಿತ್ರ) ಹನ್ನೊಂದು ಜಾಗತಿಕ ಪ್ರಶಸ್ತಿಗಳನ್ನು ಪಡೆದು ಕೊಂಡಿತು. ಇದರಲ್ಲಿ ವೇನ್ಸ್ ಚಿತ್ರೋತ್ಸವದಲ್ಲಿ ಪಡೆದ ಗೋಲ್ಡನ್ ಲಯನ್ ಮತ್ತು ವಿಮರ್ಶಕರ ಮೆಚ್ಚುಗೆಯ ಪ್ರಶಸ್ತಿ ಎರಡೂ ಸೇರಿದ್ದು, ಈ ಪ್ರಶಸ್ತಿಯನ್ನು ಪಡೆದ ಮೊದಲ ಭಾರತೀಯ ಚಿತ್ರ ಇದು ಎನ್ನಿಸಿ ಕೊಂಡಿತು. ಅಮಿತ್ ಮೈತ್ರ ಮತ್ತು ಸೊಂಬು ಮಿತ್ರಾ ಅವರ ಬಂಗಾಳಿ ಚಿತ್ರ 'ಏಕ್ ದಿನ್ ರಾತ್ರೆ' ಕ್ರಿಸ್ಟಲ್ ಗ್ಲೋಬ್ ಗ್ರ್ಯಾಂಡ್ ಪ್ರಿಕ್ಸ್ ಬಹುಮಾನವನ್ನು ಕರ್ಲೊವೇ ವ್ಯಾರಿ ಜಾಗತಿಕ ಚಿತ್ರೋತ್ಸವದಲ್ಲಿ ಅದೇ ವರ್ಷ ಪಡೆದು ಕೊಂಡಿತು. ಅದೇ ವರ್ಷ



ತಪನ್ ಸಿನ್ಹಾ ಅವರ 'ಕಾಬೂಲಿವಾಲ' ಸಂಗೀತಕ್ಕಾಗಿ ತೀರ್ಪುಗಾರರ ವಿಶೇಷ ಮೆಚ್ಚುಗೆ ಬಹುಮಾನವನ್ನು ಪಡೆದು ಕೊಂಡಿತು. ಅದೇ ವರ್ಷ ವಿ.ಶಾಂತರಾಂ



ಅವರ 'ದೊ ಅಂಕೆ ಬಾರಾ ಹಾತ್' ಬರ್ಲಿನ್ ಚಿತ್ರೋತ್ಸವದಲ್ಲಿ ಬೆಳ್ಳಿ ಪದಕವನ್ನು ಪಡೆದು ಕೊಂಡಿತು. 1950ರದ ದಶಕದಲ್ಲಿ ಬಂಗಾಳಿ ಚಿತ್ರಗಳು ಸೂಕ್ಷ್ಮತೆ ಮತ್ತು ಬದ್ಧತೆಯನ್ನು ಪಡೆದುಕೊಳ್ಳುವುದರ ಜೊತೆಗೆ ಕಲಾತ್ಮಕತೆ ಮತ್ತು ಸೃಜನಾತ್ಮಕತೆಯನ್ನು ಕೂಡ ಭಾರತೀಯ ಚಿತ್ರರಂಗಕ್ಕೆ ನೀಡಿದವು.

ಇದಕ್ಕೆ ಪೂರಕವಾಗಿ ಭಾರತ ಸರ್ಕಾರವೂ ಕೂಡ ಕೆಲವು ಅಗತ್ಯ ಮತ್ತು ನಿರ್ಣಾಯಕ ಕ್ರಮಗಳನ್ನು ತೆಗೆದು ಕೊಂಡಿತು. 1951ರಲ್ಲಿ ಎಸ್.ಕೆ.ಪಾಟೀಲ್ ಫಿಲಂ ಇನ್ಕ್ವೈರಿ ಕಮಿಟಿ ಶಿಫಾರಸ್ಸಿನಂತೆ ಫಿಲಂ ಫೈನಾನ್ಸ್ ಕಾರ್ಪೋರೇಷನ್ 1960ರಲ್ಲಿ ಸ್ಥಾಪಿತವಾಯಿತು. (ಮುಂದೆ ಇದು ನ್ಯಾಷನಲ್ ಫಿಲಂ ಡೆವಲಪ್‌ಮೆಂಟ್ ಕಾರ್ಪೋರೇಷನ್ ಎಂದು ಕರೆಸಿ ಕೊಂಡಿತು) ಇದು ಭಾರತೀಯ ಚಿತ್ರ



Scanned with ACE Scanner

ನಿರ್ಮಾಣದಲ್ಲಿ ಕಲಾತ್ಮಕ ಅಂಶಗಳನ್ನು ಪ್ರೋತ್ಸಾಹಿಸುವ ಬಹಳ ಮುಖ್ಯವಾದ ಕೆಲಸವನ್ನು ಮಾಡಿತು. ಅದೇ ವರ್ಷ ಪುಣೆಯಲ್ಲಿ ಫಿಲಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಹಿಂದಿನ ಪ್ರಭಾತ್ ಸ್ಟುಡಿಯೊ ಆವರಣದಲ್ಲಿ ಆರಂಭವಾಯಿತು. ನಾಲ್ಕು ವರ್ಷಗಳ ನಂತರ ಭಾರತೀಯ ಚಿತ್ರರಂಗದ ಇತಿಹಾಸವನ್ನು ದಾಖಲೆ ಮಾಡುವ ಬಹಳ ಮುಖ್ಯವಾದ ಉದ್ದೇಶದಿಂದ ನ್ಯಾಷನಲ್ ಫಿಲಂ ಆರ್ಕೈವ್ಸ್ ಆರಂಭವಾಯಿತು.

ಈ ಸರ್ಕಾರಿ ಸಂಸ್ಥೆಗಳು ನೀಡಿದ ಕೊಡುಗೆಗಳು ಬಹಳ ಮುಖ್ಯವಾದದ್ದು. 1969ರಲ್ಲಿ ಫಿಲಂ ಫೈನ್ಯಾನ್ಸ್ ಕಾರ್ಪೊರೇಷನ್ ನಿರ್ಮಿಸಿದ ಮೃಣಾಲ್ ಸೇನ್ ಅವರ 'ಬುವನ್ ಶೋಮ್' ಮತ್ತು ಮಣಿ ಕೌಲ್ ಅವರ 'ಉಸ್ಕಿ ರೋಟಿ' ಭಾರತದಲ್ಲಿ ಹೊಸ ಅಲೆ ಚಿತ್ರಗಳಿಗೆ ತೀವ್ರತೆಯನ್ನು ತಂದು ಕೊಟ್ಟವು. ಗಮನಿಸ ಬೇಕಾದ ಸಂಗತಿ ಎಂದರೆ ಕೌಲ್ ಪುಣೆ ಫಿಲಂ ಇನ್‌ಸ್ಟಿಟ್ಯೂಟ್‌ನ ವಿದ್ಯಾರ್ಥಿಯಾಗಿದ್ದವರು. ಇಲ್ಲಿಂದ ಮುಂದೆ ಭಾರತದಲ್ಲಿ ಕೌಲ್ ಮಾದರಿ ಚಿತ್ರಗಳು ವಿಶೇಷವಾಗಿ ಕಾಣಿಸಿ ಕೊಂಡವು. ಕುಮಾರ ಸಹಾನಿ, ಅಡೂರ್ ಗೋಪಾಲ ಕೃಷ್ಣನ್, ಗಿರೀಶ್ ಕಾಸರವಳ್ಳಿ ಮೊದಲಾದ ನಿರ್ದೇಶಕರು ಭಾರತೀಯ ಚಿತ್ರರಂಗದ ಸೀಮೆಯನ್ನು ವಿಸ್ತರಿಸಿದರು. ಇನ್ನೊಂದು ಕಡೆ ಚಿತ್ರ ಸಮಾಜಗಳು ಸದಭಿರುಚಿಯ ಪ್ರೇಕ್ಷಕರನ್ನು ರೂಪಿಸಿದವು. ಫಿಲಂ ಇನ್‌ಸ್ಟಿಟ್ಯೂಟ್ ಈಗ ಸೂಕ್ತ ತರಬೇತಿಯನ್ನು ನೀಡಿತು. ಹಿಂದೆ ಇಂತಹ ಅವಕಾಶಗಳು ಇರಲಿಲ್ಲ. ಫಿಲಂ ಫೈನ್ಯಾನ್ಸ್ ಕಾರ್ಪೊರೇಷನ್ ಅಂತಹ ಪ್ರಯತ್ನಗಳಿಗೆ ಅಗತ್ಯವಾದ ಬಂಡವಾಳವನ್ನು ಒದಗಿಸಿತು. ಈ ಮೂಲಕ ಫಿಲಂ ಇನ್‌ಸ್ಟಿಟ್ಯೂಟ್‌ನ ವಿದ್ಯಾರ್ಥಿಗಳು ಮಾತ್ರವಲ್ಲದೆ ಬೇರೆ ಪ್ರತಿಭಾವಂತರು ಕೂಡ ಕಲಾತ್ಮಕ ಚಿತ್ರಗಳನ್ನು ನಿರ್ಮಿಸುವುದು ಸಾಧ್ಯವಾಯಿತು.

ಈ ಮೂರರ ಮೂಲಕ ಪರಸ್ಪರ ಒಪ್ಪಂದವೇನೂ ಇಲ್ಲದಿದ್ದರೂ ಬಂಗಾಲಿ ಮತ್ತು ಹಿಂದಿ ಚಿತ್ರರಂಗಗಳು 1969ರ ನಂತರ ಬದಲಾವಣೆಯ ಕಡೆಗೆ ತುಡಿಯಲು ಆರಂಭಿಸಿದವು. ಅನೇಕ ಭಾಷೆಗಳಲ್ಲಿ ಬದಲಾವಣೆಯ ಗಾಳಿ ಬೀಸಲಾರಂಭಿಸಿತು. ಅಲ್ಲಿಯವರೆಗೂ ಅವು ಬಹುಮಟ್ಟಿಗೆ ವ್ಯಾಪಾರಿ ಸಾಧ್ಯತೆಗಳಿಗೇ ಸೀಮಿತವಾಗಿದ್ದವು.

ಮರಾಠಿ, ಕನ್ನಡ, ಮಲೆಯಾಳಂ, ಮಣಿಪುರಿ, ಅಸ್ಸಾಮಿ, ಒಡಿಯಾ ಭಾಷೆಗಳಲ್ಲಿ ಕೂಡ ವಿಭಿನ್ನ ಚಿತ್ರಗಳು ಕಾಣಿಸಿ ಕೊಂಡವು. ಅರಿಬಂ ಸ್ಯಾಮ್ ಶರ್ಮ ಅವರ 'ಇಮಾಗಿ ನಿಂಗತೆಂ' (1981) ಉದಾಹರಣೆಗೆ ಈಶಾನ್ಯ ರಾಜ್ಯಗಳಿಂದ ಬಂದು ಜಾಗತಿಕ ಮನ್ನಣೆಯನ್ನು ಪಡೆದು ಕೊಂಡಂತಹ ಮೊದಲ ಚಿತ್ರ ಎನ್ನಿಸಿ ಕೊಂಡಿತು. ಮುಂದಿನ ಎರಡು ದಶಕಗಳಲ್ಲಿ ಸಿನಿಮಾತ್ಮಕ ಅಭಿವ್ಯಕ್ತಿಯ ಕ್ರಮ ವಿಸ್ತಾರಗೊಂಡಿತು. ಇಲ್ಲಿ ಮೂಡಿ ಬಂದ ಅನೇಕ ಚಿತ್ರಗಳು ಜಾತಿ ಮತ್ತು ಗುರುತಿಸಿಕೊಳ್ಳುವಿಕೆಯ ರಾಜಕೀಯವನ್ನು ತೆರೆಯ ಮೇಲೆ ತಂದವು. ಇಂತಹ ಚಿತ್ರಗಳನ್ನು ಕಲಾತ್ಮಕ ಎಂದು ಕರೆದು ವೀಕ್ಷಕರ ಸಂಖ್ಯೆಯನ್ನು ಸೀಮಿತಗೊಳಿಸುವ ಪ್ರಯತ್ನಗಳು ನಡೆದರೂ ಅವುಗಳು ನೀಡಿದ ಕೊಡುಗೆ ಅಪಾರವಾದದ್ದು. 1980ರ ದಶಕ ತೆರೆಯ ಮೇಲೆ ಹಿಂಸಾಚಾರ (ಬಹುಮಟ್ಟಿಗೆ ಲೈಂಗಿಕತೆಗೆ ಸಂಬಂಧಿಸಿದಂತೆ) ಅನೇಕ ವ್ಯಾಪಾರಿ ಚಿತ್ರಗಳಲ್ಲಿ ಕಂಡಿತು.

1970ರ ದಶಕದ ಮಧ್ಯ ಭಾಗದಲ್ಲಿ ಜನಪ್ರಿಯ ಪ್ರಧಾನ ವಾಹಿನಿಯ ಚಿತ್ರಗಳು 'ಆಂಗ್ರಿ ಯಂಗ್ ಮ್ಯಾನ್' ಪರಿಕಲ್ಪನೆಯನ್ನು ತೆರೆಯ ಮೇಲೆ ತಂದವು. ತಾನು ಬಯಸಿದಂತೆ ನ್ಯಾಯವನ್ನು ಪಡೆಯುವ ನಾಯಕನನ್ನು ಅವು ಚಿತ್ರಿಸಿದವು. 'ಅಂಡರ್ ವರ್ಲ್ಡ್' 'ಗ್ಯಾಂಗ್ ಸ್ಟರ್' ನಂತರ ಪದಗಳು ಭಾರತೀಯ ಚಿತ್ರರಂಗದ ಪದಕೋಶದಲ್ಲಿ ಸೇರಿ ಕೊಂಡವು. ಮಿಸ್ಟರ್ ಇಂಡಿಯಾ (1987)ದ 'ಮೊಗ್ಯಾಂಬೊ ಖುಷ್ ಹುವಾ' ಸತ್ಯ (1988) ಚಿತ್ರದ 'ಮುಂಬೈ ಕಾ ಕಿಂಗ್ ಕೌನ್' ನಂತಹ ಸಂಭಾಷಣೆಗಳು ಜನಪ್ರಿಯಗೊಳ್ಳುವ ಮೂಲಕ ಭಾರತೀಯ ಪ್ರಧಾನ ವಾಹಿನಿ ಚಿತ್ರಗಳು ಕಲಾತ್ಮಕತೆಯಿಂದ ಅವಾಸ್ತವಿಕತೆಯ ಕಡೆಗೆ ಪ್ರಯಾಣವನ್ನು ಬೆಳೆಸಿದವು.

1950ರ ದಶಕದಲ್ಲಿ ಭಾರತೀಯ ಚಿತ್ರರಂಗ ಗ್ರಾಮೀಣ ಭಾಗಗಳಿಂದ ನಗರದ ಕಡೆಗೆ ವಲಸೆ ಹೋಗುವ ಅಪಾಯವನ್ನು ಪ್ರಧಾನವಾಗಿ ಚಿತ್ರಿಸಿದವು. ಭಾರತೀಯ ಚಿತ್ರಗಳು ಮಹಿಳೆಯರ ಸಮಸ್ಯೆಗಳಿಗೂ ಈ ದಶಕದಲ್ಲಿ ಪ್ರಾಮುಖ್ಯತೆಯನ್ನು ನೀಡಿದವು. ಸತ್ಯಜಿತ್ ರೇಯವರ 'ಮಹಾನಗರ್' (1963) ಉದ್ಯೋಗಸ್ಥ ಮಹಿಳೆಯ ಸಂಕಷ್ಟಗಳನ್ನು ಹೇಳಿದರೆ ಬಿಮಲ್ ರಾಯ್ ಅವರ ಸುಜಾತ (1959) ಮಹಿಳೆಯರ ಸಂಕಷ್ಟವನ್ನು ಹೇಳಿತು. ಉಂಬರ್ಥಾ (1982) ಸ್ವಪೋಷಿತ ಸಾವಿತ್ರಿಯ ಸಮಸ್ಯೆಗಳನ್ನು ಹೇಳಿದರೆ 'ಕ್ವೀನ್' (2014) ರಾಣಿಯರ ಸಮಸ್ಯೆಗಳನ್ನು ಹೇಳಿತು.

ದಿ ಎಲಿಫೆಂಟ್ ವಿಸ್ಪರ್ಸ್ (2022) 95ನೆಯ ಅಕಾಡಮಿ ಸ್ಪರ್ಧೆಯಲ್ಲಿ ಪ್ರಶಸ್ತಿಯನ್ನು ಪಡೆದ ಭಾರತದ ಮೊದಲ ಸಾಕ್ಷ್ಯಚಿತ್ರವಾಯಿತು. ಈ ಲೇಖನದಲ್ಲಿ ಸಾಕ್ಷ್ಯಚಿತ್ರಗಳು, ಕಿರುಚಿತ್ರಗಳು, ಅನಿಮೇಷನ್ ಮೊದಲಾದವುಗಳು ಭಾರತದಲ್ಲಿ ಸಾಧಿಸಿದ ಪ್ರಗತಿಯನ್ನು ಚಿತ್ರಿಸಲು ಸ್ಥಳಾವಕಾಶದಿಂದ ಸಾಧ್ಯವಾಗಿಲ್ಲ. ಹಲವು ದಶಕಗಳಿಂದ ಜಗತ್ತಿನಲ್ಲಿಯೇ ಅತಿ ಹೆಚ್ಚು ಚಿತ್ರಗಳನ್ನು ನಿರ್ಮಿಸುವ ಭಾರತದಂತಹ ದೇಶದ ಬಹು ವೈವಿಧ್ಯಮಯವಾದ ಭಾಷೆಗಳ, ಭೌಗೋಳಿಕ ನೆಲೆಗಳ ಬೆಳವಣಿಗೆಯನ್ನು ಈ ಲೇಖನದ ಮಿತಿಯಲ್ಲಿ ಗುರುತಿಸುವುದು ಕಷ್ಟವೇ.

ಕಳೆದ ಎಪ್ಪತ್ತೈದು ವರ್ಷಗಳಲ್ಲಿ ರಾಷ್ಟ್ರೀಯತೆಯನ್ನು ಬೆಳ್ಳಿತೆರೆಯಲ್ಲಿ ತರುವ ಪ್ರಯತ್ನವು ಗಮನಾರ್ಹವಾಗಿ ನಡೆದಿದೆ. ಸ್ವಾತಂತ್ರ್ಯಪೂರ್ವದಲ್ಲಿ ಕೂಡ ಇಂತಹ ಪ್ರಯತ್ನಗಳು ನಡೆದಿದ್ದನ್ನು ನಾವು ಗಮನಿಸ





ಬಹುದು. ಸ್ವಾತಂತ್ರ್ಯಾನಂತರ ಮದರ್ ಇಂಡಿಯಾ (1957) ವಿಕಾಸಗೊಳ್ಳುತ್ತಿರುವ ದೇಶದ ಅಭಿವೃದ್ಧಿ ಪ್ರಯತ್ನಗಳನ್ನು ಚಿತ್ರಿಸಿತು. ಹೊಸ ಶತಮಾನದ ಉದಯದೊಂದಿಗೆ ದೇಶಪ್ರೇಮವನ್ನು ಆಟಗಳ ಮೂಲಕ ಬಿಂಬಿಸುವ ಪ್ರಯತ್ನಗಳೂ ನಡೆದವು. ಪ್ಯಾನ್ ಇಂಡಿಯಾ ಪ್ರೇಕ್ಷಕರನ್ನು ಗಮನದಲ್ಲಿರಿಸಿದ ಲಗಾನ್ (2001) ಚಕ್ ದೆ! ಇಂಡಿಯಾ (2007) ಪ್ರಮುಖ ಕ್ರೀಡಾಪಟುಗಳ ಜೀವನವನ್ನು ಆಧರಿಸಿ ಮಾಡಿದ ಮಹತ್ವದ ಪ್ರಯತ್ನಗಳಾಗಿದ್ದವು.



Scanned with ACE Scanner

# ಪರೋಕ್ಷ ತೆರಿಗೆಯ ಅತಿ ದೊಡ್ಡ ಭಾಗ ಜಿಎಸ್‌ಟಿ

* ರಾಜಾ ಶೈಲೇಶ್‌ಚಂದ್ರ ಗುಪ್ತ



ಸರಕು ಮತ್ತು ಸೇವಾ ತೆರಿಗೆ ಪದ್ಧತಿ ಜಾರಿಗೆ ಬಂದು ಆರು ವರ್ಷಗಳಾಗಿವೆ. ಸಂಕ್ಷಿಪ್ತವಾಗಿ 'ಜಿಎಸ್‌ಟಿ' ಎಂಬುದು ಪ್ರತಿ ಗ್ರಾಹಕನ ನಾಲಿಗೆ ಮೇಲೆ, ಪ್ರತಿಯೊಂದು ವ್ಯವಹಾರದಲ್ಲೂ, ಮತ್ತೆ ಮತ್ತೆ ನಲಿದಾಡುತ್ತದೆ.

ಕೇಂದ್ರ ಮತ್ತು ರಾಜ್ಯಗಳ ಸರ್ಕಾರಗಳು ಈ ತೆರಿಗೆ ಪದ್ಧತಿಯನ್ನು ಜಾರಿಗೆ ತರುವಲ್ಲಿ ಪರಸ್ಪರ ಹೊಂದಿಕೊಂಡಿರುವ ಅಂಶವು ಸರ್ವಥಾ ವೇದ್ಯವಾಗಿದೆ.

ಸರ್ಕಾರಗಳು ಮನಗಂಡಿರುವ ಪ್ರಕಾರ ಜಿಎಸ್‌ಟಿ ಪದ್ಧತಿಯೂ ಅಧಿಕಾಧಿಕ ವರಮಾನ ತಂದುಕೊಡುವ ಪರೋಕ್ಷ ತೆರಿಗೆ ಆಗಿದೆ. ಜಿಎಸ್‌ಟಿ ರೂಪದಲ್ಲಿ ಸಂಗ್ರಹವಾದ ತಿಂಗಳ ವರಮಾನವು ಇದೀಗ ಒಂದೂವರೆ ಲಕ್ಷ ಕೋಟಿ ರೂಪಾಯಿ ಗೆರೆ ದಾಟಿದೆ. ಮೊಟ್ಟ ಮೊದಲಿಗೆ ಒಂದು ಲಕ್ಷ ಕೋಟಿ ರೂಪಾಯಿ ಆದ ಸಂದರ್ಭದಲ್ಲಿ ಭಾರೀ ಪ್ರಮಾಣದಲ್ಲಿ ಸಂಭ್ರಮಪಟ್ಟದ್ದಾಯಿತು. ಮುಂದಿನ ಒಂದು ಸಂದರ್ಭದಲ್ಲಿ ಎರಡು ಲಕ್ಷ ರೂಪಾಯಿ ತಿಂಗಳ ವರಮಾನ ಎನಿಸಿಕೊಂಡಾಗ, ಜಿಎಸ್‌ಟಿಯೇ ದೇಶದ ಪಾಲಿಗೆ ಒಂದು ಅನಿವಾರ್ಯ ಸಂಪನ್ಮೂಲವಾಗಿ ಪರಿಣಮಿಸಲಿದೆ.

**ಭಾರೀ ಭರವಸೆಯನ್ನು ಹುಟ್ಟಿಸಿರುವ ಜಿಎಸ್‌ಟಿ ಕಾನೂನು ಜಾರಿಯು ಭವಿಷ್ಯದಲ್ಲಿ ಕೂಡಾ ದೂರಗಾಮಿ ಪರಿಣಾಮ ಉಂಟು ಮಾಡುವುದಂತೂ ನಿಶ್ಚಿತ.**

**ಮುಂದೆ ಜಿಎಸ್‌ಟಿ ಅನುಭವದ ಹಿನ್ನೆಲೆಯಲ್ಲಿ ಪ್ರತ್ಯಕ್ಷ ತೆರಿಗೆ (ವರಮಾನ ತೆರಿಗೆ ಇತ್ಯಾದಿ) ಸುಧಾರಣಾ ಕ್ರಮಗಳನ್ನು ರೂಪಿಸುವುದು ಸುಲಭವೆನಿಸಲಿಕ್ಕೂ ಸಾಕು. ಆದರೆ ಜಿಎಸ್‌ಟಿ ಪದ್ಧತಿಯ ಅಗಾಧತೆ ಮಾತ್ರ ಅಪರೂಪ.**

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಪ್ರತಿನಿಧಿಗಳಿಂದ ಆದ ಜಿಎಸ್‌ಟಿ ಪರಿಷತ್ತು ಸದಾ ಕೇಂದ್ರ ಅರ್ಥ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಸೇರುತ್ತದೆ. ರಾಜ್ಯಗಳ ಅರ್ಥ ಸಚಿವರು ಅಥವಾ ಅವರ ಪ್ರತಿನಿಧಿಗಳು ತಂತಮ್ಮ ರಾಜ್ಯಗಳನ್ನು ಪ್ರತಿನಿಧಿಸುತ್ತಾರೆ. ಜಿಎಸ್‌ಟಿ ಕುರಿತ ಸಮಸ್ತ ವಿಷಯಗಳೂ ಈ ಪರಿಷತ್ತಿನ ಕಲಾಪಗಳಲ್ಲಿ ಪ್ರತಿಧ್ವನಿಸುತ್ತವೆ. ಕೇಂದ್ರ ಮತ್ತು ರಾಜ್ಯಗಳ ಪಾಲಿಗೆ ವರಮಾನ ತರುವ ಬಾಬ್ತು ಜಿಎಸ್‌ಟಿ ಆಗಿರುವುದರಿಂದ ಎಲ್ಲರೂ ವ್ಯಾವಹಾರಿಕವೆನಿಸುವ ದಾಟಿಯಲ್ಲಿ ಚರ್ಚಿಸುತ್ತಾರೆ. ಸಮನ್ವಯ ಸಾಧಿಸುವುದಕ್ಕೆ ಅಡ್ಡಿಯೇನೂ ಕಾಣಿಸುತ್ತಿಲ್ಲ.

ಜಿಎಸ್‌ಟಿ ಜಾರಿಕುರಿತಂತೆ ಇನ್ನೂ ಕಗ್ಗಂಟಾಗಿರುವ ಅಂಶಗಳ ಇತ್ಯರ್ಥಕ್ಕೆ ಟ್ರಿಬ್ಯುನಲ್‌ಗಳನ್ನು (ಮೇಲ್ಮನವಿ ವಿಚಾರಣಾ ಪಂಚಾಯಿತಿಗಳನ್ನು) ರಚಿಸುವುದಕ್ಕೆ ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಇತ್ತೀಚಿನ ಸಂಪುಟ ಸಭೆಯಲ್ಲಿ ಅವುಗಳ ರಚನೆ ಹೇಗಿರಬೇಕು ಎಂಬುದೂ, ಸರ್ಕಾರಗಳ ಪ್ರಾತಿನಿಧ್ಯ ಯಾವ ರೀತಿ ಇರುತ್ತದೆ ಎಂಬುದೂ ನಿರ್ಣಯಗೊಂಡಿದೆ. ಇದು ಒಂದು ತಾಜಾ ಬೆಳವಣಿಗೆ.

ಜಿಎಸ್‌ಟಿ ಜಾರಿಯು ವಿವಾದಾತ್ಮಕ ಆಗದಂತೆ ನೋಡಿಕೊಳ್ಳಲು ಕೇಂದ್ರ ಮತ್ತು ರಾಜ್ಯಗಳ ಸರ್ಕಾರಗಳು ಎಚ್ಚರಿಕೆ ವಹಿಸಿವೆ ಎಂಬುದು ಇದರಿಂದ ವೇದ್ಯವಾಗುತ್ತದೆ.

ಜಿಎಸ್‌ಟಿಯ ಪಾಲಿಗೆ ತಂತ್ರಜ್ಞಾನವು ಹೆಚ್ಚು ಹೆಚ್ಚಾಗಿ ಉಪಯೋಗಕ್ಕೆ ಬರುತ್ತಿರುವುದು ಇನ್ನೊಂದು ಬೆಳವಣಿಗೆ. ಈಚಿನ ತಿಂಗಳುಗಳಲ್ಲಿ ಎಲೆಕ್ಟ್ರಾನಿಕ್ ಇನ್‌ವಾಯ್ಸ್ (ಇ–ಇನ್‌ವಾಯ್ಸ್) ಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗಿದೆ.

* ಹಿರಿಯ ಪತ್ರಕರ್ತರು, ಬೆಂಗಳೂರು.



Scanned with ACE Scanner


ಕಾರ್ಯಾಚರಣೆಗಳು ದಕ್ಷತೆ ಸಾಧಿಸಲು ಅವಕಾಶವಾಗಿವೆ.

ಉದಾಹರಣೆಗೆ, ಮುಂದಿನ ಅವಧಿಗಳಲ್ಲಿ ಎಷ್ಟು ತೆರಿಗೆ ಹಣ ಸಂಗ್ರಹಿಸಲು ಸಾಧ್ಯ ಎಂದು ನಿರ್ಣಯಿಸುವ ಮುನ್ನ ಅಂದಾಜು ಮಾಡುವ ರಿಟರ್ನ್ಸ್ ಏನನ್ನು ಕಳುಹಿಸುತ್ತಾರೋ, ಆ ಕಾರ್ಯಾಚರಣೆಯಲ್ಲಿ ಅಧಿಕಾರಿ ವರ್ಗಕ್ಕೆ ಹೆಚ್ಚು ಪಾತ್ರ ಇಲ್ಲದಂತೆ ಮಾಡಲಾಗುವುದು, ಇದಕ್ಕೆ ಇ-ಇನ್‌ವಾಯ್ಸ್‌ಗಳು ಹೆಚ್ಚು ಹೆಚ್ಚಾಗಿ ನೆರವಾಗುತ್ತವೆ. ಇದು ತಂತ್ರಜ್ಞಾನದ ಕೊಡುಗೆ. ಇಂಥ ಕ್ರಮಗಳಿಂದಾಗಿ ಕೇಂದ್ರ ಸರ್ಕಾರವೂ ರಾಜ್ಯಗಳ ಸರ್ಕಾರಗಳೂ ಪರಸ್ಪರ ಏಕೀಭವಿಸುವುದಕ್ಕೆ ಸುಲಭವಾಗುತ್ತದೆ.

**ಕಲಿತ ಪಾಠ ಅನೇಕ**

ತೆರಿಗೆ ಕಾನೂನು ಜಾರಿ ಬಗೆಗೆ ಕಳೆದ ಆರು ವರ್ಷಗಳಲ್ಲಿ ಕಲಿತಿರುವ ಪಾಠಗಳು ಅನೇಕ. ಎಷ್ಟೇ ಬಗೆಯಲ್ಲಿ ಬಿಗಿಯಾದ ಕ್ರಮಗಳನ್ನು ರೂಪಿಸಿದ್ದರೂ ತೆರಿಗೆ ಹಾರಿಸುವವರು ಇದ್ದೇ ಇರುತ್ತಾರೆ. ಹೊಸ ಕ್ರಮಗಳ ದುರ್ಬಳಕೆ ತಪ್ಪುವುದೇ ಇಲ್ಲ. ತೆರಿಗೆ ಹಾರಿಸುವವರನ್ನು ಪತ್ತೆ ಹಚ್ಚಲು ಕಾನೂನಿನ ಚೌಕಟ್ಟಿನ ಒಳಗೇ ಯಾವ ಯಾವ ಚರ್ಯೆ ಕೈಗೊಳ್ಳಬೇಕೆಂದು ತವಕಿಸುತ್ತಾ ತೆರಿಗೆ ಅಧಿಕಾರಿಗಳು ಸದಾ ಕಾರ್ಯ ಮಗ್ನರಾಗಿರುತ್ತಾರೆ.

ವಾಸ್ತವವಾಗಿ ತೆರಿಗೆದಾರರಿಗೆ ರಿಟರ್ನ್ಸ್ ಫೈಲ್ ಮಾಡುವುದರಿಂದ ಹಿಡಿದು ಸಾಧ್ಯವಾದ ಎಲ್ಲ ವಿವರ ತುಂಬುವಲ್ಲಿ ಹಾಗೂ ಸೂಕ್ತ ದಸ್ತಾವೇಜುಗಳ ಮೂಲಕ ವ್ಯವಹಾರವನ್ನು ವಿಶದ ಪಡಿಸುವ ತನಕ, ಚಾರ್ಟರ್ಡ್ ಲೆಕ್ಕಿಗರು ತೆರಿಗೆದಾರರಿಗೆ ನೆರವಾಗುತ್ತಾ ಇರುತ್ತಾರೆ. ಇವರನ್ನು ತೆರಿಗೆ ಅಧಿಕಾರಿಗಳು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾರೆ. ಜಿಎಸ್‌ಟಿ ಪದ್ಧತಿ ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ವಾಣಿಜ್ಯ ತೆರಿಗೆ ವ್ಯವಹಾರಗಳಲ್ಲಿ ಕೂಡಾ ಇದೇ ಲೆಕ್ಕಗರು ಇಲಾಖೆಯ ಸುಗಮ ಕಾರ್ಯಾಚರಣೆಗಳಿಗೆ ನೆರವಾಗುತ್ತಿದ್ದರು. ತೆರಿಗೆ ಸೋರಿಕೆ ತಡೆಯಲು ಕೂಡಾ ನೆರವಾಗುತ್ತಿದ್ದರು. (ಇವರನ್ನು ತೆರಿಗೆದಾರರು 'ಆಡಿಟರ್‌ಗಳು' ಎಂದಷ್ಟೇ ಸಂಬೋಧಿಸುತ್ತಾರೆ. ಕಾನೂನು ಪಾಲನೆ ಹೇಗೆಂಬುದನ್ನು ತಿಳಿದುಕೊಳ್ಳಲು ತೆರಿಗೆದಾರರು ಇವರನ್ನು ಅವಲಂಬಿಸುತ್ತಾರೆ.




ಜಿಎಸ್‌ಟಿ ಜಾರಿಗೆ ಬಂದ ಮೇಲೆ ಕೂಡಾ ಚಾರ್ಟರ್ಡ್ ಲೆಕ್ಕಿಗರ ಅದೇ ಪಾತ್ರ ಮುಂದುವರೆದಿದೆ. ಸರ್ಕಾರದ ಬೊಕ್ಕಸಕ್ಕೆ ಅಧಿಕಾಧಿಕ ವರಮಾನ ಹರಿದು ಬರಲು ಈ ಲೆಕ್ಕಿಗರು ಸದಾ ಶ್ರಮಿಸುತ್ತಾರೆ. ಇಷ್ಟಾದರೂ ತೆರಿಗೆ ಸೋರಿಕೆ ಇದ್ದೇ ಇರುತ್ತದೆ.

**ತೆರಿಗೆಗಳ್ಳತನದ ಪಿಡುಗು**

ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಕುರಿತ ಕೇಂದ್ರ ಮಂಡಲಿಯ ಅಧ್ಯಕ್ಷರಾದ ಶ್ರೀ ವಿವೇಕ್ ಜೋಶಿ ಅವರ ಪ್ರಕಾರ ತೆರಿಗೆ ಹಾರಿಸುವ ಉದ್ದೇಶ ಹೊಂದಿರುವ 60 ಸಹಸ್ರ ಪ್ರಕರಣಗಳು ಪತ್ತೆ ಆಗಿವೆ. ಅವುಗಳಲ್ಲಿ 50 ಸಹಸ್ರ ಪ್ರಕರಣಗಳಲ್ಲಿ ತೆರಿಗೆದಾರರು ಖಚಿತವಾಗಿ ಯತ್ನಿಸಿದ್ದಾರೆ ಎಂಬುವುದನ್ನು ತೆರಿಗೆ ಅಧಿಕಾರಿಗಳು ಮನಗಂಡಿದ್ದಾರೆ.

ಸಂಶಯ ನಿವಾರಣೆಗಾಗಿ ತೆರಿಗೆ ಅಧಿಕಾರಿಗಳು ತೀವ್ರಶೋಧ ನಡೆಸಿದಾಗ ಇಷ್ಟು ಸಂಖ್ಯೆಯ ತೆರಿಗೆದಾರರ ಬಣ್ಣ ಬಯಲಾಗಿದೆ. ಇವರೆಲ್ಲರೂ ತಂತಮ್ಮ ವ್ಯವಹಾರದ ವಿವಿಧ ಹಂತಗಳಲ್ಲಿ, 'ಕ್ರಮಬದ್ಧ' ಎಂದೇ, ನಿರೂಪಿಸಲು ಸಾಧ್ಯವಾಗುವಂಥ ಲೆಕ್ಕ ವಿವರಗಳನ್ನು ಸಲ್ಲಿಸಿರುವವರೇ ಆಗಿರುತ್ತಾರೆ. ಆದರೆ ವಿವರಗಳು ಮಾತ್ರ ಬೋಗಸ್ ಎಂದು ಗೊತ್ತಾಗಿದೆ.

ಶೋಧ ಕಾರ್ಯವನ್ನು ಇನ್ನಷ್ಟು ಬಿಗಿಗೊಳಿಸಿ ನೋಡಿದಾಗ ಈ ಗುಂಪಿನ ಶೇಕಡಾ 25 ರಷ್ಟಾದರೂ ತೆರಿಗೆದಾರರು ಬೋಗಸ್ ವಿವರಗಳನ್ನು ಸಲ್ಲಿಸಿದ್ದಾರೆ ಎಂಬುದು ದೃಢಪಟ್ಟಿತು.

ಹೀಗೆ ಮಾಡುವವರ ಜಾಡು ಹಿಡಿದು ಅಧಿಕಾರಿಗಳು ಪರಿಶೀಲಿಸಿದಾಗ ಈ ಕೃತ್ಯ ಎಸಗಿದವರು ಯಾರೆಂಬ ಕುತೂಹಲಕ್ಕೆ ಎಣೆಯೇ ಇರಲಿಲ್ಲ. ಅವರು ಸಂಶಯಾಸ್ಪದ ತೆರಿಗೆದಾರರ ಆಧಾರ್ ನಂಬರ್‌ಗಳನ್ನು ಸಹಾ ಕಲೆ ಹಾಕಿ ವಿಚಾರಣೆ ನಡೆಸಿದ್ದುಂಟು. ಶೋಧ ಮುಂದುವರೆಸಿದಾಗ ನೂರಾರು, ಸಾವಿರಾರು ಪ್ರಕರಣಗಳು ಬೆಳಕಿಗೆ ಬರತೊಡಗಿದುವು.

ಇಷ್ಟೊಂದು ದೊಡ್ಡ ಸಂಖ್ಯೆಯ ಮೋಸದ ಕೃತ್ಯಕ್ಕೆ ಕುಮ್ಮಕ್ಕು ಕೊಡುತ್ತಿರುವವರಾದರೂ ಯಾರು?

ಎಲ್ಲ ಪ್ರಕರಣಗಳಲ್ಲಿ ಅಲ್ಲವಾದರೂ ಬಹುತೇಕ ಪ್ರಕರಣಗಳಲ್ಲಿ ಇನ್‌ಪುಟ್ ಕ್ರೆಡಿಟ್‌ಗೆ ಸಂಬಂಧಿಸಿದ್ದವೇ ಆಗಿದ್ದುವು. ಆದ್ದರಿಂದ ತೆರಿಗೆ ತಜ್ಞತೆ ಹೊಂದಿರುವವರೇ ಅಕೃತ್ಯಕ್ಕೆ ನೆರವಾಗುತ್ತಿದ್ದಾರೆ ಎಂದಾಯಿತು.

ತಮಗೆ ಹಿಂದಿನ ಹಂತದಲ್ಲಿದ್ದ ವ್ಯವಹಾರಸ್ಥರು ಬಳಸಿದರೆನ್ನಲಾದ ಸರಕು ಮತ್ತು ಸೇವೆ ಬಾಬ್ತು ಸರ್ಕಾರಕ್ಕೆ ಸಲ್ಲಿಸಬೇಕಾದ ತೆರಿಗೆ ಹಣವನ್ನು ತಾವು ವಹಿಸಿಕೊಂಡು, ಮುಂದಿನ ಹಂತಕ್ಕೆ ದಾಟುವಾಗ ಪಾವತಿ ಮಾಡಿರುವುದಾಗಿಯೂ; ಸರ್ಕಾರಕ್ಕೆ ಸಂದಾಯವಾದ ಹಣವು ತಾವು ತೆರಬೇಕಾದುದೇ ಅಲ್ಲ ಆಗಿತ್ತು. ಅದನ್ನು



Scanned with ACE Scanner




ಈಗ ಹಿಂದಕ್ಕೆ ಪಾವತಿ ಮಾಡಲಿ ಎಂಬುದು ಕ್ಲೇಮು.

ಇಂಥ ಕ್ಲೇಮುಗಳನ್ನೆಲ್ಲ ಬೋಗಸ್ ಎಂಬುದು ಗೊತ್ತಿಲ್ಲದೆ ಸರ್ಕಾರ ಒಪ್ಪಿಕೊಂಡಿದ್ದರೆ ಒಟ್ಟು 25 ಸಾವಿರ ಕೋಟಿ ರೂಪಾಯಿ ಹಣವನ್ನು ತುಂಬಿಕೊಡಬೇಕಾಗುತ್ತಿತ್ತು! ಅಷ್ಟು ದೊಡ್ಡ ಅಪಾಯ ತಪ್ಪಿತು.

ಸಣ್ಣದಾದ ಹಾಗೂ ಪ್ರಾಯೋಗಿಕ ಎನ್ನಲಾದ ಸೀಮಿತ ಪ್ರಮಾಣದ ಶೋಧ ತಂಡವು ಈಚಿನ ಕೆಲವು ತಿಂಗಳ ಅವಧಿಯಲ್ಲಿ ನಡೆಸಿದ ವ್ಯವಹಾರಗಳನ್ನಷ್ಟೇ ಹೆಕ್ಕಿಕೊಂಡಿತು. ಪೈಲಟ್ ಪ್ರಾಜೆಕ್ಟ್ ಸ್ವರೂಪದ ಕಾರ್ಯಾಚರಣೆ ನಡೆಸಿದಾಗ ಬೆಳಕಿಗೆ ಬಂದ ಅಂಶವಿದು.

ವಿಚಾರಿಸುತ್ತಲೇ ಹೋದಂತೆ ದಿಗ್ಭ್ರಾಂತಿ ಉಂಟು ಮಾಡುವ ಹಾಗೆ ಹೊರ ಬಂದ ಸಂಗತಿ ಎಂದರೆ, ಸುಮಾರು 300 ಹೊರಗಿನ ಸಿಂಡಿಕೇಟ್‌ಗಳು ದೇಶದಲ್ಲಿ ಈ ಬಗೆಯ ಕೃತ್ಯಕ್ಕೆ ಕಾರಣವಾಗಿವೆ.

ತೆರಿಗೆ ವ್ಯವಸ್ಥೆ ಚೌಕಟ್ಟಿನೊಳಗೇ ಇಂಥ ಪರಿಸ್ಥಿತಿ ಇದೆ ಎಂದಾದರೆ ತೆರಿಗೆ ಹಣ ಸೋರಿಕೆ ಈಗಾಗಲೇ ಅವ್ಯಾಹಕವಾಗಿ ನಡೆದಿರಬಹುದು ಎಂಬ ಅನುಮಾನ ಬರುತ್ತದೆ. ತೆರಿಗೆ ವ್ಯವಸ್ಥೆ ಸುಧಾರಿಸುವಂತೆ ಮಾಡುವುದು ಅಗಾಧವಾದ ಕೆಲಸವೇ ಸರಿ.

ಕೇಂದ್ರ ಸರ್ಕಾರದ ಮಟ್ಟದಲ್ಲಿ ಮಾತ್ರವಲ್ಲದೆ ರಾಜ್ಯಗಳು ಸಹಾ ತಂತಮ್ಮ ವ್ಯಾಪ್ತಿಯಲ್ಲಿ ಸೋರಿಕೆ ವಿರುದ್ಧ ಬಿಗಿ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ

ಕರ್ನಾಟಕ ಸರ್ಕಾರವು ತೆರಿಗೆ ಹಾರಿಕೆ ತಡೆಗಟ್ಟಲು ಎಲ್ಲ ಕ್ರಮ ಕೈಗೊಳ್ಳಲು ಬದ್ಧವಾಗಿದೆ ಎಂದು ಹೇಳಿದೆ.

ಕೇಂದ್ರ ಅರ್ಥ ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ವಾಸ್ತವವಾಗಿ ಜಿಎಸ್‌ಟಿ ಪರಿಷತ್ತಿನ ಅಧ್ಯಕ್ಷರೂ ಆಗಿರುತ್ತಾರೆ. ಇತರ ರಾಜ್ಯಗಳು ಸಹಾ ತೆರಿಗೆ ಸೋರಿಕೆ ವಿರುದ್ಧ ಸಜ್ಜಾಗುವಂತೆ ಅವರು ನೋಡಿಕೊಳ್ಳುತ್ತಾರೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

**ಟ್ರಿಬ್ಯುನಲ್‌ಗಳ ರಚನೆ**

ಪರಿಷತ್ ಮೂಲಕ ರಾಜ್ಯಗಳು ಸಹಾ ಶ್ರಮಿಸುವಂತೆ ಮಾಡುವುದೇ ಅಲ್ಲದೇ, ಕೇಂದ್ರ – ರಾಜ್ಯಗಳ ನಡುವಣ ವಿವಾದಗಳ ಶೀಘ್ರ ಇತ್ಯರ್ಥಕ್ಕೆ ನೆರವಾಗಬಲ್ಲ ಟ್ರಿಬ್ಯುನಲ್‌ಗಳನ್ನು ರಚಿಸಲು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಟ್ರಿಬ್ಯುನಲ್‌ಗಳು ಇನ್ನು ನಾಲ್ಕು ಅಥವಾ ಆರು ತಿಂಗಳ ಒಳಗೆ ಕಾರ್ಯಾರಂಭ ಮಾಡಲು ವ್ಯವಸ್ಥೆ ಆಗಿದೆ. ದೇಶದ ವಿವಿಧೆಡೆ ಐವತ್ತು ಟ್ರಿಬ್ಯುನಲ್ ಪೀಠಗಳನ್ನು ರಚಿಸಬೇಕೆಂದು ರಾಜ್ಯಗಳು ಕೇಳಿವೆ. ಹಂತಹಂತವಾಗಿ ಆ ದಿಸೆಯಲ್ಲಿ ಕೇಂದ್ರ ಕಾರ್ಯಪ್ರವೃತ್ತವಾಗುವುದಕ್ಕೆ ಸಾಧ್ಯವಿದೆ. ಆರಂಭಕ್ಕೆ ರಾಜ್ಯಗಳ ರಾಜಧಾನಿಗಳಲ್ಲಿ ಮಾತ್ರವಲ್ಲದೆ ಹೈಕೋರ್ಟ್ ಪೀಠಗಳು ಇರುವ ನಗರಗಳಲ್ಲಿ ಟ್ರಿಬ್ಯುನಲ್‌ಗಳನ್ನು ರಚಿಸಲು ತೀರ್ಮಾನವಾಗಿದೆ.

ಈಚಿನ ವರ್ಷಗಳಲ್ಲಿ ಜಿಎಸ್‌ಟಿ ವ್ಯಾಜ್ಯಗಳನ್ನು ಕೋರ್ಟ್‌ಗಳಿಗೆ ಒಯ್ಯುವುದು ಜಾಸ್ತಿಯಾಗಿದೆ. ಪ್ರಕರಣಗಳು ಹೆಚ್ಚಾಗಿ ತೀರ್ಪು ಬರುವುದು ನಿಧಾನವಾಗುತ್ತಿದೆ. ಈ ದೃಷ್ಟಿಯಿಂದ ಕೂಡಾ ಟ್ರಿಬ್ಯುನಲ್ ಹಂತದಲ್ಲೇ ವಿವಾದಗಳು ಇತ್ಯರ್ಥಗೊಳ್ಳುವುದು ಹೆಚ್ಚಬೇಕೆಂಬ ಅಭಿಪ್ರಾಯ ಜನಜನಿತವಾಗಿದೆ.

ತೆರಿಗೆದಾರರಿಗೆ ಅನುಕೂಲವಾಗುವಂತೆ ತೆರಿಗೆ ದರಗಳನ್ನು ಗೊಂಚಲಿಸಿ ಇಡುವ ಸ್ಲ್ಯಾಬುಗಳು ಇರುತ್ತವಷ್ಟೆ; ಇವುಗಳ ಸಂಖ್ಯೆ ಹೆಚ್ಚಾಗಿದೆ ಎಂಬ ಅನಿಸಿಕೆಯೂ ವ್ಯಾಪಕವಾಗಿ ಇರುವುದುಂಟು. ಚಾಲ್ತಿ ಇರುವ ಎಲ್ಲಾ ತೆರಿಗೆ ದರಗಳು ಕೆಲವೇ ಸ್ಲ್ಯಾಬುಗಳಾಗಿ ವಿಂಗಡಗೊಂಡಿರುತ್ತದೆ. ಜಟಿಲತೆ ಕಡಿಮೆ ಇರುತ್ತದೆ ಎಂಬುದು ನಿಜ.

ವಿಧ ವಿಧ ಸರಕು ಮತ್ತು ಸೇವೆಗಳು ಲಭ್ಯವಿರುವುದರಿಂದ ತೆರಿಗೆ ವಿಧಿಸುವ ದರಗಳು ಸಹಾ ಬಗೆ ಬಗೆ ಇವೆ. ಸ್ಲ್ಯಾಬುಗಳ ಸಂಖ್ಯೆ ಕಡಿಮೆ ಆಗುವುದರ ಜೊತೆಗೆ ತೆರಿಗೆ ದರಗಳ ವೈವಿಧ್ಯವೂ ಕಡಿಮೆ ಆಗಬೇಕೆಂದು ವಾಣಿಜ್ಯೋದ್ಯಮ ಸಂಘಗಳು ಒತ್ತಾಯಿಸುತ್ತಲೇ ಇವೆ.

ಜಿಎಸ್‌ಟಿ ಮೂಲಕ ವರಮಾನವನ್ನು ಸತತವಾಗಿ ಹೆಚ್ಚಿಸಿಕೊಳ್ಳುತ್ತಾ ಹೋಗುವುದಕ್ಕೆ ಸಾಧ್ಯವಿದೆ ಎಂದು ಈಚಿನ ವರ್ಷಗಳಲ್ಲಿ ದೃಢಪಟ್ಟಿದೆ. ಆದರೆ ಮುಂಚೆ ಅಂದುಕೊಂಡ ವೇಗದಲ್ಲಿ ವರಮಾನ ವೃದ್ಧಿಸುತ್ತಿಲ್ಲ ಎಂಬುದು ಸಹಾ ನಿಜ.

2022–23ರ ಸಾಲಿನಲ್ಲಿ ದೇಶದ ಒಟ್ಟಾರೆ ಜಿಡಿಪಿಯ ಶೇಕಡಾ 6.65ರಷ್ಟು ವರಮಾನ ಗಳಿಕೆ ಜಿಎಸ್‌ಟಿ ಮೂಲಕ ಸಾಧ್ಯವಾಗಬೇಕು ಎಂಬ ಗುರಿ ಇತ್ತು. ಆದರೆ ಆ ಗುರಿಮುಟ್ಟಲು ಸಾಧ್ಯವಾಗಲಿಲ್ಲ. ಆದರೆ ಜಿಡಿಪಿ ಶೇಕಡಾ 6.3 ರಷ್ಟು ಸನಿಹಕ್ಕೆ ಬಂದಿರುವುದು ಸಮಾಧಾನಕರ.

ವಾಸ್ತವವಾಗಿ ಈ ರೀತಿ ಶೇ. 6.3 ರಷ್ಟು ಸಂಗ್ರಹಿಸುವುದಕ್ಕೆ ಹಿಂದಿನ 2016–17ರ ಸಾಲಿನಲ್ಲೇ ಸಾಧ್ಯವಾಗಿತ್ತು.

ಸ್ಲ್ಯಾಬುಗಳು ಮತ್ತು ತೆರಿಗೆ ದರಗಳ ಸಂಬಂಧ ಸುಧಾರಣೆ ಸಾಧ್ಯವಾದರೆ ತೆರಿಗೆ ಹಣ ಸಂಗ್ರಹ ಸುಲಭವಾಗಲು ಶಕ್ಯವಿದೆ.

ಈ ಸಂಬಂಧ ಇರುವ ಜಟಿಲತೆ ತಪ್ಪಿಸಲು ಜಿಎಸ್‌ಟಿ ಪರಿಷತ್ತಿನ ಮಟ್ಟದಲ್ಲಿ ಸಾಧ್ಯವಾಗುತ್ತಿಲ್ಲ. ಆದರೆ ಈ ತೆರಿಗೆಯ ವ್ಯಾಪ್ತಿಗೆ ಹೊಸ ಹೊಸ ಸರಕು ಮತ್ತು ಸೇವೆಗಳನ್ನು ತರುವುದಕ್ಕೆ ಸರ್ಕಾರಗಳು ಉತ್ಸಾಹ ತೋರಿಸುತ್ತಿವೆ.

ಉದಾಹರಣೆಗೆ ಆನ್‌ಲೈನ್ ಕ್ರೀಡೆಗಳು, ಕ್ಯಾಸಿನೋಗಳು ಕುದುರೆ ರೇಸ್ ಬೆಟಿಂಗ್ ಇವುಗಳ ಮೇಲೆ ಜಿಎಸ್‌ಟಿ ವಿಧಿಸಲು ಪರಿಷತ್ತು ಈಚೆಗೆ ನಿರ್ಧರಿಸಿತು. ಅದೇ ವೇಳೆ ಸಿನಿಮಾ ಮಂದಿರಗಳು ಮತ್ತು ಮಲ್ಟಿಪ್ಲೆಕ್ಸ್‌ಗಳಲ್ಲಿ ಆಹಾರ ಮತ್ತು ಪೇಯಗಳ ಮೇಲಿನ ಶೇ. 18 ರ ತೆರಿಗೆಯನ್ನು ಶೇ. 5ಕ್ಕೆ ಇಳಿಸಿತು. ಉಪಗ್ರಹ ಉಡಾವಣೆ ಸೇವಾ ಸೌಲಭ್ಯ ಒದಗಿಸುವ ಕಂಪೆನಿಗಳಿಗೆ ಜಿಎಸ್‌ಟಿ ಯಿಂದ ವಿನಾಯ್ತಿ ನೀಡಲಾಯಿತು.

ಆನ್‌ಲೈನ್ ಕ್ರೀಡೆ, ಕ್ಯಾಸಿನೋ ಮತ್ತು ಕುದುರೆ ಓಟದ ಜೆಟ್‌ಗಳ ಮೇಲೆ ಶೇ. 28 ತೆರಿಗೆ ವಿಧಿಸುವುದು ಹೆಚ್ಚೆಂಬ ಕೂಗು ಎದ್ದುದುಂಟು.



Scanned with ACE Scanner

ಗೋವಾ ಮತ್ತು ಸಿಕ್ಕಿಂಗಳಲ್ಲಿ ಸರ್ಕಾರಗಳು ಕ್ಯಾಸಿನೋಗಳ ಪ್ರವಾಸೋದ್ಯಮದಿಂದ ಸಂಪನ್ಮೂಲ ಸಂಗ್ರಹಿಸುವುದು ಹೆಚ್ಚು. ಈ ಕಾರಣದಿಂದ ಶೇ. 28 ಕರ ವಿಧಿಸಲಾಗುತ್ತಿದೆ.

ಈ ಕ್ರಮವನ್ನು ಸಮರ್ಥಿಸಿಕೊಳ್ಳುವಾಗ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಹೇಳಿದ ಮಾತು ಅರ್ಥಗರ್ಭಿತ. "ಅಗತ್ಯ ವಸ್ತುಗಳು ಮತ್ತು ಸೇವೆಗಳಂಥ ಕಡೆ ಮಾನವೀಯ ದೃಷ್ಟಿಯಿಂದ ವಿಧಿಸುವ ಅಲ್ಪ ದರಗಳಿಗೆ ಹೋಲಿಸಬಾರದು".

ಐಟಿ ಮತ್ತು ಎಲೆಕ್ಟ್ರಾನಿಕ್ಸ್ ಸಚಿವ ಖಾತೆಯು ಆನ್‌ಲೈನ್ ಕ್ರೀಡೆಗಳ ಸಂಬಂಧ ಒಂದು ನೀತಿ ಕ್ರಮವನ್ನು ರೂಪಿಸುತ್ತಿದೆ. ಆ ಕ್ಷೇತ್ರದಲ್ಲಿ ತೆರಿಗೆ ಹೇಗಿರಬೇಕು ಎಂಬ ಪರಾಮರ್ಶೆ ಕೂಡಾ ಇರುತ್ತದೆ. ಇವೆಲ್ಲವನ್ನೂ ಒಳಗೊಂಡಂತೆ ಜಿಎಸ್‌ಟಿ ಕಾನೂನಿಗೆ ತಿದ್ದುಪಡಿಯನ್ನು ಸಹಾ ತರಲಾಗುವುದು.

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಈಚೆಗೆ ನೀತಿ ಆಯೋಗದ ಸಮಾವೇಶದಲ್ಲಿ ಮಾತನಾಡುತ್ತಾ 'ಹಣಕಾಸು ವಿಷಯಗಳಲ್ಲಿ ಸಂರಕ್ಷಣೆ ಜೊತೆಗೆ ದೂರದೃಷ್ಟಿಯನ್ನು ಇರಿಸಿಕೊಳ್ಳಬೇಕು' ಎಂದು ಹೇಳಿದ್ದಾರೆ. ಭಾರೀ ಭರವಸೆಯನ್ನು ಹುಟ್ಟಿಸಿರುವ ಜಿಎಸ್‌ಟಿ ಕಾನೂನು ಜಾರಿಯು ಭವಿಷ್ಯದಲ್ಲಿ ಕೂಡಾ ದೂರಗಾಮಿ ಪರಿಣಾಮ ಉಂಟು ಮಾಡುವುದಂತೂ ನಿಶ್ಚಿತ.

ಮುಂದೆ ಜಿಎಸ್‌ಟಿ ಅನುಭವದ ಹಿನ್ನೆಲೆಯಲ್ಲಿ ಪ್ರತ್ಯಕ್ಷ ತೆರಿಗೆ (ವರಮಾನ ತೆರಿಗೆ ಇತ್ಯಾದಿ) ಸುಧಾರಣಾ ಕ್ರಮಗಳನ್ನು ರೂಪಿಸುವುದು ಸುಲಭವೆನಿಸಲಿಕ್ಕೂ ಸಾಕು. ಆದರೆ ಜಿಎಸ್‌ಟಿ ಪದ್ಧತಿಯ ಅಗಾಧತೆ ಮಾತ್ರ ಅಪರೂಪ.

# ಕೃಷಿ : ಕೊರತೆಯಿಂದ ಮಿಗುತೆವರೆಗಿನ ಯಾನ

(58ನೇ ಪುಟದಿಂದ)

ಸೂಚಿಸುತ್ತದೆ. ಸತತ ಪರಿಶ್ರಮ ಮತ್ತು ಪ್ರೋತ್ಸಾಹ ನೀತಿಗಳಿಂದ ವಿಶ್ವದಲ್ಲೇ ಭಾರತ ಮೀನಿನ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ ಮತ್ತು ಅದು ಜಾಗತಿಕ ಉತ್ಪಾದನೆಯ ಶೇಕಡ 7.58 ರಷ್ಟಾಗಿದೆ. 1950–51 ರಲ್ಲಿ ಮೀನಿನ ಒಟ್ಟು ಉತ್ಪಾದನೆ 0.752 ಮಿಲಿಯನ್ ಟನ್‌ಗಳಾಗಿದ್ದು ಅದು ಈಗ (2021–22) 16.3 ಮಿಲಿಯನ್ ಟನ್‌ಗೆ ತಲುಪಿದೆ. ಸಂಯುಕ್ತ ವಾರ್ಷಿಕ ಬೆಳವಣಿಗೆ ದರ ಶೇಕಡ 4.42 ಆಗಿದೆ. ಪ್ರಸ್ತುತ ಭಾರತವು ಸಾಗರ ಉತ್ಪನ್ನಗಳನ್ನು ರಫ್ತು ಮಾಡುವ ಪ್ರಮುಖ ದೇಶವಾಗಿದೆ. ಪ್ರಾಥಮಿಕ ಹಂತದಲ್ಲೇ ಸುಮಾರು 16 ಮಿಲಿಯನ್ ಜನರಿಗೆ ಜೀವನಾಧಾರವಾಗಿದೆ. ಭಾರತ ಸರ್ಕಾರವು ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಐದು ವರ್ಷಗಳ ಅವಧಿಯ (2016–17 ರಿಂದ 2019–20) "ನೀಲಿ ಕ್ರಾಂತಿ" ಎಂಬ ಯೋಜನೆಯನ್ನು ಅನುಷ್ಠಾನಕ್ಕೆ ತಂದಿತು. ಇದು ಮುಖ್ಯವಾಗಿ ಒಳನಾಡು ಮತ್ತು ಕರಾವಳಿ ಭಾಗದಲ್ಲಿ ಮೀನಿನ ಉತ್ಪಾದನೆಯನ್ನು ಹೆಚ್ಚಳ ಮಾಡುವ ಬಗ್ಗೆ ಕೇಂದ್ರೀಕರಿಸಿತು. ಇದಲ್ಲದೆ ದೇಶ ಕೋಳಿ ಸಾಕಣೆ ಕ್ಷೇತ್ರದಲ್ಲಿ ಇನ್ನೊಂದು ಕ್ರಾಂತಿಗೆ ಸಾಕ್ಷಿಯಾಗಿದ್ದು ಅದು ಮೊಟ್ಟೆ ಉತ್ಪಾದನೆಯಲ್ಲಿ ಪ್ರಪಂಚದಲ್ಲೆ ಮೂರನೇ ಸ್ಥಾನದಲ್ಲಿದೆ. ಇದನ್ನೇ "ರಜತ ಕ್ರಾಂತಿ" ಎಂದು ಉಲ್ಲೇಖಿಸಲಾಗಿದ್ದು ಪ್ರಸಕ್ತ ದೇಶವು 2021–22ರಲ್ಲಿ 1,29,600 ಮಿಲಿಯನ್ ಗಳಷ್ಟು ಮೊಟ್ಟೆಗಳನ್ನು ಉತ್ಪಾದನೆ ಮಾಡುತ್ತಿದ್ದು ಇದು ಈ ಹಿಂದೆ (1950–51) ಕೇವಲ 1832 ಮಿಲಿಯನ್‌ಗಳಾಗಿತ್ತು.


### ಮುಂದಿನ ದಾರಿ

ಹವಾಮಾನ ಬದಲಾವಣೆ, ಪ್ರಾಕೃತಿಕ ಸಂಪತ್ತಿನ ಕ್ಷೀಣಿಸುವಿಕೆ, ಕಡಿಮೆ ಫಲವತ್ತತೆ, ಕಡಿಮೆ ಉತ್ಪಾದನೆ ಮತ್ತು ಉತ್ತಮ ಗುಣಮಟ್ಟದ ಧಾನ್ಯಗಳ ಉತ್ಪಾದನೆಗೆ ಹೆಚ್ಚಿದ ಬೇಡಿಕೆ ಮುಂತಾದ ಅನೇಕ ಸವಾಲುಗಳನ್ನು ಕೃಷಿ ಕ್ಷೇತ್ರ ಎದುರಿಸುತ್ತಿದೆ. ಈ ಸವಾಲುಗಳನ್ನು ನಿಭಾಯಿಸಲು ಮತ್ತು ಭವಿಷ್ಯಕ್ಕಾಗಿ ಕೃಷಿ ಕ್ಷೇತ್ರವನ್ನು ಸಜ್ಜು ಮಾಡಲು ಭಾರತ ಸರ್ಕಾರ ರಾಷ್ಟ್ರೀಯ ಮಟ್ಟದಲ್ಲಿ "ಕೃಷಿ ಬೆಂಬಲಿತ ರಾಷ್ಟ್ರೀಯ ಮಿಷನ್", "ಕೃಷಿ ಮೂಲಸೌಕರ್ಯಗಳ ನಿಧಿ", "ಪರಂಪರಾಗತ್ ಕೃಷಿ ವಿಕಾಸ ಯೋಜನೆ" ಮತ್ತು "ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ" ಎಂಬ ಉಪಕ್ರಮಗಳನ್ನು ಕೈಗೊಂಡಿದೆ. ಈ ಉಪಕ್ರಮಗಳು ಕೃಷಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಗೆ ಪ್ರೋತ್ಸಾಹ ನೀಡುವುದಲ್ಲದೆ, ಕೃಷಿಗೆ ಉತ್ತಮ ಮೂಲ ಸೌಕರ್ಯಗಳ ಬೆಂಬಲ ಮತ್ತು ಉತ್ತಮ ಮಾರುಕಟ್ಟೆ ಸಂಪರ್ಕ ಒದಗಿಸುವುದರ ಮೂಲಕ ಕೃಷಿ ಉತ್ಪನ್ನ ಹೆಚ್ಚಳವಾಗುವಂತೆ ಮತ್ತು ಲಾಭದಾಯಕವಾಗುವಂತೆ ಮಾಡುತ್ತಿವೆ. ಈಗ ನೈಸರ್ಗಿಕ ಕೃಷಿ ಎಂಬ ಹೊಸ ಮಂತ್ರ ಶುರುವಾಗಿದ್ದು, ಅದಕ್ಕೆ ಇತ್ತೀಚಿನ ತಂತ್ರಗಳಾದ ಡ್ರೋನ್, ದೂರ ಸಂವೇದಿ ಬಳಕೆ, ನಿಖರ ಕೃಷಿ ಮತ್ತು ಮಾಹಿತಿ ತಂತ್ರಜ್ಞಾನಗಳ ಅಳವಡಿಕೆಗಳು "ಆಧುನಿಕ ಕೃಷಿಗೆ" ದಾರಿ ಮಾಡಿಕೊಡಲಾಗುತ್ತಿದೆ. ಇತ್ತೀಚಿನ ವಿದ್ಯಮಾನಗಳ ಪ್ರಕಾರ "ಕೃಷಿ ಸ್ಟಾರ್ಟ್ ಅಪ್‌ಗಳು" ಶುರುವಾಗಿದ್ದು ಅವು ಡಿಜಿಟಲ್ ಉಪಕರಣಗಳು ಮತ್ತು ಹೊಸ ಶೋಧನೆಗಳನ್ನು ಬಳಸಿಕೊಂಡು ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತಿವೆ. ಅನೇಕ ನವೀನ ಡಿಜಿಟಲ್ ಉತ್ತೇಜಕಗಳು ಕೃಷಿ ಉತ್ಪನ್ನದ ಸಾಮರ್ಥ್ಯ ಹೆಚ್ಚಿಸಲು ಮತ್ತು ವ್ಯವಸಾಯ ವೆಚ್ಚ ತಗ್ಗಿಸಲು ಕೃಷಿಕರಿಗೆ ಬೆಂಬಲ ಕೊಡುತ್ತಿವೆ. ರೈತರ ಆದಾಯ ಹೆಚ್ಚಿಸಲು, ಕೃಷಿ ಮತ್ತು ಅದರ ಉಪ ಉತ್ಪನ್ನ ಕ್ಷೇತ್ರಗಳಿಗೆ ಸರ್ಕಾರ ಅನೇಕ ರೀತಿಯ ಉತ್ತೇಜಕ ಕ್ರಮಗಳನ್ನು ಕೈಗೊಂಡಿದೆ. ಬೆಳೆ ವಿಮೆಗೆ ನೇರ ಹಣಕಾಸಿನ ಬೆಂಬಲ ಮತ್ತು ಹಣಕಾಸಿನ ಸಂಸ್ಥೆಗಳಿಂದ ಸಾಲ ಕೊಡಿಸುವಿಕೆ ಇತ್ಯಾದಿಗಳಿಂದ ರೈತರ ಆದಾಯ ಹೆಚ್ಚಿಸುವ ಯೋಜನೆ ರೂಪಿಸಲಾಗಿದೆ. ರಾಷ್ಟ್ರಾದ್ಯಂತ ಇರುವ "ರಾಷ್ಟ್ರೀಯ ಕೃಷಿ ಮಾರುಕಟ್ಟೆ" ಇನ್ಯಾಮ್ ಮೂಲಕ ರೈತರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯುವಂತೆ ಮಾಡಲಾಗಿದೆ. ಈ ರೀತಿ ಸ್ವಯಂಪೂರ್ಣತೆಯಿಂದ ಮೇಲೆದ್ದ ಭಾರತ, ಈಗ ಕೃಷಿಯಲ್ಲಿ ಜಾಗತಿಕ ಮಟ್ಟದ ಶಕ್ತಿಯಾಗುವ ಕಡೆ ಚಲಿಸುತ್ತಿದೆ.



Scanned with ACE Scanner

# 'ಮನದ ಮಾತು'



**ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ದಿನಾಂಕ 30.07.2023 ರಂದು ಮಾಡಿದ ಮನ್ ಕಿ ಬಾತ್' – 103 ನೇ ಸಂಚಿಕೆಯ ಕನ್ನಡ ಅವತರಣಿಕೆಯ ಆಯ್ದ ಭಾಗ.**

ನನ್ನ ಪ್ರಿಯ ದೇಶಬಾಂಧವರೆ, ನಮಸ್ಕಾರಗಳು. 'ಮನದ ಮಾತಿಗೆ' ನಿಮ್ಮೆಲ್ಲರಿಗೂ ಆತ್ಮೀಯ ಸ್ವಾಗತ. ಜುಲೈ ತಿಂಗಳು ಎಂದರೆ ಮುಂಗಾರಿನ ತಿಂಗಳು, ಮಳೆಯ ಋತುಮಾನ.

ಸ್ನೇಹಿತರೇ, ಮಳೆಗಾಲದ ಇದೇ ಸಮಯ 'ವೃಕ್ಷಾರೋಪನೆ' ಮತ್ತು 'ಜಲ ಸಂರಕ್ಷಣೆ' ಗೂ ಅಷ್ಟೇ ಮಹತ್ವಪೂರ್ಣವಾಗಿದೆ, ಸ್ವಾತಂತ್ರ್ಯದ 'ಅಮೃತ ಮಹೋತ್ಸವ'ದ ಸಂದರ್ಭದಲ್ಲಿ ಸಿದ್ಧಪಡಿಸಲಾದ 60 ಸಾವಿರಕ್ಕೂ ಹೆಚ್ಚು ಅಮೃತ ಸರೋವರಗಳ ಶೋಭೆಯೂ ಹೆಚ್ಚಿದೆ. ಇದೀಗ 50 ಸಾವಿರಕ್ಕೂ ಹೆಚ್ಚು ಅಮೃತ ಸರೋವರಗಳನ್ನು ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ನಮ್ಮ ದೇಶಬಾಂಧವರು ಸಂಪೂರ್ಣ ಅರಿವು ಮತ್ತು ಜವಾಬ್ದಾರಿಯೊಂದಿಗೆ 'ಜಲ ಸಂರಕ್ಷಣೆ'ಗಾಗಿ ಹೊಸ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ನನ್ನ ಪ್ರೀತಿಯ ದೇಶಬಾಂಧವರೆ ಇಂದು ನಾನು ಮತ್ತೊಂದು ಆಸಕ್ತಿಕರ ವಿಷಯ ಹೇಳಲು ಬಯಸುತ್ತೇನೆ. ಕೆಲವು ದಿನಗಳ ಹಿಂದೆ ಸಾಮಾಜಿಕ ಜಾಲತಾಣಗಳಲ್ಲಿ ಅದ್ಭುತ ಕ್ರೇಜ್ ಕಾಣಿಸಿಕೊಂಡಿತ್ತು. ಅಮೇರಿಕಾ ನಮಗೆ ನೂರಕ್ಕೂ ಹೆಚ್ಚು ಅಪರೂಪದ ಮತ್ತು ಪ್ರಾಚೀನ ಕಲಾಕೃತಿಗಳನ್ನು ಹಿಂದಿರುಗಿಸಿದೆ. ಈ ಸುದ್ದಿ ಬೆಳಕಿಗೆ ಬಂದ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಈ ಕಲಾಕೃತಿಗಳ ಬಗ್ಗೆ ಭಾರೀ ಚರ್ಚೆ ನಡೆದಿತ್ತು. ಯುವಕರಲ್ಲಿ ತಮ್ಮ ಪರಂಪರೆಯ ಬಗ್ಗೆ ಗೌರವದ ಭಾವನೆ ಕಂಡುಬಂದಿತು. ಭಾರತಕ್ಕೆ ಹಿಂದಿರುಗಿಸಲಾದ ಈ ಕಲಾಕೃತಿಗಳು 250 ರಿಂದ 2500 ವರ್ಷಗಳಷ್ಟು ಪುರಾತನವಾದದ್ದಾಗಿವೆ.

ನಮ್ಮ ಈ ಅಮೂಲ್ಯವಾದ ಪರಂಪರೆಯನ್ನು ಹಿಂದಿರುಗಿಸಿದ ಅಮೆರಿಕನ್ ಸರ್ಕಾರಕ್ಕೆ ನಾನು ಧನ್ಯವಾದ ಹೇಳಬಯಸುತ್ತೇನೆ. 2016 ಮತ್ತು 2021ರಲ್ಲಿ ಅಮೆರಿಕಕ್ಕೆ ನಾನು ಭೇಟಿ ನೀಡಿದಾಗಲೂ ಹಲವಾರು ಕಲಾಕೃತಿಗಳನ್ನು ಭಾರತಕ್ಕೆ ಹಿಂತಿರುಗಿಸಲಾಗಿತ್ತು. ಇಂತಹ ಪ್ರಯತ್ನಗಳಿಂದ ನಮ್ಮ ಸಾಂಸ್ಕೃತಿಕ ಪರಂಪರಾಗತ ನಿಧಿಯ ಕಳ್ಳತನವನ್ನು ತಡೆಗಟ್ಟಲು ದೇಶದಾದ್ಯಂತ ಜಾಗೃತಿ ಮೂಡುತ್ತದೆ ಎಂಬ ಭರವಸೆ ನನಗಿದೆ. ಇದರಿಂದ ನಮ್ಮ ಸಮೃದ್ಧ ಪರಂಪರೆ ಬಗ್ಗೆ ದೇಶಬಾಂಧವರ ಒಲವು ಮತ್ತಷ್ಟು ಹೆಚ್ಚುತ್ತದೆ.

ನನ್ನ ಪ್ರೀತಿಯ ದೇಶವಾಸಿಗಳೇ, ಈ ಬಾರಿಯ ಮನದ ಮಾತಿನಲ್ಲಿ ನನ್ನ ಮನಸ್ಸಿಗೆ ಹೆಚ್ಚಿನ ಸಂತೋಷ ನೀಡುವಂತಹ ಇಂತಹ ಬಹಳಷ್ಟು ಪತ್ರಗಳು ಬಂದಿವೆ. ಇತ್ತೀಚೆಗಷ್ಟೇ 'ಹಜ್' ಯಾತ್ರೆ ಪೂರ್ಣಗೊಳಿಸಿ ಹಿಂದಿರುಗಿ ಬಂದಿರುವ ಮುಸ್ಲಿಂ ಮಹಿಳೆಯರು ಈ ಪತ್ರವನ್ನು ನನಗೆ ಬರೆದಿದ್ದಾರೆ. ಈ ಯಾತ್ರೆ ಅವರಿಗೆ ಹಲವು ರೀತಿಯಲ್ಲಿ ವಿಶೇಷವಾಗಿತ್ತು. ಯಾವುದೇ ಪುರುಷರ ಜೊತೆ ಇಲ್ಲದಂತೆ ಅಥವಾ ಮೆಹರಮ್ ಇಲ್ಲದಂತೆಯೇ 'ಹಜ್' ಯಾತ್ರೆ ಮಾಡಿದ ಇಂತಹ ಮಹಿಳೆಯರ ಸಂಖ್ಯೆ ಐವತ್ತು–ನೂರು ಅಲ್ಲ, ನಾಲ್ಕು ಸಾವಿರಕ್ಕಿಂತಲೂ ಅಧಿಕ. ಇದೊಂದು ನಿಜಕ್ಕೂ ಅತಿ ದೊಡ್ಡ ಬದಲಾವಣೆ. ಈ ಮೊದಲು ಮುಸ್ಲಿಂ ಮಹಿಳೆಯರಿಗೆ ಮೆಹರಮ್ ಇಲ್ಲದಂತೆ 'ಹಜ್' ಯಾತ್ರೆ ಮಾಡಲು ಅವಕಾಶ, ಅನುಮತಿ ಇರಲಿಲ್ಲ. ನಾನು ಮನದ ಮಾತಿನ ಮೂಲಕ ಸೌದಿ ಅರೇಬಿಯಾ ಸರ್ಕಾರಕ್ಕೆ ಕೂಡಾ ಹೃದಯಪೂರ್ವಕ ಕೃತಜ್ಞತೆ ವ್ಯಕ್ತಪಡಿಸಲು ಬಯಸುತ್ತೇನೆ. ಮೆಹರಮ್ ಇಲ್ಲದಂತೆ 'ಹಜ್' ಯಾತ್ರೆಗೆ ಹೊರಟಿದ್ದ ಮಹಿಳೆಯರಿಗಾಗಿ, ವಿಶೇಷವಾಗಿ ಮಹಿಳಾ ಸಮನ್ವಯಕಾರರನ್ನು ನಿಯೋಜಿಸಲಾಗಿತ್ತು.

'ಹಜ್' ಯಾತ್ರೆಯಿಂದ ಹಿಂದಿರುಗಿದ ಜನರು, ವಿಶೇಷವಾಗಿ ನಮ್ಮ ಮಾತೃಸಮಾನ ಮಹಿಳೆಯರು – ಸೋದರಿಯರು, ಕಾಗದ ಬರೆದು ನನಗೆ ನೀಡಿರುವ ಆಶೀರ್ವಾದ ಬಹಳ ಪ್ರೇರಣಾದಾಯಕವಾಗಿದೆ.

ನನ್ನ ಪ್ರೀತಿಯ ದೇಶವಾಸಿಗಳೇ, ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಗೀತ ರಸಸಂಜೆಗಳಿರಲಿ, ಎತ್ತರದ ಪ್ರದೇಶಗಳಲ್ಲಿ ಬೈಕ್ ರ್‍ಯಾಲಿಗಳಿರಲಿ, ಚಂಡೀಗಢದ ಸ್ಥಳೀಯ ಕ್ಲಬ್‌ಗಳಿರಲಿ, ಮತ್ತು ಪಂಜಾಬ್ ನ ಹಲವಾರು ಕ್ರೀಡಾ ಸಮೂಹಗಳಿರಲಿ, ಅವುಗಳ ಬಗ್ಗೆ ಕೇಳಿಸಿಕೊಂಡಾಗ, ಮನರಂಜನೆಯ ಕುರಿತು, ಸಾಹಸ ಕುರಿತು ಮಾತುಕತೆ ನಡೆಯುತ್ತಿದೆ ಎಂದು ಅರ್ಥವಾಗಿಬಿಡುತ್ತದೆ. ಆದರೆ ವಿಷಯ ಬೇರೆಯೇ ಇದೆ. ಈ ಆಯೋಜನೆಯು ಒಂದೇ ರೀತಿಯ ಉದ್ದೇಶಕ್ಕಾಗಿದೆ'. ಈ ಏಕ ಉದ್ದೇಶವೆಂದರೆ ಮಾದಕ ಪದಾರ್ಥಗಳ ವಿರುದ್ಧ ಜಾಗರೂಕತೆ ಮೂಡಿಸುವ ಅಭಿಯಾನ. ಜಮ್ಮು–ಕಾಶ್ಮೀರದ ಯುವಜನರನ್ನು ಮಾದಕ ವಸ್ತುಗಳಿಂದ ರಕ್ಷಿಸುವುದಕ್ಕಾಗಿ ಹಲವು ವಿನೂತನ ಪ್ರಯತ್ನಗಳು ನಡೆಯುತ್ತಿವೆ. ಇಲ್ಲಿ ಸಂಗೀತ ರಸಸಂಜೆ, ಬೈಕ್ ರ್‍ಯಾಲಿಗಳಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ನಾವು ದೇಶದ ಭವಿಷ್ಯದ ಪೀಳಿಗೆಯನ್ನು ರಕ್ಷಿಸಬೇಕೆಂದರೆ ಅವರನ್ನು ಮಾದಕ ವಸ್ತುಗಳಿಂದ ದೂರವಿರಿಸಬೇಕು. ಇದೇ ಚಿಂತನೆಯೊಂದಿಗೆ, 2020, ಆಗಸ್ಟ್ 15 ರಂದು ಮಾದಕವಸ್ತು ಮುಕ್ತ ಭಾರತ ಅಭಿಯಾನಕ್ಕೆ ಚಾಲನೆ ನೀಡಲಾಗಿತ್ತು. ಈ ಅಭಿಯಾನದೊಂದಿಗೆ 11 ಕೋಟಿಗೂ ಹೆಚ್ಚು ಜನ ಕೈಜೋಡಿಸಿದ್ದಾರೆ. ಎರಡು ವಾರಗಳ



Scanned with ACE Scanner

ಇತ್ತೀಚೆಗಷ್ಟೇ ಭಾರತ ಮಾದಕ ವಸ್ತುಗಳ ವಿರುದ್ಧ ಬಹು ದೊಡ್ಡ ಕಾರ್ಯಾಚರಣೆ ನಡೆಸಿತ್ತು. ಸುಮಾರು ಒಂದೂವರೆ ಲಕ್ಷ ಕಿಲೋ ಮಾದಕ ವಸ್ತುಗಳನ್ನು ವಶಪಡಿಸಿಕೊಂಡ ನಂತರ ಅವುಗಳನ್ನು ನಾಶಪಡಿಸಲಾಯಿತು. 10 ಲಕ್ಷ ಕಿಲೋ ಮಾದಕ ವಸ್ತುಗಳನ್ನು ನಾಶಪಡಿಸುವ ವಿಶಿಷ್ಟ ದಾಖಲೆಯನ್ನು ಕೂಡಾ ಭಾರತ ಮಾಡಿದೆ. ಈ ಮಾದಕ ವಸ್ತುಗಳ ಮೌಲ್ಯ ಸುಮಾರು 12,000 ಕೋಟಿ ರೂಪಾಯಿಗಿಂತ ಅಧಿಕ. ವ್ಯಸನಮುಕ್ತಗೊಳಿಸುವ ಈ ಉದಾತ್ತ ಅಭಿಯಾನದಲ್ಲಿ ಕೈಜೋಡಿಸಿ ಸಲ್ಲಿಸುತ್ತಿರುವ. ತಮ್ಮ ಕೊಡುಗೆ ನೀಡುತ್ತಿರುವ ಎಲ್ಲರನ್ನೂ ನಾನು ಶ್ಲಾಘಿಸಲು ಬಯಸುತ್ತೇನೆ. ಮಾದಕ ವ್ಯಸನ ಕೇವಲ ಕುಟುಂಬವನ್ನು ಮಾತ್ರವಲ್ಲದೇ ಇಡೀ ಸಮಾಜಕ್ಕೆ ದೊಡ್ಡ ಆತಂಕದ ವಿಷಯವಾಗಿಬಿಡುತ್ತದೆ. ಇಂತಹ ಪರಿಸ್ಥಿತಿಯಲ್ಲಿ, ಈ ಅಪಾಯ ಶಾಶ್ವತವಾಗಿ ಕೊನೆಗೊಳ್ಳಬೇಕಾದರೆ, ನಾವೆಲ್ಲರೂ ಒಗ್ಗೂಡಿ ಈ ನಿಟ್ಟಿನಲ್ಲಿ ಮುಂದೆ ಸಾಗುವುದು ಬಹಳ ಅಗತ್ಯವಾಗಿದೆ.

ನನ್ನ ಪ್ರೀತಿಯ ದೇಶವಾಸಿಗಳೇ, ಸ್ವಾತಂತ್ರ್ಯದ 75 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ನಾವೆಲ್ಲರೂ ಸಂಪೂರ್ಣ ಉತ್ಸಾಹದಿಂದ 'ಅಮೃತ ಮಹೋತ್ಸವ' ಆಚರಿಸುತ್ತಿದ್ದೇವೆ. 'ಅಮೃತ ಮಹೋತ್ಸವ' ಸಂದರ್ಭದಲ್ಲಿ ದೇಶದಲ್ಲಿ ಸುಮಾರು ಎರಡು ಲಕ್ಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮಗಳು ಒಂದಕ್ಕಿಂತ ಒಂದು ವೈವಿಧ್ಯಮಯ ಬಣ್ಣಗಳಿಂದ ಕೂಡಿದ್ದವು. ಈ ಆಯೋಜನೆಗಳ ಒಂದು ವಿಶೇಷತೆಯೂ ಇತ್ತು ಅದೆಂದರೆ, ಇದರಲ್ಲಿ ದಾಖಲೆಯ ಸಂಖ್ಯೆಯಲ್ಲಿ ಯುವಜನರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ನಮ್ಮ ಯುವಜನರಿಗೆ ದೇಶದ ಮಹಾನ್ ವ್ಯಕ್ತಿಗಳ ಬಗ್ಗೆ ಸಾಕಷ್ಟು ವಿಚಾರಗಳನ್ನು ತಿಳಿದುಕೊಳ್ಳುವ ಅವಕಾಶ ದೊರೆಯಿತು. ಮೊದಲ ಕೆಲವು ತಿಂಗಳುಗಳ ಬಗ್ಗೆ ಹೇಳಬೇಕೆಂದರೆ, ಸಾರ್ವಜನಿಕ ಭಾಗವಹಿಸುವಿಕೆಯ ಅನೇಕ ಆಸಕ್ತಿದಾಯಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಅಂತಹದ್ದೇ ಒಂದು ಕಾರ್ಯಕ್ರಮ – ದಿವ್ಯಾಂಗ ಲೇಖಕರಿಗಾಗಿ ಆಯೋಜಿಸಲಾಗಿದ್ದ ಲೇಖಕರ ಸಮಾವೇಶ. ಇದರಲ್ಲಿ ದಾಖಲೆಯ ಸಂಖ್ಯೆಯಲ್ಲಿ ಜನರ ಪಾಲ್ಗೊಳ್ಳುವಿಕೆ ಕಂಡು ಬಂದಿತು. ಆಂಧ್ರ ಪ್ರದೇಶದ ತಿರುಪತಿಯಲ್ಲಿ 'ರಾಷ್ಟ್ರೀಯ ಸಂಸ್ಕೃತ ಸಮ್ಮೇಳನ' ಆಯೋಜಿಸಲಾಗಿತ್ತು.

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ನಮ್ಮ ಇತಿಹಾಸದಲ್ಲಿ ಕೋಟೆಗಳ ಮಹತ್ವ ಎಷ್ಟೆಂದು ನಾವೆಲ್ಲರೂ ಅರಿತಿದ್ದೇವೆ. ಇವುಗಳನ್ನು ಪ್ರದರ್ಶಿಸುವ 'ಒಂದು ಅಭಿಯಾನ, ಕೋಟೆಗಳು ಮತ್ತು ಕತೆಗಳು' ಅಂದರೆ ಕೋಟೆಗಳೊಂದಿಗೆ ಬೆಸೆದುಕೊಂಡ ಕತೆಗಳು ಕೂಡಾ ಜನರಿಗೆ ಬಹಳ ಇಷ್ಟವಾದವು.

ಸ್ನೇಹಿತರೇ, ಇಂದು ದೇಶದಲ್ಲಿ, ನಾಲ್ಕೂ ನಿಟ್ಟಿನಲ್ಲಿ 'ಅಮೃತ ಮಹೋತ್ಸವದ' ಸ್ವರ ಪ್ರತಿಧ್ವನಿಸುತ್ತಿರುವಾಗ, ಆಗಸ್ಟ್ 15 ಇನ್ನೇನು ಸಮೀಪಿಸುತ್ತಿದೆ, ದೇಶದಲ್ಲಿ ಮತ್ತೊಂದು ದೊಡ್ಡ ಅಭಿಯಾನ ಆರಂಭವಾಗುತ್ತಿದೆ. ಹುತಾತ್ಮ ವೀರರಿಗೆ–ವೀರ ವನಿತೆಯರಿಗೆ ಗೌರವ–ಸಮ್ಮಾನ ನೀಡುವುದಕ್ಕಾಗಿ 'ನನ್ನ ಭೂಮಿ ನನ್ನ ದೇಶ' ಅಭಿಯಾನ ಆರಂಭವಾಗುತ್ತದೆ. ಇದರ ಅಡಿಯಲ್ಲಿ, ದೇಶಾದ್ಯಂತ ನಮ್ಮ ಅಮರ ಹುತಾತ್ಮರ ಸ್ಮರಣೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಈ ಮಹಾನ್ ವ್ಯಕ್ತಿಗಳ ನೆನಪಿನಲ್ಲಿ, ದೇಶದ ಲಕ್ಷಾಂತರ ಗ್ರಾಮ ಪಂಚಾಯಿತಿಗಳಲ್ಲಿ, ವಿಶೇಷ ಶಿಲಾ ಶಾಸನಗಳನ್ನು ಸ್ಥಾಪಿಸಲಾಗುವುದು. ಈ ಅಭಿಯಾನದ ಅಡಿಯಲ್ಲಿ, ದೇಶಾದ್ಯಂತ, 'ಅಮೃತ ಕಳಶ ಯಾತ್ರಾ' ಕೂಡಾ ಕೈಗೊಳ್ಳಲಾಗುವುದು. ದೇಶದ ಹಳ್ಳಿ ಹಳ್ಳಿಗಳಿಂದ, ಮೂಲೆ ಮೂಲೆಗಳಿಂದ, 7500 ಕಳಶಗಳಲ್ಲಿ, ಮಣ್ಣು ಸಂಗ್ರಹಿಸಿ, ಈ 'ಅಮೃತ ಕಳಶ ಯಾತ್ರೆ' ದೇಶದ ರಾಜಧಾನಿ ದೆಹಲಿ ತಲುಪುತ್ತದೆ. ಈ ಯಾತ್ರೆ ದೇಶದ ಬೇರೆ ಬೇರೆ ಭಾಗಗಳಿಂದ ಗಿಡಗಳನ್ನು ಕೂಡಾ ತನ್ನೊಂದಿಗೆ ತೆಗೆದುಕೊಂಡು ಬರುತ್ತದೆ. 7500 ಕಳಶಗಳಲ್ಲಿ ತರಲಾದ ಮಣ್ಣು ಮತ್ತು ಗಿಡವನ್ನು ಸೇರಿಸಿ, ರಾಷ್ಟ್ರೀಯ ಯುದ್ಧ ಸ್ಮಾರಕದ ಸಮೀಪ 'ಅಮೃತ ಉದ್ಯಾನವನ' ನಿರ್ಮಿಸಲಾಗುವುದು. ಈ 'ಅಮೃತ ಉದ್ಯಾನವನ', ಏಕ ಭಾರತ – ಶ್ರೇಷ್ಠ ಭಾರತ್' ನ ಬಹುದೊಡ್ಡ ಪ್ರತೀಕವಾಗಲಿದೆ. ನಾನು ಕಳೆದ ವರ್ಷ ಕೆಂಪು ಕೋಟೆಯಿಂದ ಮುಂದಿನ 25 ವರ್ಷಗಳ ಅಮೃತ ಕಾಲಕ್ಕಾಗಿ ಪಂಚ ಪ್ರಾಣ್ ಕುರಿತು ಮಾತನಾಡಿದ್ದೆ. ನನ್ನ ಭೂಮಿ ನನ್ನ ದೇಶ ಅಭಿಯಾನದಲ್ಲಿ ಪಾಲ್ಗೊಳ್ಳುವ ಮೂಲಕ ನಾವು ಈ ಪಂಚ ಪ್ರಾಣ್ ಈಡೇರಿಸುವ ಪ್ರತಿಜ್ಞೆಯನ್ನು ಕೂಡಾ ಮಾಡೋಣ. ನೀವೆಲ್ಲರೂ, ದೇಶದ ಪವಿತ್ರ ಮಣ್ಣನ್ನು ಕೈಯಲ್ಲಿ ತೆಗೆದುಕೊಂಡು ಪ್ರತಿಜ್ಞೆ ಮಾಡುತ್ತಾ ನಿಮ್ಮ ಸೆಲ್ಫಿಯನ್ನು yuva.gov. in ನಲ್ಲಿ ಖಂಡಿತವಾಗಿ ಅಪ್ಲೋಡ್ ಮಾಡಿ. ಕಳೆದ ವರ್ಷ ಸ್ವಾತಂತ್ರ್ಯ ದಿನಾಚರಣೆ ಮನೆ ಮನೆಯಲ್ಲೂ 'ತ್ರಿವರ್ಣ' ಅಭಿಯಾನದಲ್ಲಿ ಇಡೀ ದೇಶ ಯಾವರೀತಿ ಕೈಜೋಡಿಸಿತ್ತೋ, ಅಂತೆಯೇ ಈ ಬಾರಿ ಕೂಡಾ ಮತ್ತೊಮ್ಮೆ ಮನೆ ಮನೆಯಲ್ಲೂ ತ್ರಿವರ್ಣ ಧ್ವಜ ಹಾರಿಸಬೇಕು. ಮತ್ತು ಈ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕು. ಇಂತಹ ಪ್ರಯತ್ನಗಳಿಂದ ನಮಗೆ ನಮ್ಮ ಕರ್ತವ್ಯದ ಅರಿವಾಗುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡಿದ ಅಸಂಖ್ಯಾತ ವೀರರ ನೆನಪು ಬರುತ್ತದೆ. ಸ್ವಾತಂತ್ರ್ಯದ ಮೌಲ್ಯ ತಿಳಿದುಬರುತ್ತದೆ. ಆದ್ದರಿಂದ ಪ್ರತಿಯೊಬ್ಬ ದೇಶವಾಸಿಯೂ ಈ ಪ್ರಯತ್ನಗಳೊಂದಿಗೆ ಖಂಡಿತವಾಗಿಯೂ ಕೈಜೋಡಿಸಬೇಕು.

ನನ್ನ ಪ್ರೀತಿಯ ದೇಶವಾಸಿಗಳೇ, ಇಂ 'ಮನದ ಮಾತು' ಇಷ್ಟು ವಿಚಾರಗಳೊ ಇಲ್ಲಿಗೆ ಮುಕ್ತಾಯಗೊಳಿಸುತ್ತಿದ್ದೆ ಇನ್ನು ಕೆಲವೇ ದಿನಗಳಲ್ಲಿ ನಾವು ಆ 15 ರಂದು ಸ್ವಾತಂತ್ರ್ಯದ ಈ ಮಹ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದೇವೆ. ದೇ ಸ್ವಾತಂತ್ರ್ಯಕ್ಕಾಗಿ, ಬಲಿದಾನಗೈದವರನ್ನು ಸದಾ ಕಾಲ ಸ್ಮರಿಸಬೇಕು. ನಾವು ಕನಸುಗಳನ್ನು ಸಾಕಾರಗೊಳಿಸುವು ಹಗಲಿರುಳೂ ಶ್ರಮಿಸಬೇಕು ಮತ್ತು 'ಮ ಮಾತು' ದೇಶವಾಸಿಗಳ ಈ ಶ್ರಮ ಅನೇಕ ಸಾಮೂಹಿಕ ಪ್ರಯತ್ನ ಜನರ ಮುಂದಿರಿಸುವ ಮಾಧ್ಯಮವಾಗಿದೆ. ಮುಂದಿನ ಬಾರಿ, ಹೊಸ ವಿಷಯಗಳೊಂದಿಗೆ, ನಿ ಭೇಟಿಯಾಗುತ್ತೇನೆ. ಅನೇಕಾನೇಕ ಧನ ನಮಸ್ಕಾರ.

(ಮೂಲ : ಆಕಾಶವಾಣಿ, ಬೆಂಗಳೂರು)



Scanned with ACE Scanner

Yojana(Kannada) August 2023 Date of Publication 3rd August 2023 Date of Posting 10th/15th August 2023 ISSN 0971-8737
"Registered" Reg.No.RNP/KA/BGS/2269/2022-2024 Total No.of Pages : 72+4 Cover Pages Regd.No. RNI 43034/1985
"Licensed to Post without Pre-payment" License No. PMG BG/WPP/388/2022-2024 YOJANA Kannada Monthly Posted at Bengaluru PSO BG-560026


# ಪ್ರಕಾಶನ ವಿಭಾಗದ ಪುಸ್ತಕಗಳು




ರಿಯಾಯಿತಿ ದರದಲ್ಲಿ ಮಾರಾಟಕ್ಕೆ ಲಭ್ಯ

ಖರೀದಿಸಲು
ಸಂಪರ್ಕಿಸಬೇಕಾದ ವಿಳಾಸ

## ಯೋಜನಾ – ಕನ್ನಡ

ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು–560034.
ದೂರವಾಣಿ : 080–25537244
E-mails : kannada-yojana@gov.in
yojanakannada@yahoo.com
Website : www.publicationsdivision.nic.in


Printed & Published by **Anupama Bhatnagar,** Director General, Publications Division, Ministry of Information & Broadcasting
Published at Publications Division 1st Floor, 'F' Wing, Kendriya Sadana, Koramangala, Bengaluru-560 034. Ph : 080 2553 7244
Designed & Printed at Omkar Offset Printers, No. 3/3, 1st Main Road, New Tharagupet, Bengaluru - 560 002. Ph : 080 2670 8186
Chief Editior: Manogyan Rani Pal, Editor : Yashwant Shehnai

Scanned with ACE Scanner